Bennett & Coleman
THE TIMES OF INDIA
www.vijaykarnataka.com
ಮಂಗಳವಾರ,30 ಜೂನ್ 2026 | ಪುಟಗಳು: 13 | ಬೆಲೆ: ₹ 5.00
ಸಂಪುಟ: 27 | ಸಂಚಿಕೆ: 180
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ಇಂದು ದೋಹಾದಲ್ಲಿ ಅಮೆರಿಕ-ಇರಾನ್ ನಡುವೆ ಮತ್ತೊಂದು ಸುತ್ತಿನ ಮಾತುಕತೆ: ಟ್ರಂಪ್ P09

₹13,110 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	₹14,302 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	₹2,40,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಬೆಂಗಳೂರು ದರ

2027ರಿಂದ ಇ-ಆಟೊ, 2028ರಿಂದ ಇವಿ ದ್ವಿಚಕ್ರ ಮಾತ್ರ ನೋಂದಣಿ: ದಿಲ್ಲಿ ಸರಕಾರ P04

ವಿಕ ಹೊಂಗಿರಣ

ನಿಮ್ಮ ಜೀವನದ ಗುರಿ ಏನೇ ಆಗಿರಲಿ, ಅದರೆಡೆಗೆ ತಲುಪಲು ತುಡಿತ ಬೆಳೆಸಿಕೊಳ್ಳದಿದ್ದರೆ, ಅದು ಎಷ್ಟೇ ಹತ್ತಿರವಿದ್ದರೂ ಮುಟ್ಟಲಾಗದು.

- ಸದ್ಗುರು

SBI
The banker to every Indian
ನಾವು ಕೇವಲ ಒಂದು ಕರೆ ದೂರದಲ್ಲಿದ್ದೇವೆ!
- ಖಾತೆ ಬ್ಯಾಲೆನ್ಸ್
- ಖಾತೆ ಸ್ಟೇಟ್ಮೆಂಟ್
- ಚೆಕ್ ಪುಸ್ತಕ ನೀಡಿಕೆ
- ಬಡ್ಡಿ ಪ್ರಮಾಣಪತ್ರ, ಗೃಹ ಸಾಲ/ ಶಿಕ್ಷಣ ಸಾಲ ಮತ್ತು ಇನ್ನೂ ಹಲವು...
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯವಾಗುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹134/- ಕೋಲಾರ 134/- ತುಮಕೂರು 132/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹174/-
ಕೋಲಾರ 174/- ತುಮಕೂರು 172/-
ವಿಥ್ ಸ್ಕಿನ್ ₹245/- ಕೋಲಾರ 245/- ತುಮಕೂರು 243/-
ವಿಥೌಟ್ ಸ್ಕಿನ್ ₹280/- ಕೋಲಾರ 280/- ತುಮಕೂರು 277/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಸಂಪಾದಕೀಯ ಪುಟದಲ್ಲಿ ಕನ್ನಡದ ಖ್ಯಾತ ನಟಿಯ ಹೊಸ ಅಂಕಣ
ನಿರೀಕ್ಷಿಸಿ...

ಮನಸಿನ ನಲಿವಿಗೆ ವೈದ್ಯರು ನೀಡುವ ಟಿಪ್ಸ್ ಏನು? ವಿಕ ಲವಲವಿಕೆಯಲ್ಲಿ ಹೊಸ ಅಂಕಣ
ಶೀಘ್ರದಲ್ಲೇ...

ಕುಟುಂಬದ ಯಜಮಾನಿಗೆ ವೋಟರ್ ಐಡಿ ಕಡ್ಡಾಯಗೊಳಿಸಲು ನಿರ್ಧಾರ
ಮತದಾರರ ಪಟ್ಟಿ ಪರಿಷ್ಕರಣೆ ಬಳಿಕ ನಕಲಿ ಫಲಾನುಭವಿಗಳು ಮತ್ತಷ್ಟು ಫಿಲ್ಟರ್

ಗೃಹಲಕ್ಷ್ಮಿಗೆ SIR ಜರಡಿ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com

ಗೃಹಲಕ್ಷ್ಮಿ ಯೋಜನೆಯ ನವೀಕರಣಕ್ಕೆ ಮತದಾರರ ಗುರುತಿನ ಚೀಟಿ ಕಡ್ಡಾಯಗೊಳಿಸಲು ರಾಜ್ಯ ಸರಕಾರ ನಿರ್ಧರಿಸಿದೆ. ಮತದಾರರ ಪಟ್ಟಿ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಬಳಿಕ ಮತ್ತಷ್ಟು ಹೆಸರುಗಳು 'ಫಿಲ್ಟರ್' ಆಗುವ ಸಾಧ್ಯತೆಯಿದೆ. ಹೀಗಾಗಿ 'ಎಸ್‌ಐಆರ್' ಪೂರ್ಣಗೊಂಡ ಬಳಿಕವೇ ಗೃಹಲಕ್ಷ್ಮಿ ಯೋಜನೆಯ ಪರಿಷ್ಕರಣೆ ಪ್ರಕ್ರಿಯೆ ಆರಂಭಿಸಲು ತೀರ್ಮಾನಿಸಲಾಗಿದೆ.

ಆದಾಯ ತೆರಿಗೆದಾರರು, ನಿಧನರಾದವರು, ನಕಲಿ ದಾಖಲೆಗಳನ್ನು ನೀಡಿ ಒಂದೇ ಕುಟುಂಬದಿಂದ ಒಂದಕ್ಕಿಂತ ಹೆಚ್ಚು ಅರ್ಜಿದಾರರು ಗೃಹಲಕ್ಷ್ಮಿ ಯೋಜನೆಯ ಲಾಭ ಪಡೆಯುತ್ತಿದ್ದುದನ್ನು ಪರಿಶೀಲನೆ ನಡೆಸಿ, ಅಂತಹವರನ್ನು ಫಲಾನುಭವಿಗಳ ಪಟ್ಟಿಯಿಂದ ಕೈಬಿಡಲಾಗಿದೆ. ಈಗ ಮತದಾರರ ಗುರುತಿನ ಚೀಟಿಯನ್ನು ಕಡ್ಡಾಯಗೊಳಿಸಿರುವುದರಿಂದ ಮತ್ತಷ್ಟು ಜರಡಿ ಹಿಡಿಯಲು ಸರಕಾರ ನಿರ್ಧರಿಸಿದೆ. ಹೀಗಾಗಿ, ಮತದಾರರ ಪಟ್ಟಿಯಲ್ಲಿ ಯಾರ ಹೆಸರು ರದ್ದಾಗುವುದೋ ಅಂತಹವರು ಸಹಜವಾಗಿಯೇ ಗೃಹಲಕ್ಷ್ಮಿ ಯೋಜನೆಯಿಂದಲೂ ಅನರ್ಹಗೊಳ್ಳುತ್ತಾರೆ.

ಗೃಹಲಕ್ಷ್ಮಿ ಯೋಜನೆಯಡಿ ಅರ್ಹರಲ್ಲದವರೂ ಹಣ ಪಡೆಯುತ್ತಿದ್ದಾರೆ ಎಂಬ ಕಾರಣದಿಂದ ಫಲಾನುಭವಿಗಳಿಂದ ಮರು ಅರ್ಜಿ ಆಹ್ವಾನಿಸಿ, ಯೋಜನೆ ನವೀಕರಣಗೊಳಿಸಲು ಸರಕಾರ ತೀರ್ಮಾನಿಸಿದೆ. ಅದರಂತೆ ಎಪಿಎಲ್, ಬಿಪಿಎಲ್ ಕಾರ್ಡ್ ಜತೆಗೆ ಮತದಾರರ ಗುರುತಿನ ಚೀಟಿಯನ್ನೂ ಹೊಂದಿರಬೇಕು. ಅಂತಹವರು ಮಾತ್ರವೇ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಾಗಿರುತ್ತಾರೆ.

ರಾಜ್ಯದಲ್ಲಿ ಸದ್ಯ 1.24 ಕೋಟಿ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಿದ್ದು, ಯೋಜನೆಯ ಆರಂಭದಿಂದ (2023ರಿಂದ) ಈವರೆಗೆ 71 ಸಾವಿರ ಕೋಟಿ ರೂ.ಗೂ ಅಧಿಕ ಹಣ ನೀಡಲಾಗಿದೆ. ಈಗಾಗಲೇ ತೆರಿಗೆ ಪಾವತಿದಾರರು, ನಿಧನ ಹೊಂದಿದವರು, ಸರಕಾರಿ ಉದ್ಯೋಗಿಗಳೂ ಸೇರಿದಂತೆ ಸುಮಾರು 4.30 ಲಕ್ಷ ಮಂದಿಯನ್ನು ಯೋಜನೆಯಿಂದ ಕೈ ಬಿಡಲಾಗಿದೆ.

ಜತೆಗೆ, ನೆರೆ ರಾಜ್ಯಗಳಿಂದ ಬಂದು ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಂತಹ ಬೃಹತ್ ನಗರದಲ್ಲಿ ನೆಲೆಸಿರುವವರೂ ಗೃಹಲಕ್ಷ್ಮಿ ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಮತ ಚಲಾಯಿಸುವುದು ಅನ್ಯ ರಾಜ್ಯದಲ್ಲಿ, ಸೌಲಭ್ಯ ಪಡೆಯುವುದು ಕರುನಾಡಿನಲ್ಲಿ. ಹೀಗಾಗಿ, ರಾಜ್ಯದ ಮತದಾರರಿಗೆ ಮಾತ್ರ ಗ್ಯಾರಂಟಿ ಯೋಜನೆಗಳನ್ನು ತಲುಪಿಸಬೇಕು ಎನ್ನುವುದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಖಚಿತ ನಿಲುವಾಗಿದೆ. »02

- **1.24 ಕೋಟಿ** ಗೃಹಲಕ್ಷ್ಮಿ ಯೋಜನೆಯ ಸದ್ಯದ ಫಲಾನುಭವಿಗಳು
- **71,000 ಕೋಟಿ ರೂ.** ಈವರೆಗೆ ಯೋಜನೆ ಅಡಿಯಲ್ಲಿ ಬಿಡುಗಡೆಯಾಗಿರುವ ಮೊತ್ತ
- **4.30 ಲಕ್ಷ** ಫಲಾನುಭವಿಗಳನ್ನು ವಿವಿಧ ಕಾರಣಗಳಿಂದ ಕೈಬಿಡಲಾಗಿದೆ

AI ಚಿತ್ರ

ಬಾಗಿಲು ತಟ್ಟಿದ ಎಸ್‌ಐಆರ್ ವಿಕ ಫೋಕಸ್ »06

ಇಂದಿನಿಂದ ರಾಜ್ಯದಲ್ಲಿ ಎಸ್‌ಐಆರ್

ಬೆಂಗಳೂರು: ರಾಜ್ಯಾದ್ಯಂತ ಜೂನ್ 30ರಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಆರಂಭವಾಗಲಿದ್ದು, ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆಮನೆಗೆ ಖುದ್ದು ಭೇಟಿ ಕೊಟ್ಟು ಮಾಹಿತಿ ಸಂಗ್ರಹಿಸಲಿದ್ದಾರೆ.

ರಾಜ್ಯದಲ್ಲಿ 5.55 ಕೋಟಿ ಮತದಾರರಿದ್ದು, ಈ ಪೈಕಿ ಯಾರೆಲ್ಲಾ ಮತದಾನಕ್ಕೆ ಅರ್ಹರು ಎಂಬುದನ್ನು 'ಎಸ್‌ಐಆರ್' ನಿರ್ಧರಿಸಲಿದೆ. 59,050 ಮಂದಿ ಬಿಎಲ್‌ಒಗಳು ಮನೆಮನೆಗೆ ತೆರಳಿ ಗಣತಿ ನಮೂನೆ (ಎನ್ಯೂಮರೇಷನ್ ಫಾರ್ಮ್) ವಿತರಿಸಿ, ಮತದಾರರಿಂದ ವಿವರ ಭರ್ತಿ ಮಾಡಿಸಿ ವಾಪಸ್ ಪಡೆದುಕೊಳ್ಳುತ್ತಾರೆ.

18 ವರ್ಷ ತುಂಬಿದ ಹೊಸ ಮತದಾರರ ಹೆಸರು ಸೇರ್ಪಡೆ, ವೈಯಕ್ತಿಕ ವಿವರ ತಿದ್ದುಪಡಿ, ನಿಧನರಾದ ಮತದಾರರ ಹೆಸರು ತೆಗೆಯುವುದು, ಮನೆ ಖಾಲಿ ಮಾಡಿ ಬೇರೆಡೆ ಹೋದವರ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟು ಪರಿಷ್ಕರಣೆ ಮಾಡಲಾಗುತ್ತದೆ. ಒಂದಕ್ಕಿಂತ ಹೆಚ್ಚು ಕಡೆ ಮತದಾರರ ಪಟ್ಟಿಯಲ್ಲಿ ಹೆಸರು ಇದ್ದರೆ ಒಂದೆಡೆ ಮಾತ್ರ ಉಳಿಸಲಾಗುವುದು. ಮತದಾರರು ಆನ್‌ಲೈನ್ ಮೂಲಕವೂ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗಿಯಾಗಬಹುದು.

https://voters.eci.gov.in/ ವೆಬ್‌ಸೈಟ್ ಅಥವಾ ECINET ಮೊಬೈಲ್ ಆ್ಯಪ್‌ನಲ್ಲಿ ಈ ಆನ್‌ಲೈನ್ ಸೇವೆ ಲಭ್ಯವಿರಲಿದೆ. ವಿವರ»02

ಬಿವೈವಿ ಕಿಕ್‌ಔಟ್: ಡಿವಿಎಸ್ ಆಡಿಯೊ ಸದ್ದು »03

ಎಸ್ಕಾಂ ಖಾಸಗೀಕರಣ ಸಂಪುಟದಲ್ಲಿ ನಿರ್ಧಾರ: ಸಿಎಂ »03

ದೇಣಿಗೆ ಲೂಟಿಕೋರರ ಪರ ವಕಾಲತ್ತು ಇಲ್ಲ »09

ADVERTORIAL

ಮಂಡಿನೋವಿಗೆ ಆಪರೇಷನ್ ಇಲ್ಲದೆಯೇ ಶೀಘ್ರ ಚೇತರಿಕೆ!

ಒಂದೇ ಗಂಟೆಯ ಚಿಕಿತ್ಸೆ | ನೋವಿನ ದಿನಗಳಿಗೆ ಪೂರ್ಣವಿರಾಮ ಹಾಕಿ

■ ವಿಶೇಷ ವರದಿ ಬೆಂಗಳೂರು

ಬೆಂಗಳೂರು: "ವಯಸ್ಸಾಯಿತು, ಇನ್ನು ಮೊಣಕಾಲು ನೋವು ತಪ್ಪಿದ್ದಲ್ಲ, ನಡೆಯಲು ಆಗುತ್ತಿಲ್ಲ, ಮೆಟ್ಟಿಲು ಹತ್ತುವುದು ಕಷ್ಟ, ಆಪರೇಷನ್ ಮಾಡಿಸಲೇ ಬೇಕು" ಎಂದುಕೊಂಡು ನಿರಾಶರಾಗಿದ್ದೀರಾ? ಶಸ್ತ್ರಚಿಕಿತ್ಸೆಯ ಭಯದಿಂದ ನೋವನ್ನು ದಿನಾಲೂ ಸಹಿಸಿಕೊಳ್ಳುತ್ತಿದ್ದೀರಾ?

ಹಾಗಿದ್ದರೆ ನಿಮಗೊಂದು ಅತ್ಯಂತ ಆಶಾದಾಯಕ ಸುದ್ದಿ ಇಲ್ಲಿದೆ. ಇತ್ತೀಚಿನ ಜಾಗತಿಕ ವೈದ್ಯಕೀಯ ಸಂಶೋಧನೆಗಳ ಪ್ರಕಾರ, ಕೀಲು ನೋವಿನ ಸಮಸ್ಯೆ ಇರುವ ಶೇ. 80 ರಷ್ಟು ಜನರಿಗೆ ಶಸ್ತ್ರಚಿಕಿತ್ಸೆಯ (Surgery) ಅಗತ್ಯವೇ ಇರುವುದಿಲ್ಲ!



ಹಾನಿಯ ಹಂತ ಪರೀಕ್ಷಿಸಿ, ಸೂಕ್ತ ಚಿಕಿತ್ಸೆಯ ಸಲಹೆ

ಹೌದು, ನಿಮ್ಮ ಕೀಲು ನೋವು ಅಥವಾ ಅಸ್ಥಿಸಂಧಿವಾತ 1, 2 ಅಥವಾ 3ನೇ ಹಂತದ ಒಳಗಿದ್ದರೆ, ಆಪರೇಷನ್ ಇಲ್ಲದೆಯೇ ಸಂಪೂರ್ಣ ಉಪಶಮನ ಕಂಡುಕೊಳ್ಳಲು ಇಂದು ಆಧುನಿಕ ವೈದ್ಯವಿಜ್ಞಾನದಲ್ಲಿ ಅಡ್ಡ ಪರಿಣಾಮಗಳಿಲ್ಲದ ಹಾಗೂ ಸುರಕ್ಷಿತ ಮಾರ್ಗಗಳು ಲಭ್ಯವಿವೆ.

ಇಂದು ಲಭ್ಯವಿರುವ ಇಂತಹ ಅತ್ಯಾಧುನಿಕ ಚಿಕಿತ್ಸೆಗಳಲ್ಲಿ ಅತ್ಯಂತ ಸುರಕ್ಷಿತ ಹಾಗೂ ಪ್ರಮುಖವಾದದ್ದು ಅಲೆವಿಯೇಟ್ ನೋವು ನಿವಾರಣಾ ಕೇಂದ್ರದಲ್ಲಿ ನುರಿತ ತಜ್ಞ ವೈದ್ಯರು ನೀಡುವ ಅತ್ಯಂತ ಪರಿಣಾಮಕಾರಿಯಾದ ಪುನರುಜ್ಜೀವನ ಪ್ರಕ್ರಿಯೆ.

"ಅಲಿವಿಯೇಟ್ ಚಿಕಿತ್ಸೆಯ ಶಕ್ತಿಗೆ ನಾನೇ ನೇರ ಸಾಕ್ಷಿ!"
"ಆಪರೇಷನ್ ನಿರ್ಧಾರಕ್ಕೂ ಮುನ್ನ ಒಮ್ಮೆ ಇಲ್ಲಿಗೆ ಬನ್ನಿ. ನೋವಿನಿಂದ ಇಷ್ಟೊಂದು ಆರಾಮ ಸಿಗುತ್ತದೆ ಎಂದು ನಾನಂತೂ ಊಹಿಸಿರಲಿಲ್ಲ!" *

ಗೌಪ್ಯತೆಗಾಗಿ ಚಿತ್ರ ಮಸುಕುಗೊಳಿಸಲಾಗಿದೆ.
ಶಾಂತಮ್ಮ ಎಸ್
ಗೃಹಿಣಿ - 55 ವರ್ಷ
ಬೆಂಗಳೂರು ನಿವಾಸಿ
ಪಿಆರ್‌ಪಿ (PRP) ಚಿಕಿತ್ಸೆಯ ಫಲಾನುಭವಿ

ಈ ಪ್ರಕ್ರಿಯೆ ಯಾವುದೇ ಹೊರಗಿನ ರಾಸಾಯನಿಕ ವಿಲ್ಲದೆ, ನಿಮ್ಮದೇ ರಕ್ತದ ಸ್ವಯಂ ಗುಣಪಡಿಸುವ ಬೆಳವಣಿಗೆ ಅಂಶಗಳು / ಕಿಣ್ವಗಳನ್ನು ಬೇರ್ಪಡಿಸಿ, ಉನ್ನತ 'ಇಮೇಜ್ ಗೈಡೆನ್ಸ್' ತಂತ್ರಜ್ಞಾನದ ಮೂಲಕ, ಸವೆತವಿರುವ ನಿಖರ ಬಿಂದು ಗುರುತಿಸಿ, ನೇರವಾಗಿ ತಲುಪಿಸಿ, ಹಾನಿಗೊಳಗಾದ ಅಂಗಾಂಶಗಳನ್ನು ಈ ಪ್ರಕ್ರಿಯೆ ಮರು ಉತ್ತೇಜನಗೊಳಿಸುತ್ತದೆ.

*ಫಲಿತಾಂಶ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು ಎಂಬುದನ್ನು ಗಮನಿಸಬೇಕು.

ಚಿಕಿತ್ಸೆಯ ವಿಶೇಷತೆ ಮತ್ತು ಅನುಕೂಲ
- ಅಡ್ಮಿಟ್ ಆಗುವ ಕಿರಿಕಿರಿ ಇಲ್ಲ
- ಸ್ವಂತ ರಕ್ತದ ಶಕ್ತಿಯ ಬಳಕೆ
- ಸ್ಟೀರಾಯ್ಡ್‌ಗಳ ಬಳಕೆಯೇ ಇಲ್ಲ
- ಮರುದಿನವೇ ಕೆಲಸಕ್ಕೆ ಮರಳಿ
- ಮೂಲ ಪತ್ತೆಹಚ್ಚಿ ನಿಖರ ಚಿಕಿತ್ಸೆ
- 50,000+ ಜನರಿಗೆ ಉಪಶಮನ

ಇತರ ಚಿಕಿತ್ಸೆ
ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿದೆ.

ತಜ್ಞ ವೈದ್ಯರ ಸಮಾಲೋಚನೆಗೆ ಕರೆ ಮಾಡಿ:
ಅಲಿವಿಯೇಟ್ ನೋವು ನಿವಾರಣಾ ಕೇಂದ್ರ,
ಬೆಂಗಳೂರು ಶಾಖೆಗಳು:
ಪೀಣ್ಯ, ದಾಸರಹಳ್ಳಿ, ವೈಟ್‌ಫೀಲ್ಡ್ ಸದಾಶಿವನಗರ, ಜಯನಗರ, ಇಂದಿರಾನಗರ
080 28396888
080 23614888

PRESIDENCY UNIVERSITY
GAIN MORE KNOWLEDGE REACH GREATER HEIGHTS
Established under Section 2(f) of UGC Act, 1956 | Presidency University Act, 2013 of the Karnataka Act No. 41 of 2013 | Approved by AICTE, New Delhi
Bengaluru
NAAC A ACCREDITED UNIVERSITY

Discover Excellence
50 YEARS OF ACADEMIC EXCELLENCE
1300+ Students have availed Global Opportunities
190+ Partners with 40+ Countries | 11 Advanced Schools | 70+ Specialized Programs | 600+ Corporate Partners | 97% Placements | 2740+ Students Placed in 2024-25

SCHOOL OF AI AND ADVANCED COMPUTING
B.Tech. - Artificial Intelligence and Data Science
B.Tech. - Computer Science & Engineering (Artificial Intelligence & Machine Learning)
B.Tech. - Computer Science & Engineering (Blockchain)
B.Tech. - Computer Science & Engineering (Cyber Security)
B.Tech. - Computer Science & Engineering (Data Science)
B.Tech. - Computer Science & Engineering (Internet of Things)
B.Tech. - Computer Science & Technology (Big Data)
B.Tech. - Computer Science & Technology (DevOps)
B.Tech. - Robotics and Artificial Intelligence
M.Tech. - Artificial Intelligence
M.Tech. - Data Science

SCHOOL OF COMPUTER SCIENCE & ENGINEERING
B.Tech. - Computer Science & Engineering
B.Tech. - Computer Science & Engineering (Specialisation in Quantum Computing)
B.Tech. - Computer Science & Engineering (Specialisation in AI & Data Engineering)
B.Tech. - Computer Science & Engineering (Specialisation in BioInformatics)
B.Tech. - Information Science and Engineering
B.Tech. - Information Science and Technology
M.Tech. - Computer Science & Engineering (Specialisation in Quantum Computing)
M.Tech. - Computer Science & Engineering (Specialisation in Software Engineering)

SCHOOL OF MANAGEMENT
MBA
Specialisation in Finance / Marketing / Human Resource Management / Operations and Supply Chain Management / Business Analytics / Applied AI / International Business and Trade Management / Advertising and Brand Management / Health Care Management / Product Management / Artificial Intelligence and Data Analytics / Strategy and Consulting / Capital Market / Operations & Project Management / FinTech
MBA (Business Analytics)
MBA (Digital Marketing)
MBA (Banking and Finance Management)
MBA (Marketing and Finance)
BBA
Specialisation in Finance / Marketing / Human Resource Management / Operations and Supply Chain Management / Digital Business / AI and Automation / FinTech and Digital Assets / Advertising / PR & Corporate Communication / Sports Management / Hospitality Management
BBA (Digital Marketing)
BBA (Business Analytics)
BBA (Aviation Management)
PRESIDENCY ACADEMY OF CORPORATE EXCELLENCE | EXECUTIVE MBA

SCHOOL OF ENGINEERING
B.Tech. - Civil Engineering
B.Tech. - Electrical and Electronics Engineering
B.Tech. - Electronics and Communication Engineering
B.Tech. - Mechanical Engineering
B.Tech. - Petroleum Engineering
B.Tech. - VLSI
B.Tech. - Aerospace Engineering
M.Tech. - (Embedded System and VLSI)
M.Tech. - (Building and Construction Technology)
M.Tech. - (Automotive Technology)

SCHOOL OF COMMERCE
B.Com.
Specialisation in International Business / Human Resource Management / E-Commerce / Banking and Insurance / Supply Chain Management / Forensic Accounting and Financial Fraud Analytics / Banking and Finance / Corporate Accounting and Taxation / Business Analytics
B.Com. - (CFA US - Integrated)
B.Com. - (Corporate Accounting Integrated with CMA-US)
B.Com. - (Integrated with ACCA)
B.Com. - (Enrolled Agent - Integrated)
B.Com. - CA Foundation
M.Com.

SCHOOL OF MEDIA STUDIES
B.A. - Journalism and Mass Communication
Specialisation in Digital Marketing & Advertising / PR & Corporate Communications / Film, TV & Digital Production / Immersive media, AR/VR & Interactive Story telling / Digital Story telling & Content Creation
M.A. - Journalism and Mass Communication

SCHOOL OF INFORMATION SCIENCE
BCA
Specialisation in Artificial Intelligence & Data Science / Cloud Computing & Big Data / Cyber Security / Data Analytics / Business Intelligence / AR & VR – Metaverse / Gaming Technology / Ethical Hacking / Web Development / Mobile Application Development
BCA - (Artificial Intelligence & Machine Learning)
BCA - (Data Science)
B.Sc. - (AI, Data Science & Cloud Computing)
B.Sc. - Computer Science
M.Sc. - Data Science
MCA
Specialisation in Quantum Computing / Artificial Intelligence & Machine Learning / Artificial Intelligence & Data Science / Big Data, Internet of Things & Cloud Computing / Cyber Security

SCHOOL OF LIBERAL ARTS AND SCIENCES
B.Sc. Psychology
B.A. - Psychology / Economics / Political Science / Theatre Studies / English / Sociology / History / Performing Arts.
Diploma in Dance (Kuchipudi / Mohiniyattam / Kathak / Bharatanatyam)
Diploma in Music (Carnatic Classical / Hindustani Classical)
M.Sc. Psychology Specialisation in Child Psychology / Clinical Psychology / Counselling Psychology / Industrial Psychology
M.A. English Specialisation in Digital Humanities / Cultural Studies / Creative Writing / Educational Leadership and Management

SCHOOL OF DESIGN
B.Design Specialisation in Product Design / Communication Design / Space Design / Fashion Design / Game Design
B.Sc. (Multimedia)
BFA - Bachelor of Fine Arts

SCHOOL OF LAW
BBA LLB (Hons.) | B.A. LLB (Hons.) | LL.M (Master of Laws)

SCHOOL OF ALLIED HEALTH SCIENCES
Bachelor of Physiotherapy (B. PT.)
Bachelor of Occupational Therapy (B.O.T)
B.Sc. in Operation Theatre & Anaesthesia Technology (OT&AT)
B.Sc. in Medical Imaging Technology (MIT)
B.Sc. in Cardiac Care Technology (CCT)

HOSTEL FACILITY AVAILABLE
CET/DCET CODE: E237 | COMEDK CODE: 173 | PGCET CODE: MCA - C575MC | MBA - B349 | M.TECH - T983 | admission@presidencyuniversity.in | presidencyuniversity.in
SCAN QR CODE TO APPLY NOW
ADMISSIONS OPEN +91-90220-92222
Presidency University, Rajanakunte, Yelahanka, Bengaluru 560119
EW Ranked Top 4 in Karnataka among 15 Universities under Best Private Multidisciplinary Universities
GLOBALLY RANKED ON THE World University Rankings | QS World University Rankings
nirf RANKINGS 2025 Engineering Ranked in the Band: 201-300 Management Ranked in the Band: 101-125

ಗೋವಾದಲ್ಲಿ ಕನ್ನಡ ಶಾಲೆ ಉಳಿಸಿ: ಬಿಳಿಮಲೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನದ ನೆಪದಲ್ಲಿ ಗೋವಾದಲ್ಲಿ ಹಲವು ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚಲು ಅಲ್ಲಿನ ಸರಕಾರ ಸಿದ್ಧತೆ ನಡೆಸುತ್ತಿರುವುದು ಸಾಂವಿಧಾನಿಕ ಆಶಯಗಳಿಗೆ ವಿರುದ್ಧವಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಕಳವಳ ವ್ಯಕ್ತಪಡಿಸಿದ್ದಾರೆ.

■ ಸಿಎಂ ಡಿಕೆಶಿ, ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್‌ಗೆ ಬಿಳಿಮಲೆ ಪತ್ರ

ಈ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಅವರು, ''ಗೋವಾ ಸಿಎಂ ಪ್ರಮೋದ್ ಸಾವಂತ್ ಅವರು ವಿದ್ಯಾರ್ಥಿಗಳು ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳಬೇಕು ಎಂಬ ಲಘು ಹೇಳಿಕೆ ನೀಡಿರುವುದು ಆಘಾತಕಾರಿಯಾಗಿದೆ. ಇದು ಸಂವಿಧಾನ ಪ್ರತಿಪಾದಿಸುವ ವೈವಿಧ್ಯತೆಯಲ್ಲಿ ಏಕತೆ ಎಂಬ ಆಶಯದ ಸ್ಪಷ್ಟ ಉಲ್ಲಂಘನೆಯಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯು ಭಾಷಾ ವೈವಿಧ್ಯ ಮತ್ತು ಸಹಬಾಳ್ವೆಯ ಮೌಲ್ಯಗಳಿಗೆ ಹೇಗೆ ಧಕ್ಕೆಯುಂಟು ಮಾಡಬಹುದು ಎಂಬುದಕ್ಕೆ ಉದಾಹರಣೆಯಾಗಿದೆ,'' ಎಂದಿದ್ದಾರೆ.

ನಿಯೋಗ ಕಳಿಸಿ: ''ತಕ್ಷಣವೇ ರಾಜ್ಯ ಸಚಿವರ ಉನ್ನತ ಮಟ್ಟದ ನಿಯೋಗವನ್ನು ಗೋವಾಕ್ಕೆ ಕಳುಹಿಸಿ ಅಲ್ಲಿನ ಮುಖ್ಯಮಂತ್ರಿ ಮತ್ತು ಶಿಕ್ಷಣ ಸಚಿವರೊಂದಿಗೆ ಮಾತುಕತೆ ನಡೆಸಿ ಕನ್ನಡ ಶಾಲೆಗಳ ಮುಚ್ಚುವಿಕೆ ಪ್ರಕ್ರಿಯೆಗೆ ತಡೆ ನೀಡಬೇಕು. ಎನ್‌ಇಪಿ ಅನುಷ್ಠಾನ ಯಾವುದೇ ಪ್ರಾದೇಶಿಕ ಭಾಷೆ ಅಥವಾ ಭಾಷಾ ಅಲ್ಪಸಂಖ್ಯಾತರ ಅಸ್ತಿತ್ವಕ್ಕೆ ಮಾರಕವಾಗದಂತೆ ಕ್ರಮವಹಿಸಲು ಒತ್ತಡ ಹೇರಬೇಕು,'' ಎಂದು ಕೋರಿದ್ದಾರೆ.

ತುರ್ತು ನಿರ್ದೇಶನ ನೀಡಿ: ''ಮಾತೃಭಾಷೆಯಲ್ಲಿ ಕಲಿಯುವ ಅವಕಾಶ ಕಳೆದುಕೊಳ್ಳುತ್ತಿರುವ ಗೋವಾ ರಾಜ್ಯದ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸಹಾಯಕ್ಕೆ ಕೇಂದ್ರ ಸರಕಾರ ಕೂಡಲೇ ಧಾವಿಸಿ ಪರಿಹಾರಕ್ಕೆ ಮುಂದಾಗಬೇಕು,'' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನೂ ಬಿಳಿಮಲೆ ಆಗ್ರಹಿಸಿದ್ದಾರೆ.

''ಗೋವಾ ಸರಕಾರವು ಕೈಗೊಳ್ಳುತ್ತಿರುವ ತೀರ್ಮಾನ ಕೇವಲ ಆಡಳಿತಾತ್ಮಕವಾದುದಲ್ಲ, ಅದು ಭಾಷಾ ಅಲ್ಪಸಂಖ್ಯಾತರ ಸಾಂವಿಧಾನಿಕ ಹಕ್ಕು ಕಸಿಯುವ ಪ್ರಯತ್ನವಾಗಿದೆ,'' ಎಂದು ಪ್ರಧಾನ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಹೊಸಬರ ಸೇರ್ಪಡೆ, ಅರ್ಹ ಮತದಾರರ ಗುರುತಿಸುವಿಕೆ ಚುರುಕು | ಮನೆ ಬಾಗಿಲಿಗೆ ಬರಲಿದ್ದಾರೆ ಬಿಎಲ್‌ಒಗಳು

ಇಂದಿನಿಂದ ಮತಪಟ್ಟಿಯ ಶುದ್ಧೀಕರಣ

■ **ವಿಕ ಸುದ್ದಿಲೋಕ** ಬೆಂಗಳೂರು

ಮತಪಟ್ಟಿಯ ಹಣೆಬರಹಕ್ಕೆ ಕಡೆಗೂ ಕರುನಾಡು ಸಾಕ್ಷಿಯಾಗುತ್ತಿದೆ. ಮಂಗಳವಾರ (ಜೂನ್ 30) ದಿಂದ ರಾಜ್ಯದೆಲ್ಲೆಡೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಆರಂಭವಾಗಲಿದ್ದು, ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ಖುದ್ದುಭೇಟಿ ಕೊಟ್ಟುಮಾಹಿತಿ ಸಂಗ್ರಹಿಸಲಿದ್ದಾರೆ.

ರಾಜ್ಯದಲ್ಲಿ ಸುಮಾರು 5.55 ಕೋಟಿ ಮತದಾರರಿದ್ದು, ಈ ಪೈಕಿ ಯಾರೆಲ್ಲಾ ಮತದಾನಕ್ಕೆ ಅರ್ಹರು ಎಂಬುದನ್ನು ಎಸ್‌ಐಆರ್ ನಿರ್ಧರಿಸಲಿದೆ. 59,050 ಮಂದಿ ಬಿಎಲ್‌ಗಳು ಮನೆ ಮನೆಗೆ ತೆರಳಿ ಗಣತಿ ನಮೂನೆ (ಎನ್ಯೂಮರೇಷನ್ ಫಾರ್ಮ್) ವಿತರಿಸಿ, ಮತದಾರರಿಂದ ವಿವರ ಭರ್ತಿ ಮಾಡಿಸಿ ವಾಪಸ್ ಪಡೆದುಕೊಳ್ಳುತ್ತಾರೆ.

18 ವರ್ಷ ತುಂಬಿದ ಹೊಸ ಮತದಾರರ ಹೆಸರು ಸೇರ್ಪಡೆ, ನಿಧನರಾದ ಮತದಾರರ ಹೆಸರು ತೆಗೆಯುವುದು, ಮನೆ ಖಾಲಿ ಮಾಡಿ ಬೇರೆಡೆ ಹೋದವರ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟು ಪರಿಷ್ಕರಣೆ ಮಾಡಲಾಗುತ್ತದೆ. ಒಂದಕ್ಕಿಂತ ಹೆಚ್ಚು ಕಡೆ ಮತದಾರರ ಪಟ್ಟಿಯಲ್ಲಿ ಹೆಸರು ಇದ್ದರೆ ಒಂದೆಡೆ ಮಾತ್ರ ಉಳಿಸುವ ಪ್ರಕ್ರಿಯೆ ನಡೆಯಲಿದೆ. ಮತದಾರರ ಗುರುತಿನ ಚೀಟಿಯಲ್ಲಿ ವೈಯಕ್ತಿಕ ವಿವರಕ್ಕೆ ಸಂಬಂಧಿಸಿದಂತೆ ಏನಾದರೂ ತಪ್ಪುಗಳಿದ್ದರೆ ಅದರ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿದೆ.

ಇದು ಎನ್ಯೂಮರೇಷನ್ ಫಾರ್ಮ್: ಬಿಎಲ್ ಒಗಳು, ಗಣತಿ ನಮೂನೆಗಳನ್ನು ದ್ವಿಪತ್ರಿಯಲ್ಲಿ ಪ್ರತಿ ಮತದಾರರ ಮನೆಗೆ ತಲುಪಿಸುತ್ತಾರೆ. ಮತದಾರರ ಪಟ್ಟಿಯಲ್ಲಿರುವಂತೆ ಭಾವಚಿತ್ರ, ಹೆಸರು, ಮತಗಟ್ಟೆ ಸಂಖ್ಯೆ, ವಿಧಾನಸಭಾ ಕ್ಷೇತ್ರದ ಹೆಸರು ಈ ಅರ್ಜಿಯಲ್ಲಿ ಮುದ್ರಣವಾಗಿರುತ್ತದೆ. ಪ್ರತಿ ಮತದಾರರಿಗೂ ನೀಡುವ ಅರ್ಜಿಯಲ್ಲಿ ಕ್ಯೂ ಆರ್ ಕೋಡ್ ವಿಭಿನ್ನವಾಗಿರುತ್ತದೆ.

ಸಾಂದರ್ಭಿಕ ಚಿತ್ರ

ಮನೆಗೆ ಸ್ಟಿಕ್ಕರ್

ಗಣತಿ ನಮೂನೆಗಳ ವೇಳೆ ಬಿಎಲ್‌ಒಗಳು ಮನೆಗಳಿಗೆ ಎರಡು ಮಾದರಿಯ ಸ್ಟಿಕ್ಕರ್ ಅಂಟಿಸಲಿದ್ದಾರೆ. ಗಣತಿ ನಮೂನೆಗಳನ್ನು ವಿತರಿಸಲಾದ ಮನೆಗೆ ನೇರಳೆ ಬಣ್ಣದ ಚೌಕಾಕಾರದ ಸ್ಟಿಕ್ಕರ್ ಅಂಟಿಸಲಾಗುತ್ತದೆ. ಬಿಎಲ್‌ಒ ಭೇಟಿ ಸಮಯದಲ್ಲಿ ಮನೆಗೆ ಬೀಗ ಹಾಕಿದ್ದರೆ ಅಥವಾ ಬಾಗಿಲು ಮುಚ್ಚಿದ್ದರೆ ಅದನ್ನು ಸೂಚಿಸಲು ಕೆಂಪು ಬಣ್ಣದ ವೃತ್ತಾಕಾರದ ಸ್ಟಿಕ್ಕರ್ ಅಂಟಿಸಲಾಗುತ್ತದೆ.

ಆನ್‌ಲೈನ್ ಸೇವೆ

ಮತದಾರರು ಆನ್‌ಲೈನ್ ಮೂಲಕವೂ ಎಸ್ ಐಆರ್ ಪ್ರಕ್ರಿಯೆಯಲ್ಲಿ ಭಾಗಿಯಾಗಬಹುದು. https://voters.eci.gov.in/ ವೆಬ್‌ಸೈಟ್ ಅಥವಾ ECINET ಮೊಬೈಲ್ ಆ್ಯಪ್‌ನಲ್ಲಿ ಜೂ.20ರಿಂದ ಈ ಆನ್‌ಲೈನ್ ಸೇವೆ ಲಭ್ಯವಿರಲಿದೆ.

ಬಿಎಲ್‌ಒ ಆ್ಯಪ್ ಮೂಲಕ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ಮತದಾರರ ಮಾಹಿತಿ ಲಭ್ಯವಾಗುತ್ತದೆ.

ಎಸ್‌ಐಆರ್ ವೇಳಾಪಟ್ಟಿ

ಅವಧಿ	ಪ್ರಕ್ರಿಯೆ
ಜೂ.30ರಿಂದ ಜು.29	ಬಿಎಲ್‌ಒಗಳಿಂದ ಮನೆ ಮನೆ ಭೇಟಿ
ಜು.29	ಮತಗಟ್ಟೆಗಳ ತಾರ್ಕಿಕ ಮರು ಹೊಂದಾಣಿಕೆ ಕಾರ್ಯ
ಆ.5	ಕರಡು ಮತದಾರರ ಪಟ್ಟಿ ಪ್ರಕಟ
ಆ.5ರಿಂದ ಸೆ.4	ಕ್ಲೇಮು ಮತ್ತು ಆಕ್ಷೇಪಣೆ ಸಲ್ಲಿಕೆ
ಆ.5ರಿಂದ ಅ.3	ಕ್ಲೇಮು ಮತ್ತು ಆಕ್ಷೇಪಣೆಗಳ ಕುರಿತು ನೋಟಿಸ್ ನೀಡುವಿಕೆ ಹಾಗೂ ಆಕ್ಷೇಪಣೆಗಳ ವಿಲೇವಾರಿ
ಅ.7	ಅಂತಿಮ ಮತದಾರರ ಪಟ್ಟಿ ಪ್ರಕಟ

ಎಸ್‌ಐಆರ್‌ಗೆ ಸಿಬ್ಬಂದಿ ನಿಯೋಜನೆ

- **31** ಜಿಲ್ಲಾ ಚುನಾವಣಾ ಅಧಿಕಾರಿಗಳು
- **35** ಸಹಾಯಕ ಜಿಲ್ಲಾ ಚುನಾವಣಾಧಿಕಾರಿಗಳು
- **336** ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳು
- **04** ಹೆಚ್ಚುವರಿ ಜಿಲ್ಲಾ ಚುನಾವಣಾ ಅಧಿಕಾರಿಗಳು
- **224** ಮತದಾರರ ನೋಂದಣಿ ಅಧಿಕಾರಿಗಳು
- **7,556** ಮಂದಿ ಮತಗಟ್ಟೆ ಮಟ್ಟದ ಅಧಿಕಾರಿಗಳ ಮೇಲ್ವಿಚಾರಕರು

ಅರ್ಹತಾ ದಿನಾಂಕ

1950ರ ಪ್ರಜಾಪ್ರತಿನಿಧಿ ಕಾಯಿದೆಯ ಸೆಕ್ಷನ್ 14(ಬಿ) ಪ್ರಕಾರ ನಾಲ್ಕು ಅರ್ಹತಾ ದಿನಾಂಕಗಳಿವೆ (ಜನವರಿ 1, ಏಪ್ರಿಲ್ 1, ಜುಲೈ 1 ಹಾಗೂ ಅಕ್ಟೋಬರ್ 1). ರಾಜ್ಯದಲ್ಲಿ ಅ.1 ಅರ್ಹತಾ ದಿನಾಂಕವಾಗಿದೆ. ಈ ಅವಧಿಯಲ್ಲಿ ಮತದಾರರ ಪಟ್ಟಿಯ ಸಿದ್ಧತೆ, ಪರಿಷ್ಕರಣೆ ಮಾಡುವುದಾಗಿದೆ. ಈ ದಿನಾಂಕದಂದು 18 ವರ್ಷ ಪೂರ್ಣಗೊಂಡಿರುವವರು ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಬಹುದು.

ಒಂದು ವೇಳೆ ಮತದಾರರ ಭಾವಚಿತ್ರ ಹಳೆಯದಾಗಿದ್ದರೆ ಎನ್ಯೂಮರೇಷನ್ ಅರ್ಜಿಯೊಂದಿಗೆ ಹೊಸ ಭಾವಚಿತ್ರ ನೀಡಬಹುದು. ಇಲ್ಲದಿದ್ದರೆ ಬಿಎಲ್‌ಒಗಳೇ ಆ್ಯಪ್ ಮೂಲಕ ಭಾವಚಿತ್ರ ಪಡೆದುಕೊಳ್ಳುತ್ತಾರೆ. 2002ರ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇದ್ದರೆ ಅದರ ವಿವರವನ್ನು ನೀಡಬೇಕು. ಇಲ್ಲದಿದ್ದರೆ ತಮ್ಮ ಸಂಬಂಧಿಯ (ತಂದೆ, ತಾತ ಇತ್ಯಾದಿ) ಮಾಹಿತಿ ಒದಗಿಸಬೇಕು.

ಅರ್ಜಿಯಲ್ಲಿ ಮತದಾರರು ಸಹಿ ಅಥವಾ ಎಡಗೈ ಹೆಬ್ಬೆರಳಿನ ಗುರುತು ಹಾಕಬಹುದು. ಒಂದು ವೇಳೆ ಮತದಾರರು ಆ ಸಂದರ್ಭದಲ್ಲಿ ಲಭ್ಯವಿಲ್ಲದಿದ್ದರೆ ಕುಟುಂಬದಲ್ಲಿನ ವಯಸ್ಕ ಸದಸ್ಯರು ಸಹಿ ಮಾಡಿ ಬಿಎಲ್‌ಒಗಳಿಗೆ ಅರ್ಜಿ ಹಸ್ತಾಂತರಿಸಬಹುದು. 2002ರ ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೆ ಅಥವಾ ಡೇಟಾ ಹೊಂದಾಣಿಕೆ ಆಗದಿದ್ದರೆ ಚುನಾವಣಾಧಿಕಾರಿ ನೋಟಿಸ್ ನೀಡಿ ಅಗತ್ಯ ದಾಖಲೆಗಳನ್ನು ಕೇಳುತ್ತಾರೆ.

■ ರಾಜ್ಯದಲ್ಲಿ ನಿಖರ ಮತ್ತು ಪಾರದರ್ಶಕ ಮತದಾರರ ಪಟ್ಟಿ ಸಿದ್ಧಪಡಿಸುವುದು ಎಸ್‌ಐಆರ್‌ನ ಮುಖ್ಯ ಉದ್ದೇಶ. ಎಸ್‌ಐಆರ್, ಸಂಪೂರ್ಣ ಕಾನೂನುಬದ್ಧವಾಗಿ ನಡೆಯಲಿದೆ. ಈ ಬಗ್ಗೆ ಮತದಾರರಿಗೆ ಯಾವುದೇ ಸಂಶಯ ಬೇಡ. ಸಾರ್ವಜನಿಕರು ಎಸ್‌ಐಆರ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಪ್ರಜಾಪ್ರಭುತ್ವದ ಬಲವರ್ಧನೆಗೆ ಸಹಕರಿಸಬೇಕು.

- ವಿ. ಅನ್ಬುಕುಮಾರ್
ರಾಜ್ಯದ ಮುಖ್ಯ ಚುನಾವಣಾಧಿಕಾರಿ

ಶೇ.91.61ರಷ್ಟು ಮ್ಯಾಪಿಂಗ್: ಎಸ್‌ಐಆರ್ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 2026ರ ಜೂ.16ಕ್ಕೆ ಮತದಾರರ ಪಟ್ಟಿಯನ್ನು ಫ್ರೀಜ್ ಮಾಡಲಾಗಿದ್ದು, ಸುಮಾರು 5.55 ಕೋಟಿ ಮತದಾರರು ಎಸ್‌ಐಆರ್ ಪ್ರಕ್ರಿಯೆಗೆ ಒಳಪಡಲಿದ್ದಾರೆ. ಒಟ್ಟಾರೆ ಮತದಾರರಲ್ಲಿ ಈವರೆಗೆ 5.07 ಕೋಟಿ (ಶೇ.91.61) ಮತದಾರರ ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದೆ. 224 ವಿಧಾನಸಭಾ ಕ್ಷೇತ್ರಗಳ ಪೈಕಿ 126 ಕ್ಷೇತ್ರಗಳಲ್ಲಿ ಶೇ.95ರಷ್ಟು ಮ್ಯಾಪಿಂಗ್ ಆಗಿದೆ. ಬಿಎಲ್‌ಒಗಳ ಮನೆ ಭೇಟಿಯ ಕೊನೆಯ ದಿನದವರೆಗೂ ಅಂದರೆ ಜು.29ರವರೆಗೂ ಮ್ಯಾಪಿಂಗ್ ಪ್ರಕ್ರಿಯೆ ನಡೆಯಲಿದೆ.

ನೇಮಕಾತಿ ನಿಯಮಗಳಿಗೆ ತಿದ್ದುಪಡಿ

■ **ವಿಕ ಸುದ್ದಿಲೋಕ** ಬೆಂಗಳೂರು

ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸರಕಾರ ಕೆಲ ತಿದ್ದುಪಡಿ ಮಾಡಿದ್ದು, ಕರಡು ಅಧಿಸೂಚನೆ ಹೊರಡಿಸಿದೆ.

ತಾಂತ್ರಿಕ ಶಿಕ್ಷಣ ಇಲಾಖೆ

ನೇರ ನೇಮಕಾತಿ ಮತ್ತು ಬಡ್ತಿ ಮೂಲಕ ನೇಮಕಾತಿಗೆ ನಿಯಮಗಳನ್ನು ಪರಿಷ್ಕರಿಸಲಾಗಿದ್ದು, ಸರಕಾರಿ ಪಾಲಿಟೆಕ್ನಿಕ್ ಪ್ರಾಂಶುಪಾಲರ ಶೇ. 40ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುತ್ತದೆ. ಉಳಿದ ಶೇ. 60ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ನಿಯೋಜಿಸುವಂತೆ ತಿದ್ದುಪಡಿ ತರಲಾಗಿದೆ.

ಬಡ್ತಿಗೆ ಕನಿಷ್ಠ 3 ವರ್ಷ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿರಬೇಕು. ವಿಭಾಗ ಮುಖ್ಯಸ್ಥರ ಒಟ್ಟು 333 ಹುದ್ದೆಗಳನ್ನು ಗುರುತಿಸಲಾಗಿದ್ದು, ಇವುಗಳನ್ನು ಬಡ್ತಿ ಮೂಲಕವೇ ಭರ್ತಿ ಮಾಡಲು ನಿರ್ಧರಿಸಲಾಗಿದೆ. ಪದವಿ, ಸ್ನಾತಕೋತ್ತರ ಪದವಿ ಜತೆಗೆ ಕನಿಷ್ಠ 15 ವರ್ಷಗಳ ಬೋಧನಾ ಅಥವಾ ಸಂಶೋಧನೆ ಅನುಭವ ಹೊಂದಿರಬೇಕು ಎಂಬ ಮಾನದಂಡ ನಿಗದಿಪಡಿಸಲಾಗಿದೆ.

ಎಂಜಿನಿಯರಿಂಗ್ ವಿಷಯಗಳಲ್ಲಿ 359 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಗುರುತಿಸಲಾಗಿದ್ದು, ಶೇ. 95ರಷ್ಟು ನೇರ ನೇಮಕಾತಿ ಮೂಲಕ ಭರ್ತಿಗೆ ನಿರ್ಧರಿಸಲಾಗಿದೆ. ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಎಂಜಿನಿಯರಿಂಗ್ ವಿಷಯಗಳಿಗೆ ಒಟ್ಟು 2,042 ಉಪನ್ಯಾಸಕರ ಹುದ್ದೆಗಳಿದ್ದು, ಮೆಕ್ಯಾನಿಕಲ್ ಎಂಜಿನಿಯರಿಂಗ್- 522, ಎಲೆಕ್ಟ್ರಾನಿಕ್ಸ್- 441, ಸಿವಿಲ್ ಎಂಜಿನಿಯರಿಂಗ್- 418, ಕಂಪ್ಯೂಟರ್ ಸೈನ್ಸ್- 329 ಹಾಗೂ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ 209 ಹುದ್ದೆಗಳಿವೆ. ಎಂಜಿನಿಯರಿಂಗ್, ಟೆಕ್ನಾಲಜಿ, ಪಾಲಿಟೆಕ್ನಿಕ್ ಕಾಲೇಜುಗಳಿಗೆ ಈ ನಿಯಮಗಳು ಅನ್ವಯಿಸಲಿವೆ. ಸರಕಾರ ಹೊರಡಿಸಿರುವ ಈ ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು ಏಳು ದಿನಗಳ ಕಾಲಾವಕಾಶ ನೀಡಲಾಗಿದೆ.

ಗೃಹಲಕ್ಷ್ಮಿಗೆ SIR ಜರಡಿ

» ಮೊದಲ ಪುಟದಿಂದ

ಬಾಕಿ ಹಣಕ್ಕೆ ಪತ್ರ: ಮಾರ್ಚ್-ಏಪ್ರಿಲ್‌ವರೆಗೆ ಗೃಹಲಕ್ಷ್ಮಿ ಹಣ ಖಾತೆಗಳಿಗೆ ರವಾನೆಯಾಗಿದೆ. ಮೇ ತಿಂಗಳ ನಂತರದ ಹಣ ಬಿಡುಗಡೆಗಾಗಿ ಆರ್ಥಿಕ ಇಲಾಖೆಗೆ ಮನವಿ ಸಲ್ಲಿಸಲಾಗಿದೆ. ಹಣ ಬಂದ ಕೂಡಲೇ ಅರ್ಹರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಜಮಾ ಮಾಡುವ ಪ್ರಕ್ರಿಯೆ ಮುಂದುವರಿಯಲಿದೆ. ಇದೇ ವೇಳೆ, ಅರ್ಹರಾಗಿದ್ದರೂ ತಾಂತ್ರಿಕ ಕಾರಣಗಳಿಂದ ಹೆಸರು ಕೈಬಿಟ್ಟಿರುವವರಿದ್ದರೆ ಅವರು ಸಂಬಂಧಿತ ಇಲಾಖೆಯನ್ನು ಸಂಪರ್ಕಿಸಿ ದಾಖಲೆಗಳೊಂದಿಗೆ ಮರುಪರಿಶೀಲನೆ ಅರ್ಜಿ ಸಲ್ಲಿಸಬಹುದು. ಆದರೆ, ಅರ್ಹರಿಗೆ ಯೋಜನೆ ಕೈ ತಪ್ಪುವುದಿಲ್ಲ ಎಂದು ಅಧಿಕಾರಿಗಳು ಭರವಸೆಯನ್ನೂ ನೀಡುತ್ತಾರೆ.

ಮತದಾರರ ಚೀಟಿ, ಉಳಿತಾಯ ಖಾತೆ ಕಡ್ಡಾಯ: ಗೃಹಲಕ್ಷ್ಮಿ ಯೋಜನೆಯ ಮರುನವೀಕರಣದ ಮಾರ್ಗಸೂಚಿಗಳನ್ನು ಸಚಿವ ಸಂಪುಟದ ಮುಂದಿಡಲು ಸಲ್ಲಿಸಲಾಗಿದೆ. ಇದರಲ್ಲಿ ಮತದಾರರ ಗುರುತಿನ ಚೀಟಿಯನ್ನು ಕಡ್ಡಾಯಗೊಳಿಸಲಾಗಿದೆ. ಜತೆಗೆ, ಉಳಿತಾಯ ಖಾತೆ ಹೊಂದಿರುವುದನ್ನು ಕೂಡ ಕಡ್ಡಾಯ ಮಾಡಲಾಗಿದೆ. ಜಂಟಿ ಖಾತೆಗಳನ್ನು ಯೋಜನೆಗೆ ಪರಿಗಣಿಸದಿರಲು ಕೂಡ ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ. ಹೀಗೆ ಹತ್ತು ಹಲವು ಅಂಶಗಳನ್ನು ಒಳಗೊಂಡ ಮಾರ್ಗಸೂಚಿಯನ್ನು ಸರಕಾರಕ್ಕೆ ಸಲ್ಲಿಸಲಾಗಿದೆ. ಸಚಿವ ಸಂಪುಟದಲ್ಲಿ ಚರ್ಚಿಸಿ, ಒಪ್ಪಿಗೆ ಸಿಕ್ಕ ಬಳಿಕ ಅದನ್ನು ಅಂತಿಮಗೊಳಿಸಲಾಗುವುದು. ಇದೀಗ ಸರಕಾರದ ಬಹುತೇಕ ಸಿಬ್ಬಂದಿಯನ್ನು ಎಸ್‌ಐಆರ್ ಸೇವೆಗೆ ನಿಯೋಜಿಸಲಾಗಿದೆ. ಹೀಗಾಗಿ, ಎಲ್ಲ ಪ್ರಕ್ರಿಯೆ ಪೂರ್ಣಗೊಳ್ಳಲು ಇನ್ನೂ ಕಾಲಾವಕಾಶ ಬೇಕಾಗುತ್ತದೆ ಎಂದು ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ರಾಜ್ಯ ರಾಜಕಾರಣಿಗಳಿಂದ ಹೇಯ ಕೃತ್ಯ ಅಪರೂಪ: ಹೈಕೋರ್ಟ್ ಅಭಿಪ್ರಾಯ

■ **ವಿಕ ಸುದ್ದಿಲೋಕ** ಬೆಂಗಳೂರು

ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಸರಕಾರಿ ಅಧಿಕಾರಿಗಳು ಅಥವಾ ರಾಜಕೀಯ ಮುಖಂಡರು ಹೇಯ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಅಪರೂಪ ಎಂದು ಹೈಕೋರ್ಟ್ ಮೌಖಿಕವಾಗಿ ಅಭಿಪ್ರಾಯಪಟ್ಟಿದೆ.

ಧಾರವಾಡದ ಬಿಜೆಪಿ ಮುಖಂಡ ಯೋಗೀಶ್‌ಗೌಡ ಗೌಡರ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ವಿನಯ್ ಕುಲಕರ್ಣಿ ಮತ್ತು ಚಂದ್ರಶೇಖರ್ ಇಂಡಿ ಶಿಕ್ಷೆ ಅಮಾನತು ಕೋರಿ ಸಲ್ಲಿಸಿರುವ ಅರ್ಜಿ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಮೊಹಮ್ಮದ್ ನವಾಜ್ ಮತ್ತು ಜಿ.ಬಸವರಾಜ ಅವರಿದ್ದ ವಿಭಾಗೀಯ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಸಿಬಿಐ ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ''ಅತಿ ಜವಾಬ್ದಾರಿ ಸ್ಥಾನದಲ್ಲಿರುವ ಜನಪ್ರತಿನಿಧಿಯು ರಾಜಕೀಯ ವಿರೋಧಿಯ ಕೊಲೆ ಪಿತೂರಿ ನಡೆಸಿದ್ದಾರೆ. ಅಲ್ಲದೆ, ನೈಜ ಆರೋಪಿಗಳನ್ನು ರಕ್ಷಿಸುವ ಕೆಲಸ ಮಾಡಲಾಗಿದೆ. ತನಿಖೆಯು ಸಿಬಿಐ ಹೆಗಲಿಗೆ ಬಿದ್ದಿದ್ದರಿಂದ ವಿನಯ್ ಕುಲಕರ್ಣಿ ಮತ್ತಿತರರ ಯೋಜನೆ ವಿಫಲವಾಗಿದೆ. ಸಿಬಿಐ ಕೊಲೆ ಭೇದಿಸಿದ್ದು, 7-14ನೇ ಆರೋಪಿಗಳು ಪಿತೂರಿ ನಡೆಸಿದ್ದಾರೆ ಎಂದು ಪತ್ತೆ ಹಚ್ಚಿದೆ. ಇಂಥ ಅತ್ಯುನ್ನತ ಜವಾಬ್ದಾರಿ ಸ್ಥಾನದಲ್ಲಿರುವ ಜನಪ್ರತಿನಿಧಿಗೆ ಜಾಮೀನು ನೀಡುವುದು ಹೇಗೆ'' ಎಂದು ಪ್ರಶ್ನಿಸಿದರು.

ಈ ಹಂತದಲ್ಲಿ ನ್ಯಾ. ನವಾಜ್, ''ಇತರೆ ರಾಜ್ಯಗಳಲ್ಲಿ ಹೆಚ್ಚಿನ ಪ್ರಮಾಣದ ಸರಕಾರಿ ಅಧಿಕಾರಿಗಳು ಅಥವಾ ರಾಜಕಾರಣಿಗಳು ಹೇಯ ಕೃತ್ಯಗಳಲ್ಲಿ ಭಾಗಿಯಾಗಿರುತ್ತಾರೆ. ಆದರೆ, ಕರ್ನಾಟಕದಲ್ಲಿ ಅದು ವಿರಳ,'' ಎಂದರು.

ಆಗ ರಾಜು, ''ಕರ್ನಾಟಕದಲ್ಲಿ ಹೀನ ಕೃತ್ಯಗಳಲ್ಲಿ ರಾಜಕಾರಣಿಗಳು ಮತ್ತು ಸರಕಾರಿ ಅಧಿಕಾರಿಗಳು ಭಾಗಿಯಾಗುವುದು ಕಡಿಮೆ ಎಂದು ಕೇಳಲು ಸಂತೋಷವಾಗುತ್ತದೆ. ಆದರೆ, ಅಂತಹ ಟ್ರೆಂಡ್ ಆರಂಭವಾದರೆ ಅದನ್ನು ಎಳೆಯದರಲ್ಲಿ ಚಿವುಟಿ ಹಾಕಬೇಕಿದೆ,'' ಎಂದರು.

ಆಗ ನ್ಯಾಯಪೀಠವು, ''ಅದು ಸತ್ಯ. ಇಂಥ ಘೋರ ಕೃತ್ಯಗಳನ್ನು ಒಪ್ಪಲಾಗದು. ಅಂತಹವು ಎಲ್ಲಾ ಕಡೆ ನಡೆಯುತ್ತವೆ. ಕೆಲವು ಕಾರಣಗಳಿಗೆ ಕೆಲವು ಸಂದರ್ಭದಲ್ಲಿ ಕೆಲವರು ಪಾರಾಗುತ್ತಾರೆ. ಕೆಲವರು ಆರೋಪಿಗಳಾದರೂ ಕೆಲವರು ಮಾತ್ರ ಶಿಕ್ಷೆಗೆ ಗುರಿಯಾಗುತ್ತಾರೆ,'' ಎಂದು ಹೇಳಿತು.

ಕುಂದುಕೊರತೆ ನಿವಾರಣಾ ಸಮಿತಿ ರಚನೆಗೆ ಸೂಚನೆ

ಬೆಂಗಳೂರು: ರಾಜ್ಯದ ಸರಕಾರಿ, ಖಾಸಗಿ ಹಾಗೂ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯ ಸಮಸ್ಯೆಗಳನ್ನು ನಿವಾರಿಸಲು ಕಾಲೇಜು ಮಟ್ಟದಲ್ಲಿ ಕುಂದುಕೊರತೆ ನಿವಾರಣಾ ಸಮಿತಿ ರಚಿಸುವಂತೆ ಕಾಲೇಜು ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈ ಬಗ್ಗೆ ವಹಿಸಲಾದ ಕ್ರಮಗಳ ಕುರಿತು ಜೂ.30ರೊಳಗೆ ವರದಿ ಸಲ್ಲಿಸಬೇಕು. 1998ರ ಯುಜಿಸಿ ನಿಯಮಗಳ ಪ್ರಕಾರ ಈ ಸಮಿತಿ ರಚಿಸುವುದು ಕಡ್ಡಾಯವಾಗಿದೆ ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತೆ ಮಂಜುಶ್ರೀ ಸೂಚಿಸಿದ್ದಾರೆ.

ಒಂದು ವೇಳೆ ಕಾಲೇಜುಗಳಲ್ಲಿ ಸಮಿತಿ ಇಲ್ಲದಿದ್ದರೆ ಸಮಿತಿ ರಚಿಸಲು ಕ್ರಮವಹಿಸಬೇಕು. ರಾಜ್ಯ ಸರಕಾರ ಮತ್ತು ಯುಜಿಸಿ ನೀಡುವ ವಿವಿಧ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಬೇಕು. ಅರ್ಜಿ ಸಲ್ಲಿಕೆಗೆ ನೆರವಾಗಬೇಕು. ವಿದ್ಯಾರ್ಥಿಗಳಿಗೆ ಹೆಚ್ಚಿನ ವೃತ್ತಿ ಅವಕಾಶಗಳನ್ನು ಸೃಷ್ಟಿಸುವುದು, ಎಲ್ಲಾ ಕಾನೂನುಬದ್ಧ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದನ್ನು ಗಮನಿಸುವ ಮೂಲಕ ಸಾಂವಿಧಾನಿಕ ರಕ್ಷಣೆ ಒದಗಿಸಬೇಕು ಎಂದು ಆದೇಶಿಸಲಾಗಿದೆ.

ಈ ಸಮಿತಿ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಅಧಿಕೃತ ಸರಕಾರಿ ಆದೇಶಗಳನ್ನು ಸಂಗ್ರಹಿಸುವುದು, ವಿದ್ಯಾರ್ಥಿ ವೇತನ ಕಾರ್ಯಕ್ರಮಗಳ ಕುರಿತಾದ ಪ್ರಮುಖ ವಿವರಗಳನ್ನು ಪ್ರಚಾರ ಮಾಡುವುದು, ಉತ್ತಮ ಭವಿಷ್ಯ ನಿರ್ಮಾಣಕ್ಕೆ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡುವ ಹೊಣೆ ಹೊರಲಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
#2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-560 009.
ದೂರವಾಣಿ ಸಂಖ್ಯೆ: 080-22265383. Website: www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-04/0394/2026-27 ದಿನಾಂಕ:29.06.2026

ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ಕೆಸಿಇಐಯಲ್ಲಿ ನೋಂದಾಯಿತ ಎಲೆಕ್ಟ್ರಿಕಲ್ ಪರವಾನಗಿ ಹೊಂದಿರುವ, ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಗಳಲ್ಲಿ ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: (1) ಧಾರವಾಡ ಜಿಲ್ಲೆ ಮತ್ತು ತಾಲ್ಲೂಕಿನ ಧಾರವಾಡ ನೋಡ್ ಕೈಗಾರಿಕಾ ಪ್ರದೇಶ (ಹಂತ-IIರ ಭಾಗ)ದಲ್ಲಿ ವಿದ್ಯುತ್ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಕಾಮಗಾರಿ (**ಪ್ಯಾಕೇಜ್-2**). (2) ಧಾರವಾಡ ಜಿಲ್ಲೆ ಮತ್ತು ತಾಲ್ಲೂಕಿನ ಧಾರವಾಡ ನೋಡ್ ಕೈಗಾರಿಕಾ ಪ್ರದೇಶ (ಹಂತ-IIರ ಭಾಗ)ದಲ್ಲಿ ವಿದ್ಯುತ್ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಕಾಮಗಾರಿ (**ಪ್ಯಾಕೇಜ್-3**). (3) ಧಾರವಾಡ ಜಿಲ್ಲೆ ಮತ್ತು ತಾಲ್ಲೂಕಿನ ಧಾರವಾಡ ನೋಡ್ ಕೈಗಾರಿಕಾ ಪ್ರದೇಶ (ಹಂತ-IIರ ಭಾಗ)ದಲ್ಲಿ ವಿದ್ಯುತ್ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಕಾಮಗಾರಿ (**ಪ್ಯಾಕೇಜ್-4**). (4) ಧಾರವಾಡ ಜಿಲ್ಲೆ ಮತ್ತು ತಾಲ್ಲೂಕಿನ ಧಾರವಾಡ ನೋಡ್ ಕೈಗಾರಿಕಾ ಪ್ರದೇಶ (ಹಂತ-IIರ ಭಾಗ)ದಲ್ಲಿ ವಿದ್ಯುತ್ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಕಾಮಗಾರಿ (**ಪ್ಯಾಕೇಜ್-5**). (5) ಕಲಬುರಗಿ ಜಿಲ್ಲೆ ಮತ್ತು ತಾಲ್ಲೂಕಿನ ನಂದೂರು ಕೆಸರಟಗಿ ಕೈಗಾರಿಕಾ ಪ್ರದೇಶ, 3ನೇ ಹಂತಕ್ಕೆ ವಿದ್ಯುತ್ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:**30.07.2026, ಸಂಜೆ 4.00 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು-2
ವಾಸಾಸಂಇ/ವಾಪ್ರ/ಜಿಎ/1388/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನಿಯರರು ವಿದ್ಯೂತ್, ಸಂಪರ್ಕ ಮತ್ತು ಕಟ್ಟಡ ಲೋಕೋಪಯೋಗಿ ಇಲಾಖೆ ಈಶಾನ್ಯ ವಲಯ ಕಛೇರಿ, ಕಲಬುರಗಿ

ಸಂಖ್ಯೆ:ಕಾನೀಇ/ಲೋಇ/ಈವಿ-ವಿದ್ಯುತ್-ತಾಶಾ/ ಟೆಂಡರ ಅಧಿಸೂಚನೆ/ 2026-27/12 ದಿನಾಂಕ: 25.06.2026

:: ತಿದ್ದುಪಡಿ (Corrigendum) ::

ಈ ಕಚೇರಿ ಅಲ್ಪಾವಧಿ ಟೆಂಡರ ಅಧಿಸೂಚನೆ ಸಂಖ್ಯೆ- ಕಾನೀಇ/ಲೋಇ/ ಈವಿ-ವಿದ್ಯುತ್-ತಾಶಾ / ಟೆಂಡರ್ ಅಧಿಸೂಚನೆ/2026-27/05 ದಿನಾಂಕ 18.06.2026 ರಂದು ಪ್ರಕಟಿಸಲಾದ ಸೋಲಾರ್ ರೂಫ್ ಟಾಪ್ (Solar Roof Top) ವಿದ್ಯುತ ಘಟಕ ಸ್ಥಾಪಿಸುವ ಕಾಮಗಾರಿಗಳ ಈ ಕೆಳಗೆ ತಿಳಿಸಿದ ಇಂಡೆಂಟ್ ಗಳ ಟೆಂಡರ್ನ Technical Criterion - Sl no 2 (3.2.b) ಹಾಗು Sl no 5 (3.2.c)ಗಳ ತಿದ್ದುಪಡಿ ಮತ್ತು ಸ್ಪಷ್ಟೀಕರಣವನ್ನು ಸದರಿ ಇಂಡೆಂಟ್‌ಗಳ Corrigendum ಮೂಲಕ ಪ್ರಕಟಿಸಲಾಗಿರುತ್ತದೆ.

Sl. No	WORK INDENTS
1	PWD/2026-27/EL/WORK_INDENT36615
2	PWD/2026-27/EL/WORK_INDENT36677
3	PWD/2026-27/EL/WORK_INDENT36700

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವರು ವೆಬ್ ಸೈಟ್ ಸಂ: https://kppp.karnataka.gov.in ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ವಿವರಗಳನ್ನು Karnataka Public Procurement Portalನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಮುಖ್ಯ ಇಂಜೀನಿಯರರು.
ಸಂ ಮತ್ತು ಕ ಲೋ.ಇ. ಈಶಾನ್ಯ ವಲಯ ಕಛೇರಿ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/268/ಕೆ.ಎಸ್.ಎಂ.ಸಿ.&ಎ/2026-27

INNOVATE KARNATAKA | K-tech

ಕಿಟ್ಸ್‌ನ ಆಂತರಿಕ ಲೆಕ್ಕ ಪರಿಶೋಧನೆಗಾಗಿ ಸಿಎ ಸಂಸ್ಥೆಗಳ ಆಯ್ಕೆಗಾಗಿ ಇ-ಟೆಂಡರ್

ಪ್ರಕಟಣೆ ಸಂಖ್ಯೆ : ITBTST/2026-27/SE0051/CALL-2

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿಯು (ಕಿಟ್ಸ್) ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಆಂತರಿಕ ಲೆಕ್ಕ ಪರಿಶೋಧನಾ ಕೆಲಸಕ್ಕಾಗಿ ಚಾರ್ಟರ್ಡ್ ಅಂಕೌಂಟೆಂಟ್ ಸಂಸ್ಥೆಯನ್ನು ನೇಮಿಸಿಕೊಳ್ಳಲು ಉದ್ದೇಶಿಸಿದ್ದು, ಇ-ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹ ಹಾಗೂ ಅನುಭವಿ ಚಾರ್ಟರ್ಡ್ ಅಂಕೌಂಟೆಂಟ್ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಆಸಕ್ತಿಯುಳ್ಳ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಸಾಕಷ್ಟು ಮುಂಚಿತವಾಗಿ ನೋಂದಾಯಿಸಿಕೊಳ್ಳಲು ವಿನಂತಿಸಲಾಗಿದೆ.

ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಅರ್ಜಿಗಳನ್ನು ದಿನಾಂಕ 07.07.2026 ರ ಸಂಜೆ 4.00 ಗಂಟೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸತಕ್ಕದ್ದು.

ವಿವರವಾದ ಮಾಹಿತಿ ಹಾಗೂ ಟೆಂಡರ್ ದಾಖಲಾತಿಗಳಿಗಾಗಿ, ನಮ್ಮ ಅಧಿಕೃತ ವೆಬ್‌ಸೈಟ್ https://kppp.karnataka.gov.in ಗೆ ಭೇಟಿ ನೀಡಿರಿ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ಕಿಟ್ಸ್

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ
ಬಿಕೆಜಿ ಸಫೈರ್, # 59, 3ನೇ ಮಹಡಿ, ರೈಲ್ವೆ ಪ್ಯಾರಲೆಲ್ ರೋಡ್, ಕುಮಾರ ಪಾರ್ಕ್ ವೆಸ್ಟ್, ಶೇಷಾದ್ರಿಪುರಂ, ಬೆಂಗಳೂರು-560020. ದೂರವಾಣಿ: 08022231006/1008
E-mail: kitsadm.acc@gmail.com
ವಾಸಾಸಂಇ/ವಾಪ್ರ/1384/ಆಕಾರ್/2026-27

ಕರ್ನಾಟಕ ಸರ್ಕಾರ
ರಾಯಚೂರು ಮಹಾನಗರ ಪಾಲಿಕೆ
E-mail:itstaff_ulb_raichurn@yahoo.com Website:-www.raichurcity.gov.in
Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಮ.ನಿ/2026-27 ದಿನಾಂಕ:25-06-2026.

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಮರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	ಮಹಾನಗರ ಪಾಲಿಕೆ ನಿಧಿ ಮತ್ತು ಕೆ.ಕೆ.ಆರ್.ಡಿ.ಬಿ ಅನುದಾನದಲ್ಲಿ	Construction of anganwadi building in jawahar nagar at gajgarpeth of ward no.17 in Raichur city. **Estimate Cost Rs. 22,50,000/-**	DMA/2026-27/ BD/WORK_ INDENT60320
2	ಮಹಾನಗರ ಪಾಲಿಕೆ ಅನುದಾನದಲ್ಲಿ	Installation and Deployment of E-transformation Solution in the Office of the RAICHUR City Corporation **Estimate Cost Rs. 99,99,000/-**	DMA/2026-27/ SE7919
3		Hiring of CCTV Surveillance System for Public Safety, Crowd Monitoring and Law & Order Management during Festivals and Public Events in Raichur city. **Estimate Cost Rs. 35,00,000/-**	DMA/2026-27/ SE8108

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.
DIP/RCR/134/KSMCA/136/2026-27

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗ, ಜಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು-560 015.
E-mail: dcf.buzp@yahoo.in Phone No: 080-29900992.

ಸಂ:ಎ1/ಬಿಯುಡಿ/ಟೆಂಡರ್/ಎಸ್.ಎಫ್/ಸಿಆರ್-05/2026-27 ದಿನಾಂಕ: 29.06.2026

ಟೆಂಡರ್ ಪ್ರಕಟಣೆ

2026-27ನೇ ಸಾಲಿನಲ್ಲಿ ನಗರ ಸಾಮಾಜಿಕ ಅರಣ್ಯ ವಿಭಾಗದ ಆನೇಕಲ್ ಸಾಮಾಜಿಕ ಅರಣ್ಯ ವಲಯದಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ, 1ನೇ ವರ್ಷದ ನೆಡುತೋಪು ನಿರ್ವಹಣೆ ಮತ್ತು 2ನೇ ವರ್ಷದ ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಅರಣ್ಯ ಇಲಾಖೆಯಲ್ಲಿ 2026-27ನೇ ಸಾಲಿನಲ್ಲಿ ನೋಂದಾಯಿತರಾಗಿರುವ ಅರ್ಹ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೋಕ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 14.07.2026 ಸಂಜೆ 5.00 ಗಂಟೆಗೆ** ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 15.07.2026 ರಂದು ಸಂಜೆ 5:10 ಗಂಟೆ.** ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಯಶಸ್ವಿಯಾಗಿದ್ದರೆ **ದಿನಾಂಕ: 16.07.2026 ಮದ್ಯಾಹ್ನ 1.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಒಂದನೇ ಬಾರಿ ಇ-ಪೋರ್ಟಲ್‌ನಲ್ಲಿ ಯಾರೂ ಭಾಗವಹಿಸದೇ ಇದ್ದಲಿ (Auto Extention) ಮರು-ಟೆಂಡರ್‌ಗೆ **ದಿನಾಂಕ: 21.07.2026 ಸಂಜೆ 5.00** ಗಂಟೆಯವರೆಗೂ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಿ ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 22.07.2025 ಸಂಜೆ 5.10 ಗಂಟೆಗೆ** ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ **ದಿನಾಂಕ: 23.07.2025 ಮದ್ಯಾಹ್ನ 1.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಹಾಗೂ ಸರ್ಕಾರಿ ರಜಾದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು
ವಾಸಾಸಂಇ/ವಾಪ್ರ/1378/ಆಕಾರ್/2026-27

ಕಲಬುರಗಿ ಮಹಾನಗರ ಪಾಲಿಕೆ
Fax No.08472/260776, Phone: 08472/ 278675 Email Id: itstaff_ulb_gulbarga@yahoo.com

ಸಂಖ್ಯೆಃಕಮಪಾ/ಆಶಾ/ಎಸ್.ಡಬ್ಲ್ಯೂ.ಎಂ./2026-27 ದಿನಾಂಕಃ 25.06.2026

:: ಟೆಂಡರ ಪ್ರಕಟಣೆ ::

ವಿಷಯ ಃ ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿಯಲ್ಲಿ ಈ ಕೆಳಗಿನ ಕಾಮಗಾರಿಗಳ ಟೆಂಡರ ಆಹ್ವಾನಿಸಲಾಗಿರುತ್ತದೆ.

1) ಕಾಮಗಾರಿ ವಿವರ : 1. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ವಲಯ-1 ರಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026-27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ **DMA/2026-27/SE7626/CALL-2**, ಟೆಂಡರ್ ಮೊತ್ತ : **448.80 ಲಕ್ಷಗಳು**, ಇ.ಎಂ.ಡಿ. ಃ ರೂ. **6,73,198/-**

2. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ವಲಯ-2 ರಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026-27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ **DMA/2026-27/SE7644/CALL-2**, ಟೆಂಡರ್ ಮೊತ್ತ : **431.26** ಲಕ್ಷಗಳು, ಇ.ಎಂ.ಡಿ. ಃ ರೂ. **6,46,881/-**

3. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ವಲಯ-3 ರಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026-27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ **DMA/2026-27/SE7645/CALL-2,** ಟೆಂಡರ್ ಮೊತ್ತ : **431.66 ಲಕ್ಷಗಳು**, ಇ.ಎಂ.ಡಿ. ಃ ರೂ. **6,47,486/-**

4. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಇನ್ನಿತರ ವಾಹನಗಳಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 2026-27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್, ಚಾಲಕರು, ಚಾಲಕ ಕಮ್ ಆಪರೇಟರ್ ಮತ್ತು ಕ್ಲೀನರ್‌ಗಳ ಪೂರೈಸುವದು. ಇಂಡೆಂಟ ಸಂಖ್ಯೆಃ **DMA/2026-27/SE7647/CALL-2,** ಟೆಂಡರ್ ಮೊತ್ತ : **312.96 ಲಕ್ಷಗಳು**, ಇ.ಎಂ.ಡಿ. ಃ ರೂ. **4,69,434/-,**

2) ಟೆಂಡರ ಸ್ಪಷ್ಟೀಕರಣ ಅಂತಿಮ ದಿನಾಂಕಃ **13.07.2026 ಸಮಯ ಃ ಮುಂಜಾನೆ 11:00 ಗಂಟೆಗೆ,** 3) ಟೆಂಡರ ಸಲ್ಲಿಸಲು ಅಂತಿಮ ದಿನಾಂಕಃ **14.07.2026 ಸಮಯ ಃ ಸಾಯಂಕಾಲ 4.00 ಗಂಟೆಗೆ,** 4) ತಾಂತ್ರಿಕ್ ಬಿಡ್ ತೆರೆಯುವ ದಿನಾಂಕ ಃ **15.07.2026 ಸಮಯ ಃ ಸಾಯಂಕಾಲ ಃ 4.30 ಗಂಟೆಗೆ,** 5) ಆರ್ಥಿಕ ಬಿಡ್ ತರೆಯುವ ದಿನಾಂಕಃ **16.07.2026 ಸಮಯ ಃ ಸಾಯಂಕಾಲ ಃ 5.00 ಗಂಟೆಗೆ,** 6) ಪ್ರಿ ಬಿಡ್ ಸಭೆ ವಿವರ ದಿನಾಂಕ ಃ **13.07.2026 ಸಮಯ ಃ ಬೆಳಿಗ್ಗೆ 11.00 ಗಂಟೆಗೆ** ಸ್ಥಳ ಃ ಕೋಣೆ ಸಂಖ್ಯೆಃ 28 ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿ ಟ್ಯಾಂಕ ಬಂಡ್ ರೋಡ, ಜಗತ್ತ ಕಲಬುರಗಿ-585101, 7) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ: ಸಹಾಯಕ ಕಾರ್ಯಪಾಲಕ ಅಭಿಯಂತರರು, (ಪರಿಸರ), ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿ. 8) ಅಂತರಜಾಲ ತಾಣದ ವಿಳಾಸ: **http://kppp.karnataka.gov.in**

ಸಹಿ/- ಕಾರ್ಯಪಾಲಕ ಅಭಿಯಂತರರು, (ಘ.ವ.ನಿ.)
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/270/ಕೆ.ಎಸ್.ಎಂ.ಸಿ.&ಎ/2026-27

Published for the Proprietors, Metropolitan Media Company Limited, by Lokesh KV at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol. 27 Issue No.180

ನಿತ್ಯ ಭವಿಷ್ಯ

ರಾಜಗುರು ದ್ವಾರಕನಾಥ್

ಪ್ರಶ್ನೆ: ಜೀವನದಲ್ಲಿ ಕಷ್ಟದ ಬರೀ ದಿನಗಳನ್ನೇ ನೋಡುತ್ತಿದ್ದೇನೆ.?

ಜನ್ಮ ದಿನಾಂಕ: 09.02.1986 **ನಕ್ಷತ್ರ:** ಚಿತ್ತಾ

ಪರಿಹಾರ: ಸಪ್ತಮ ಶನಿ ಇದ್ದರೂ, ಗುರುಪಿನ ಭಾಗ್ಯವೂ ಇರುವುದರಿಂದ ಕಷ್ಟಗಳನ್ನು ಲೆಕ್ಕಿಸದೇ ಮುಂದೆ ಸಾಗುತ್ತಿದ್ದೀರಿ. ಗುರು ಬಲವು ಮುಗಿದರೆ ದೈವ ಬಲ, ಗೃಹ ಬಲ, ಅದೃಷ್ಟ ಬಲ ಏನೆಂಬುದನ್ನು ದೇವರೇ ತಿಳಿಸುತ್ತಾನೆ. ಮನುಷ್ಯನು ದೀನನಾಗಿ ದೈವಸ್ತುತಿ ಮಾಡಿದರೆ, ಎಂತಹ ಕಷ್ಟವನ್ನೂ ಹೋಗಲಾಡಿಸಿ ಸುಖದ ಬದುಕು ನೀಡುತ್ತಾನೆ.

ನೀವೂ ಪ್ರಶ್ನೆ ಕೇಳಬಹುದು...
ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 30-06-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಜ್ಯೇಷ್ಠ.
ಪಕ್ಷ: ಕೃಷ್ಣ. **ಮಳೆ ನಕ್ಷತ್ರ:** ಆರಿದ್ರಾ.
ನಿತ್ಯನಕ್ಷತ್ರ: ಪೂರ್ವಾಷಾಢ.
ತಿಥಿ: ಪಾಡ್ಯ. **ಯೋಗ:** ಬ್ರಹ್ಮ.
ಕರಣ: ಬಾಲವ.
ವಾರ: ಮಂಗಳವಾರ.

ರಾಹು ಕಾಲ: ಮ. 3.00 - 4.30
ಗುಳಿಕ ಕಾಲ: ಮ. 12.00-1.30
ಯಮಗಂಡ ಕಾಲ: ಬೆ. 9.00-10.30
ಸೂರ್ಯ ಉದಯ: ಬೆ. 5.58
ಸೂರ್ಯ ಅಸ್ತ: ಸಂ. 6.48

ಡಿವಿಎಸ್ ಕಿಕ್‌ಔಟ್ ಆಡಿಯೊ ಸದ್ದು

ಅಡ್ಡಮತ ತರುವಾಯ ಬಿಜೆಪಿಯಲ್ಲಿ ರಾಜ್ಯಾಧ್ಯಕ್ಷರ ಬದಲಾವಣೆಯ ಬಿರುಗಾಳಿ

■ **ವಿಕ ಸುದ್ದಿಲೋಕ** ಬೆಂಗಳೂರು

ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನದಿಂದ ಮುಜುಗರಕ್ಕೆ ಒಳಗಾಗಿರುವ ರಾಜ್ಯ ಬಿಜೆಪಿಯಲ್ಲಿ ಈಗ ಆಡಿಯೊ ಬಾಂಬ್ ಸದ್ದು ಮಾಡಿದೆ.

ಅವಧಿ ಮುಗಿಯುತ್ತಿದ್ದಂತೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಕಿತ್ತೊಗೆಯಬೇಕು ಎಂಬ ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಧ್ವನಿಗೆ ಹೋಲುವ ಸಂಭಾಷಣೆಯಿರುವ ಆಡಿಯೊ ವೈರಲ್ ಆಗಿದೆ. ಈ ನಡುವೆ ಆಡಿಯೊದಲ್ಲಿರುವುದು ತಮ್ಮ ಧ್ವನಿಯಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇಂಗ್ಲಿಷ್‌ನಲ್ಲಿ ಸಂಭಾಷಣೆ ನಡೆದಿದ್ದು, ಪ್ರದೀಪ್ ಎಂಬುವರೊಂದಿಗೆ ಮಾತನಾಡುರುವವರ ಧ್ವನಿಗೂ ಡಿ.ವಿ.ಸದಾನಂದಗೌಡ ಅವರ ಧ್ವನಿಗೂ ಸಾಮ್ಯತೆಗಳಿವೆ ಎಂಬ ಕಾರಣಕ್ಕೆ ಮಹತ್ವ ಪಡೆದುಕೊಂಡಿದೆ.

ಸಂಭಾಷಣೆ ಸಾರಾಂಶ

''ನಾನು ಸರಿಯೋ, ತಪ್ಪೋ ಗೊತ್ತಿಲ್ಲ, ನೀವೇ ಹೇಳಿ. ವಿಜಯೇಂದ್ರ ಮೂರು ವರ್ಷಗಳ ಅಧಿಕಾರಾವಧಿ ನವೆಂಬರ್‌ಗೆ ಪೂರ್ಣಗೊಳ್ಳಲಿದೆ. ಇನ್ನು ಎರಡು ತಿಂಗಳಷ್ಟೇ ಬಾಕಿ ಇದ್ದು, ಇಂತಹ ಹೊತ್ತಿನಲ್ಲಿ ಮತ್ತೊಂದು ಗೊಂದಲ ಏಕೆ ಸೃಷ್ಟಿಸಬೇಕು. ಗೊಂದಲ ಸೃಷ್ಟಿಯಾದರೆ ಮತ್ತೆ ವಿಜಯೇಂದ್ರ ತಂಡ.... ಎಲ್ಲವೂ ಸುಗಮವಾಗಿ ಮುಂದುವರಿಸಿದರೆ ಸುಲಭವಾಗಿ ಹೊರಗೆ ಕಳುಹಿಸಬಹುದು. ಹಾಗಾಗಿ ಬಾಕಿ ಅವಧಿವರೆಗೆ ಮುಂದುವರಿಯಲಿ. ನವೆಂಬರ್‌ಗೆ ಅವರ ಅವಧಿ ಮುಗಿಯುವ ಕಾರಣ ಯಾರೊಬ್ಬರೂ ರಾಜ್ಯಾಧ್ಯಕ್ಷರ ಬದಲಾವಣೆ ವಿಚಾರವಾಗಿ ಆಕ್ಷೇಪ ತೆಗೆಯಲು ಸಾಧ್ಯವಿಲ್ಲ. ಹಾಗೆಯೇ ಪಕ್ಷದೊಳಗೆ ಗೊಂದಲವೂ ಇರುವುದಿಲ್ಲ'' ಎಂಬ ಸಂದೇಶ ವೈರಲ್ ಆಗಿದೆ.



- ಇಂಗ್ಲಿಷ್‌ನಲ್ಲಿ ಆಡಿಯೊ ಸಂಭಾಷಣೆ
- ನವೆಂಬರ್ ವೇಳೆಗೆ ಕಿತ್ತೊಗೆಯಬೇಕು
- ಲಿಂಗಾಯತರಿಗೆ ಅನ್ಯಾಯ ಕೂಗು
- ಉತ್ತಮ ಆಯ್ಕೆಗಳ ಜತೆ ಇರುತ್ತೇನೆ

ನನ್ನದಲ್ಲದ ಆಡಿಯೊಕ್ಕೆ ಪ್ರತಿಕ್ರಿಯೆ ಇಲ್ಲ

''ಈ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ. ನನ್ನದಲ್ಲದ ಆಡಿಯೊ ಆಗಲಿ, ವಿಡಿಯೊ ಆಗಲಿ ಅದರ ಬಗ್ಗೆ ನಾನು ಮಾತನಾಡುವು ದಿಲ್ಲ. ಇದೊಂದು ಗಂಭೀರ ವಿಷಯ. ಯಾವುದೇ ಒಂದು ಆಡಿಯೊ ವೈರಲ್ ಆಗಿದ್ದು, ಈ ಬಗ್ಗೆ ಬಹಳ ದಿನಗಳಿಂದ ಚರ್ಚೆ ನಡೆಯುತ್ತಿದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮಾಧ್ಯಮಗಳೇ ಪತ್ತೆ ಹಚ್ಚಬೇಕು,'' ಎಂದು ಹೇಳಿದ್ದಾರೆ. ''ಪರಿಷತ್ ಚುನಾವಣೆಯಲ್ಲಿ ಪಕ್ಷದ ಕೆಲ ಶಾಸಕರಿಂದ ಅಡ್ಡಮತದಾನ ನಡೆಯಿತು. ಅದಕ್ಕೂ ಮೊದಲು ಪಕ್ಷದ ಕೆಲ ಶಾಸಕರು ಕಾಂಗ್ರೆಸ್‌ನ ಕೆಲ ಶಾಸಕರೊಂದಿಗೆ ರಹಸ್ಯ ಸಭೆ ನಡೆಸಿದ್ದ ಬಗ್ಗೆ ನಾನು ಪ್ರಸ್ತಾಪಿಸದೇ ಇದ್ದರೆ ಪಕ್ಷಕ್ಕೆ ವಾಸ್ತವಾಂಶ ಹೇಗೆ ಗೊತ್ತಾಗುತ್ತಿತ್ತು. ನಾನು ಕಳ್ಳ ಅಲ್ಲ, ಕಳ್ಳನಾಗಿದ್ದರೆ ಬಾಗಿಲು ಹಾಕಿ ಮನೆಯಲ್ಲಿ ಕೂರುತ್ತಿದ್ದೆ. ನನ್ನದಲ್ಲದ ಆಡಿಯೋಗೆ ಪ್ರತಿಕ್ರಿಯಿಸುವುದಿಲ್ಲ. ಒಂದೊಮ್ಮೆ ರಾಷ್ಟ್ರೀಯ ನಾಯಕರು ಕೇಳಿದರೆ ಉತ್ತರ ನೀಡುತ್ತೇನೆ,'' ಎಂದು ತಿಳಿಸಿದ್ದಾರೆ.

''ನನ್ನ ಪ್ರಕಾರ ಇವೆಲ್ಲಾ ಯೋಜಿತ ರೀತಿಯಲ್ಲಿ ನಡೆಯಬೇಕು. ಜುಲೈ, ಆಗಸ್ಟ್, ಸೆಪ್ಟೆಂಬರ್... ಅಕ್ಟೋಬರ್‌ನಲ್ಲಿ ರಾಜ್ಯಾಧ್ಯಕ್ಷ ಸ್ಥಾನದಿಂದ ಅವರನ್ನು ಕಿತ್ತೊಗೆಯಬೇಕು (ಕಿಕ್ ಹಿಮ್ ಔಟ್). ಈಗಲೇ ಬದಲಾವಣೆ ಪ್ರಯತ್ನ ನಡೆದರೆ ಅವರ ತಂಡ ಲಿಂಗಾಯಿತರಿಗೆ ಅನ್ಯಾಯವಾಗಿದೆ ಎಂದು ಮತ್ತೆ ಆರೋಪಿಸಬಹುದು. ಅವಧಿ ಮುಗಿಯುತ್ತಿದ್ದಂತೆ ಒಳ್ಳೆಯ ವ್ಯಕ್ತಿಯನ್ನು ಆಯ್ಕೆ ಮಾಡಿದರೆ ಪ್ರದೀಪ್ ಅವರೇ... ಎಲ್ಲವೂ ಸಹಜವಾಗಿ ಸುಗಮವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಇದೇ ಮಾಡಬೇಕು ಎಂದು ನಾನು ಹೇಳುವುದಿಲ್ಲ, ಪಕ್ಷದಲ್ಲಿ ಇದಕ್ಕಿಂತ ಉತ್ತಮ ಪರ್ಯಾಯ ಆಯ್ಕೆಗಳಿದ್ದರೆ ಆ ನಿರ್ಧಾರದ ಜತೆಗಿರುತ್ತೇನೆ,'' ಎಂದು ಸಂಭಾಷಣೆ ಇದೆ.

ಈ ನಡುವೆ ಪ್ರದೀಪ್ ಎಂಬುವರು, ''ಜೋಶಿ ಮುಖ್ಯ ದೋಷಿಯೇ,'' ಎಂದು ಪ್ರಶ್ನಿಸುತ್ತಾರೆ. ಅದಕ್ಕೆ, ''ಅದು ಹಾಗಿರಲಿ. ನಾನು ದೇವರಲ್ಲಿ ನಂಬಿಕೆ ಇಟ್ಟವನು. ಹಾಗಾಗಿ ಎಲ್ಲರೂ ನನ್ನನ್ನು ಇಷ್ಟಪಡುತ್ತಾರೆ. ನನ್ನ ಮೇಲಿನ ವಿಶ್ವಾಸದ ಬಗ್ಗೆ ನಾನೇ ಸರ್ಟಿಫಿಕೇಟ್ ಕೊಟ್ಟುಕೊಳ್ಳುತ್ತೇನೆ ಎಂದು ಭಾವಿಸಬೇಡಿ. ನಾನು ಈಗಲೂ ಬಸ್‌ಸ್ಟ್ಯಾಂಡ್‌ನಲ್ಲಿ ಕಾಣಿಸಿಕೊಂಡರೆ 20-30 ಆಟೊ ಚಾಲಕರು ಸೆಲ್ಫಿ ಪಡೆದುಕೊಳ್ಳಲು ಬಯಸುತ್ತಾರೆ. ಆ ರೀತಿ ನಿರ್ವಹಣೆ ಮಾಡಿದ್ದೇನೆ,'' ಎಂಬ ಸಂಭಾಷಣೆ ಇದೆ. ಅದಕ್ಕೆ ಪ್ರದೀಪ್ ಅವರು, ''ಇದನ್ನು ಬಾಸ್‌ಗೆ ಹೇಳಲೇ,'' ಎಂದು ಪ್ರಶ್ನಿಸುತ್ತಾರೆ. ಅಲ್ಲಿಗೆ ಆಡಿಯೊ ಸಂಭಾಷಣೆ ಸ್ಥಗಿತಗೊಂಡಿದೆ.

ಈ ಆಡಿಯೊ ಸದ್ದು ರಾಜ್ಯ ಬಿಜೆಪಿಯಲ್ಲಿ ಮತ್ತೆ ಬಣ ಸಂಘರ್ಷವನ್ನು ತಾರಕಕ್ಕೇರಿಸುವ ಲಕ್ಷಣ ಕಾಣಿಸುತ್ತಿದೆ. ರಾಜ್ಯಾಧ್ಯಕ್ಷರ ವಿರುದ್ಧವೇ ಷಡ್ಯಂತ್ರ ನಡೆಸಲಾಗುತ್ತಿದೆ ಎಂಬ ಅರ್ಥದಲ್ಲಿ ಟೀಕೆ ಎದ್ದಿರುವುದು ಬಿಜೆಪಿಯಲ್ಲಿ ಮತ್ತಷ್ಟು ಗೊಂದಲ ಸೃಷ್ಟಿಗೆ ಕಾರಣವಾದಂತಿದೆ.

ಪ್ರತಿಪಾದನೆ ಸರದಿಗೆ ಸಚಿವ ಪ್ರಿಯಾಂಕ್ ಸೇರ್ಪಡೆ

ಟೌನ್‌ಶಿಪ್‌ಗೆ ಭೂಮಿ ಕಸಿಯಲ್ಲ

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಡದಿ ಟೌನ್‌ಶಿಪ್ ಯೋಜನೆ ಮಾಡಿಯೇ ಸಿದ್ಧ ಎಂದು ಸಿಎಂ ಡಿಕೆಶಿ ಸ್ಪಷ್ಟನೆ ನಡುವೆಯೇ ಅವರ ಸಂಪುಟದ ಸಹೋದ್ಯೋಗಿಗಳು ಭಿನ್ನ ನಿಲುವು, ಅಭಿಪ್ರಾಯ ವ್ಯಕ್ತಪಡಿಸುತ್ತಿರುವುದು ಗಮನ ಸೆಳೆದಿದೆ.

ಭೂಮಿ ಬಿಟ್ಟುಕೊಡಲು ರೈತರು ಒಪ್ಪಿದರೆ ಮಾತ್ರವೇ ಯೋಜನೆ ಜಾರಿ ಸಾಧ್ಯ ಎಂಬ ಸಚಿವರಾದ ಡಾ.ಜಿ. ಪರಮೇಶ್ವರ್, ಸತೀಶ್ ಜಾರಕಿಹೊಳಿ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹೇಳಿಕೆಯ ಸರಣಿಗೆ ಈಗ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಕೂಡ ದನಿಗೂಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಖರ್ಗೆ, ''ಭೂಸ್ವಾಧೀನ ನಿಯಮಗಳು ಬಹಳ ಸ್ಪಷ್ಟವಾಗಿದ್ದು, ಬಲವಂತವಾಗಿ ಭೂಮಿ ವಶಪಡಿಸಿಕೊಳ್ಳಲು ಸಾಧ್ಯವಿಲ್ಲ. ರೈತರು ಸ್ವ ಇಚ್ಛೆಯಿಂದ ಭೂಮಿಯನ್ನು ಬಿಟ್ಟು ಕೊಟ್ಟರೆ ಮಾತ್ರ ಪರಿಗಣಿಸಬೇಕಾಗುತ್ತದೆ,'' ಎಂದು ಹೇಳಿದರು.

''ದೇವನಹಳ್ಳಿ ಸಮೀಪ ಚನ್ನರಾಯಪಟ್ಟಣ ಗ್ರಾಮಗಳ ರೈತರು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಏರೋಸ್ಪೇಸ್ ಪಾರ್ಕ್‌ಗಾಗಿ ಭೂಸ್ವಾಧೀನವನ್ನು ಸರಕಾರ ಕೈಬಿಟ್ಟಿತು ಮತ್ತು ಈ ಪ್ರದೇಶವನ್ನು ಶಾಶ್ವತ ಕೃಷಿ ವಲಯ ಎಂದು ಘೋಷಣೆ ಮಾಡಿದೆ. ಈಗ ಆ ಪೈಕಿ ಕೆಲವು ರೈತರು ಭೂಮಿ ಬಿಟ್ಟುಕೊಡಲು ಆಸಕ್ತಿ ವಹಿಸಿದ್ದು, ಈ ಬಗ್ಗೆ ಪರಿಶೀಲಿಸಿ ಸರಕಾರ ಸೂಕ್ತ ತೀರ್ಮಾನ ಮಾಡಲಿದೆ,'' ಎಂದು ಹೇಳಿದರು.

ಸಂಪುಟದಲ್ಲಿ ಚರ್ಚೆಸಿಲ್ಲ: ಬಿಡದಿ ಟೌನ್‌ಶಿಪ್ ವಿವಾದದ ಕುರಿತು ಬೆಂಗಳೂರಿನಲ್ಲಿ ಸೋಮವಾರ ಮತ್ತೊಮ್ಮೆ ಪ್ರತಿಕ್ರಿಯಿಸಿದ ಸಚಿವ ಸತೀಶ್ ಜಾರಕಿಹೊಳಿ, ''ಭೂಮಿ ಬಿಟ್ಟುಕೊಡಲು ಒಪ್ಪದ ರೈತರು ಪ್ರತಿಭಟನೆ ಮಾಡುತ್ತಿರುವುದನ್ನು ಮಾಧ್ಯಮಗಳಲ್ಲಿ ಗಮನಿಸಿದ್ದೇವೆ. ಹೈಕಮಾಂಡ್ ನಾಯಕರ ಗಮನಕ್ಕೂ ಬಂದಿದೆ. ಸಂಪುಟದಲ್ಲಿ ಟೌನ್‌ಶಿಪ್ ಬಗ್ಗೆ ಚರ್ಚೆಯೇ ನಡೆದಿಲ್ಲ. ಪ್ರತಿಪಕ್ಷಗಳ ಹೋರಾಟ ಮುಂಬರುವ ಚುನಾವಣೆ ಮೇಲೆ ಇದು ಪರಿಣಾಮ ಬೀರುತ್ತಾ ಎಂಬ ಬಗ್ಗೆ ಚರ್ಚೆ ಮಾಡಬೇಕಿದೆ,'' ಎಂದು ತಿಳಿಸಿದರು.

ಬಿಜೆಪಿ ವಕ್ತಾರ ಮಹೇಶ್ ಉಚ್ಚಾಟನೆ

ಬೆಂಗಳೂರು: ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಕೆಲ ಶಾಸಕರ ಅಡ್ಡ ಮತದಾನ ವಿಚಾರವಾಗಿ ಪಕ್ಷದ ಆಂತರಿಕ ಸಭೆಯಲ್ಲಿ ರಾಷ್ಟ್ರೀಯ ನಾಯಕರು ಬಾಗೂ ರಾಜ್ಯ ಪ್ರಮುಖರ ಬಗ್ಗೆ ಆಧಾರ ರಹಿತ, ಕೀಳು ಮಟ್ಟದ ಆರೋಪ ಮಾಡಿ ಶಿಸ್ತು ಉಲ್ಲಂಘಿಸಿದ ಆಪಾದನೆ ಮೇರೆಗೆ ಬಿಜೆಪಿಯ ರಾಜ್ಯ ವಕ್ತಾರರಾಗಿದ್ದ ಮೈಸೂರಿನ ಎಂ.ಜಿ. ಮಹೇಶ್ ಅವರನ್ನು 6 ವರ್ಷ ಕಾಲ ಪಕ್ಷದಿಂದ ಉಚ್ಚಾಟಿಸಲಾಗಿದೆ.

ರಾಜಕಾರಣ ಓಡುವ ರೈಲು, ಓಟ ನಿಲ್ಲಿಸಿದರೆ ಟ್ರೈನ್ ಮಿಸ್

ಬೆಂಗಳೂರು: ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದ ತಿಂಗಳೊಳಗೇ ಸಿದ್ದರಾಮಯ್ಯ ಸೈಡ್‌ಲೈನ್ ಆಗಿಬಿಟ್ಟರಾ ಎಂಬ ಬಗ್ಗೆ ಸಚಿವ ಸತೀಶ್ ಜಾರಕಿಹೊಳಿ ಮಾತುಗಳು ಗಮನ ಸೆಳೆದಿವೆ.

ಕೆಂಪೇಗೌಡರ ಜಯಂತಿ ವೇದಿಕೆಯಲ್ಲಿ ಸಿದ್ದರಾಮಯ್ಯ ಫೋಟೊಗೆ ಕೊಕ್ ನೀಡಲಾಗಿತ್ತು ಎಂಬ ಸುದ್ದಿಗಾರರ ಪ್ರಶ್ನೆಗೆ ಸೋಮವಾರ ಪ್ರತಿಕ್ರಿಯಿಸಿ ''ನಾನು ದೊಡ್ಡ ಲೀಡರ್ ಎಂದರೆ ನಡೆಯಲ್ಲ, ರಾಜಕಾರಣ ಅಂದರೆ ಓಡುತ್ತಲೇ ಇರಬೇಕು. ರಾಜಕಾರಣ ಎಂಬ ರೈಲನ್ನು ಓಡಿ ಹತ್ತಿಕೊಳ್ಳದಿದ್ದರೆ ಮಿಸ್ ಮಾಡಿಕೊಳ್ಳಬೇಕಾಗುತ್ತದೆ. ಎಲ್ಲಿಯವರೆಗೆ ಜನಸಂಪರ್ಕದಲ್ಲಿ ಇರುತ್ತಾರೋ ಅಲ್ಲಿಯವರೆಗೂ ಮಾತ್ರ ಲೀಡರ್. ಓಡಲ್ಲ ಎಂದು ಮನೆಯಲ್ಲಿ ಕುಳಿತುಬಿಟ್ಟರೆ ಟ್ರೈನ್ ಏರಿ ಹೋಗೋರು ಹೋಗುತ್ತಿರುತ್ತಾರೆ,'' ಎಂದು ವ್ಯಾಖ್ಯಾನ ಮಾಡಿದರು.

''ಓಡಿ ರೈಲು ಹಿಡಿಯಲಿಲ್ಲ ಎಂದರೆ ತುಮಕೂರಿಗೋ, ಅರಸೀಕೆರೆಗೋ ಹೋಗಿ ರೈಲು ಹತ್ತಬೇಕು. ಇಲ್ಲವಾದರೆ ಜನ ಮರೆತುಬಿಡ್ತಾರೆ. ರಾಜಕೀಯ ಅಂದರೆ ಓಡಬೇಕು, ಫೈಟ್ ಮಾಡಬೇಕು. ಫ್ರಂಟ್ ಲೈನ್‌ನಲ್ಲಿ ನಿಲ್ಲದಿದ್ದರೆ ಜನ ಹೊಸ ನಾಯಕನ ಬೆನ್ನಿಗೆ ನಿಲ್ಲುತ್ತಾರೆ. ಕಳೆದ 20 ವರ್ಷಗಳಲ್ಲಿ ನೋಡಿರುವ ಹಲವು ಲೀಡರ್‌ಗಳು ಈಗಿಲ್ಲ, ಅವರು ಓಡುವ ರೈಲು ಹತ್ತಿದ್ದರೆ ಇನ್ನೂ ಇರುತ್ತಿದ್ದರು,'' ಎಂದರು. ''ಸಿದ್ದರಾಮಯ್ಯರಿಗೆ ಅವರದ್ದೇ ಆದ ಶಕ್ತಿ ಇದೆ. ಓಡದೇ ಮೈಸೂರಿನಲ್ಲೇ ಕುಳಿತೇ ರಾಜಕೀಯ ಮಾಡ್ತೀನಿ ಅಂತಲೂ ಹೇಳಬಹುದು. ಖರ್ಗೆ, ಯಡಿಯೂರಪ್ಪ, ಕುಮಾರಸ್ವಾಮಿ ಅವರದ್ದೊಂದು ಶೈಲಿ ಇರುತ್ತೆ,'' ಎಂದು ಅಭಿಪ್ರಾಯ ಪಟ್ಟರು.

ಶಾಸಕ ಪ್ರದೀಪ್ ಬಂಧನಕ್ಕೆ ಆಗ್ರಹ

■ **ವಿಕ ಸುದ್ದಿಲೋಕ** ಚಿಕ್ಕಬಳ್ಳಾಪುರ

ಕೆಂಪೇಗೌಡ ಜಯಂತಿ ಗಲಾಟೆ ಸಂಬಂಧ ಸಿಕ್ಕಸಿಕ್ಕವರ ಮೇಲೆ ಎಫ್‌ಐಆರ್ ದಾಖಲಿಸಿ, 150 ಮಂದಿ ವಿರುದ್ಧ ಸ್ವಯಂಪ್ರೇರಿತ ಕೇಸ್ ದಾಖಲಿಸಿ ಪ್ರತಿಯೊಂದು ಗ್ರಾಮಗಳಲ್ಲೂ ಕಾರ್ಯಕರ್ತರ ಹುಡುಕಾಟ ನಡೆಸುತ್ತಿರುವ ಪೊಲೀಸರ ವಿರುದ್ಧ ಜೆಡಿಎಸ್-ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈಗಾಗಲೇ 9 ಜೆಡಿಎಸ್ ಕಾರ್ಯಕರ್ತರನ್ನು ಬಂಧಿಸಿ ಜೈಲಿನಲ್ಲಿ ಇರಿಸಿದ್ದಾರೆ. ಉಳಿದ 150ಕ್ಕೂ ಹೆಚ್ಚು ಮಂದಿಯ ಹೆಸರು ನಮೂದಿಸದೆ ಇತರೆ ಎಂದು ಸೇರಿಸಿ ಶೋಧ ಕಾರ್ಯಕ್ಕೆ ಇಳಿದಿರುವುದು ಗ್ರಾಮಸ್ಥರಲ್ಲಿ ಆತಂಕಕ್ಕೆ ಕಾರಣವಾಗಿದೆ.

ನಿಖಿಲ್ ಅಭಯ: ಪಕ್ಷದ ಕಾರ್ಯಕರ್ತರ ವಿರುದ್ಧ ಪೊಲೀಸರ ಸೇಡಿನ ಕ್ರಮದ ವಿರುದ್ಧ ಚಿಕ್ಕಬಳ್ಳಾಪುರಕ್ಕೆ ಸೋಮವಾರ ಧಾವಿಸಿ ಬಂದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜಿಲ್ಲಾ ಕಾರಾಗೃಹಕ್ಕೆ ಭೇಟಿ ನೀಡಿ ಬಂಧಿತರಿಗೆ ಧೈರ್ಯ ತುಂಬಿದ್ದಾರೆ. ಅವರ ಕುಟುಂಬಸ್ಥರಿಗೆ ಅಭಯ ನೀಡಿದ್ದಾರೆ. ''ಘಟನೆಗೆ ಮೂಲ ಪ್ರಚೋದನೆ ನೀಡಿದವರನ್ನು ಏಕೆ ಬಂಧಿಸಿಲ್ಲ,'' ಎಂದು ಪ್ರಶ್ನಿಸಿದ್ದಾರೆ.

ಬಂಧಿತರ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಧೈರ್ಯ ತುಂಬಿದ ನಿಖಿಲ್ ಕುಮಾರಸ್ವಾಮಿ

ಶಾಸಕರ ವಿರುದ್ಧ ಎಸ್‌ಪಿಗೆ ದೂರು: ಮತ್ತೊಂದೆಡೆ ಜೆಡಿಎಸ್ - ಬಿಜೆಪಿ ಮುಖಂಡರ ನಿಯೋಗವು ಎಸ್ಪಿ ಕುಶಲ್ ಚೌಕ್ಸೆಯವರನ್ನು ಭೇಟಿಯಾಗಿ ''ಮೀಸೆ ತಿರುವಿ, ಭುಜ ತಟ್ಟಿ, ಕೂದಲು ಕಿತ್ತು ಪ್ರಚೋದನೆ ನೀಡಿದ ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಪ್ರಕರಣ ದಾಖಲಿಸಿ, ಅವರನ್ನು ತಕ್ಷಣ ಬಂಧಿಸಬೇಕು. ಇಲ್ಲವಾದಲ್ಲಿ ದೊಡ್ಡಮಟ್ಟದ ಹೋರಾಟ ನಡೆಸಲಾಗುವುದು,'' ಎಂದು ಎಚ್ಚರಿಸಿದ್ದಾರೆ.

ವಿಬಿ-ಜಿ ರಾಮ್‌ಜಿಗೆ ಗಾಂಧೀಜಿ ಹೆಸರು ಮರು ನಾಮಕರಣಕ್ಕೆ ಆಗ್ರಹ

■ **ವಿಕ ಸುದ್ದಿಲೋಕ** ಬೆಂಗಳೂರು

ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ 'ಮಹಾತ್ಮ ಗಾಂಧಿ ವಿಕಸಿತ ಭಾರತ ಜಿ ರಾಮ್ ಜಿ' ಎಂದು ಮರುನಾಮಕರಣ ಮಾಡಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಕೇಂದ್ರ ಸರಕಾರವನ್ನು ಆಗ್ರಹಿಸಿದ್ದಾರೆ.

ಮನರೇಗಾ ಬದಲಿಗೆ ಜು.1 ಬುಧವಾರದಿಂದ ವಿಬಿ-ಜಿ ರಾಮ್‌ಜಿ ಜಾರಿಯಾಗುತ್ತಿರುವ ಹಿನ್ನೆಲೆಯಲ್ಲಿ ದಿಲ್ಲಿಯಲ್ಲಿ ಸೋಮವಾರ ಕೇಂದ್ರ ಪಂಚಾಯತ್‌ರಾಜ್ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅಧ್ಯಕ್ಷತೆಯಲ್ಲಿ ನಡೆದ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆಯಲ್ಲಿ ಅವರು ಈ ಬೇಡಿಕೆ ಮಂಡಿಸಿದರು. 'ಹಳ್ಳಿಗಳೇ ಆತ್ಮ ಎಂದು ಗ್ರಾಮ ಸ್ವರಾಜ್ಯದ ಪ್ರತಿಪಾದಕರಾಗಿದ್ದ ಮಹಾತ್ಮಾ ಗಾಂಧಿ ಅವರ ಹೆಸರನ್ನು ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ ಕೈಬಿಟ್ಟಿರುವುದು ಸರಿಯಲ್ಲ,'' ಎಂದು ವಾದಿಸಿದರು.

ಷರತ್ತುಗಳಿಗೆ ಆಕ್ಷೇಪ: ''ವಿಬಿ-ಜಿ ರಾಮ್ ಜಿ ಯಲ್ಲಿ 60:40ರ ಅನುಪಾತವನ್ನು ಒಪ್ಪಲಾಗದು. ಇದು ರಾಜ್ಯಗಳಿಗೆ ಅಧಿಕ ಹೊರೆಯಾಗುತ್ತಿದೆ. ಮನರೇಗಾದಲ್ಲಿ ಇದ್ದಂತೆ 90:10ರ ಅನುಪಾತವನ್ನೇ ಮುಂದುವರಿಸಬೇಕು. ಗ್ರಾಮೀಣ ಕುಟುಂಬದ ಜನರು ಉದ್ಯೋಗಕ್ಕೆ ಬೇಡಿಕೆ ಇಟ್ಟಾಗ ಉದ್ಯೋಗ ನೀಡಬೇಕು. ವರ್ಷದ 365 ದಿನವೂ ಉದ್ಯೋಗದ ಖಾತರಿ ನೀಡಬೇಕು. 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ರಾಜ್ಯಕ್ಕೆ 2,186 ಕೋಟಿ ರೂ ಬಾಕಿ ಬರಬೇಕಾಗಿದ್ದು, ಕೂಡಲೇ ಬಿಡುಗಡೆ ಮಾಡಬೇಕು,'' ಎಂದು ಆಗ್ರಹಿಸಿದರು.

TOI
ಬ್ರೇಕಿಂಗ್ ನ್ಯೂಸ್
ತ್ವರಿತವಾಗಿ ಪಡೆಯಿರಿ, ಯಾವುದೇ ವಿದ್ಯಮಾನಗಳ ಕ್ಷಣಕ್ಷಣದ ವಿಶ್ವಾಸಾರ್ಹ ಮಾಹಿತಿ
ಲೈವ್ ಅಪ್‌ಡೇಟ್‌ಗಳು
ದಿನದ 24 ಗಂಟೆಯೂ ನಿರಂತರ ಮಾಹಿತಿ
24x7 ಬ್ರೇಕಿಂಗ್ ನ್ಯೂಸ್


ಡೌನ್‌ಲೋಡ್ ಮಾಡಿ TOI ಆ್ಯಪ್

ಎಸ್ಕಾಂ ಖಾಸಗೀಕರಣ ಸಂಪುಟ ತೀರ್ಮಾನ

ಬಿಜೆಪಿ ಸರಕಾರ ಕಾನೂನು ತಂದಾಗ ಏಕೆ ವಿರೋಧಿಸಲಿಲ್ಲ: ನೌಕರರಿಗೆ ಡಿಕೆಶಿ ಪ್ರಶ್ನೆ

■ **ವಿಕ ಸುದ್ದಿಲೋಕ** ಬೆಂಗಳೂರು

''ನಾನೊಬ್ಬನೇ ವಿದ್ಯುತ್ ನಿಗಮಗಳ ಖಾಸಗೀಕರಣ ಪ್ರಸ್ತಾವ ಕೈಬಿಡಲಾಗದು. ಮುಂದಿನ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು,'' ಎಂದು ಸಿಎಂ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಹಾಗೂ ಅಸೋಸಿಯೇಷನ್‌ಗಳ ಒಕ್ಕೂಟ ಬೆಂಗಳೂರಿನಲ್ಲಿ ಸೋಮವಾರ ಏರ್ಪಡಿಸಿದ್ದ ಅಭಿನಂದನೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

''2023ರಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಪ್ರಸ್ತಾಪವಾದ ಖಾಸಗೀಕರಣಕ್ಕೆ ಯಾರೂ ಆಗ ಧ್ವನಿ ಎತ್ತಲಿಲ್ಲ,'' ಎಂದು ಬೇಸರ ವ್ಯಕ್ತಪಡಿಸಿದರು.

ಲೈನ್ ಎಳೆದವರು ನೀವು, ಹಣ ಕಂಪನಿಗಳಿಗಾ?: ''ಮುಂಬಯಿ, ದಿಲ್ಲಿ ಸೇರಿದಂತೆ ಅನೇಕ ನಗರಗಳಲ್ಲಿ ಖಾಸಗೀಕರಣ ಮಾಡಲಾಗಿದೆ. ನೂರಾರು ವರ್ಷಗಳಿಂದ ವಿದ್ಯುತ್ ಲೈನ್ ಎಳೆದವರು ನೀವು, ಬೆಂಬಲ ಕೊಟ್ಟಿದ್ದು ಸರಕಾರ. ಈಗ ಖಾಸಗಿ ಕಂಪನಿಯವರು ದುಡ್ಡು ಮಾಡಲು ಅವಕಾಶ ನೀಡಬೇಕಂತೆ ಎನ್ನುವುದು ಸರಿಯೇ,'' ಎಂದು ಪ್ರಶ್ನಿಸಿದರು.

''ಈಗಾಗಲೇ ಸಚಿವರಾದ ಜಾರ್ಜ್, ಎಲ್ಲಾ ಎಸ್ಕಾಂ ಅಧ್ಯಕ್ಷರು ಡಿ.ಕೆ. ಶಿವಕುಮಾರ್ ಕಾಲದಲ್ಲಿ ಖಾಸಗೀಕರಣ ಆಗಬಾರದು ಎಂದು ನನಗೆ ಕಿವಿಯಲ್ಲಿ ಹೇಳಿದ್ದಾರೆ. ಈ ಬಗ್ಗೆ ಮುಂದಿನ ಸಂಪುಟದಲ್ಲಿ ತೀರ್ಮಾನ ಮಾಡುತ್ತೇನೆ. ನೀವು ಮೋಸ ಮಾಡಿದರೆ ವಾಜಪೇಯಿ ಸರಕಾರದ ತೀರ್ಮಾನದ ಕಡೆ ಮುಖ ಮಾಡುವೆ,'' ಎಂದು ಎಚ್ಚರಿಸಿದರು.

> ರಾಜ್ಯದ ಜನರಿಗೆ ವಿದ್ಯುತ್ ಪೂರೈಸಲು ಇಂಧನ ಇಲಾಖೆ ಬಲಿಷ್ಠವಾಗಿದ್ದು, ಖಾಸಗೀಕರಣಗೊಳಿಸುವ ಪ್ರಶ್ನೆಯೇ ಇಲ್ಲ. ನಾವು ಯಾವುದೇ ಖಾಸಗಿ ಕಂಪನಿಗೆ ಕಡಿಮೆ ಇಲ್ಲ.
> **-ಕೆ.ಜೆ. ಜಾರ್ಜ್** ಇಂಧನ ಸಚಿವ

ಪೆನ್ಸಿಲ್‌ನಲ್ಲಿ ಬರೆಸಿ, ತಿದ್ದುವವನಲ್ಲ

''ಇಂಧನ ಇಲಾಖೆಯಲ್ಲಿ ಈ ಹಿಂದೆಯೂ ಕ್ರಾಂತಿಕಾರಿ ಬದಲಾವಣೆ ತಂದಿದ್ದೇವೆ. ಇಂಧನ ಭವನಕ್ಕೆ ಕಟ್ಟಡ, ವೇತನ ಪರಿಷ್ಕರಣೆ ಐದು ವರ್ಷಕ್ಕೆ ಇಳಿಸಿದೆ. 25 ಸಾವಿರ ಮಂದಿಯನ್ನು ಇಲಾಖೆಯಲ್ಲಿ ನೇಮಕ ಮಾಡಿದೆ. ನಾನು ಯಾವತ್ತೂ ಪೆನ್ಸಿಲ್‌ನಲ್ಲಿ ಬರೆಸಿ, ನಂತರ ಅದನ್ನು ತಿದ್ದುವ ಕೆಲಸ ಮಾಡಿಲ್ಲ. ಇದನ್ನು ನೀವು ಸ್ಮರಿಸಿಕೊಳ್ಳಬೇಕು,'' ಎಂದರು.

ಕತ್ತಲೆ ದೂರ ಮಾಡುವವರು: ''ನೀವೆಲ್ಲರೂ ಕತ್ತಲೆ ದೂರ ಮಾಡುವ ಕಾಯಕ ಜೀವಿಗಳು. ಒಂದು ಸರಕಾರವನ್ನು ಅಧಿಕಾರಕ್ಕೆ ತರುವ ಹಾಗೂ ಅಧಿಕಾರದಿಂದ ತೆಗೆಯುವ ಸಾಮರ್ಥ್ಯ ನಿಮಗಿದೆ ಎಂಬ ಅರಿವು ನನಗಿದೆ,'' ಎಂದರು.

''ವಿದ್ಯುತ್‌ಗೆ ಸಂಬಂಧಿಸಿ ನಾನು ಕೈಗೊಂಡಿರುವ ಈ ಹಿಂದಿನ ತೀರ್ಮಾನ ದೇಶಕ್ಕೇ ಮಾದರಿಯಾಗಿದೆ. ನಾನು ಇಲಾಖೆ ಜವಾಬ್ದಾರಿ ಪಡೆದಾಗ ಶೇ.19ರಷ್ಟಿದ್ದ ಇಂಧನ ಸೋರಿಕೆ ಪ್ರಮಾಣ ಈಗ ಶೇ. 10ಕ್ಕೆ ಇಳಿಕೆಯಾಗಿದೆ. 13 ಸಾವಿರ ಎಕರೆ ವಿಸ್ತೀರ್ಣದ ಒಂದೇ ಜಾಗದಲ್ಲಿ ಒಂದು ಎಕರೆ ಭೂಸ್ವಾಧೀನ ಮಾಡದೆ 2,400 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿರುವ ಸೋಲಾರ್ ಪಾರ್ಕ್ ಅಂದಿನ ದಿನಗಳಲ್ಲಿ ದೇಶದಲ್ಲೇ ದೊಡ್ಡ ಇತಿಹಾಸವಾಗಿತ್ತು,'' ಎಂದರು.

ಡಿವಿಎಸ್, ವಿಶ್ವನಾಥ್ ನಡುವೆ ವಾಕ್ಸಮರ

ಬೆಂಗಳೂರು: ಬಿಜೆಪಿಯಲ್ಲಿ ನಾಯಕರ ನಡುವೆ ಪರಸ್ಪರ ಬೈದಾಟದ ಪ್ರಸಂಗಗಳು ಮರುಕಳಿಸುತ್ತಿದ್ದು, ಮಾಜಿ ಸಿಎಂ ಸದಾನಂದಗೌಡ, ಶಾಸಕ ಎಸ್.ಆರ್. ವಿಶ್ವನಾಥ್ ನಡುವಿನ ವಾಕ್ಸಮರ ತಾರಕಕ್ಕೇರಿದೆ.

ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಹಾಗೂ ಕೆಂಪೇಗೌಡ ಜಯಂತಿ ಹಿನ್ನೆಲೆಯಲ್ಲಿ ವಿಶ್ವನಾಥ್ ಅವರು ಸದಾನಂದ ಗೌಡರ ವಿರುದ್ಧ, ''ಹಳೆ ಮೈಸೂರು ಭಾಗದವರನ್ನೇ ಒಕ್ಕಲಿಗರು ಅನ್ನುವುದು. ಮಂಗಳೂರು ಕಡೆಯವರು ದೊಡ್ಡಗೌಡರಲ್ಲ, ಅವರ ಬುದ್ಧಿಯೇ ವಕ್ರ ಬುದ್ಧಿ. ಅವರ ವರ್ತನೆ ಪಕ್ಷಕ್ಕೆ ಶೋಭೆ ತರುವಂತದ್ದಲ್ಲ,'' ಎಂದು ವಿಶ್ವನಾಥ್ ಆಕ್ರೋಶ ಹೊರಹಾಕಿದ್ದರು. ಅದಕ್ಕೆ ಸೋಮವಾರ ಸದಾನಂದಗೌಡ, ''ವಿಶ್ವನಾಥ್ ಹಿನ್ನೆಲೆ ಏನು? ಆತ ಮುತ್ತಪ್ಪ ರೈ ಕೈಕೆಳಗೆ ಇದ್ದುಕೊಂಡು ಲೂಟಿ ಹೊಡೆಯುತ್ತಿದ್ದ. ಬೆಂಗಳೂರಿನಲ್ಲಿ ಗೂಂಡಾಗಿರಿ ಮಾಡಿಕೊಂಡಿದ್ದ. ಕೊಳ್ಳೆ ಹೊಡೆಯುವುದು ಮತ್ತು ಹಣ ಮಾಡುವುದಷ್ಟೇ ಆತನ ಕೆಲಸ. ಅಂತಹ ವ್ಯಕ್ತಿ ನನ್ನನ್ನು ಒಕ್ಕಲಿಗನೇ ಅಲ್ಲ ಎನ್ನುತ್ತಾನೆ,'' ಎಂದು ಏಕ ವಚನದಲ್ಲೇ ತರಾಟೆಗೆ ತೆಗೆದುಕೊಂಡರು. ಆಡಿಯೊ ವಿವಾದ ಹಾಗೂ ವಿಶ್ವನಾಥ್ ಹೇಳಿಕೆಯನ್ನು ಖಂಡಿಸಿ ಈಗಾಗಲೇ ದಕ್ಷಿಣ ಕನ್ನಡ ಭಾಗದಲ್ಲಿ ನಮ್ಮ ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ.

ನಮ್ಮ ಪೂರ್ವಜರಿಗೆ ನಮ್ಮ ನಮನಗಳು...

ದಿವಂಗತ ವೈದ್ಯರಾಜ್ ಕೃಷ್ಣಶಾಸ್ತ್ರಿ ಪುರಾಣಿಕ್ (1839-1905)
ದಿವಂಗತ ವೈದ್ಯರಾಜ್ ವಿಷ್ಣುಶಾಸ್ತ್ರಿ ಪುರಾಣಿಕ್ (1864-1914)
ದಿವಂಗತ ವೈದ್ಯರಾಜ್ ರಂಭೌ ಪುರಾಣಿಕ್ (1883-1933)
ದಿವಂಗತ ವೈದ್ಯರಾಜ್ ಗಂಗಾಧರ ಪುರಾಣಿಕ್ (1907-1980)
ದಿವಂಗತ ವೈದ್ಯರಾಜ್ ಮಹದೇವ್ ಪುರಾಣಿಕ್ (1912-1987)
ದಿವಂಗತ ಆನಂದ್ ಪುರಾಣಿಕ್ (1937-2023)

धूतपापेश्वर
आयुर्वेद श्रेष्ठता के १५० से अधिक वर्ष

ಈ ವಿಶ್ವದಲ್ಲಿನ ಪ್ರತಿಯೊಂದು ಚಲನೆಯು ಕೆಲವು ತತ್ವಗಳ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಪ್ರಕೃತಿ ಅವುಗಳನ್ನು ಪಾಲಿಸುತ್ತದೆ ಮತ್ತು ವಿಜ್ಞಾನ ಅವುಗಳನ್ನೇ ಅನುಸರಿಸುತ್ತದೆ. ಆಯುರ್ವೇದವೂ ಕೂಡಾ ಇದೇ ನಿಯಮಗಳ ಮೇಲೆ ಆಧಾರಿತವಾಗಿದೆ.

ಸಾವಿರಾರು ವರ್ಷಗಳಿಂದ ಆಯುರ್ವೇದದ ನಿಯಮಗಳನ್ನು ನಿರಂತರವಾಗಿ ಅಭ್ಯಾಸ ಮಾಡಲಾಗಿದೆ, ಅವುಗಳನ್ನು ಪರೀಕ್ಷಿಸಲಾಗಿದೆ ಮತ್ತು ಸಂಪ್ರದಾಯದ ರೂಪದಲ್ಲಿ ಮುಂದಕ್ಕೆ ಕೊಂಡೊಯ್ಯಲಾಗಿದೆ.

ಕೇವಲ ಆಸ್ಥೆಯಿಂದಲ್ಲ, ಬದಲಿಗೆ ಪ್ರಮಾಣಗಳ ಮೂಲಕ. ಇದು ನಿಖರತೆಯ ಪ್ರಮಾಣ, ಸಮತೋಲನದ ಪ್ರಮಾಣ. ಚಿಕಿತ್ಸೆಯು ಪ್ರಕೃತಿಗೆ ಅನುಗುಣವಾಗಿದ್ದಾಗ, ಆರೋಗ್ಯವು ಅದರ ಸಹಜ ಪರಿಣಾಮವಾಗುತ್ತದೆ ಎನ್ನುವುದಕ್ಕೆ ಇದು ಪ್ರಮಾಣ.

ಸಿದ್ಧಾಂತಗಳು ನಿಯಮಗಳಿದ್ದಂತೆ. ಅವು ಆರೋಗ್ಯಕರ ಜೀವನದ ಸರಿಯಾದ ದಿಕ್ಕನ್ನು ತೋರಿಸುತ್ತವೆ. ಮತ್ತು ಈ ನಿಯಮಗಳನ್ನು ಸಂಪೂರ್ಣವಾಗಿ ಪಾಲಿಸಿದಾಗ, ಅದ್ಭುತವಾದ ಬದಲಾವಣೆ ಕಾಣುತ್ತದೆ - ಅದು ಪುನಸ್ಥಾಪನೆ. ಇದು ದೇಹದೊಂದಿಗೆ ಸೇರಿ ಕಾರ್ಯನಿರ್ವಹಿಸುತ್ತದೆ, ಅದರ ವಿರುದ್ಧವಲ್ಲ. ಇದು ಸಮತೋಲನವನ್ನು ಪುನಃ ಸ್ಥಾಪಿಸುತ್ತದೆ.

ಕಳೆದ 150 ವರ್ಷಗಳಿಂದಲೂ ನಾವು ಈ ಸಿದ್ಧಾಂತಗಳನ್ನು ಆಳವಾಗಿ ಅರ್ಥಮಾಡಿಕೊಂಡಿದ್ದೇವೆ ಮತ್ತು ಸಂಪೂರ್ಣ ನಿಷ್ಠೆಯಿಂದ ಅವುಗಳನ್ನು ಪಾಲಿಸುತ್ತಿದ್ದೇವೆ. ಏಕೆಂದರೆ ಆಯುರ್ವೇದವು ಕೇವಲ ಊಹೆಗಳ ಮೇಲೆ ನಡೆಯುವುದಿಲ್ಲ. ಇದರ ಆರಂಭ ಸರಿಯಾದ ಪರಿಶೀಲನೆಯಿಂದ ಆಗುತ್ತದೆ. ಇದು ಸರಿಯಾದ ಶಿಸ್ತಿನಿಂದ ಮುಂದುವರಿಯುತ್ತದೆ ಮತ್ತು ಅಂತಿಮವಾಗಿ ಸಮತೋಲನದ ಮೂಲಕ ಫಲಿತಾಂಶ ನೀಡುತ್ತದೆ.

ಪ್ರಕೃತಿಯಂತೆ ಅದರ ಸ್ವರೂಪ ಬದಲಾಗಬಹುದು, ಆದರೆ ಅದರ ಸಿದ್ಧಾಂತಗಳಲ್ಲ. ಏಕೆಂದರೆ ಸಿದ್ಧಾಂತಗಳು ಬದಲಾದ ಕ್ಷಣ, ಅದು ಆಯುರ್ವೇದವಾಗಿ ಉಳಿಯುವುದಿಲ್ಲ.

ಆಯುರ್ವೇದವು ಸೈದ್ಧಾಂತಿಕವಾಗಿದ್ದಾಗ ಮಾತ್ರ ಆಯುರ್ವೇದ.

ಶ್ರೀ ಧೂತಪಾಪೇಶ್ವರ ಲಿಮಿಟೆಡ್.
ಸಿದ್ಧಾಂತ ಆಯುರ್ವೇದದ ತಳಹದಿಯ ಮೇಲೆ ನಿರ್ಮಿಸಲಾಗಿದೆ...

135, Nanubhai Desai Road, Khetwadi, Mumbai - 400 004. Tel. : +91-22-6971 5000 / +91-22-6971 5009
www.sdlindia.com

ಇಲಿಗಳೇ ಇಲ್ಲಿ ಉಳುಮೆಗಾರರು

ನೀರಿಂಗಿಸಲು ಹೊಸ ಹಾದಿ ಹಿಡಿದ ಪರಶುರಾಮ್ | ಜಲಕ್ಷಾಮಕ್ಕೂ ಜಗ್ಗದ ರೈತ, ಸಾವಯವ ಇಂಗಾಲ ಮಿತ್ರ

■ **ಸಂತೋಷ್ ಕಾಚಿನಕಟ್ಟೆ** ಶಿವಮೊಗ್ಗ
lakshmikanthakumar.boraiah @ timesofindia.com

ಈ ರೈತನಿಗೆ ಜಲಾಶಯ, ಕೆರೆ ನೀರಿನ ಸೌಲಭ್ಯವಿಲ್ಲ, ಕೊಳವೆಬಾವಿಯಲ್ಲಿ ಸಮೃದ್ಧ ನೀರೂ ಇಲ್ಲ, ಆದರೆ, ಸಮೃದ್ಧ ಸಾವಯುವ ಇಂಗಾಲ ಇವರ ಇಡೀ ತೋಟವನ್ನು ಹಚ್ಚಹಸಿರಾಗಿಸಿದೆ. ಇಲಿಗಳು ಭೂಮಿಯೊಳಗೆ ನೀರಿಂಗಿಸಿದರೆ, ಸಮೃದ್ಧ ಸಾವಯವ ಇಂಗಾಲ ನೀರಿನ ಅವಲಂಬನೆಯನ್ನು ಕಡಿಮೆ ಮಾಡಿದೆ.

ಇಲಿಗಳಿಗಾಗಿಯೇ ತೋಟದ ತುಂಬ ಬಳ್ಳಿ ಗೆಣಸು ಬೆಳೆಸಿದವರು ಭದ್ರಾವತಿ ತಾಲೂಕು ಆನವೇರಿ ಗ್ರಾಮ ಪಂಚಾಯಿತಿ ಇಟ್ಟಿಗೆಹಳ್ಳಿಯ ರೈತ ಪರಶುರಾಮ್. ಇವರ ಪ್ರಕಾರ, ಇಲಿ ಭೂಮಿಯೊಳಗಿನ ಅತ್ಯುತ್ತಮ ಉಳುಮೆಗಾರ. ಭೂಮಿಯೊಳಗಿನ ಗೆಣಸು ಹುಡುಕಲು ಒಂದು ಮೀಟರ್‌ವರೆಗೆ ಬಿಲ ಕೊರೆಯುತ್ತವೆ. ಈ ಬಿಲದಲ್ಲಿ ಲೀಟರ್‌ಗಟ್ಟಲೆ ನೀರು ಭೂಮಿಯೊಳಗೆ ಇಳಿದು ಹೋಗುತ್ತದೆ. ಇಲಿಗಳ ಬಿಲ ಮತ್ತು ಕಾಲುವೆಗಳಿಂದಾಗಿ ಇವರ ತೋಟದಲ್ಲಿ ಅದೆಷ್ಟೇ ಮಳೆಯಾದರೂ ಅರ್ಧ ತಾಸಿನಲ್ಲಿ ನೀರು ಭೂಮಿಯೊಳಗೆ ಇಂಗುತ್ತದೆಯಂತೆ!

ಮಳೆ ಮಾಯವಾಗಿ ನೀರಿಲ್ಲದೆ ತೋಟ ಉಳಿಸಿಕೊಳ್ಳುವುದು ಹೇಗೆ ಎಂಬ ಚಿಂತೆ ರೈತರನ್ನು ಆವರಿಸಿದರೆ ಇವರು ಮಾತ್ರ ತಿಂಗಳಿಗೊಮ್ಮೆ ಸಾಧಾರಣ ಮಳೆ ಬಂದರೂ ಸಾಕು ತಮ್ಮ ತೋಟ ಸಮೃದ್ಧ ಫಸಲು ನೀಡುತ್ತದೆ ಎಂದು ವಿಶ್ವಾಸದಿಂದ ಹೇಳುತ್ತಾರೆ. ಸಾವಯವ ಪದ್ಧತಿಯಲ್ಲಿ ಒಣ ಭೂಮಿಯಲ್ಲಿ ತೋಟ ಅಭಿವೃದ್ಧಿಪಡಿಸಿರುವ ಪರಶುರಾಮ್, ನೀರು ಬಳಕೆಯಲ್ಲಿ ಸ್ವಾವಲಂಬನೆ ಸಾಧಿಸುವತ್ತ ಹೆಜ್ಜೆ ಇಟ್ಟಿದ್ದಾರೆ. ಕೇವಲ ಒಂದೂವರೆ ಇಂಚು ಕೊಳವೆಬಾವಿ ನೀರಿನಲ್ಲಿ ಎರಡೂವರೆ ಎಕರೆ ತೋಟವನ್ನು ಅಭಿವೃದ್ಧಿಪಡಿಸಿದ್ದಾರೆ. ಚಳಿಗಾಲ ಮತ್ತು ಬೇಸಿಗೆಯಲ್ಲಿ 20 ದಿನಕ್ಕೊಮ್ಮೆ ಮಾತ್ರ ನೀರು ಕೊಟ್ಟರೂ ಅವರ ತೋಟ ಹಚ್ಚಹಸಿರಾಗಿದ್ದು, ಸಮೃದ್ಧ ಇಳುವರಿ ಕೊಡುತ್ತದೆ. ಬಹುತೇಕ ರೈತರು ತೋಟದಲ್ಲಿ ಸಣ್ಣ ಹುಲ್ಲು ಸಹ ಬೆಳೆಯದಂತೆ ಔಷಧ ಹೊಡೆದರೆ ಇವರು ಮಾತ್ರ ಸಮೃದ್ಧ ಕಳೆ ಬೆಳೆಸುತ್ತಾರೆ. ಹಸಿರು ಕಳೆ ನಿಜವಾಗಿಯೂ 'ತೋಟಕ್ಕೆ ವರದಾನ'. ನೀರಿನ ಅವಲಂಬನೆ ಕಡಿಮೆ ಮಾಡಿರುವುದು ಇದೇ ಕಳೆ ಎನುತ್ತಾರೆ ಪರಶುರಾಮ್.

ಭದ್ರಾವತಿ ತಾಲೂಕು ಇಟ್ಟಿಗೇಹಳ್ಳಿಯಲ್ಲಿ ಸಾವಯುವ ಪದ್ಧತಿಯಲ್ಲಿ ತೋಟ ಅಭಿವೃದ್ಧಿಪಡಿಸಿದ ಪರಶುರಾಮ್.



> ಎಕರೆಗೆ ಇಂತಿಷ್ಟು ಫಸಲು ತೆಗೆದೆ ಎನ್ನುವುದು ಬಹುತೇಕ ರೈತರ ಹೆಚ್ಚುಗಾರಿಕೆ. ಆದರೆ, ಮಳೆ ಹೊರತಾಗಿ ಒಂದು ಹನಿ ನೀರಿಲ್ಲದೆಯೂ ತೋಟವನ್ನು ಕಾಪಾಡಿಕೊಳ್ಳುತ್ತೇನೆ ಎನ್ನುವುದು ನನ್ನ ಹೆಚ್ಚುಗಾರಿಕೆ ಆಗಬೇಕು. ಇನ್ನು ಮೂರ್‍ನಾಲ್ಕು ವರ್ಷದ ಬಳಿಕ ಎಂತಹದ್ದೇ ಬರ ಬಂದರೂ ಎದುರಿಸುವ ಧೈರ್ಯ ಇದೆ.
> **- ಪರಶುರಾಮ್** ಪ್ರಗತಿಪರ ರೈತ

ನನ್ನ ಭೂಮಿ ಹೆಜ್ಜೆ | ವಿಕ ಅಭಿಯಾನ

ನಿಮ್ಮ ಸುತ್ತಲೂ ಇಂತಹ ಪರಿಸರ ಸಂರಕ್ಷಣೆಯ ಕುತೂಹಲಕಾರಿ ಯಶೋಗಾಥೆಗಳು ಗಮನಕ್ಕೆ ಬಂದರೆ ಬರೆದು ಈ ನಂಬರ್‌ಗೆ ವಾಟ್ಸ್ಆ್ಯಪ್ ಮಾಡಿ.
63664 22240

ಹಸಿರು ಹೊದಿಕೆ

ತೋಟದಲ್ಲಿ ಅಡಕೆ ಮರಗಳಿಗಿಂತ ಹೆಚ್ಚು ಗೊಬ್ಬರ ಸೊಪ್ಪಿನ ಮರ (ಗ್ಲಿರಿಸೀಡಿಯಾ), ಬಳ್ಳಿ ಗೆಣಸು, ಅರಿಶಿಣ ಬೆಳೆಸಿದ್ದಾರೆ. ಗ್ಲಿರಿಸೀಡಿಯಾ ಗಾಳಿಯಲ್ಲಿರುವ ನೈಸರ್ಗಿಕ ನೈಟ್ರೋಜನನ್ನು ಭೂಮಿಗೆ ಸೇರಿಸುತ್ತೆ. ಆಳಕ್ಕೆ ಇಳಿಯುವ ಅವುಗಳ ಬೇರುಗಳು ನೀರನ್ನು ಭೂಮಿಯೊಳಗೆ ಇಂಗಲು ಸಹಾಯ ಮಾಡುತ್ತವೆ. ಇವುಗಳ ನಡುವೆ ಕಾಲಿಡಲು ಆಗದಷ್ಟು ಕಳೆ ಗಿಡಗಳು ಬೆಳೆದಿವೆ. 15 ಅಡಿ ಅಂತರದಲ್ಲಿ ಅಡಕೆ ಮರಗಳ ಸಾಲು ನಡುವೆ 2 ಅಡಿ ಆಳ, 3 ಅಡಿ ಅಗಲದ ಕಾಲುವೆಗಳನ್ನು ನಿರ್ಮಿಸಿದ್ದು ವರ್ಷಕ್ಕೊಮ್ಮೆ ಗ್ಲಿರಿಸೀಡಿಯಾ, ತೋಟದಲ್ಲಿ ಬೀಳುವ ಸೋಗೆ ಮತ್ತು ಇತರೆ ಹಸಿರು ಕಳೆಯನ್ನು ಕಾಲುವೆಗೆ ತುಂಬುತ್ತಾರೆ. ಗೆಣಸು ಮತ್ತು ಅರಿಶಿಣವನ್ನು ಮನೆಗಷ್ಟೇ ಕೊಯ್ದು ಉಳಿದದ್ದನ್ನು ಭೂಮಿಯೊಳಗೆ ಬಿಡುತ್ತಾರೆ. ತೋಟದಲ್ಲಿ ಕೋಕೋ, ಏಲಕ್ಕಿ, ಕಾಳು ಮೆಣಸು, ಲವಂಗ, ಏಲಕ್ಕಿ, ಪಪ್ಪಾಯ, ಮರಗೆಣಸು, ಬಾಳೆ, 20ಕ್ಕೂ ಹೆಚ್ಚು ವಿಧದ ಹಣ್ಣಿನ ಮರಗಳು, ತೋಟದ ಸುತ್ತಲೂ ಬೇಲಿಯಲ್ಲಿ ಸಾಗುವಾನಿ, ಮಹಾಗನಿ, ಸಿಲ್ವರ್ ಮರಗಳನ್ನು ಬೆಳೆದಿದ್ದಾರೆ.

ಎಲ್ಎಲ್ಎಂನಲ್ಲಿ ಎಷ್ಟು ಸಾಲುಗಳಿರುತ್ತವೆ?

ವಿಕ AI ಲೋಕ

ಎಲ್ಎಲ್ಎಂನಲ್ಲಿ ಕೋಟ್ಯಂತರ ಸಾಲುಗಳ ಕೋಡ್‌ಗಳಿರಬಹುದು ಎಂಬುದು ಸಾಮಾನ್ಯರ ಅನಿಸಿಕೆ. ಆಶ್ಚರ್ಯದ ವಿಷಯವೆಂದರೆ, ಮೆಟಾದ ಲಾಮಾ ಎಲ್ಎಲ್ಎಂ ನಿರ್ಮಿಸಲು ಬೇಕಾಗಿದ್ದು ಕೇವಲ 2–3 ಸಾವಿರ ಸಾಲುಗಳ ಕೋಡ್ ಅಷ್ಟೇ! ಇದನ್ನೇ ವಿರೋಧಾಭಾಸ ಎನ್ನುವುದು. ಎಲ್ಎಲ್ಎಂ ನಿರ್ಮಿಸಲು ಕೋಡ್‌ಗಳಲ್ಲ ನಿಯತಾಂಕಗಳು ಅಥವಾ ಪಾರಾಮೀಟರ್ಸ್ ಬೇಕು. ಎಷ್ಟು ಹೆಚ್ಚು ನಿಯತಾಂಕಗಳು ಇರುತ್ತವೆಯೋ ಅಷ್ಟೇ ಶಕ್ತಿಶಾಲಿ ಎಲ್ಎಲ್ಎಂ ಆಗಿರುತ್ತದೆ. ನಮ್ಮ ಮಿದುಳು ಹೇಗೆ ಸಂಪರ್ಕ ಹಾಗೂ ಸಂಬಂಧಗಳನ್ನು ಏರ್ಪಡಿಸಿ ಕಲಿಯುವುದೋ ಹಾಗೆಯೇ ಎಐ ಮಾದರಿಯೂ ಕಲಿಯುತ್ತದೆ. ಹಾಗೆ ಕಲಿತ ಕನೆಕ್ಷನ್‌ಗಳಿಗೆ, ಏರ್ಪಟ್ಟ ಸಂಬಂಧಗಳಿಗೆ 'ಪ್ಯಾರಾಮೀಟರ್' ಎನ್ನುತ್ತಾರೆ. ಎಲ್ಎಲ್ಎಂ ನಿಯತಾಂಕಗಳನ್ನು ಸಂಖ್ಯೆಯ ರೂಪದಲ್ಲಿ ಸಂಗ್ರಹಿಸಿಡುವುದು; ಯಾವುದೇ ಎಲ್ಎಲ್ಎಂ ಇರಲಿ ಅದರೊಳಗೆ ಕೋಟ್ಯಂತರ ನಿಯತಾಂಕಗಳಿರುತ್ತವೆ. ಉದಾಹರಣೆಗೆ: ಬೆಕ್ಕು--- ಕುಡಿಯಿತು, ಈ ವಾಕ್ಯದಲ್ಲಿ ಬಿಟ್ಟಸ್ಥಳವನ್ನು ಎಲ್ಎಲ್ಎಮ್ ಹೇಗೆ ತುಂಬಬಹುದು? ಅದರ ಮಿದುಳಿನಲ್ಲಿ 'ಹಾಲು' ಎನ್ನುವ ಶಬ್ದಕ್ಕೆ +0.9, ನೀರಿಗೆ +0.5, ವಿಷಕ್ಕೆ -0.7, ಪಾದರಸಕ್ಕೆ -0.9 ಹೀಗೆ ಮತ ಸಿಗುತ್ತಾ ಹೋಗುತ್ತದೆ. ಹೆಚ್ಚು ಮತ ಸಿಕ್ಕ ಶಬ್ದವನ್ನು ಅದು ಬಿಟ್ಟಸ್ಥಳದಲ್ಲಿ ತುಂಬುತ್ತದೆ. ಇದು ತುಂಬಾ ಸರಳವಾದ ವಿಶ್ಲೇಷಣೆ, ಆದರೆ ವಾಸ್ತವದಲ್ಲಿ ತುಂಬಾ ಸಂಕೀರ್ಣ!

ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

■ ವಿಕ್ರಂ ಜೋಶಿ
ಎಐ ವಿಶ್ಲೇಷಕರು

ಭಾರತೀಯರ ಪಾವತಿ ಮನಸ್ಥಿತಿ ಅರಿಯಲು ವಿಫಲವಾದರೂ ಗ್ರಾಹಕರ ಸೆಳೆಯಲು ಕಸರತ್ತು

ಕ್ರೆಡ್‌ನಲ್ಲಿ ಮೆಟಾ ಬೃಹತ್ ಹೂಡಿಕೆ

ಹೊಸದಿಲ್ಲಿ: ಪಾವತಿಗಳ ವಿಷಯಕ್ಕೆ ಬಂದಾಗ ಭಾರತೀಯರ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಮೆಟಾ ವಿಫಲವಾಗಿದೆ. ದೇಶದಲ್ಲಿ ಮೆಟಾ ಒಡೆತನದ ವಾಟ್ಸ್ಆ್ಯಪ್ ಪೇ ಪಾಲು ಶೇ.0.4ಕ್ಕಿಂತ ಕಡಿಮೆ ಇದೆ. ಮತ್ತೊಂದೆಡೆ ಫೋನ್‌ಪೇ ಮತ್ತು ಗೂಗಲ್ ಪೇ ಎರಡೂ ಸೇರಿ ಶೇ. 80ಕ್ಕಿಂತ ಹೆಚ್ಚು ಯುಪಿಐ ವಹಿವಾಟುಗಳನ್ನು ನಿರ್ವಹಿಸುತ್ತಿವೆ. ಪಾವತಿಗಳ ರೇಸ್‌ನಲ್ಲಿ ಸೋತ ನಂತರ ಮೆಟಾ ಈಗ ಹೊಸ ಪಣ ತೊಟ್ಟಿದೆ. ಮೆಟಾ ಸಂಸ್ಥೆಯು ಕ್ರೆಡ್ ಕಂಪನಿಯಲ್ಲಿ 900 ದಶಲಕ್ಷ ಡಾಲರ್ ಅಂದರೆ ಸರಿಸುಮಾರು 8,500 ಕೋಟಿ ರೂ. ಹೂಡಿಕೆ ಮಾಡಲು ಮುಂದಾಗಿದೆ.

ಕ್ರೆಡ್‌ನ ಮಾರುಕಟ್ಟೆ ಮೌಲ್ಯ ಸುಮಾರು 37,000 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ನಷ್ಟದಲ್ಲಿದ್ದರೂ ಭಾರತದ ಪ್ರಮುಖ ಫಿನ್‌ಟೆಕ್ ಸ್ಟಾರ್ಟಪ್‌ಗಳಲ್ಲಿ ಇದು ಉನ್ನತ ಸ್ಥಾನದಲ್ಲಿದೆ. ಹೀಗಾಗಿಯೇ ಮೆಟಾ ಅದರಲ್ಲಿ ದೊಡ್ಡಮಟ್ಟದ ಬಂಡವಾಳ ಹೂಡಲು ತೀರ್ಮಾನಿಸಿದೆ. ಫಿನ್‌ಟೆಕ್ ಮಾರುಕಟ್ಟೆಯು ಇದನ್ನು ಭಾರತದ ಆರ್ಥಿಕವಾಗಿ ಸದೃಢವಾಗಿರುವ ಗ್ರಾಹಕರನ್ನು ತಲುಪುವ ತಂತ್ರವಾಗಿ ನೋಡುತ್ತಿದೆ. ಈ ಒಪ್ಪಂದವು ಮೆಟಾ ಸಂಸ್ಥೆಗೆ ವ್ಯಾಪಾರಿ ಜಾಲ, ಫಿನ್‌ಟೆಕ್ ಮೂಲ ಸೌಕರ್ಯ ವ್ಯವಸ್ಥೆ ಮತ್ತು ಪ್ರೀಮಿಯಂ ಬಳಕೆದಾರರ ಬೇಸ್‌ಗೆ ಪ್ರವೇಶವನ್ನು ನೀಡುತ್ತದೆ. ಕ್ರೆಡ್ ಒಂದು ಫಿನ್‌ಟೆಕ್ ವೇದಿಕೆಯಾಗಿದೆ. ಇದರಲ್ಲಿ 750+ ಕ್ರೆಡಿಟ್ ಸ್ಕೋರ್ ಹೊಂದಿರುವ 1 ಕೋಟಿಗೂ ಹೆಚ್ಚು ಬಳಕೆದಾರರಿದ್ದಾರೆ. ಇದರರ್ಥ ಈ ಬಳಕೆದಾರರು ಹೆಚ್ಚು ಖರ್ಚು ಮಾಡುವ ಸಾಮರ್ಥ್ಯವಿರುವ ಮತ್ತು ಸಾಲ ಪಡೆಯಲು ಹೆಚ್ಚು ಅರ್ಹತೆ ಇರುವವರಾಗಿದ್ದಾರೆ. ಬ್ಯಾಂಕ್‌ಗಳು, ವಿಮಾ ಕಂಪನಿಗಳು ಮತ್ತು ಐಷಾರಾಮಿ ಬ್ರ್ಯಾಂಡ್‌ಗಳು ಕ್ರೆಡಿಟ್ ಸ್ಕೋರ್ ಚೆನ್ನಾಗಿಟ್ಟುಕೊಂಡವರನ್ನು ಸೆಳೆದುಕೊಳ್ಳಲು ಹರಸಾಹಸ ಮಾಡುತ್ತವೆ.

80% ಭಾರತೀಯ ಯುಪಿಐ ವ್ಯವಸ್ಥೆಯಲ್ಲಿ ಫೋನ್‌ಪೇ ಮತ್ತು ಗೂಗಲ್ ಪೇ ಪಾಲು

04% ವಾಟ್ಸ್ಆ್ಯಪ್ ಪೇ 8 ವರ್ಷಗಳ ಅವಧಿಯಲ್ಲಿ ಗಳಿಸಿದ ಮಾರುಕಟ್ಟೆ ಪಾಲು

50% ಬಳಕೆದಾರರು ಮೂರು ಅಥವಾ ಅದಕ್ಕಿಂತ ಹೆಚ್ಚು ಯುಪಿಐ ವಿಧಾನ ಬಳಸುತ್ತಿದ್ದಾರೆ

ಕ್ರೆಡ್ ಮೇಲೆ ಏಕೆ ಮೆಟಾ ಕಣ್ಣು?

- 1 ಕೋಟಿ ಸಿರಿವಂತ ಬಳಕೆದಾರರು ಅಂದರೆ 750ಕ್ಕೂ ಹೆಚ್ಚು ಕ್ರೆಡಿಟ್ ಸ್ಕೋರ್ ಇರುವವರು ಕ್ರೆಡ್ ಫಿನ್‌ಟೆಕ್ ಬಳಸುತ್ತಿದ್ದಾರೆ.
- ಕಳೆದ ಹಣಕಾಸು ವರ್ಷದಲ್ಲಿ ಕ್ರೆಡ್‌ನಿಂದ ಆದ ಒಟ್ಟು ಪಾವತಿ ಪ್ರಮಾಣ 8.5 ಲಕ್ಷ ಕೋಟಿ ರೂ.
- ಕ್ರೆಡ್ ಕಳೆದ ಹಣಕಾಸು ವರ್ಷದಲ್ಲಿ ಕಾರ್ಯಾಚರಣೆಯಿಂದ 2,735 ಕೋಟಿ ರೂ. ಆದಾಯ ಗಳಿಸಿದೆ

ಕ್ರೆಡ್ ಕ್ರೆಡಿಟ್ ಕಾರ್ಡ್ ಬಿಲ್ ಪಾವತಿಗಳೊಂದಿಗೆ ಪ್ರಾರಂಭವಾಯಿತು. ಈಗ ಅದು ಯುಪಿಐ, ಸಾಲಗಳು, ಬಾಡಿಗೆ ಪಾವತಿಗಳು ಮತ್ತು ಸಂಪತ್ತು ನಿರ್ವಹಣೆ ಉತ್ಪನ್ನಗಳ ತನಕ ತನ್ನ ಕಾರ್ಯಜಾಲವನ್ನು ವಿಸ್ತರಿಸಿದೆ.

ಮೆಟಾ ಜಾಹೀರಾತುಗಳಿಂದ ಆದಾಯ ಗಳಿಸುತ್ತದೆ. 2025ರಲ್ಲಿ ಇದರ ಆದಾಯ 18.5 ಲಕ್ಷ ಕೋಟಿ ರೂ. ಇದರಲ್ಲಿ ಶೇ. 98ರಷ್ಟು ಜಾಹೀರಾತುಗಳಿಂದ ಬಂದಿದೆ. ಆದರೆ ಜಾಹೀರಾತು ನೀಡಲು ನಿಖರವಾದ ಡೇಟಾ ಮತ್ತು ಗ್ರಾಹಕರೊಂದಿಗೆ ಗಾಢ ನಂಟಿನ ಅಗತ್ಯವಿರುತ್ತದೆ. ಪಾವತಿ ವೇದಿಕೆಗಳು ಇದನ್ನೇ ಒದಗಿಸುತ್ತವೆ. ಹಣದ ವಹಿವಾಟುಗಳಿಗೆ ಇರುವ ಕಂಪನಿಗಳು ಸಾಲ, ವಿಮೆ ಮತ್ತು ಶಾಪಿಂಗ್ ತಾಣಗಳಾಗಿ ತಮ್ಮ ಪಾತ್ರಗಳನ್ನು ವಿಸ್ತರಿಸಿಕೊಳ್ಳುತ್ತಿವೆ. ಮೆಟಾ ಕೂಡ ಹಾದಿಯಲ್ಲಿ ಹೆಜ್ಜೆ ಇಡುತ್ತಿದೆ.

ಇವಿಗಳಿಗೆ 100% ವಿನಾಯಿತಿ

ರಸ್ತೆ ತೆರಿಗೆ, ನೋಂದಣಿ ಶುಲ್ಕ ಇಲ್ಲ | ದಿಲ್ಲಿ ಸರಕಾರದ ಮಹತ್ವದ ತೀರ್ಮಾನ

ಹೊಸದಿಲ್ಲಿ: ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ವಾಯು ಮಾಲಿನ್ಯ ತಗ್ಗಿಸುವ ದೃಷ್ಟಿಯಿಂದ ಮುಖ್ಯಮಂತ್ರಿ ರೇಖಾ ಗುಪ್ತ ನೇತೃತ್ವದ ಸಚಿವ ಸಂಪುಟ ಸಭೆ ಹೊಸ ಇವಿ (ಎಲೆಕ್ಟ್ರಿಕ್ ವಾಹನ) ನೀತಿಯನ್ನು ಸೋಮವಾರ ಅನುಮೋದಿಸಿದ್ದು, ಜುಲೈ 1ರಿಂದ ಇದು ಜಾರಿಗೆ ಬರಲಿದೆ.

ಹೊಸ ನೀತಿಯ ಅನುಸಾರ, ಹೊಸದಿಲ್ಲಿಯಲ್ಲಿ ನೋಂದಣಿಯಾಗುವ ಎಕ್ಸ್ ಶೋ ರೂಮ್ ಬೆಲೆ 30ಲಕ್ಷ ರೂ. ಅಥವಾ ಅದಕ್ಕಿಂತ ಕಡಿಮೆ ಇದ್ದರೆ ಎಲ್ಲ ಎಲೆಕ್ಟ್ರಿಕ್ ಕಾರುಗಳಿಗೆ ರಸ್ತೆ ತೆರಿಗೆ ಮತ್ತು ನೋಂದಣಿ ಶುಲ್ಕದಿಂದ ಶೇ.100ರಷ್ಟು ವಿನಾಯಿತಿ ನೀಡಲಾಗಿದೆ.

ಇನ್ನು ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳ ಖರೀದಿಗೆ ಮೊದಲ ವರ್ಷ 30,000 ರೂ., ಎರಡನೇ ವರ್ಷ 20,000 ರೂ. ಮತ್ತು ಮೂರನೇ ವರ್ಷ 10,000 ರೂ. ಸಬ್ಸಿಡಿ ಸಿಗಲಿದೆ.

ಎಲೆಕ್ಟ್ರಿಕ್ ತ್ರಿಚಕ್ರ ವಾಹನ ಖರೀದಿದಾರರಿಗೆ ಮೊದಲ ವರ್ಷ 50,000 ರೂ., ಎರಡನೇ ವರ್ಷ 40,000 ರೂ. ಮತ್ತು ಮೂರನೇ ವರ್ಷ 30,000 ರೂ. ಪ್ರೋತ್ಸಾಹ ಧನ ಸಿಗಲಿದೆ. ಇನ್ನು ಎನ್1 ವರ್ಗದಡಿ ಬರುವ ಎಲೆಕ್ಟ್ರಿಕ್ ಟ್ರಕ್‌ಗಳ ಖರೀದಿದಾರರಿಗೆ ಗರಿಷ್ಠ ಒಂದು ಲಕ್ಷ ರೂಪಾಯಿವರೆಗೆ ಪ್ರೋತ್ಸಾಹಧನ ಸಿಗಲಿದೆ. ಬಿಎಸ್4 ಅಥವಾ ಅದಕ್ಕಿಂತ ಕೆಳಗಿನ ಶ್ರೇಣಿಯ ನಾಲ್ಕು ಚಕ್ರದ ವಾಹನಗಳನ್ನು ಗುಜರಿಗೆ ಹಾಕಿ ಎಲೆಕ್ಟ್ರಿಕ್ ವಾಹನ ಖರೀದಿಸಲು ಬಯಸುವ ಗ್ರಾಹಕರಿಗೂ ಒಂದು ಲಕ್ಷ ರೂ.ವರೆಗೆ ಪ್ರೋತ್ಸಾಹಧನ ಸಿಗಲಿದೆ.

ನೋಂದಣಿ ಸ್ಥಗಿತ: ಹೊಸ ಇವಿ ನೀತಿಯ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಿಎಂ ರೇಖಾ ಗುಪ್ತಾ ಅವರು, ''2030ರ ಮಾರ್ಚ್ ಅಂತ್ಯಕ್ಕೆ ದಿಲ್ಲಿಯಲ್ಲಿ ವಾಯುಮಾಲಿನ್ಯ ಪ್ರಮಾಣವನ್ನು ಸಂಪೂರ್ಣ ತಗ್ಗಿಸುವ ನಿಟ್ಟಿನಲ್ಲಿ ಇದೊಂದು ಪ್ರಮುಖ ಹೆಜ್ಜೆಯಾಗಿದೆ. ಮುಂದಿನ ನಾಲ್ಕು ವರ್ಷಗಳಲ್ಲಿ ಎಲೆಕ್ಟ್ರಿಕ್ ವಾಹನಗಳ ಬಳಕೆ ಉತ್ತೇಜಿಸುವ ಉದ್ದೇಶದಿಂದ ಸರಕಾರ ಸಬ್ಸಿಡಿ ರೂಪದ ಯೋಜನೆಗೆ 15,000 ಕೋಟಿ ರೂ. ವಿನಿಯೋಗಿಸುತ್ತಿದೆ,'' ಎಂದು ಹೇಳಿದರು.

ಪರಿಸರ ಸ್ನೇಹಿ ವಾಹನಗಳ ಬಳಕೆಗೆ ಉತ್ತೇಜನ

''2027ರ ಜನವರಿ 1ರಿಂದ ದಿಲ್ಲಿಯಲ್ಲಿ ಕೇವಲ ಎಲೆಕ್ಟ್ರಿಕ್ ಆಟೋರಿಕ್ಷಾಗಳನ್ನು ಮಾತ್ರ ನೋಂದಣಿ ಮಾಡಲಾಗುತ್ತದೆ. ಅದೇ ರೀತಿ, ಹೊಸ ಪೆಟ್ರೋಲ್ ಮತ್ತು ಸಿಎನ್‌ಜಿ ದ್ವಿಚಕ್ರ ವಾಹನಗಳ ನೋಂದಣಿಯನ್ನು ಹಂತಹಂತವಾಗಿ ಸ್ಥಗಿತಗೊಳಿಸಲಾಗುವುದು. 2028ರ ಏಪ್ರಿಲ್ 1ರಿಂದ ಕೇವಲ ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳನ್ನು ಮಾತ್ರ ನೋಂದಾಯಿಸಲಾಗುವುದು,'' ಎಂದೂ ಅವರು ಮಾಹಿತಿ ನೀಡಿದರು.

ವಾರದ ಆರಂಭದಲ್ಲೇ ಷೇರುಪೇಟೆಗೆ ವಿಘ್ನ

- ಮತ್ತೆ ಉಲ್ಬಣಿಸಿದ ಮಧ್ಯಪ್ರಾಚ್ಯ ಬಿಕ್ಕಟ್ಟು
- ಹೂಡಿಕೆದಾರರಲ್ಲಿ ಆತಂಕ

ಮುಂಬಯಿ: ಇರಾನ್ ಮತ್ತು ಅಮೆರಿಕ ನಡುವೆ ಮತ್ತೆ ಉಲ್ಬಣಿಸಿದ ಸಂಘರ್ಷ ಹಾಗೂ ಕಚ್ಚಾ ತೈಲದ ಬೆಲೆ ಏರಿಕೆಯಿಂದಾಗಿ ಮುಂಬಯಿ ಷೇರುಪೇಟೆ ವಾರದ ಆರಂಭದಲ್ಲೇ ಕುಸಿತವನ್ನು ಅನುಭವಿಸಿತು. ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 372.10 ಅಂಕ ಇಳಿದು 76,728.37ರಲ್ಲಿ ಕೊನೆಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 109 ಅಂಕ ಬಿದ್ದು, 23,946.25ರಲ್ಲಿ ಸ್ಥಿರಗೊಂಡಿತು.

ಕೋಟಕ್ ಮಹೀಂದ್ರಾ ಬ್ಯಾಂಕ್ ಷೇರುಗಳು ಶೇ.3.24ರಷ್ಟು ಕುಸಿದವು. ಈ ಬ್ಯಾಂಕ್‌ನ ಸಿಇಒ ಅಶೋಕ್ ವಾಸ್ವಾನಿ ಅವರ ಅಧಿಕಾರಾವಧಿ ಈ ವರ್ಷದ ಡಿಸೆಂಬರ್ 31ಕ್ಕೆ ಮುಕ್ತಾಯಗೊಳ್ಳುತ್ತದೆ. ಅವರು ಸೇವಾವಧಿ ವಿಸ್ತರಣೆ ಬಯಸಿಲ್ಲ ಎಂಬ ಕೋಟಕ್ ಮಹೀಂದ್ರಾ ಹೇಳಿಕೆಯಿಂದಾಗಿ ಷೇರುಗಳು ಬಿದ್ದವು. ಮಾರುತಿ, ಇಂಟರ್ ಗ್ಲೋಬ್ ಏವಿಯೇಷನ್, ಅಲ್ಟ್ರಾಟೆಕ್ ಸಿಮೆಂಟ್ ಮತ್ತು ಲಾರ್ಸನ್ ಟರ್ಬೋ ಷೇರುಗಳು ಇಳಿಕೆ ಕಂಡವು. ಈ ನಡುವೆ, ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಮತ್ತೆ ತೀವ್ರ ಸ್ವರೂಪ ಪಡೆಯುವ ಸೂಚನೆಯಿಂದ ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾತೈಲದ ಬೆಲೆ ಸೋಮವಾರ ಶೇ. 1.51ರಷ್ಟು ಏರಿ ಬ್ಯಾರೆಲ್‌ಗೆ 73.09 ಡಾಲರ್ ಆಗಿದೆ. ಇದರಿಂದಾಗಿ ಡಾಲರ್ ಎದುರು ರೂಪಾಯಿ ಮೌಲ್ಯ 9 ಪೈಸೆ ಕುಸಿದು 94.54 ರೂ. ಆಯಿತು.

ಸೆನ್ಸೆಕ್ಸ್	76,728.37 (↓ 372.10)
ನಿಫ್ಟಿ	23,946.25 (↓ 109)
ಬೆಳ್ಳಿ (1 ಕೆ.ಜಿ) ಬೆಂಗಳೂರು	₹ 2,40,000
ಯುಎಸ್ $	94.54
ಪೆಟ್ರೋಲ್	₹110.93
ಡೀಸೆಲ್	₹ 98.80

ಬೆಂಗಳೂರಿನಲ್ಲಿ ಇಳಿದ ಚಿನ್ನದ ದರ

ಹೊಸದಿಲ್ಲಿ: ಬಂಗಾರದ ದರ ಹೊಸದಿಲ್ಲಿಯಲ್ಲಿ ಏರಿಕೆ ಕಂಡರೂ ಬೆಂಗಳೂರಿನಲ್ಲಿ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 10 ಗ್ರಾಂ ಅಪರಂಜಿ ಚಿನ್ನಕ್ಕೆ 930 ರೂ. ಇಳಿದು 1,43,020 ರೂ. ಆಗಿದೆ. ಆಭರಣ ಚಿನ್ನದ ದರ 10 ಗ್ರಾಂಗೆ 850 ರೂ. ಕಡಿಮೆಯಾಗಿ 1,31,110 ರೂ. ಆಗಿದೆ.

ಬೆಳ್ಳಿ ಬೆಲೆಯಲ್ಲಿ ಯಾವುದೇ ಏರಿಳಿತಗಳಿಲ್ಲದೆ ಕೆ.ಜಿಗೆ 2,40,000 ರೂ.ನಲ್ಲಿ ಸ್ಥಿರವಾಗಿದೆ.

ಹೊಸದಿಲ್ಲಿಯಲ್ಲಿ ಸೋಮವಾರ ಅಪರಂಜಿ ಚಿನ್ನ 10 ಗ್ರಾಂಗೆ 1,300 ರೂ. ಏರಿ 1,46,600 ರೂ. ಆಗಿದೆ. ಬೆಳ್ಳಿ ದರ ಕೆ.ಜಿಗೆ 2,000 ರೂ. ಕಡಿಮೆಯಾಗಿ 2,24,000 ರೂ.ಆಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯಲ್ಲಿ 54.14 (ಶೇ.1.32)ರಷ್ಟು ಕಡಿಮೆಯಾಗಿ ಔನ್ಸ್‌ಗೆ 4,035.12 ಡಾಲರ್ ಆಗಿದೆ. ಬೆಳ್ಳಿ ಬೆಲೆಯಲ್ಲಿ ಶೇ. 3ರಷ್ಟು ಕುಗ್ಗಿ ಔನ್ಸ್‌ಗೆ 57.62 ಡಾಲರ್ ಆಗಿದೆ.

ದೇಶಾದ್ಯಂತ 7 ಕ್ಲಸ್ಟರ್ ಸ್ಥಾಪನೆಗೆ ಕೇಂದ್ರ ಚಿಂತನೆ | ಮೇಕ್ ಇನ್ ಇಂಡಿಯಾಗೆ ಉತ್ತೇಜನ

ಕರ್ನಾಟಕದಲ್ಲಿ ರಕ್ಷಣಾ ಉತ್ಪಾದನೆ ಕ್ಲಸ್ಟರ್

ಹೊಸದಿಲ್ಲಿ: ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ ಭಾರತ ಅಭಿಯಾನದ ಭಾಗವಾಗಿ ಕೇಂದ್ರ ಸರಕಾರವು ಕರ್ನಾಟಕ ಸೇರಿ ದೇಶದ ಹಲವೆಡೆ 7 ರಕ್ಷಣಾ ಉತ್ಪಾದನೆ ಕ್ಲಸ್ಟರ್‌ಗಳನ್ನು ಸ್ಥಾಪಿಸಲು ಮುಂದಾಗಿದೆ. ಅದರಲ್ಲೂ ಮೊದಲ ಕ್ಲಸ್ಟರ್‌ನ ನೇತೃತ್ವವನ್ನು ಕರ್ನಾಟಕಕ್ಕೇ ನೀಡಲಾಗುತ್ತದೆ ಎಂಬುದು ಪ್ರಮುಖ ಸಂಗತಿಯಾಗಿದೆ.

ದೇಶದಲ್ಲಿಯೇ ರಕ್ಷಣಾ ಸಾಮಗ್ರಿಗಳನ್ನು ಹೆಚ್ಚಾಗಿ ಉತ್ಪಾದಿಸುವುದು ಹಾಗೂ ಪ್ರಾದೇಶಿಕವಾಗಿ ವಿಶೇಷ ಉತ್ಪಾದನಾ ವ್ಯವಸ್ಥೆಯನ್ನು ರೂಪಿಸುವ ದೃಷ್ಟಿಯಿಂದ 7 ಕ್ಲಸ್ಟರ್‌ಗಳನ್ನು ನಿರ್ಮಿಸುವುದು ಕೇಂದ್ರ ಸರಕಾರದ ಉದ್ದೇಶವಾಗಿದೆ. ರಾಜ್ಯ ಸರಕಾರಗಳು, ಅಕಾಡೆಮಿಕ್ ಹಾಗೂ ಸಂಶೋಧನಾ ಸಂಸ್ಥೆಗಳ ಸಹಯೋಗದಲ್ಲಿ ಕ್ಲಸ್ಟರ್‌ಗಳನ್ನು ಸ್ಥಾಪಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ. ದೇಶೀಯ ರಕ್ಷಣಾ ಉತ್ಪಾದನೆ, ಪರೀಕ್ಷೆ, ಪ್ರಮಾಣೀಕರಣ, ರಫ್ತು ಉತ್ತೇಜನ, ಕೌಶಲ ಅಭಿವೃದ್ಧಿ, ನಾವೀನ್ಯತೆ ಹಾಗೂ ಕೈಗಾರಿಕಾ ಮೂಲ ಸೌಕರ್ಯಗಳನ್ನು ಹೆಚ್ಚಿಸುವುದು ಕ್ಲಸ್ಟರ್‌ಗಳ ಸ್ಥಾಪನೆಯ ಉದ್ದೇಶವಾಗಿದೆ. ಇದಕ್ಕಾಗಿ ರಕ್ಷಣಾ ಸಚಿವಾಲಯದ ಹಿರಿಯ ಅಧಿಕಾರಿಗಳು ಹಲವು ಸುತ್ತಿನ ಸಮಾಲೋಚನೆ, ಚರ್ಚೆ ನಡೆಸಿದ್ದಾರೆ. ಸಹಭಾಗಿತ್ವದ ರಾಜ್ಯಗಳಿಗೂ ಕ್ಲಸ್ಟರ್‌ಗಳ ಸ್ಥಾಪನೆಗಾಗಿ ಎಲ್ಲ ದಾಖಲೆಗಳನ್ನು ಸಿದ್ಧಪಡಿಸಿಕೊಳ್ಳಿ ಎಂಬುದಾಗಿಯೂ ಸೂಚಿಸಿದ್ದಾರೆ ಎಂದು ವರದಿಯಾಗಿದೆ.



1.78 ಲಕ್ಷ ಕೋಟಿ ರೂ. ಭಾರತದ ರಕ್ಷಣಾ ಉತ್ಪಾದನೆ ಮೌಲ್ಯ

38,424 ಕೋಟಿ ರೂ. ರಕ್ಷಣಾ ಸಾಮಗ್ರಿಗಳ ರಫ್ತಿನ ಮೌಲ್ಯ

ಆಯಾ ಕ್ಲಸ್ಟರ್‌ಗಳ ನೇತೃತ್ವವಹಿಸುವ ರಾಜ್ಯಗಳ ಜತೆಗೆ ಹಲವು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಕೂಡ ಕೈಜೋಡಿಸಲಿವೆ. ಖಾಸಗಿ ಸಹಭಾಗಿತ್ವವೂ ಇರಲಿದೆ. ಇದರೊಂದಿಗೆ ದೇಶದಲ್ಲಿಯೇ ರಕ್ಷಣಾ ಸಾಮಗ್ರಿ, ಶಸ್ತ್ರಾಸ್ತ್ರಗಳನ್ನು ಉತ್ಪಾದಿಸಬೇಕು. ಹೆಚ್ಚಿನ ಕ್ಲಸ್ಟರ್‌ಗಳನ್ನು ಸ್ಥಾಪಿಸುವ ಮೂಲಕ ಭಾರತವು ಶಸ್ತ್ರಾಸ್ತ್ರಗಳಿಗಾಗಿ ಆಮದು ಮೇಲೆ ಹೊಂದಿರುವ ಅವಲಂಬನೆಯನ್ನು ಕಡಿಮೆ ಮಾಡಬೇಕು ಎಂಬುದು ಕೇಂದ್ರ ಸರಕಾರದ ಪ್ರಮುಖ ಉದ್ದೇಶವಾಗಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಮೊದಲ ಕ್ಲಸ್ಟರ್‌ಗೆ ರಾಜ್ಯ ನೇತೃತ್ವ

ಮೊದಲ ಕ್ಲಸ್ಟರ್‌ನ ನೇತೃತ್ವವನ್ನು ಕರ್ನಾಟಕವೇ ವಹಿಸಲಿದೆ. ರಾಜಸ್ಥಾನವು ಸಹ ನಾಯಕತ್ವ ಹೊಂದಲಿದೆ. ರಕ್ಷಣಾ ಸಾಮಗ್ರಿಗಳ ಪರೀಕ್ಷೆ, ಪ್ರಮಾಣೀಕರಣ, ಗುಣಮಟ್ಟ ನಿರ್ಧಾರವನ್ನು ಇದೇ ಕ್ಲಸ್ಟರ್‌ನಲ್ಲಿ ನಡೆಸಲಾಗುತ್ತದೆ. ಇದಕ್ಕಾಗಿ ಐಐಟಿ ಕಾನ್ಪುರ, ಐಐಟಿ ರೂರ್ಕಿ ಹಾಗೂ ಐಐಟಿ ಜಮ್ಮು ಸಂಸ್ಥೆಗಳು ಅಕಾಡೆಮಿಕ್ ಸಹಭಾಗಿತ್ವ ವಹಿಸಲಿವೆ ಎಂದು ತಿಳಿದುಬಂದಿದೆ. ಎರಡನೇ ಕ್ಲಸ್ಟರ್‌ನ ನಾಯಕತ್ವವನ್ನು ಉತ್ತರ ಪ್ರದೇಶ, ಮೂರನೇ ಕ್ಲಸ್ಟರ್‌ಗೆ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ಜಂಟಿ ನಾಯಕತ್ವ, ನಾಲ್ಕನೇ ಕ್ಲಸ್ಟರ್‌ಗೆ ಪಂಜಾಬ್-ಹರಿಯಾಣ, 5ನೇ ಕ್ಲಸ್ಟರ್‌ಗೆ ಗುಜರಾತ್-ಒಡಿಶಾ, ಆರನೇ ಕ್ಲಸ್ಟರ್‌ಗೆ ತಮಿಳುನಾಡು-ಆಂಧ್ರಪ್ರದೇಶ ಹಾಗೂ ಏಳನೇ ಕ್ಲಸ್ಟರ್‌ಗೆ ಅಸ್ಸಾಂ ನೇತೃತ್ವ ವಹಿಸಲಿದೆ ಎಂದು ಮೂಲಗಳು ತಿಳಿಸಿವೆ. ಅಕಾಡೆಮಿಕ್ ಸಂಸ್ಥೆಗಳ ಸಹಭಾಗಿತ್ವವು ಪ್ರತಿ ಕ್ಲಸ್ಟರ್‌ಗೆ ಇರಲಿದೆ. ಎಂಎಸ್ಎಂಇಗಳಿಗೂ ಇವುಗಳ ಮೂಲಕ ಉತ್ತೇಜನ ನೀಡುವುದು ಉದ್ದೇಶವಾಗಿದೆ ಎಂದು ಹೇಳಲಾಗುತ್ತಿದೆ.

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

OTHER VACANCIES

GENERAL

ನೇರ ಸಂದರ್ಶನ: ಸ್ವಚ್ಛತಾ ಕೆಲಸಕ್ಕೆ ದಿನದ ಸಂಬಳ ರೂ. 750 ಇರುತ್ತದೆ. (25 ರಿಂದ 55) ವರ್ಷ, ಮೆಜೆಸ್ಟಿಕ್ ಸುತ್ತ ಮುತ್ತ ಆದ್ಯತೆ ಸಂಪರ್ಕಿಸಿ: 8197256406/ 9164993307

ITI Mechanical ಆಗಿರುವ ಹುಡುಗ ಬೇಕಾಗಿದ್ದಾರೆ. ಮತ್ತು ಉತ್ತರಹಳ್ಳಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ : 9964361800

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

WORK FROM HOME

GOOD Monthly Income Top MNC In Blr Hiring Rtd Govt, Pvt, Defence, Bank, Teacher, VRS, NRI, IT, CA, Sr.CITIZEN, HOUSEWIFE Age: 30-70 years. Call: 98456 73443 / 70028 08202

JOB WANTED

HIRING NOW Cashier (Basic Computer Knowledge) Sales Man/Girl Age 22 years - 40 years. Jayanagar Chickpete Contact: 9448121073

ವಾಹನ VEHICLES

HEAVY VEHICLES

TRUCKS

SALE TRUCK LEYLAND 6W 2015 /16/17/2019 MODEL 10 NOS IN GOOD RUNNING CONDITION IN HUBLI PH-DFC 9591997014 / 9591997023

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ವ್ಯಾಪಾರ BUSINESS

BUSINESS PROPOSALS

INVESTORS WANTED
Looking for partners to invest in a growing Academy in Bengaluru. Good profit and high growth in the education sector. Serious investors please contact. Call:9845677100

personal

CHANGE OF NAME

ONE AND SAME PERSON DECLARATION I, ATTIULLAH, S/o of Shokath Ali, 48 years, residing at 55, Munne Gowda Garden, Neelasandra, Bangalore - 47, do hereby declare that my true and legally correct name is ATTIULLAH as per my Aadhaar Card And other Document However, my name has been recorded as ATTI ULLA in the documents of my son Mohammed Mustafa Shaik and daughter Noor Jameela. SHEIKH ATTIULLA in the documents of my son Sheik Ahmed and ATTILLAH in my wife Shabana's documents .I hereby declare that all these names—ATTIULLAH, ATTIULLA, ATTI ULLA, and SHEIKH ATTIULLA—refer to one and the single same individual, which is myself . This declaration is made via an e-Stamp Affidavit (Cert. No: IN-KA97287998699212Y) dated 22-Jun-2026, sworn before Notary Public C.V. EARAPPA, Bengaluru

I, PRACHI UDAY KHANOLKAR also known as PRACHI KHANOLKAR, Wife of Mr. Uday Khanolkar, aged about 66 years, presently residing at No.753, 5th 'A' Cross, 18th Main Road, Koramangala VI Block, Bangalore South-560 095, hereby declare that my name is shown as Prachi Uday Khanolkar as per my Passport, Bank Passbooks and PAN Card but in my Aadhaar Card it is shown as only Prachi Khanolkar. I declare that all the nomenclature referred to above belongs to me and I have also sworn to, by way of Declaratory Affidavit dated 26-06-2026, before the Notary, attesting to the truthfulness of my statements to establish my real identity as Prachi Uday Khanolkar for all legal intents and purposes it may serve.

I, Prashanth Kumar Mahaveerchand, R/o No.05, Flat No. 202 ,Jineshwar Jiva Apts., M M V Road, V V Puram, Bengaluru 560004 have changed my name to Prashanth Kumar for all purposes.

I, RAVEENDRA.M.S s/o Sreenivasaiah, residing at No.13, 18th Cross, Behind Chowdeswari Temple, Lakkasandra, Adugodi, Bangalore – 560030, have changed my name to RAVINDRA M.S and hereby declare that in my transfer certificate my date of birth mentioned as 18.06.1978 instead of 14.06.1978 as per my Aadhaar & other documents. vide affidavit dated 29/06/2026 sworn before notary, Lakshmaiah Bengaluru

I, Tanmay Khati S/O Samir Dinkar Khati residing at C-408 Brigade Laguna, Rachenahalli, Dasarahalli, Bengaluru, Karnataka-560092, have changed my name to Tanmay Samir Khati vide affidavit no.IN-KA02617213632812Y dated 25 June 2026 sworn before Notary at Bengaluru. Tanmay Khati and Tanmay Samir Khati both are same and one identical person.

I, ADITI SABNIS residing at A207, DSR Sunshine Apts, 1st Main, 2nd Cross, Krishnareddy Layout, Banaswadi, Bengaluru - 560043, have changed my name to ADITI ASHISH SABNIS vide affidavit dated 29/06/2026 sworn before notary, S N Madhu Bangalore

I, Ramanna S/o Narasappa R/o At Divalagudda, Post Rangampet, Tq Shahapur, Dist Yadgir 585220 have changed my name to Ramanna Yadav. I shall be called by this name for all purposes

I, Sripriya Kommala S/O, K Srinivas Kumar R/o #7/253 Kollafarm Area, Venkatagiri Thirupati 524132 have changed my name to Joshnika Kommala for all purposes.

I Souhail Shariff S/O Vahi Shariff R/O No 56,201, Peace Paradies, Building ,02nd Main,opp to Salarpuria, Apartment Road, Madina Nagar, mangammanapalya, Bommanahalli, Bengaluru-560068 Have Changed My Name to Suhel Shariff All Purpose.

I, Vani Satish (formerly known as Vani Gopalakrishnan), D/O Gopalakrishnan T R, W/O Satish Sangameswaran, residing at 543/4 Ranka Heights 4th Main 7th Cross, Domlur Layout, Bangalore 560071, have changed my name from Vani Gopalakrishnan to Vani Satish vide affidavit dated 27-06-2026 before Notary K.V. Mani, Bengaluru for all future purposes.

I Rathish Kumar. R. residing at flat No.016, Shell North Gate Apartment,A.Block, K Narayanapura, Kothanur Bangalore-560077 have changed my to GAUTHAM K.K. (Gautham K.K. and Rathish Kumar R. is same its me only) vide affidavit dated 25/06/2026 sworn before notary G.Rajendra

I, Yonus Pasha S/o Amjad Pasha R/o #06,1st Main Road 1st Cross New JJR Nagar B'lore-560018 have changed my name to Younus Pasha.

I Simran W/O, Muhammed Rasif Hagalwadi R/o Hansi Alpha Apartment,flat G1,dr Amc Road,mm Layout,near Indian Oil Petrol ,kavalbyrasandra,rt Nagar, Bangalore -560032 have changed my name to Simran Hajiamin.

I, Pyaru Basha Sahib, S/o Basha Sahib, R/o Sri Krishna Nilaya, Flat G2,Annasandrapalya Main Road,Vibhutipura,HAL, Bangalore 560017,shall be known as B Pyarusahib Bashasahib for all purposes.

I, Shantanu Kumar Amlendu Kumar S/O, Amlendu Kumar R/o B503, Aspire Aurum By Sumadhura, Doddabanahalli, Bidarahalli Hobli, B'luru-560067 have changed my name to Shantanu Kumar for all purposes.

I, Mohd Minhaj S/O Mohammed Arif # 7 Cocks Road Shivajinagar Blr-51 have changed my name to Mohammed Minhaj for all purposes.

I, Reshma A, D/o Afsar Pasha, do hereby solemnly affirm and clarify that Reshma A and Reshma Afsar refer to one and the same person, i.e., myself, vide Affidavit dated 26/06/2026 sworn before Notary H.S. Sakalesh Aradhya, Bangalore-560040

I, Narendra Jain, R/o No.58, 1st Floor, 14th Cross, Basaveshwaranagar, Bangalore-560079, changed my minor daughter's name from Duggad Naira Jain (due to clerical error) to Naira Jain.

I Sarthak V K S/O, Vinit Kumar Kain R/o 307, Mahaveer Cornet Apartment, Kengeri Main Road, Kengeri Satellite Town, Bangalore - 560060 have changed my name to Sarthak Pal .

I, Aslam Pasha Ameer Jan, S/o Ameer Jan, R/o No.448 5th cross Islampur Bangalore North, Bangalore 560017, shall be known as Aslam Pasha for all purposes.

I, Saleem Pasha Shaikh Mastan R/o F 19 No 30 4th Floor,2nd Main 3rd Cross Pothalappa Garden B'lore-560030 have changed my name to Saleem Pasha.

I, Rabnawaz Iqbal Ahmed, R/o : 99 D, LXY Aura, 2nd cross, 5 th Block, Koramangala, bangalore: 560095 have changed my name to Rabnawaz Sheikh . Affidavit date : 24/06/2026

I, Khursheed Azam R/o 1/2 1st Floor,1st Cross, Nizamuddin Mohalla Bada ,Makan Mysore Road B'lore-560002 have changed my name to Azam.

I, BHUMIKABEN DOLATSINH SOLANKI (Old Name) residing at No. L-4113, Tower 4, Sobha Lake Gardens, Medahalli-Kadugodi Road, Seegehalli, K R Puram PO: Virgonagar, Dist: Bangalore Rural, Karnataka- 560049 have changed my name to BHUMIKA KUSHALRAJ CHILODIYA (New Name) vide affidavit dated: 27/6/2026 Before Notary K.V.Mani Bangalore.

tender & notices

TENDERS

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ
ಒಳ್ಳೆಯ ಜನ, ಒಳ್ಳೆಯ ಬ್ಯಾಂಕ್

ಟೆಂಡರ್ ಪ್ರಕಟಣೆ
ಸಾರ್ವಜನಿಕ ವಲಯದ ಅಗ್ರಗಣ್ಯ ಬ್ಯಾಂಕುಗಳಲ್ಲಿ ಒಂದಾದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರಿನ ಬನ್ನೇರುಘಟ್ಟ ರಸ್ತೆ, ಕಲ್ಕೆರೆ -560083 ಯಲ್ಲಿರುವ ತನ್ನ ಜ್ಞಾನ ಕೇಂದ್ರದಲ್ಲಿ ಕ್ಯಾಂಟೀನ್/ ಅಡುಗೆ ಸೇವೆಗಳನ್ನು ಒದಗಿಸಲು ಏಜೆನ್ಸಿ/ಗುತ್ತಿಗೆದಾರರ ಆಯ್ಕೆಗಾಗಿ RFP ಯನ್ನು ಆಹ್ವಾನಿಸುತ್ತಿದೆ. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ನಮ್ಮ ವೆಬ್ ಸೈಟ್ https://www.unionbankofindia.bank.in ಅಥವಾ https://gem.gov.in ಗೆ ಭೇಟಿ ನೀಡಿ. ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 15.07.2026 ರ ಸಂಜೆ 04.00 ಗಂಟೆ.

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

TIMES TRIBUTE
PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ಇರ್ಫಾನ್ ಶೇಖ್ 8088815336
irfan.shekh@timesofindia.com

ಡೀಸೆಲ್ ಖರೀದಿಗೆ ವಿಧಿಸಿದ್ದ ನಿರ್ಬಂಧ ತೆರವು

ಮುಂಬಯಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ತೈಲ ಪೂರೈಕೆ ಸರಪಳಿಯಲ್ಲಿ ವ್ಯತ್ಯಯವಾಗಿದ್ದರಿಂದ ಪೆಟ್ರೋಲ್, ಡೀಸೆಲ್ ಮಾರಾಟದ ಮೇಲೆ ಹೇರಲಾಗಿದ್ದ ನಿರ್ಬಂಧವನ್ನು ಜುಲೈ 1ರಿಂದ ತೆರವುಗೊಳಿಸಲಾಗುತ್ತದೆ ಎಂದು ಕೇಂದ್ರ ಸರಕಾರ ಘೋಷಿಸಿದೆ. ದಿನಕ್ಕೆ ವ್ಯಕ್ತಿಯೊಬ್ಬರು 200 ಲೀಟರ್‌ಗಿಂತ ಹೆಚ್ಚು ಡೀಸೆಲ್ ಖರೀದಿಸುವಂತಿಲ್ಲ, ವಾಣಿಜ್ಯ ಇಂಧನ ಖರೀದಿದಾರರು ಪೆಟ್ರೋಲ್ ಪಂಪ್‌ಗಳಿಂದ ಖರೀಸಬಾರದು. ನಿರ್ದಿಷ್ಟ ಘಟಕಗಳಲ್ಲಿ ಮಾತ್ರ ಖರೀದಿಸಬೇಕು ಎಂದು ಜೂನ್ 11ರಂದು ಆದೇಶಿಸಲಾಗಿತ್ತು. ಈಗ ಈ ನಿರ್ಬಂಧಗಳನ್ನು ಹಿಂಪಡೆದು ಎಂದಿನಂತೆ ಮುಕ್ತ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ.

ಭಾರತ ಸರ್ಕಾರ
ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ
(ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ)
ಯೋಜನಾ ಅನುಷ್ಠಾನ ಘಟಕ, ತುಮಕೂರು

ದಿನಾಂಕ : 01.07.2026 ರಿಂದ ರಜತಾದ್ರಿಪುರ ಟೋಲ್ ಕೇಂದ್ರದಲ್ಲಿ ಅನ್ವಯವಾಗುವ ಬಳಕೆದಾರ ಶುಲ್ಕ (ಟೋಲ್) ದರಗಳ ಬಗ್ಗೆ ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ ಇವರ ಪ್ರಾದೇಶಿಕ ಕಛೇರಿ, ಬೆಂಗಳೂರು ಇವರ ಪತ್ರ ದಿನಾಂಕ 24.06.2026 ರ ಅನ್ವಯ ಅನುಮೋದನೆಗೊಂಡ ಪರಿಷ್ಕೃತ ಬಳಕೆದಾರರ ಶುಲ್ಕ ದರಗಳ ಅನುಸಾರವಾಗಿ ಕಿ.ಮೀ.12+300 ರಿಂದ ಕಿ.ಮೀ.83+800 ವರೆಗೆ (ಮಲ್ಲಸಂದ್ರ- ಕರಡಿ ಮತ್ತು ಕರಡಿ - ಬಾಣಾವರ ಸೆಕ್ಷನ್) ಕಿ.ಮೀ.56.95 (ಸಮಾನಾಂತರ ಉದ್ದ = 61.721 ಕಿ.ಮೀ.ಗಳು) ರಜತಾದ್ರಿಪುರ ಟೋಲ್ ಪ್ಲಾಜಾ (ಚೈನೇಜ್ : 49+850 ಕಿ.ಮೀ. ರಜತಾದ್ರಿಪುರ ಗ್ರಾಮದ ಹತ್ತಿರ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ) ಇದರ ರಾ.ಹೆ-206 ರಲ್ಲಿ ಬಳಕೆದಾರರ ಶುಲ್ಕವು ಹೆದ್ದಾರಿ ಬಳಕೆಗೆ ದಿನಾಂಕ 01.07.2026 (00:00 ಗಂಟೆಗಳು) ರಿಂದ ಈ ಕೆಳಗಿನಂತೆ ಪ್ರಾರಂಭವಾಗಲಿದೆ.

ಮೊತ್ತ ರೂ.ಗಳಲ್ಲಿ

ಕ್ರ. ಸಂ.	ವಾಹನಗಳ ಮಾದರಿ	ಏಕಕಾಲ ಪ್ರಯಾಣ ಶುಲ್ಕ	ಮರು ಪ್ರಯಾಣ (ಒಂದು ದಿನದೊಳಗೆ) ಶುಲ್ಕ ಪಾವತಿಯ ಸಮಯದಿಂದ 24 ಗಂಟೆಗಳು	ಮಾಸಿಕ ಪಾಸ್ ಒಂದು ತಿಂಗಳಿಗೆ 50 ಏಕಕಾಲ ಪ್ರಯಾಣ ಶುಲ್ಕ (ಪಾವತಿಯ ದಿನಾಂಕದಿಂದ ಒಂದು ತಿಂಗಳು)	ಶುಲ್ಕ ಕೇಂದ್ರದ ಜಿಲ್ಲೆಯ ನೋಂದಾಯಿತ ವಾಣಿಜ್ಯ ವಾಹನಗಳಿಗಾಗಿ ಪ್ರತಿ ಪ್ರಯಾಣಕ್ಕೆ ಶುಲ್ಕ
1	ಕಾರು / ಜೀಪು / ವ್ಯಾನು ಅಥವಾ ಲಘು ವಾಹನ	95	140	3105	45
2	ಲಘು ವಾಣಿಜ್ಯ ಬಳಕೆ ವಾಹನಗಳು, ಲಘು ಸರಕು ಸಾಗಣಿಕೆ ವಾಹನಗಳು ಅಥವಾ ಮಿನಿ ಬಸ್	150	225	5015	75
3	ಬಸ್ ಅಥವಾ ಲಾರಿಗಳು (ಎರಡು ಅಚ್ಚುಗಳು)	315	475	10505	160
4	ಮೂರು ಅಚ್ಚುಗಳ ವಾಣಿಜ್ಯ ವಾಹನಗಳು	345	515	11460	170
5	ಭಾರಿ ನಿರ್ಮಾಣ ಯಂತ್ರೋಪಕರಣ (ಹೆಚ್‌ಸಿಎಮ್) ಅಥವಾ ಅರ್ಥ್ ಮೂವಿಂಗ್ ಇಕ್ವಿಪ್‌ಮೆಂಟ್ (ಇಎಂಇ) ಅಥವಾ ಬಹು ಅಚ್ಚುಗಳ ವಾಹನ (ಎಮ್‌ಎವಿ) (ನಾಲ್ಕರಿಂದ ಆರು ಅಚ್ಚುಗಳ ವಾಹನ)	495	740	16475	245
6	ಭಾರಿ ಗಾತ್ರದ ವಾಹನಗಳು (7 ಅಥವಾ ಹೆಚ್ಚಿನ ಅಚ್ಚುಗಳ ವಾಹನ)	600	905	20060	300

ಟೋಲ್ ಕೇಂದ್ರದಿಂದ 20 ಕಿ.ಮೀ. ಸುತ್ತಳತೆಯಲ್ಲಿನ ಸ್ಥಳೀಯ ವಾಣಿಜ್ಯೇತರ ಖಾಸಗಿ ವಾಹನದ ಮಾಸಿಕ ಪಾಸ್ ದರವು ರೂ.350/- ಆಗಿರುತ್ತದೆ.

2) ಮೇಲ್ಕಂಡ ಸೆಕ್ಷನ್ನನ್ನು ದಿನಾಂಕ: 20.04.2018ರ ಗುತ್ತಿಗೆ ಒಪ್ಪಂದದ ಪ್ರಕಾರ ಸಾರ್ವಜನಿಕ ನಿಧಿಯಡಿ ಅಭಿವೃದ್ಧಿ ಪಡಿಸಲಾಗಿದೆ ಮತ್ತು ಸ್ವತಂತ್ರ ಇಂಜಿನಿಯರ್‌ಗಳು ಪ್ರಮಾಣೀಕರಿಸಿ ಪೂರ್ಣಗೊಳಿಸಿರುವ ರಸ್ತೆಯನ್ನು ವಾಣಿಜ್ಯ ಕಾರ್ಯಾಚರಣೆಗೆ ಮುಕ್ತಗೊಳಿಸಲಾಗಿದೆ. ಮೇಲ್ಕಂಡ ದರಗಳು 56.95 ಕಿ.ಮೀ.ಗಳಿಗೆ ಅನ್ವಯವಾಗಲಿದ್ದು, ಈ ಕೆಳಕಂಡ ವಿಷಯಗಳನ್ನು ಒಳಗೊಂಡಿರುತ್ತದೆ.

ವಿಭಾಗದ ಮಾದರಿ	ಉದ್ದ (ಕಿ.ಮೀನಲ್ಲಿ)	ಬಳಕೆದಾರರ ಶುಲ್ಕ ವಸೂಲಿ ಮಾಡುವ ಸಮನಾದ ಉದ್ದ (ಕಿ.ಮೀ.ಗಳಲ್ಲಿ)	ಪಥದ ವಿನ್ಯಾಸ
ನೇರ ವಿಭಾಗ	49.108	49.108	4
ಬೈಪಾಸ್ (ವೆಚ್ಚ > ರೂ.10.00 ಕೋಟಿ)	7.742	11.613	4
60 ಮೀ. ಗಿಂತ ಹೆಚ್ಚು ಉದ್ದದ ರಚನೆಗಳು	0.100	1.000	6

3) ಮೇಲ್ಕಂಡ ತೆರಿಗೆ ಕೇಂದ್ರದಲ್ಲಿ (ಟೋಲ್ ಪ್ಲಾಜಾ) ಈ ಕೆಳಕಂಡ ರಿಯಾಯಿತಿ ಲಭ್ಯವಿದೆ.
(i) ಎಲ್ಲಾ ವರ್ಗದ ವಾಹನಗಳಿಗೆ, ಪಾವತಿ ಮಾಡಿದ ಸಮಯದಿಂದ 24 ಗಂಟೆ ಒಳಗಾಗಿ ಮರು ಪ್ರಯಾಣ ಮಾಡಿದಲ್ಲಿ (ಶೇ.25 ರಷ್ಟು ರಿಯಾಯಿತಿ).
(ii) ಎಲ್ಲಾ ವರ್ಗದ ವಾಹನಗಳಿಗೆ ಪಾವತಿ ಮಾಡಿದ ದಿನಾಂಕದಿಂದ ಒಂದು ತಿಂಗಳಲ್ಲಿ 50 ಏಕಕಾಲ ಪ್ರಯಾಣಕ್ಕೆ (ಶೇ.33 ರಷ್ಟು ರಿಯಾಯಿತಿ).
(iii) ತೆರಿಗೆ ಕೇಂದ್ರದಿಂದ 20 ಕಿ.ಮೀ ವಿಸ್ತೀರ್ಣದೊಳಗೆ ನೆಲೆಸಿರುವ ವಾಣಿಜ್ಯೇತರ ವಾಹನಗಳಿಗೆ ಒಂದು ತಿಂಗಳಿಗೆ ರೂ.350/- ಪಾಸ್ ಲಭ್ಯವಿದೆ.
(iv) ಹಣಕಾಸು ವರ್ಷ 2026-27 ರ ವಾರ್ಷಿಕ ಪಾಸ್ ಒಂದು ವರ್ಷದ ಮಾನ್ಯತೆ ಅಥವಾ 200 ಟೋಲ್ ಪ್ಲಾಜಾ ಕ್ರಾಸಿಂಗ್‌ಗಳಿಗೆ ರೂ.3075 ಆಗಿದೆ.
(v) ತೆರಿಗೆ ಕೇಂದ್ರದ ಜಿಲ್ಲೆಯಲ್ಲಿ ನೊಂದಾಯಿಸಿಕೊಂಡಿರುವ ವಾಣಿಜ್ಯ ವಾಹನಕ್ಕೆ (ರಾಷ್ಟ್ರೀಯ ಪರವಾನಗಿ ಅಡಿಯಲ್ಲಿ ಚಲಿಸುವ ವಾಹನಗಳನ್ನು ಹೊರತುಪಡಿಸಿ) (ಶೇ.50ರಷ್ಟು ರಿಯಾಯಿತಿ).

4) ಮೇಲ್ಕಂಡ ದರಗಳು 01.07.2026 ರಿಂದ 31-03-2027 ರವರೆಗೆ ಅನ್ವಯವಾಗುತ್ತದೆ, ನಂತರ ರಾಷ್ಟ್ರೀಯ ಹೆದ್ದಾರಿಗಳ ಶುಲ್ಕ (ದರಗಳು ಮತ್ತು ಸಂಗ್ರಹಗಳನ್ನು ನಿರ್ದಿಷ್ಟಗೊಳಿಸುವುದು) ನಿಯಮಗಳು 2008ರ ನಿಯಮ 5ಗೆ ಅನುಸಾರವಾಗಿ ದರಗಳನ್ನು ಪರಿಷ್ಕರಿಸಲಾಗುತ್ತದೆ.

5) ಬಳಕೆದಾರರ ಶುಲ್ಕ ವಿನಾಯಿತಿ ಹೊಂದಬಹುದಾದ ವಾಹನಗಳ ಪಟ್ಟಿಯನ್ನು ಜಿ.ಎಸ್.ಆರ್.950(ಇ) ದಿನಾಂಕ: 03.12.2010 ರ ಶುಲ್ಕ ನಿಯಮಕ್ಕೆ ಮಾಡಲಾದ ತಿದ್ದುಪಡಿಯಲ್ಲಿ ನೀಡಲಾಗಿದೆ.

6) ಯಾವುದೇ ವಾಹನವು ಅನುಮತಿ ನೀಡಿದ ಭಾರಕ್ಕಿಂತ ಹೆಚ್ಚಿನ ಭಾರವನ್ನಿಟ್ಟುಕೊಂಡು ರಾಷ್ಟ್ರೀಯ ಹೆದ್ದಾರಿಯನ್ನು ಬಳಸಿದ್ದಲ್ಲಿ ನಿಗದಿಪಡಿಸಿದ ಶುಲ್ಕಕ್ಕಿಂತ 10 ಪಟ್ಟು ಹೆಚ್ಚು ಶುಲ್ಕ ಪಾವತಿಸಿ, ಹೆಚ್ಚುವರಿ ಭಾರವನ್ನು ಖಾಲಿ ಮಾಡತಕ್ಕದ್ದು.

7) ಮೇಲ್ಕಾಣಿಸಿದ ನಿಯಮಗಳಲ್ಲಿ 12 ನಿಯಮಗಳಿಗೆ ಅನುಸಾರವಾಗಿ ಬಳಕೆದಾರರ ಸೂಚನೆಗಾಗಿ ಶುಲ್ಕ ದರಗಳನ್ನು ಪ್ರದರ್ಶಿಸಲಾಗುತ್ತದೆ.

8) ಗೆಜೆಟ್‌ನಲ್ಲಿ ಪ್ರಕಟಿಸಲಾದ ಶುಲ್ಕ ಅಧಿಸೂಚನೆ ಎಸ್.ಓ.3182(ಇ) ದಿನಾಂಕ : 12-07-2022 ಮತ್ತು ಶುಲ್ಕಗಳ ಅನುಮೋದನೆಯ ದಿನಾಂಕ: 26.03.2025ರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪತ್ರ ಇತ್ಯಾದಿಗಳನ್ನು ವೀಕ್ಷಿಸಲು http://tis.nhai.gov.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

9) ಯಾವುದೇ ದೂರುಗಳು/ಸಲಹೆಗಳಿಗಾಗಿ ದಯವಿಟ್ಟು ಸಂಪರ್ಕಿಸಿ ಯೋಜನಾ ನಿರ್ದೇಶಕರು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಯೋಜನಾ ಅನುಷ್ಠಾನ ಘಟಕ - ತುಮಕೂರು, 80 ಅಡಿ ರಸ್ತೆ, ಮಹಾಲಕ್ಷ್ಮಿ ನಗರ, ಬಟವಾಡಿ, ತುಮಕೂರು (ದೂ : 0816-2955145)

ದೇಶವನ್ನು ಕಟ್ಟುತ್ತೇವೆ, ಕೇವಲ ರಸ್ತೆಗಳನಲ್ಲ

Govt. of Uttarakhand

Uttarakhand 25 Silver Jubilee Year

GAURAV, VIKAS AUR SANKALP KA PARV

Devbhoomi Uttarakhand

VIKAS BHI, VIRASAT BHI

"The Honorable Prime Minister has called the third decade of the 21st century the decade of Uttarakhand. In line with the Prime Minister's vision, we are working with an uncompromised resolve a 'Vikalp Rahit Sankalp' to make the state an exemplary state in every field."

PUSHKAR SINGH DHAMI, Chief Minister, Uttarakhand

"There are two major pillars in building the developed India of the 21st century. First, taking pride in our heritage, and second, making every possible effort for development. Today, Uttarakhand is continuously strengthening both of these pillars. This decade is Uttarakhand's decade."

NARENDRA MODI, Prime Minister

Foundation Stone Laid for Iconic Ropeway Projects

The foundation stone has been laid for the construction of ropeways from Gaurikund to Kedarnath and Govindghat to Hemkund Sahib.

"The 12.9 km ropeway from Sonprayag to Kedarnath will be constructed at a cost of ₹4,081 crore, while the 12.4 km ropeway from Govindghat to Hemkund Sahib will be built at a cost of ₹2,730 crore.

Expansion of Air Services

An additional terminal has been constructed at the Dehradun Airport.

Regular flight services have commenced from Dehradun Airport to major Indian cities, including Ahmedabad, Bhubaneswar, Bengaluru, Mumbai, Kolkata, Delhi, Shamshabad, Jaipur, Lucknow, Pune, and Kullu.

Agricultural & Industrial Development

The Central Government has sanctioned a fund of ₹25 crore for farm fencing in the state.

The Central Government has transferred 45.33 of land belonging to the HMT Factory in Haldwani (Ranibagh) to the Government of Uttarakhand.

Roads and Corridors

Approval has been granted for the construction of the proposed Rispana and Bindal Elevated Corridor projects to alleviate growing traffic congestion in Dehradun city.

The Prime Minister dedicated to the nation the 210 km long Delhi-Dehradun Economic Corridor, built at a cost of ₹11,963 crore.

The Central Government has approved ₹1,105 crore for the construction of the 12.67 km long, 4-lane Rishikesh Bypass.

Railway Expansion

Uttarakhand welcomes two Vande Bharat Express trains, making travel from Dehradun to Delhi and Dehradun to Lucknow highly convenient.

"Train operations have been approved for routes connecting Lalkuan to Amritsar Junction, and Dehradun to Tanakpur.

Construction of the Rishikesh - Karnaprayag rail line is progressing rapidly, with 72.5% of the work already completed.

Approval has been granted for the survey of the Tanakpur- Bageshwar rail route; work on the project's Detailed Project Report (DPR) is underway at a swift pace.

NEW DIMENSIONS OF DEVELOPMENT

Development Initiatives Dedicated to Nation Building

Uttarakhand allocated ₹4,769 crore under the Rail Budget in the Union Budget 2026-27.

The chardham shrines have been connected with an all-weather road built at a cost of over ₹12,000 crore, making travel across the mountains smooth and hassle-free.

Uttarakhand secured the first position among small states in the Export Preparedness Index 2024 released by NITI Aayog.

The Jamrani Dam project received approval from the Central Government. To be constructed at a cost of ₹3,678.23 crore, the project is slated for completion by June 2029.

To economically empower women, more than 2 lakh 54 thousand women in the state have successfully become 'Lakhpati Didis'.

A dedicated Rafting Base Station will be built in Rishikesh, for which the Central Government has sanctioned ₹100 crore.

The National Games were hosted in the state for the very first time.

Tourism, Culture & Sports

Work is progressing rapidly under the Master Plans for Kedarnath and Badrinath Dham. Development projects worth ₹255 crore are underway to transform Badrinath Dham into a smart spiritual hill town.

The grand construction of the Yamuna Teerth Sthal in Haripur Kalsi is currently underway.

A fund of ₹500 crore has been released to kickstart preparations for the upcoming Kumbh Mela 2027 in Uttarakhand.

Health & Social Welfare

A total of 61 lakh Ayushman cards have been generated in the state under the Atal Ayushman Yojana. So far, over 17 lakh patients have benefited from cashless treatment worth more than ₹3,400 crore.

Construction of the AIIMS Satellite Centre in Kichha is in full swing, with 85% of the project already completed.

Under the Vibrant Villages Programme, around 200 development projects are being executed across 51 border villages at a cost of over ₹270 crore.

Water Resources & Disaster Management

The Song River Dam Drinking Water Project has received approval from the Central Government. Being constructed at a total cost of ₹2,520.86 crore, this project will supply 150 Million Liters per Day of drinking water to Dehradun city and its suburban areas.

For the mitigation of landslide-prone sites, Uttarakhand has received a central assistance of ₹113.90 crore under the ₹461 crore State Disaster Mitigation Fund.

National Achievements & Good Governance

Uttarakhand secured the 1st rank across the country in the Sustainable Development Goals (SDG) India Index 2023-24 released by NITI Aayog.

On the occasion of National Startup Day, the Department of Industries, Government of Uttarakhand, was awarded a Certificate of Appreciation for its outstanding performance in the startup ecosystem.

The Central Government has sanctioned an incentive of ₹264.5 crore to Uttarakhand for implementing various reforms initiated by the Urban Development and Housing Department.

Uttarakhand delivered an outstanding performance in mining sector reforms, securing the 2nd position in the country, for which the Central Government has released an incentive bonus of ₹200 crore."

When we come from our hometowns to Devbhoomi for the Chardham Yatra, we do so with a resolve in our hearts. In the same spirit, I would also like to urge you to take five resolves: Narendra Modi

First Resolve : Cleanliness is paramount.

Second Resolve : Sensitivity toward nature and the environment.

Third Resolve : Emphasis on service, cooperation, & unity.

Fourth Resolve : Promotion of 'Vocal for Local'.

Fifth Resolve : Adherence to discipline, safety, & decorum.

ISSUED IN PUBLIC INTEREST BY DEPARTMENT OF INFORMATION & PUBLIC RELATIONS, UTTARAKHAND

www.uttarainformation.gov.in | DIPR_UK | UttarakhandDIPR | UttarakhandDIPR

Bennett & Coleman
THE TIMES OF INDIA

ಸಂಪಾದಕೀಯ EDITORIAL

ಹೇ ರಾಮ್..!

ದೇಣಿಗೆ ಲೂಟಿಕೋರರಿಗೆ ಕಠಿಣ ಶಿಕ್ಷೆಯಾಗಲಿ

ದೇಶದ ಕೋಟ್ಯಂತರ ಭಕ್ತರ ನಂಬಿಕೆಯ ಪ್ರತೀಕವಾದ ಅಯೋಧ್ಯೆಯ ಶ್ರೀರಾಮ ಮಂದಿರದ ನಿರ್ಮಾಣ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಕೇಳಿಬರುತ್ತಿರುವ ದೇಣಿಗೆ ಲೂಟಿ ಆರೋಪ ನಿಜಕ್ಕೂ ಬಹುಸಂಖ್ಯಾತ ಹಿಂದೂಗಳ ನಂಬಿಕೆಯ ಮೇಲೆ ನಡೆದಿರುವ ಗಂಭೀರ ಹಲ್ಲೆ. ಭಕ್ತಿ ಮತ್ತು ಸಮರ್ಪಣಾ ಮನೋಭಾವದಿಂದ ದೇಶದ ಮೂಲೆಮೂಲೆಗಳಿಂದ ಹರಿದುಬಂದ ದೇಣಿಗೆಯನ್ನು ದುರುಪಯೋಗಪಡಿಸಿಕೊಂಡಿರುವುದು ರಾಮಮಂದಿರದ ಪಾವಿತ್ರ್ಯತೆಯನ್ನೇ ಪ್ರಶ್ನಿಸುವಂತಿದೆ.

ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ, ಸ್ಥಳೀಯ ನ್ಯಾಯಾಲಯವು 8 ಮಂದಿ ಆರೋಪಿಗಳನ್ನು ಜುಲೈ 13ರವರೆಗೆ 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಆರೋಪಿಗಳ ಕೃತ್ಯದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಫೈಜಾಬಾದ್ ವಕೀಲರ ಸಂಘ, ಈ ಪ್ರಕರಣದ ಆರೋಪಿಗಳ ಪರವಾಗಿ ಯಾರೂ ವಕಾಲತ್ತು ನಡೆಸಬಾರದು ಎಂದು ಕಠಿಣ ನಿಲುವು ತಳೆದಿದೆ. ಅಷ್ಟೇ ಅಲ್ಲದೆ, ಈ ಆದೇಶವನ್ನು



ಉಲ್ಲಂಘಿಸಿ ಆರೋಪಿಗಳ ಪರ ವಾದ ಮಂಡಿಸುವ ವಕೀಲರಿಗೆ 5 ಲಕ್ಷ ರೂ. ದಂಡ ವಿಧಿಸುವುದಾಗಿ ಎಚ್ಚರಿಕೆ ನೀಡುವ ಮೂಲಕ, ಈ ಹಗರಣದ ವಿರುದ್ಧ ಸಮಾಜದ ಆಕ್ರೋಶ ಯಾವ ಮಟ್ಟದಲ್ಲಿದೆ ಎಂಬುದನ್ನು ಸ್ಪಷ್ಟಪಡಿಸಿದೆ.

ಅಷ್ಟೇ ಅಲ್ಲದೆ, ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಉನ್ನತ ಪದಾಧಿಕಾರಿಗಳಾದ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್, ಡಾ. ಅನಿಲ್ ಮಿಶ್ರಾ ಮತ್ತು ಗೋಪಾಲ್ ರಾವ್‌ರ ಪಾತ್ರದ ಬಗ್ಗೆಯೂ ವಕೀಲರ ಸಂಘ ಗಂಭೀರ ಅನುಮಾನ ವ್ಯಕ್ತಪಡಿಸಿದೆ. ಈ ಮೂವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಮತ್ತು ಮೂರು ದಿನಗಳ ಒಳಗಾಗಿ ಅವರು ಅಯೋಧ್ಯೆ ತೊರೆಯಬೇಕು, ಇಲ್ಲವಾದಲ್ಲಿ ನಗರ ಮುತ್ತಿಗೆ ಹಾಕುವುದಾಗಿ ಸಂಘವು ಎಚ್ಚರಿಕೆ ನೀಡಿದೆ. ಇದು ಪ್ರಕರಣವು ಕೇವಲ ಆರೋಪಿಗಳಷ್ಟೇ ಅಲ್ಲದೆ, ನಿರ್ವಹಣಾ ಸಮಿತಿಯ ಹೊಣೆಗಾರಿಕೆಯನ್ನೂ ಪ್ರಶ್ನಿಸುವಂತೆ ಮಾಡಿದೆ.

ಮತ್ತೊಂದೆಡೆ, ಈ ಪ್ರಕರಣದ ತನಿಖೆಯನ್ನು ಸಿಬಿಐ ನೇತೃತ್ವದಲ್ಲಿ ನಡೆಸಬೇಕೆಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತುರ್ತು ವಿಚಾರಣೆಗೆ ಪರಿಗಣಿಸಲು ನಿರಾಕರಿಸಿದೆ. ''ಆಕಾಶವೇನೂ ಕಳಚಿ ಬೀಳುವುದಿಲ್ಲ, ಇದರಲ್ಲಿ ಅಂಥ ತುರ್ತು ಏನಿದೆ?,'' ಎಂದು ನ್ಯಾಯಮೂರ್ತಿ ಎಂ.ಎಂ. ಸುಂದರೇಶ್ ಮತ್ತು ಶೀಲ್ ನಾಗು ಅವರ ಪೀಠ ಪ್ರಶ್ನಿಸಿದೆ. ಬೇಸಿಗೆ ರಜೆಯ ನಂತರ ವಿಚಾರಣೆಯನ್ನು ಕೈಗೆತ್ತಿಕೊಳ್ಳುವುದಾಗಿ ತಿಳಿಸುವ ಮೂಲಕ, ನ್ಯಾಯಾಲಯವು ಕಾನೂನು ಪ್ರಕ್ರಿಯೆಯ ಘನತೆಯನ್ನು ಎತ್ತಿ ಹಿಡಿದಿದೆ. ಆದರೆ, ಇಂಥ ಸೂಕ್ಷ್ಮ ಪ್ರಕರಣದಲ್ಲಿ ನ್ಯಾಯಾಂಗವು ತೀವ್ರಗತಿಯ ತನಿಖೆಗೆ ಅವಕಾಶ ಕಲ್ಪಿಸುವ ಅಗತ್ಯವಿದ್ದು, ಸತ್ಯಾಂಶ ಶೀಘ್ರವಾಗಿ ಹೊರಬರಬೇಕಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ರಾಮಮಂದಿರದ ಪಾವಿತ್ರ್ಯತೆ ಉಳಿಯಬೇಕೆಂದರೆ ದೇಣಿಗೆಯ ದುರುಪಯೋಗಕ್ಕೆ ಕಾರಣರಾದ ಪ್ರತಿಯೊಬ್ಬರೂ ಕಾನೂನಿನ ಕಠಿಣ ಶಿಕ್ಷೆಗೆ ಗುರಿಯಾಗಬೇಕು. ಭಕ್ತರ ನಂಬಿಕೆಯನ್ನು ಬಂಡವಾಳವನ್ನಾಗಿಸಿಕೊಂಡು ಸ್ವಾರ್ಥ ಮೆರೆದವರಿಗೆ, ಅವರು ಎಷ್ಟೇ ಪ್ರಭಾವಿಯಾಗಿದ್ದರೂ ಯಾವುದೇ ರಕ್ಷಣೆ ಸಿಗಬಾರದು. ಟ್ರಸ್ಟ್‌ನ ಪಾರದರ್ಶಕತೆ ಮತ್ತು ಜವಾಬ್ದಾರಿಯನ್ನು ಮರುಸ್ಥಾಪಿಸುವುದು ಇಂದಿನ ತುರ್ತು ಅಗತ್ಯ. ದೇಣಿಗೆ ದರೋಡೆ ಪ್ರಕರಣವು ರಾಮಮಂದಿರದ ಇತಿಹಾಸದಲ್ಲಿ ಕಪ್ಪುಚುಕ್ಕೆಯಾಗಿ ಉಳಿಯದಿರಬೇಕಾದರೆ, ತನಿಖೆಯು ನಿಷ್ಪಕ್ಷಪಾತವಾಗಿ ಮತ್ತು ತ್ವರಿತವಾಗಿ ನಡೆಯಬೇಕಿದೆ.

ಮಧುರಾನುಭೂತಿ

ಖಾಲಿ ಹೃದಯಗಳನ್ನು ತುಂಬುವ ಜಾತ್ರೆ

ಕೈಲಾಶ್ ಗೌತಮ್ ಅವರ 'ಅಮೌಸಾ ಕಾ ಮೇಲಾ' ಆಗಿರಲಿ, 19ನೇ ಶತಮಾನದ ಬ್ರಿಟಿಷ್ ಕವಿ ಎಡಿತ್ ಸಿಟ್ವೆಲ್ ಅವರ 'ಎಟ್ ದಿ ಫೇರ್' ಕವಿತೆಯಾಗಿರಲಿ, ಅವುಗಳಲ್ಲಿನ ಜಾತ್ರೆಯ ಬಗೆಗಿನ ಪ್ರತಿಯೊಂದು ವರ್ಣನೆಯೂ ವಿಶಿಷ್ಟವೆನಿಸುತ್ತದೆ. ಇದು ವಿಭಿನ್ನ ಜನರು, ವಿಭಿನ್ನ ಬಣ್ಣಗಳು ಮತ್ತು ಅವರ ವಿಶಿಷ್ಟ ಸಂಭಾಷಣೆಗಳನ್ನು ಬಿಂಬಿಸುವ ವಿಭಿನ್ನ ಪ್ರಪಂಚದಂತೆ ಕಾಣುತ್ತದೆ. ಆದರೆ, ಸ್ವತಃ ನೀವೇ ಯಾವುದಾದರೂ ಜಾತ್ರೆಯಲ್ಲಿ ಪಾಲ್ಗೊಂಡಾಗ ಅದು ಸಮಯದೊಂದಿಗೆ ತನ್ನ ಮಹತ್ವವನ್ನು ಹೇಗೆ ಉಳಿಸಿಕೊಂಡಿದೆ ಎಂಬುದರ ಅರಿವಾಗುತ್ತದೆ. ಈ ಕವಿತೆಗಳಲ್ಲಿ ಕೇಳಿದ ಧ್ವನಿಗಳು ಮತ್ತೆ ಜೀವಂತವಾದಂತೆ ಭಾಸವಾಗುತ್ತವೆ. ಜಾತ್ರೆಯ

ಸಂಭ್ರಮ ಮುಗಿದಿಲ್ಲ, ಅದು ನಮಗಾಗಿ ಕಾಯುತ್ತಿತ್ತೇನೋ ಎನಿಸುತ್ತದೆ.

ಜಾತ್ರೆಗಳು ಒಂದೇ ಬಗೆಯ ಅನುಭವವನ್ನು ನೀಡುವುದಿಲ್ಲ, ಅದು ವೈವಿಧ್ಯಮಯ ಸಂತೋಷಗಳ ಸಮುಚ್ಚಯವಾಗಿದೆ. ಜತೆಗೆ ಸಾಮಾನ್ಯ ಖುಷಿಗಿಂತ ಹೆಚ್ಚು ರೋಮಾಂಚಕಾರಿಯಾಗಿದೆ. ಜಾತ್ರೆಯಲ್ಲಿ ಹೆಜ್ಜೆ ಹಾಕಿದಾಗ ನಮ್ಮ ದೈನಂದಿನ ಜೀವನದಿಂದ ತಪ್ಪಿಸಿಕೊಂಡು ಒಂದು ಅದ್ಭುತ ಜಗತ್ತನ್ನು ಪ್ರವೇಶಿಸುತ್ತೇವೆ. ಕಚೇರಿಯಲ್ಲಿನ ತಲೆಬಿಸಿ, ಮನೆ ಕೆಲಸಗಳ ಜವಾಬ್ದಾರಿಯ ಹೊರೆ ಇವೆಲ್ಲವುಗಳಿಗೆ ಅಲ್ಲಿ ಪ್ರವೇಶವಿಲ್ಲ. ಪ್ರತಿಯೊಂದು ಮುಖವೂ ಕೆಲಕಾಲ ಚಿಂತೆಗಳನ್ನು ಮರೆತು ನಗುತ್ತಿರುವಂತೆ ಕಾಣುತ್ತದೆ. ಬಹುಶಃ ಅದಕ್ಕಾಗಿಯೇ ಜಾತ್ರೆಗಳು ನಮಗೆ ಬಾಲ್ಯವನ್ನು ನೆನಪಿಸುತ್ತವೆ.

ಎಲ್ಲ ವಯಸ್ಸಿನವರೂ ತಮಗಾಗಿ ಏನನ್ನಾದರೂ ಕಂಡುಕೊಳ್ಳುವ ಅವಕಾಶವಿರುವುದು ಜಾತ್ರೆಯ ವಿಶೇಷ. ಮಕ್ಕಳಿಗೆ ಉಯ್ಯಾಲೆಗಳು, ಆಟಿಕೆಗಳು, ತಿನಿಸುಗಳು, ಯುವಕರಿಗೆ ಸಾಹಸ ಚಟುವಟಿಕೆಗಳು, ವೃದ್ಧರಿಗೆ ನಾಸ್ಟಾಲ್ಜಿಯಾ ಇವೆ. ಬಹುತೇಕರು ಏಕಾಂಗಿಯಾಗಿ ಮೊಬೈಲ್ ಲೋಕದಲ್ಲೇ ಮಗ್ನರಾಗಿರುವ ಇಂದಿನ ದಿನಗಳಲ್ಲಿ ಜಾತ್ರೆಯು ಎಲ್ಲರನ್ನೂ ಒಗ್ಗೂಡಿಸುತ್ತದೆ. ಇಲ್ಲಿ ಚಾಟಿಂಗ್ ಇಲ್ಲ, ಬದಲಾಗಿ ನೇರ ಸಂವಹನವಿದೆ. ಭಾವನೆಗಳನ್ನು ಎಮೋಜಿಗಳ ಮೂಲಕ ಅಲ್ಲ, ಮುಖಗಳ ಮೂಲಕ ವ್ಯಕ್ತಪಡಿಸಲಾಗುತ್ತದೆ. ಕಣ್ಣಿಗೆ ಕಣ್ಣಿಟ್ಟು ಮಾತನಾಡಲು ಅವಕಾಶ ಸಿಗುತ್ತದೆ. ಇದಕ್ಕಾಗಿ ಮೊದಲು ರಿಕ್ವೆಸ್ಟ್ ಕಳುಹಿಸುವ ಅಗತ್ಯವಿಲ್ಲ. ಒಂದು ಜಾತ್ರೆಯು ಜನಸಂದಣಿಯ ನಡುವೆಯೂ ತನ್ನನ್ನು ತಾನು ಗುರುತಿಸಿಕೊಳ್ಳುವ, ಗದ್ದಲದ ಮಧ್ಯೆಯೂ ತನ್ನನ್ನು ತಾನು ಕೇಳಿಸಿಕೊಳ್ಳುವ ಕಲೆಯೊಂದಿಗೆ ಸ್ವಯಂ ಅನ್ವೇಷಣೆಯನ್ನು ಕಲಿಸುತ್ತದೆ. ಅದು ಧಾರ್ಮಿಕ ನಂಬಿಕೆಗಳನ್ನು ಒಟ್ಟುಗೂಡಿಸುವ ಸಂದರ್ಭ, ಸಂಪ್ರದಾಯಗಳ ಸಂಗಮವಾಗಿದೆ. ಯಾವುದೇ ವೈಭವವೂ ಶಾಶ್ವತವಲ್ಲ ಎಂಬುದನ್ನು ಜಾತ್ರೆಗಳಿಂದ ಕಲಿಯಬಹುದು. ಸಂಭ್ರಮದ ಜಾತ್ರೆಯೊಂದು ಎಂದಾದರೂ ಕೊನೆಗೊಳ್ಳಲೇಬೇಕು. ಆಗ ದೀಪಗಳು ಮಂದವಾಗುತ್ತವೆ, ಅಂಗಡಿಗಳು ಮುಚ್ಚಲ್ಪಡುತ್ತವೆ, ಉಯ್ಯಾಲೆಗಳು ಕೆಳಗಿಳಿಯುತ್ತವೆ, ಇಡೀ ಮೈದಾನ ಮತ್ತೊಮ್ಮೆ ಖಾಲಿಯಾಗುತ್ತದೆ. ಸದ್ದು ಗದ್ದಲ ಅಡಗಿ ನಿಶ್ಯಬ್ದ ಆವರಿಸುತ್ತದೆ. ಇಷ್ಟಾದರೂ ಆದರಲ್ಲಿ ಅನುಭವಿಸಿದ ಸಂತೋಷದ ನೆನಪುಗಳು ಹೃದಯದಲ್ಲಿ ಶಾಶ್ವತವಾಗಿರುತ್ತವೆ.

ವಿಕ ತಗೋ ಕನ್ನಡ

ಅವಾಢವ್ಯ

ಇದಕ್ಕೆ 'ಅಳತೆ ಮೀರಿದ, ತುಂಬ ಹೆಚ್ಚಾದ' ಎಂಬ ಅರ್ಥವಿದೆ. ಇದನ್ನು ಸಾಮಾನ್ಯವಾಗಿ ಖರ್ಚುವೆಚ್ಚದ ವಿಚಾರವಾಗಿ ಬಳಸುತ್ತೇವೆ. 'ಯದ್ವಾತದ್ವ ಅಳತೆ ಮೀರಿದೆ' ಎಂಬುದಕ್ಕೆ ಉದಾಹರಣೆ: ''ಬೆಂಗಳೂರಿನಲ್ಲಿ ಮನೆಕೊಳ್ಳಲು ಬೇಕಾಗುವ ಅವಾಢವ್ಯ ಬೆಲೆಯನ್ನು ನೋಡಿ, ಮೈಸೂರಿನಲ್ಲಿ ನೆಲೆಸಲು ನಿರ್ಧರಿಸಿದ್ದರಿಂದ ಮನಸ್ಸಿಗೆ ನಿರಾಳವಾಯಿತು''. 'ತುಂಬ ಹೆಚ್ಚಾದ' ಎನ್ನುವುದಕ್ಕೆ ಉದಾಹರಣೆ: ''ದಿನಸಿ ಹಾಗೂ ತರಕಾರಿ ಬೆಲೆಯಿಂದ ವಿದ್ಯಾರ್ಥಿನಿಲಯದಲ್ಲಿ ಹೆಚ್ಚುತ್ತಿದ್ದ ಅವಾಢವ್ಯ ಖರ್ಚನ್ನು ಗಂಭೀರವಾಗಿ ಪರಿಶೀಲಿಸುವಂತಾಯಿತು''. ಈಗಿನ ಮೀಟರ್ ಬಡ್ಡಿಗೆ ಹಿಂದೆ ''ಅವನದು ಅವಾಢವ್ಯ ಬಡ್ಡಿ ವ್ಯವಹಾರ,'' ಎಂದು ಮೂಗುಮುರಿಯುತ್ತಿದ್ದರು. ಪಾ.ವೆಂ. ಆಚಾರ್ಯರ ಲೇಖನದಿಂದ: ''ಭಾರತದಲ್ಲಿ ಕ್ರಿ.ಪೂ. 200ರಷ್ಟು ಹಿಂದಿನ ಗ್ರಂಥಗಳಲ್ಲೇ ಶೂನ್ಯದ ಉಲ್ಲೇಖ ಬರುತ್ತದೆ. ಆದರೆ, ಶಾಸನಗಳಲ್ಲಿ ಹಳೇ ಅವಾಢವ್ಯ ಕ್ರಮವೇ ಕಾಣಿಸುತ್ತದೆ''. (ವಿಜ್ಞಾನ ವಿಸ್ಮಯ- ಪು.13)

– ಜಿ.ವಿ. ಅರುಣ

– ಪದ ಸೂಚಿಸಿದವರು: ಕಮಲಾ ಕುಮಾರಿ, ಬೆಂಗಳೂರು

ಬತ್ತಳಿಕೆ



ಆತೀಶ್ ಬಿ. ಕನ್ನಾಳೆ

ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗಾಗಿ (ಎಸ್‌ಐಆರ್) ಅಧಿಕಾರಿಗಳು ಇಂದಿನಿಂದ ನಿಮ್ಮ ಮನೆಗಳಿಗೆ ಭೇಟಿ ನೀಡಲಿದ್ದಾರೆ. ಎಸ್‌ಐಆರ್ ಪಯಣ ಈ ಕ್ಷಣಕ್ಕೆ ಬಂದು ನಿಂತಿರುವ ಹೊತ್ತಿನಲ್ಲಿಯೂ ಜನರೊಳಗೆ ಅನೇಕ ಪ್ರಶ್ನೆಗಳು ಇನ್ನೂ ಬಾಕಿ ಉಳಿದಿವೆ. ನನ್ನ ಹಕ್ಕು ಸುರಕ್ಷಿತವೇ? ಹಾಗೆ ಸುರಕ್ಷಿತಗೊಳ್ಳಲು ನಾನೇನು ಮಾಡಬೇಕು? ಇಂಥ ಹತ್ತಾರು ಪ್ರಶ್ನೆಗಳಿಗೆ ಇಲ್ಲಿದೆ ಉತ್ತರ.

ಬಾಗಿಲು ತಟ್ಟಿದ SIR

ಬಾಕಿ ಪ್ರಶ್ನೆಗಳಿಗೆ ಉತ್ತರಗಳು ಇಲ್ಲಿವೆ...

ವಿಕ ಫೋಕಸ್

ಸಾ... ಅದ್ಯಾರೋ ಭೇಟಿ ಕೊಡ್ತಾರಂತೆ. ನಮ್ಮೂರಲ್ಲಿದ್ದಾಗ ಅಲ್ಲೊಂದ್ ವೋಟರ್ ಐಡಿ ಮಾಡಸ್ಕೊಂಡೆ. ನಾಕ್ ವರ್ಸದ ಹಿಂದೆ ಬೆಂಗ್ಳೂರಿಗೆ ಬಂದೆ. ಇಲ್ಲೊಂದ್ ಮಾಡಿಸ್ಕೊಂಡೆ. ಇದೆಲ್ಲಾ ಡಿಲೀಟ್ ಆಗ್ತದಾ? ಒಂದೂ ತಿಳೀವಲ್ದು. ಅತ್ಲಾಗೆ ನಮ್ಮೂರ್‌ನ್ಲಲ್ಲಿರೋ ನಮ್ಮಣ್ಣಂಗೆ ಹೇಳಿವ್ನಿ. ಯಾರಾರು ಬಂದ್ರೆ ವೋಟರ್ ಲಿಸ್ಟ್‌ನಾಗೆ ಹೆಸರು ಉಳಸಪ್ಪೋ ಅಂತ ತಿಳ್ಸಿದಿನಿ!!!

ಇದು ಕರುನಾಡಿನಲ್ಲಿರುವ ಬಹುತೇಕ ಪ್ರಜೆಗಳ ಮುಗ್ಧ ತಳಮಳ. ಅನೇಕರಲ್ಲಿ ಪ್ರಶ್ನೆಗಳ ಗುಚ್ಛವೇ ಅಡಗಿದೆ. ಕರುನಾಡಿನಲ್ಲಿ ಈಗಾಗಲೇ ಎಸ್‌ಐಆರ್ ಪ್ರಕ್ರಿಯೆ ಶುರುವಾಗಿದ್ದು, ಇಂದಿನಿಂದ (ಜೂ.30) ಜುಲೈ 29ರ ವರೆಗೆ ಮನೆಮನೆ ಭೇಟಿ ಆರಂಭವಾಗಲಿದೆ. ನಗರೀಕರಣ ಶಿಕ್ಷಣ, ಜೀವನೋಪಾಯ ಇನ್ನಿತರ ಕಾರಣಗಳಿಂದಾಗಿ ವಲಸೆಯ ಪ್ರಮಾಣವೂ ಏರಿಕೆಯಾಗಿದೆ. ಹೀಗಾಗಿ, ಕಳೆದ 20 ವರ್ಷಗಳ ಅವಧಿಯಲ್ಲಿ ಮತದಾರರ ಪಟ್ಟಿಯಲ್ಲಿ ಗಮನಾರ್ಹ ಬದಲಾವಣೆಯಾಗಿವೆ. ಅದನ್ನು ಮನಗಂಡ ಆಯೋಗ ಸಮಗ್ರ ಪರಿಶೀಲನಾ ಆಂದೋಲನಕ್ಕೆ ಮುಂದಾಗಿದೆ.

■ ಏನಿದು ಎಸ್‌ಐಆರ್? ನನ್ನ ಬಳಿ ಈಗಾಗಲೇ ವೋಟರ್ ಐಡಿ ಇದೆ, ನಾನು ಮತ್ತೆ ಏಕೆ ಎಸ್‌ಐಆರ್ ನಮೂನೆ ಭರ್ತಿ ಮಾಡಬೇಕು?

ಭಾರತೀಯ ಚುನಾವಣೆ ಆಯೋಗವು ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಮತ್ತು ನವೀಕರಿಸಲು ಕೈಗೊಳ್ಳುವ ವಿಶೇಷ ಪ್ರಕ್ರಿಯೆಯೇ ಎಸ್‌ಐಆರ್ (ವಿಶೇಷ ಸಮಗ್ರ ಪರಿಷ್ಕರಣೆ). ಅರ್ಹ ಮತದಾರರ ಹೆಸರುಗಳನ್ನು ಸೇರಿಸುವುದು, ಮೃತಪಟ್ಟವರ ಅಥವಾ ಸ್ಥಳಾಂತರಗೊಂಡವರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕುವುದು, ತಪ್ಪುಗಳನ್ನು ಸರಿಪಡಿಸುವುದು ಇದರ ಮುಖ್ಯ ಉದ್ದೇಶ. ಹಳೆಯ ಮತದಾರರ ಪಟ್ಟಿಯ ಮೂಲ ದಾಖಲೆಗಳನ್ನು ನವೀಕರಿಸಲು ಇದು ಅಗತ್ಯವಿದೆ. ಪ್ರಸ್ತುತ ವಿಳಾಸ ಮತ್ತು ಮಾಹಿತಿಯನ್ನು ಖಚಿತಪಡಿಸಿಕೊಳ್ಳಲು ಈ ನಮೂನೆ ಭರ್ತಿ ಮಾಡುವುದು ಕಡ್ಡಾಯ. ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಇದು 8ನೇ ಸಲ (1951ರಿಂದ 2004) ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿದೆ. ಕಾಲಕಾಲಕ್ಕೆ ಕಾನೂನಾತ್ಮಕವಾಗಿ ಮತ್ತು ಪ್ರಜಾಸತ್ತಾತ್ಮಕವಾಗಿ ನಡೆಯುವಂಥದ್ದಾಗಿದೆ. ಕಳೆದ ಎಸ್‌ಐಆರ್ 2002ರಲ್ಲಿ ನಡೆದಿತ್ತು. ಆದಾದ ಬಳಿಕ ಮತದಾರರ ಪಟ್ಟಿ ಪರಿಷ್ಕರಣೆ ಆಗಿಲ್ಲ, ಹೀಗಾಗಿ, ಪ್ರಕ್ರಿಯೆ ನಡೆಸಲಾಗುತ್ತಿದೆ. ಪ್ರಸ್ತುತ ವೋಟರ್ ಐಡಿ ಹೊಂದಿದ್ದರೂ ಬಿಎಲ್‌ಒಗಳು ನೀಡುವ ಎನ್ಯೂಮರೇಷನ್ ಅರ್ಜಿಯನ್ನು ಭರ್ತಿ ಮಾಡಿ ನೀಡಬೇಕು. ಎರಡು ಪ್ರತಿ ನೀಡಲಾಗುತ್ತದೆ, ಒಂದನ್ನು ಭರ್ತಿ ಮಾಡಿ ಇನ್ನೊಂದನ್ನು ನಮ್ಮ ಬಳಿ ಇರಿಸಿಕೊಳ್ಳಬೇಕು.

■ ಎಸ್‌ಐಆರ್‌ನಲ್ಲಿ ಯಾವೆಲ್ಲಾ ದಾಖಲೆಗಳು ಬೇಕಾಗಬಹುದು? ನನ್ನ ಹೆಸರು 2002ರ ಮೂಲ ಮತದಾರರ ಪಟ್ಟಿಯಲ್ಲಿ ಇಲ್ಲದಿದ್ದರೆ ಏನು ಮಾಡಬೇಕು?

ಸಾಮಾನ್ಯವಾಗಿ ಆಧಾರ್ ಕಾರ್ಡ್, ಪಾಸ್‌ಪೋರ್ಟ್, ಚಾಲನಾ ಪರವಾನಗಿ, ಪಾಸ್‌ಪೋರ್ಟ್ ಮುಂತಾದ ಗುರುತಿನ ಚೀಟಿಗಳು ಮತ್ತು ವಿಳಾಸದ ಪುರಾವೆಗಳನ್ನು ಕೇಳಲಾಗುತ್ತದೆ. 2002ರ ಮೂಲ ಪಟ್ಟಿಯಲ್ಲಿ ನಿಮ್ಮ ಹೆಸರು ಇಲ್ಲದಿದ್ದರೆ ನಿಮ್ಮ ಹೆತ್ತವರು ಅಥವಾ ಅಜ್ಜ-ಅಜ್ಜಿಯರ ವಿವರಗಳನ್ನು ನೀಡಿ ನಿಮ್ಮ ಸ್ಥಳೀಯ ವಿಳಾಸವನ್ನು ಮ್ಯಾಪ್ ಮಾಡಿಕೊಳ್ಳಲು ಅವಕಾಶ ಇದೆ. ಇದಕ್ಕೆ ನಿಮ್ಮ ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಸಹಾಯ ಪಡೆಯಿರಿ. ಆ ಪಟ್ಟಿ ರಾಜ್ಯ ಚುನಾವಣೆ ಆಯೋಗದ ವೆಬ್‌ಸೈಟ್‌ನಲ್ಲಿ (https://ceo.karnataka.gov.in/) ಲಭ್ಯವಿದೆ.

■ ನಾನು ವಿದೇಶದಲ್ಲಿದ್ದರೆ ಅಥವಾ ಬೇರೆ ನಗರದಲ್ಲಿದ್ದರೆ ನನ್ನ ಪರವಾಗಿ ಯಾರಾದರೂ ಅರ್ಜಿ ಸಲ್ಲಿಸಬಹುದಾ? ಅಥವಾ ನಾನೇ ಇರಬೇಕಾ?

ಎಸ್‌ಐಆರ್ ಪ್ರಕ್ರಿಯೆಯ ಸಂದರ್ಭದಲ್ಲಿ ನೀವು ಲಭ್ಯವಿಲ್ಲದಿದ್ದರೆ, ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಅಥವಾ ಸಂಬಂಧಪಟ್ಟ ಅಧಿಕಾರಿಗಳ ನಿಯಮಾವಳಿಗಳ ಪ್ರಕಾರ, ನಿಮ್ಮ ಕುಟುಂಬದ ಸದಸ್ಯರು ನಿಮ್ಮ ಪರವಾಗಿ ಅಗತ್ಯ ದಾಖಲೆಗಳನ್ನು ಒದಗಿಸಿ ಪ್ರಕ್ರಿಯೆ ಪೂರ್ಣಗೊಳಿಸಬಹುದು. ಬಿಎಲ್‌ಒ ನೀಡುವ ಎನುಮರೇಷನ್ ಫಾರಂನ್ನು 18 ವರ್ಷ ಮೇಲ್ಪಟ್ಟ ಕುಟುಂಬದ ಸದಸ್ಯರು ಭರ್ತಿ ಮಾಡಿ ನೀಡಿದರೆ ಸಾಕು.

■ ಎಸ್‌ಐಆರ್ ಪ್ರಕ್ರಿಯೆಯಲ್ಲಿ ನನ್ನ ಹೆಸರು ಪಟ್ಟಿಯಿಂದ ಕೈಬಿಡಲ್ಪಟ್ಟರೆ ಏನು ಮಾಡಬೇಕು?

ಎಸ್‌ಐಆರ್ ಹಲವು ಹಂತದಲ್ಲಿ ನಡೆಯುವ ಪ್ರಕ್ರಿಯೆಯಾಗಿದೆ. ಈಗ ಮೊದಲ ಹಂತದಲ್ಲಿ ಮನೆಮನೆ ಭೇಟಿ ಮಾಡಲಾಗುತ್ತಿದೆ. ಇಲ್ಲಿ ಅರ್ಜಿಯನ್ನು ನಾವೇ ಆನ್‌ಲೈನ್ ಮೂಲಕ ಭರ್ತಿ ಮಾಡಿ ನೀಡಬಹುದು. ಬಿಎಲ್‌ಒಗಳು ಭೇಟಿ ನೀಡಿದಾಗ ಕೊಡಬಹುದು ಅಥವಾ ಅರ್ಜಿ ಭರ್ತಿ ಮಾಡಿ ಬೂತ್ ಲೆವೆಲ್ ಏಜೆಂಟರಿಗೂ (ರಾಜಕೀಯ ಪಕ್ಷದವರು) ನೀಡಬಹುದು. ಒಬ್ಬ ಬಿಎಲ್‌ಒ ನಿತ್ಯ 50 ಅರ್ಜಿಗಳನ್ನು ಪಡೆಯಬಹುದು. ಈ ಮೂರರಲ್ಲೂ ವಿಫಲರಾಗಿ ಹೆಸರು ಮತದಾರರ ಪಟ್ಟಿಯಿಂದ ಕೈಬಿಟ್ಟರೆ ಭಯ ಪಡುವ ಅಗತ್ಯವಿಲ್ಲ. ಈ ಬಗ್ಗೆ ಚುನಾವಣೆ ಅಧಿಕಾರಿಗಳ ಗಮನಕ್ಕೆ ತರಬಹುದು. ಹೆಸರು ಮತದಾರರ ಪಟ್ಟಿಯ ಕರಡು ಪ್ರತಿಯಲ್ಲಿ ಇರದಿದ್ದರೆ, ನೀವು ಹೊಸದಾಗಿ ಹೆಸರು ಸೇರ್ಪಡೆಗಾಗಿ ಆನ್‌ಲೈನ್ ಮೂಲಕ ಅಥವಾ ಸಂಬಂಧಪಟ್ಟ ಅಧಿಕಾರಿಗಳ ಬಳಿ ಅರ್ಜಿ ಸಲ್ಲಿಸಬಹುದು.

■ ನಮ್ಮ ಏರಿಯಾ ಬಿಎಲ್‌ಒ ಯಾರೆಂದು ಗೊತ್ತಿಲ್ಲ. ಹೇಗೆ ತಿಳಿಯುವುದು?

ಈ ಲಿಂಕ್ ಬಳಸಿ https://ceo.karnataka.gov.in/vfc/details/ ನಿಮ್ಮ ವ್ಯಾಪ್ತಿಯ ಬಿಎಲ್‌ಒಗಳು ಸೇರಿದಂತೆ ಇನ್ನಿತರ ಮಾಹಿತಿಗಳನ್ನು ಪಡೆಯಬಹುದು.

■ ಮದುವೆ ಆಗಿ ನನ್ನ ಗಂಡನ ಊರಲ್ಲಿ ವಾಸವಾಗಿದ್ದೇನೆ. ವೋಟರ್ ಐಡಿ ತವರು ಮನೆಯಲ್ಲೇ ಇದೆ. ಅದನ್ನು ವರ್ಗಾಯಿಸುವುದು ಹೇಗೆ? ಅದಕ್ಕೇನು ಮಾಡಬೇಕು?

ಫಾರಂ 8 ವಿಳಾಸ ಬದಲಾವಣೆಗೆ, ಫಾರಂ 6 ಹೊಸದಾಗಿ ಹೆಸರು ಸೇರ್ಪಡೆಗೆ ಇದೆ. ಆದರೆ, ಪ್ರಸ್ತುತ ಈ ಅವಕಾಶವಿಲ್ಲ, ಆದುದ್ದರಿಂದ ಹಳೆ ಜಾಗದಲ್ಲೇ ಹೆಸರು ಮುಂದುವರಿಸಬಹುದು. ನಂತರ ಅದರನ್ನು ಬದಲಿಸಿಕೊಳ್ಳಲು ಅವಕಾಶ ಇರುತ್ತದೆ.

■ ಈ ಮುಂಚೆ ಬಾಡಿಗೆ ಮನೆಯಲ್ಲಿದ್ದೆ. ಮತದಾರರ ಪಟ್ಟಿಯಲ್ಲಿ ಅದೇ ವಿಳಾಸ ಇದೆ. ಬಿಎಲ್‌ಒಗಳು ಅಲ್ಲಿಗೆ ಭೇಟಿ ನೀಡುವುದರಿಂದ ನನ್ನ ಹೆಸರು ಪಟ್ಟಿಯಿಂದ ತಪ್ಪಿ ಹೋಗುತ್ತಾ?

ಒಂದುವೇಳೆ, ಅದೇ ವಿಳಾಸದಲ್ಲಿ ಮತದಾರರ ಗುರುತಿನ ಚೀಟಿ ಮುಂದುವರಿಸಬೇಕಾದರೆ, ಸಂಬಂಧಪಟ್ಟ ಬಿಎಲ್‌ಒಗಳ ಗಮನಕ್ಕೆ ತಂದು ನೀಡುವ ಅರ್ಜಿಯನ್ನು ಭರ್ತಿ ಮಾಡಿ ನೀಡಬೇಕು. ವಿಳಾಸ ಬದಲಿಸಬೇಕಾದರೆ ಅದಕ್ಕೆ ನೀಡಲಾಗುವ ಅರ್ಜಿಯನ್ನು ಭರ್ತಿ ಮಾಡಿ ಕೊಡಬೇಕಾಗುತ್ತದೆ. ಆದರೆ, ಪ್ರಸ್ತುತ ಹೊಸದಾಗಿ ಹೆಸರು ಸೇರಿಸಲು ನೀಡಿದ್ದ ಕಾಲಾವಕಾಶ ಮುಗಿದಿದೆ.

■ ಮತದಾರರ ಪಟ್ಟಿಯಿಂದ ಹೆಸರು ಡಿಲೀಟ್ ಮಾಡೋದೆ ದೊಡ್ಡ ಪ್ರಕ್ರಿಯೆ ಎಂಬ ಕಾರಣಕ್ಕೆ ಮೂರ್ನಾಲ್ಕು ಕಡೆ ವೋಟರ್ ಐಡಿ ಇವೆ. ಅದರಲ್ಲಿ ಎಲ್ಲಿ ಹೆಸರು ಉಳಿಯುತ್ತೆ? ಅದಕ್ಕೇನು ಮಾಡೋದು.

ಎಲ್ಲಿಯೇ ಹೆಸರು ಉಳಿಸಿಕೊಳ್ಳಬೇಕಾದರೂ ಬಿಎಲ್‌ಒ ನೀಡುವ ಅರ್ಜಿಯನ್ನು ಭರ್ತಿ ಮಾಡಿ ನೀಡಲೇಬೇಕು. ಇಲ್ಲದಿದ್ದರೆ ಎಲ್ಲ ಕಡೆಗಳಲ್ಲಿ ಹೆಸರು ಡಿಲೀಟ್ ಆಗುತ್ತದೆ.

■ ಕಳೆದ ಎರಡು ಸಲ ವೋಟ್ ಮಾಡಿಲ್ಲ, ಹಾಗಾದರೆ ನನ್ನ ಹೆಸರು ಡಿಲೀಟ್ ಆಗುತ್ತಾ?

ಅನೇಕರಲ್ಲಿ ಈ ಗೊಂದಲ ಇದೆ. ಆದರೆ, ವಾಸ್ತವದಲ್ಲಿ ಕಳೆದ ಸಲದ ಮತದಾನಕ್ಕೂ ಹೆಸರು ಸೇರಿಸುವುದು ಅಥವಾ ತೆಗೆಯುವುದಕ್ಕೆ ಸಂಬಂಧವಿಲ್ಲ, ಹೀಗಾಗಿ ಗಾಬರಿ ಆಗುವುದು ಬೇಡ.

ಎಸ್‌ಐಆರ್ ಪ್ರಕ್ರಿಯೆ ತುಂಬ ಸರಳವಾಗಿದೆ. ಯಾರೂ ಗೊಂದಲಕ್ಕೆ ಒಳಗಾಗುವ ಅಗತ್ಯವಿಲ್ಲ, ಮುಂದಿನ ದಿನಗಳಲ್ಲಿ ಎಲ್ಲವೂ ಡಿಜಿಟಲೈಸ್ ಆಗಲಿದ್ದು, ಪ್ರತಿಯೊಂದು ಮಾಹಿತಿ ಆನ್‌ಲೈನ್‌ನಲ್ಲೇ ಲಭ್ಯವಾಗಲಿದೆ. ಮತದಾರರ ಪಟ್ಟಿಯಿಂದ ಹೊರಗುಳಿದರೂ ಚಿಂತಿಸಬೇಕಿಲ್ಲ, ಮರು ಸೇರಿಸುವ ಅವಕಾಶವಿದೆ.

- ವಿ.ಅಭಿಷೇಕ್
ಅಪರ ಜಿಲ್ಲಾಧಿಕಾರಿ
ಶಿವಮೊಗ್ಗ

ನಾನು ಬೆಂಗಳೂರು ಅಥವಾ ಬೇರೆಯ ನಗರದಲ್ಲಿ ವಾಸಿಸುತ್ತಿದ್ದೇನೆ. ನನ್ನ ಮತ ಕೆಲಸ ಮಾಡುವ ಜಾಗದಲ್ಲಿರುವುದು ಉತ್ತಮವೋ ಅಥವಾ ಊರಲ್ಲೇ ಬೆಸ್ಟೋ?

ಅದು ಆಯಾ ವ್ಯಕ್ತಿಗೆ ಬಿಟ್ಟದ್ದು. ಅವರೇ ಈ ಬಗ್ಗೆ ನಿರ್ಧರಿಸಬೇಕಾಗುತ್ತದೆ. ಎಲ್ಲಿದ್ದರೆ ಉತ್ತಮ, ಮತದಾನ ಮಾಡಲು ಸಾಧ್ಯ ಎಂದು ಸ್ಪಷ್ಟ ನಿರ್ಣಯಕ್ಕೆ ಬರಬೇಕು. ನಂತರ ಅರ್ಜಿಯನ್ನು ನೀಡಬೇಕು. ಎಲ್ಲಿ ನೀಡಲಾಗುತ್ತದೋ ಅಲ್ಲಿಯ ಮತದಾರರ ಪಟ್ಟಿಯಲ್ಲಿ ಹೆಸರು ಉಳಿಯಲಿದೆ. ಉಳಿದೆಡೆ ತೆಗೆದುಹಾಕಲಾಗುವುದು.

aatish.kannale@timesofindia.com

ಬಾಹ್ಯಾಕಾಶದ ಕಾರ್ಖಾನೆಯೂ ಕ್ಷುದ್ರಗ್ರಹದ ಉಪದ್ರವವೂ

ಟೆಕ್ ನೋಟ
ಟಿ. ಜಿ. ಶ್ರೀನಿಧಿ

ರಾಕೆಟ್ಟು- ಉಪಗ್ರಹಗಳನ್ನೆಲ್ಲ ತಯಾರಿಸಿ ಉಡಾಯಿಸುವುದರಿಂದ ಹಿಡಿದು ಉಪಗ್ರಹಗಳ ಮೂಲಕ ಇಂಟರ್ನೆಟ್ ಸಂಪರ್ಕ ಕೊಡುವವರೆಗೆ ಹಲವು ಕೆಲಸಗಳನ್ನು ಮಾಡುತ್ತಿರುವ ಸಂಸ್ಥೆ ಸ್ಪೇಸ್ ಎಕ್ಸ್. ಈಚೆಗೆ ಈ ಸಂಸ್ಥೆಯ ಷೇರುಗಳು ಮಾರುಕಟ್ಟೆಗೆ ಬಂದ ಬೆನ್ನಲ್ಲೇ ಅದರ ಸ್ಥಾಪಕ ಎಲಾನ್ ಮಸ್ಕ್ ಸಂಪತ್ತು ಕೂಡ ರಾಕೆಟ್ಟಿನ ಹಾಗೆ ಮೇಲೇರಿದೆ. ಪ್ರಪಂಚದಲ್ಲೇ ಮೊತ್ತಮೊದಲ ಬಾರಿಗೆ ಟ್ರಿಲಿಯನೇರ್ ಪಟ್ಟಕ್ಕೇರಿದ ವ್ಯಕ್ತಿಯೆಂಬ ಹೆಗ್ಗಳಿಕೆ ಆತನ ಪಾಲಿಗೆ ಬಂದಿದೆ.

ಟ್ರಿಲಿಯನ್ ಎಂದರೆ 1ರ ಮುಂದೆ ಹನ್ನೆರಡು ಸೊನ್ನೆ ಹಾಕಿದಷ್ಟು ದೊಡ್ಡ ಸಂಖ್ಯೆ. ಡಾಲರಿಗೆ ತೊಂಬತ್ತೇ ರೂಪಾಯಿ ಲೆಕ್ಕ ಹಿಡಿದರೂ ಒಂದು ಟ್ರಿಲಿಯನ್ ಡಾಲರ್ ಎಂದರೆ ತೊಂಬತ್ತು ಲಕ್ಷ ಕೋಟಿ ರೂಪಾಯಿಗಳು. ನಮ್ಮ ದೇಶದಲ್ಲಿರುವ ಜನರಿಗೆಲ್ಲ ಹಂಚಿದರೆ ಒಬ್ಬರಿಗೆ 60 ಸಾವಿರ ರೂಪಾಯಿ ಸಿಗಬಹುದಾದಷ್ಟು ದೊಡ್ಡ ಮೊತ್ತ.

ಇದಕ್ಕಿಂತ ಸಾವಿರ ಪಾಲು ದೊಡ್ಡದು ಕ್ವಾಡ್ರಿಲಿಯನ್, ಒಂದರ ಮುಂದೆ 15 ಸೊನ್ನೆ ಹಾಕಿದರೆ ಸಿಗುವ ಸಂಖ್ಯೆ. ಕ್ವಾಡ್ರಿಲಿಯನೇರ್ ಪಟ್ಟಕ್ಕೇರುವುದೂ ಸಾಧ್ಯವೆಂದು ಮಸ್ಕ್ ಹೇಳಿದ್ದು ಕೂಡ ಸಾಕಷ್ಟು ಸುದ್ದಿಯಾಗಿತ್ತು. ಚಂದ್ರನ ಮೇಲೆ, ಮಂಗಳನ ಮೇಲೆಲ್ಲ ಕಾರ್ಖಾನೆಗಳನ್ನು ತೆರೆದರೆ ಇದು ಸಾಧ್ಯವಾಗಬಹುದೆನ್ನುವುದು ಆತನ ಹೇಳಿಕೆ.

ಭೂಮಿಯ ಆಸ್ತಿ ಸಾಲದೆಂದು ಬಾಹ್ಯಾಕಾಶದಲ್ಲೂ ಫ್ಯಾಕ್ಟರಿ ತೆರೆದು ಕ್ವಾಡ್ರಿಲಿಯನ್ ಸಂಪಾದಿಸುವ ಯೋಚನೆ ಟ್ರಿಲಿಯನೇರುಗಳಿಗಷ್ಟೇ ಬರುತ್ತದೋ ಏನೋ. ಅದಕ್ಕೆ ಬೇಕಾದ ಬಂಡವಾಳ ಅಲ್ಲೇ ಸಿಗುವ ಹಾಗಿದ್ದರೆ ಬರಿಯ ಫ್ಯಾಕ್ಟರಿಯಷ್ಟೇ ಏಕೆ, ಟೌನ್‌ಶಿಪ್ಪನ್ನೂ ಕಟ್ಟಬಹುದು. ಆದರೆ ಬಾಹ್ಯಾಕಾಶದಲ್ಲಿ ಬಂಡವಾಳವೇ?

ರೂಪಾಯಿ- ಡಾಲರು ಅಲ್ಲಿ ನಡೆಯದಿರಬಹುದು. ಆದರೆ, ಅದಕ್ಕಿಂತ ಅಮೂಲ್ಯವಾದ ಸಂಪತ್ತು ಬಾಹ್ಯಾಕಾಶದಲ್ಲಿದೆ!

ಬಾಹ್ಯಾಕಾಶ ಅಷ್ಟೆಲ್ಲ ಅಗಾಧವಾಗಿದೆಯಲ್ಲ, ಅಲ್ಲಿ ಈ ಸಂಪತ್ತನ್ನು ಹುಡುಕುವುದು ಹೇಗೆ? ಈ ಕುರಿತ ಆಲೋಚನೆ ಬಹಳ ಸಮಯದಿಂದಲೇ ನಡೆದಿದೆ. ಕನ್ನಡದ ಖ್ಯಾತ ಬರಹಗಾರ ಡಾ. ರಾಜಶೇಖರ ಭೂಸನೂರಮಠರಂಥವರು ಈ ಕುರಿತು ರೋಚಕ ಕತೆಗಳನ್ನು ಬರೆದಿದ್ದಾರೆ. ವಿಜ್ಞಾನಿಗಳಂತೂ ಗ್ರಹ-ಉಪಗ್ರಹಗಳ ಜತೆಗೆ ಕ್ಷುದ್ರಗ್ರಹಗಳನ್ನೂ ಬಿಡದೆ ಅಧ್ಯಯನ ನಡೆಸಿದ್ದಾರೆ.

ಕ್ಷುದ್ರಗ್ರಹ, ಅಂದರೆ ಆಸ್ಟೆರಾಯ್ಡ್‌ಗಳು, ಪ್ರಮುಖವಾಗಿ ಮಂಗಳ ಹಾಗೂ ಗುರುಗ್ರಹದ ನಡುವೆ ಇದ್ದುಕೊಂಡು ಸೂರ್ಯನ ಸುತ್ತ ಸುತ್ತುವ ಆಕಾಶಕಾಯಗಳು. ಕೆಲವೊಮ್ಮೆ ಭೂಮಿಯ ಆಸುಪಾಸಿನಲ್ಲೂ ಕಾಣಿಸಿಕೊಳ್ಳುವ ಇವು ಮೂಲತಃ ಬಾಹ್ಯಾಕಾಶದಲ್ಲಿ ಚಲಿಸುವ ಬೃಹತ್ ಬಂಡೆಗಳು. ಆ ಬಂಡೆಗಳಲ್ಲಿ ಕಲ್ಲಿನ ಜತೆಗೆ ಮಂಜುಗಡ್ಡೆ ಇರುವುದುಂಟು, ಅಮೂಲ್ಯ ಲೋಹಗಳೂ ಇರುವುದುಂಟು!

ಭಾರೀ ಮೌಲ್ಯದ ಲೋಹಗಳಿವೆ ಎನ್ನಲಾಗಿರುವ ಕ್ಷುದ್ರಗ್ರಹಗಳೇನೋ ಬೇಕಾದಷ್ಟಿವೆ. ಆ ಪೈಕಿ '16 Psyche' ಎನ್ನುವುದು ಹೆಸರುವಾಸಿ. ಸೈಕ್ ಅಲ್ಲ, ಇದನ್ನು 'ಸೈಕೀ' ಅಂತ ಕರೆಯಬೇಕಂತೆ. 'ಸೈಕೀ' ಎನ್ನುವುದು ಗ್ರೀಕ್ ದೇವತೆಯೊಬ್ಬಳ ಹೆಸರು. 1852ರಲ್ಲಿ ಪತ್ತೆಯಾದ ಸಮಯಕ್ಕೆ ಇದು ಮನುಷ್ಯರಿಗೆ ತಿಳಿದಿದ್ದ 16ನೇ ಕ್ಷುದ್ರಗ್ರಹವಾದ್ದರಿಂದ ಅದಕ್ಕೆ 16 ಎಂಬ ಪೂರ್ವಪ್ರತ್ಯಯ ಸೇರಿಸಿದ್ದಾರೆ.

ಈ ಪುರಾಣವೆಲ್ಲ ಹಾಗಿರಲಿ, ಸೈಕೀ ಹೆಸರುವಾಸಿಯಾಗುವುದಕ್ಕೆ ಕಾರಣ ಅದರಲ್ಲಿರಬಹುದಾದ ಲೋಹಗಳ ಮೌಲ್ಯ. ಬೆಂಗಳೂರಿನಿಂದ ಮೈಸೂರಿನವರೆಗಿನ ದೂರಕ್ಕಿಂತ ಹೆಚ್ಚು ಉದ್ದವಿರುವ ಈ ಕ್ಷುದ್ರಗ್ರಹದಲ್ಲಿ ಭಾರೀ ಪ್ರಮಾಣದ ಲೋಹಗಳ ನಿಕ್ಷೇಪವಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಯಾವ ಲೋಹ ಎಷ್ಟಿದೆ ಎಂದು ನಿಖರವಾಗಿ ಗೊತ್ತಿಲ್ಲದಿದ್ದರೂ ಸೈಕೀಯಲ್ಲಿರುವ ಲೋಹಗಳ ಒಟ್ಟು ಮೌಲ್ಯ ಸುಮಾರು ಒಂದು ಲಕ್ಷ ಕ್ವಾಡ್ರಿಲಿಯನ್ ಡಾಲರುಗಳಷ್ಟಿರಬಹುದು ಎಂದು ಒಮ್ಮೆ ಅಂದಾಜಿಸಲಾಗಿತ್ತು.

ಇಷ್ಟೆಲ್ಲ ನಿಧಿ ಇಟ್ಟುಕೊಂಡಿರುವ ಸೈಕೀಯನ್ನು ಒಮ್ಮೆ ಹತ್ತಿರದಿಂದ ಗಮನಿಸಿದರೆ ಚೆನ್ನಾಗಿರುತ್ತದೆ, ಅಲ್ಲವೇ? ಮುಂದೊಮ್ಮೆ ಬಾಹ್ಯಾಕಾಶದಲ್ಲಿ ಕಾರ್ಖಾನೆ ತೆರೆಯುವ ಸಮಯ ಬಂದರೆ ಅದಕ್ಕೆ ಬೇಕಾದ ಕಚ್ಚಾವಸ್ತುಗಳ ಗಣಿಗಾರಿಕೆಯನ್ನೂ ಅಲ್ಲಿಯೇ ಮಾಡುವ ಬಗ್ಗೆ ಯೋಚಿಸುವುದಕ್ಕೂ ಇದರಿಂದ ಸಹಾಯವಾಗುತ್ತದೆ. ಗಣಿಗಾರಿಕೆ ಆಮೇಲೆ ನೋಡೋಣ, ಸದ್ಯ ಸೈಕೀಯನ್ನು ನೋಡೋಣ ಎಂದುಕೊಂಡಿರುವ ನಾಸಾ 2023ರಲ್ಲಿ ಸೈಕೀ ಕಡೆಗೆ ಅಂತರಿಕ್ಷಯಾನವೊಂದನ್ನು ರವಾನಿಸಿದೆ. 2026ರಲ್ಲಿ ತನ್ನ ಗಮ್ಯ ತಲುಪಲಿರುವ ಆ ಯಾನದ ಹೆಸರೂ ಸೈಕೀ ಅಂತಲೇ. ಈ ಸೈಕೀಯನ್ನು ಆ ಸೈಕೀಯ ಕಡೆಗೆ ಹಾರಿಬಿಡಲು ಸ್ಪೇಸ್ ಎಕ್ಸ್ ಸಂಸ್ಥೆಯ ರಾಕೆಟ್ಟನ್ನೇ ಬಳಸಲಾಗಿತ್ತು ಎನ್ನುವುದು ವಿಶೇಷ.

ಕ್ಷುದ್ರಗ್ರಹಗಳ ಬೆನ್ನು ಹತ್ತುವುದು ಹೊಸ ವಿಷಯವೇನಲ್ಲ. 2023ರಲ್ಲಿ ನಾಸಾದ ಅಂತರಿಕ್ಷಯಾನವೊಂದು "Bennu' ಎಂಬ ಕ್ಷುದ್ರಗ್ರಹದಿಂದ ಕಲ್ಲು-ಮಣ್ಣಿನ ಮಾದರಿಯನ್ನು ಸಂಗ್ರಹಿಸಿ ತಂದಿತ್ತು. ಹಾಗಾದರೆ ಮುಂದೊಮ್ಮೆ ಸೈಕೀಯಂಥ ಕ್ಷುದ್ರಗ್ರಹಗಳಿಂದ ಚಿನ್ನ-ಬೆಳ್ಳಿಯನ್ನೆಲ್ಲ ಎತ್ತಿಕೊಂಡು ತರಬಹುದೇ? ಹಾಗೆ ತಂದರೆ ಅವುಗಳ ಬೆಲೆಯೇರಿಕೆಯು ಬಗ್ಗೆ ತಲೆಕೆಡಿಸಿಕೊಳ್ಳುವುದು ಕಡಿಮೆಯಾಗಬಹುದೇ? ತರುವ ಸಾಧ್ಯಾಸಾಧ್ಯತೆ ಏನೇ ಇರಲಿ, ಅಮೂಲ್ಯ ಲೋಹಗಳು ಅಷ್ಟೆಲ್ಲ ಭಾರೀ ಪ್ರಮಾಣದಲ್ಲಿ ಭೂಮಿಗೆ ಬಂದರೆ ಬೇಡಿಕೆಗಿಂತ ಪೂರೈಕೆಯೇ ಹೆಚ್ಚಾಗಿ ಚಿನ್ನ-ಬೆಳ್ಳಿಗೆ ಕಡಲೆಪುರಿಯ ಬೆಲೆಯೂ ಸಿಗದೆ ಹೋಗಬಹುದು ಎನ್ನುವುದು ತಜ್ಞರ ಅನಿಸಿಕೆ. ಮಾರ್ಕೆಟ್ ಕ್ರ್ಯಾಶ್ ಅನ್ನುತ್ತಾರಲ್ಲ, ಅಂಥ ಸನ್ನಿವೇಶಕ್ಕೆ ಇದು ಕಾರಣವಾಗಬಹುದು.

ಮಾರ್ಕೆಟ್ ಮಾತ್ರವೇ ಅಲ್ಲ, ಕ್ಷುದ್ರಗ್ರಹಗಳೂ ಕ್ರ್ಯಾಶ್ ಆಗಬಹುದು. ಬಾಹ್ಯಾಕಾಶದಿಂದ ಜಾರಿ ಬಂದು ಅವು ನಮ್ಮ ಭೂಮಿಗೆ ಅಪ್ಪಳಿಸಬಹುದು. ಈ ಸಾಧ್ಯತೆಯಿರುವುದರಿಂದಲೇ ಕ್ಷುದ್ರಗ್ರಹಗಳ ಬಗ್ಗೆ ಕುತೂಹಲದ ಜತೆ ಆತಂಕವೂ ಇದೆ. ಈ ಆತಂಕ ಅಕಾರಣವಾದದ್ದೇನೂ ಅಲ್ಲ, ಹಿಂದೆ ಹಲವಾರು ಸನ್ನಿವೇಶಗಳಲ್ಲಿ ಕ್ಷುದ್ರಗ್ರಹಗಳು ನಮ್ಮ ಭೂಮಿಗೆ ಅಪ್ಪಳಿಸಿವೆ. ಡೈನೋಸಾರುಗಳ ವಿನಾಶಕ್ಕೆ ಕಾರಣವಾದದ್ದೂ ಇಂಥದ್ದೇ ಘಟನೆಯಂತೆ. ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ಥಾನಗಳಲ್ಲೂ ಕ್ಷುದ್ರಗ್ರಹ ಬಡಿದು ಉಂಟಾದ ಬೃಹದಾಕಾರದ ಕುಳಿಗಳಿವೆ. ಬಿಳಿಗಿರಿರಂಗನಬೆಟ್ಟ, ನೀಲಗಿರಿ ಪರ್ವತಶ್ರೇಣಿ ಹಾಗೂ ಕೊಡೈಕೆನಾಲ್ ನಡುವೆಯೂ ಇಂಥದ್ದೊಂದು ಕುಳಿ ಇದೆ ಎನ್ನಲಾಗಿದೆ. ಕಳೆದ ಶತಮಾನದ ಪ್ರಾರಂಭದಲ್ಲಿ ಸೈಬೀರಿಯಾದ ತುಂಗುಸ್ಕಾ ಎಂಬಲ್ಲಿಗೆ ಕ್ಷುದ್ರಗ್ರಹವೊಂದು ಅಪ್ಪಳಿಸಿದ್ದು ಸಾಕಷ್ಟು ಸುದ್ದಿಯಾದ ಘಟನೆ.

ಇಂದು, ಜೂನ್ 30, ಆ ಘಟನೆಯ ನೆನಪಿನಲ್ಲೇ 'ಅಂತಾರಾಷ್ಟ್ರೀಯ ಕ್ಷುದ್ರಗ್ರಹ ದಿನ'ವನ್ನು ಆಚರಿಸಲಾಗುತ್ತಿದೆ. ಕ್ಷುದ್ರಗ್ರಹಗಳು, ಅವುಗಳ ವೈಜ್ಞಾನಿಕ ಮಹತ್ವ, ಅವುಗಳಲ್ಲಿರಬಹುದಾದ ಸಂಪನ್ಮೂಲಗಳ ಪ್ರಮಾಣದ ಜತೆಗೆ ಅವುಗಳಿಂದ ನಮಗಿರುವ ಅಪಾಯದ ಬಗೆಗೂ ಅರಿವು ಮೂಡಿಸುವುದು ಈ ದಿನಾಚರಣೆಯ ಉದ್ದೇಶ.

ಅಂತರಿಕ್ಷದ ಅಗಾಧತೆಯಲ್ಲಿ ಸಂಚರಿಸುವ ಈ ಆಕಾಶಕಾಯಗಳನ್ನು ಪತ್ತೆಹಚ್ಚಿ, ಅವುಗಳ ಮೇಲೆ ನಿಗಾ ಇಡಲು ವಿಜ್ಞಾನಿಗಳು ಸಾಕಷ್ಟು ಕೆಲಸ ಮಾಡುತ್ತಾರೆ. ಎಐ ತಂತ್ರಜ್ಞಾನವೂ ಅವರಿಗೆ ನೆರವಾಗುತ್ತಿದೆ. ಇಂಥ ಪ್ರಯತ್ನಗಳಿಂದಲೇ ಅವರು '99942 ಅಪೋಫಿಸ್' ಎಂಬ ಕ್ಷುದ್ರಗ್ರಹ 2029ರಲ್ಲಿ ಭೂಮಿಯ ತೀರಾ ಸಮೀಪಕ್ಕೆ ಬರಲಿದೆ ಎನ್ನುವುದನ್ನು ಕಂಡುಕೊಂಡಿದ್ದಾರೆ.

'ನಿಯರ್ ಅರ್ಥ್ ಆಬ್ಜೆಕ್ಟ್'ಗಳೆಂದು (NEO) ಕರೆಸಿಕೊಳ್ಳುವ ಇಂಥ ಆಕಾಶಕಾಯಗಳು ಅಪ್ಪಿತಪ್ಪಿ ಭೂಮಿಗೆ ಅಪ್ಪಳಿಸಿದರೆ ಏನಾಗಬಹುದು? ಸಣ್ಣಪುಟ್ಟ ಕಲ್ಲುಗಳಿಂದ ಹೆಚ್ಚು ಅಪಾಯ ಆಗದಿದ್ದರೂ ದೊಡ್ಡ ಆಕಾಶಕಾಯಗಳ ಅಪ್ಪಳಿಸುವಿಕೆ ದೊಡ್ಡ ಪ್ರಮಾಣದ ಹಾನಿಯನ್ನೇ ಉಂಟುಮಾಡಬಹುದು. ಡೈನೋಸಾರುಗಳನ್ನು ನಾಮಾವಶೇಷ ಮಾಡಿದಂಥ ಕ್ಷುದ್ರಗ್ರಹವೇನಾದರೂ ಇನ್ನೊಮ್ಮೆ ಬಂದರೆ ಮಾನವರ ಕತೆಯೂ ಹಾಗೆಯೇ ಆಗಬಹುದು.

ಇದೆಲ್ಲ ಸಾಧ್ಯತೆ ಇರುವುದರಿಂದಲೇ ಎಲಾನ್ ಮಸ್ಕ್‌ನಂಥ ಸಾಹಸಿಗಳು ಮನುಷ್ಯರನ್ನು ಬೇರೆ ಗ್ರಹಗಳಿಗೂ ಕರೆದೊಯ್ಯಲು ಹೊರಟಿದ್ದಾರೆ. ಮನುಷ್ಯರು ಹೋಗಬೇಕಾದರೆ ಬಾಹ್ಯಾಕಾಶದಲ್ಲಿ ಟೌನ್‌ಶಿಪ್ಪುಗಳೂ ಬೇಕು, ಅಲ್ಲಿನ ನಿವಾಸಿಗಳಿಗೆ ಬೇಕಾಗುವುದನ್ನೆಲ್ಲ ಪೂರೈಸಲು ಫ್ಯಾಕ್ಟರಿಗಳೂ ಬೇಕು. ಇದನ್ನೆಲ್ಲ ಕಲ್ಪಿಸಿಕೊಳ್ಳಲು-ಕಾರ್ಯಗತಗೊಳಿಸಲು ಟ್ರಿಲಿಯನ್ನು ಕ್ವಾಡ್ರಿಲಿಯನ್ನುಗಳೂ ಬೇಕು!

(ಲೇಖಕರು: ವಿಜ್ಞಾನ ಬರಹಗಾರರು)

25 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ »08

ಕಾಂಗ್ರೆಸ್ ಶಾಸಕರಿಗೆ ಭರಪೂರ ಅನುದಾನ | ಬಿಜೆಪಿ ಶಾಸಕರಿಗೆ 40-60 ಕೋಟಿ ರೂ. ಅನುದಾನ | 16 ಬಿಜೆಪಿ ಕ್ಷೇತ್ರಗಳ ಕಡೆಗಣನೆ ಆರೋಪ

₹2000 ಕೋಟಿ ಅನುದಾನದಲ್ಲಿ ತಾರತಮ್ಯ

■ ವಿಕ ಸುದ್ದಿಲೋಕ ಬೆಂಗಳೂರು

ರಾಜಧಾನಿಯಲ್ಲಿ ಹದಗೆಟ್ಟಿರುವ ರಸ್ತೆಗಳ ಅಭಿವೃದ್ಧಿ ಹಾಗೂ ಇತರೆ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರಾಜ್ಯ ಸರಕಾರವು 2000 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್‌ಗೆ ಅನುಮೋದನೆ ನೀಡಿದ್ದು, ಈ ಅನುದಾನ ಹಂಚಿಕೆಯಲ್ಲಿ ತಾರತಮ್ಯವೆಸಗಿರುವ ಆರೋಪ ಕೇಳಿ ಬಂದಿದೆ.

■ ಯಶವಂತಪುರ ಕ್ಷೇತ್ರಕ್ಕೆ 75 ಕೋಟಿ ರೂ. ಹಂಚಿಕೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವ್ಯಾಪ್ತಿಯಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಚಾಲ್ತಿಯಲ್ಲಿರುವ ಕಾಮಗಾರಿಗಳ ಜತೆಗೆ ವಾರ್ಡ್ ರಸ್ತೆಗಳು, ಮುಖ್ಯ ಮತ್ತು ಉಪ ಮುಖ್ಯರಸ್ತೆಗಳ ಅಭಿವೃದ್ಧಿ ಹಾಗೂ ಇನ್ನಿತರೆ ಮೂಲಸೌಕರ್ಯ ಕಾಮಗಾರಿಗಳನ್ನು 2000 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲು ನಗರಾಭಿವೃದ್ಧಿ ಇಲಾಖೆಯು ಜೂ.18ರಂದು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ. ಆದರೆ, ಅನುದಾನವನ್ನು ಎಲ್ಲ ವಿಧಾನಸಭಾ ಕ್ಷೇತ್ರಗಳಿಗೆ ಸಮಾನವಾಗಿ ಹಂಚಿಕೆ ಮಾಡಿಲ್ಲ. ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ ಎಂದು ಆಪಾದಿಸಲಾಗಿದೆ.

ನಗರದಲ್ಲಿ 28 ವಿಧಾನಸಭಾ ಕ್ಷೇತ್ರಗಳಿದ್ದು, 2000 ಕೋಟಿ ರೂ.ಗಳಲ್ಲಿ ಆಡಳಿತಾರೂಢ ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ 12 ಕ್ಷೇತ್ರಗಳಿಗೆ ಒಟ್ಟು 1145 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಆನೇಕಲ್ ಹೊರತುಪಡಿಸಿ, ಉಳಿದೆಲ್ಲಾ ಶಾಸಕರ ಕ್ಷೇತ್ರಗಳಿಗೆ ತಲಾ 100 ಕೋಟಿ ರೂ. ಹಂಚಿಕೆ ಮಾಡಲಾಗಿದೆ. ಆದರೆ, 16 ವಿಧಾನಸಭಾ ಕ್ಷೇತ್ರಗಳನ್ನು ಪ್ರತಿನಿಧಿಸುವ ಬಿಜೆಪಿ ಶಾಸಕರ ಕ್ಷೇತ್ರಗಳಿಗೆ 40 ರಿಂದ 60 ಕೋಟಿ ರೂ. ನೀಡಲಾಗಿದೆ. ಆನೇಕಲ್ ಕ್ಷೇತ್ರದ ವ್ಯಾಪ್ತಿಗೆ ಬರುವ ಒಂದು ವಾರ್ಡ್‌ನಲ್ಲಿನ ರಸ್ತೆಗಳ ಅಭಿವೃದ್ಧಿ, ಇನ್ನಿತರೆ ಮೂಲಸೌಕರ್ಯ ಕಾಮಗಾರಿಗಳಿಗೆ 45 ಕೋಟಿ ರೂ. ಕಾಯ್ದಿರಿಸಲಾಗಿದೆ. ಬಿಜೆಪಿಯಿಂದ ಉಚ್ಚಾಟಿತಗೊಂಡು, ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡಿರುವ ಶಾಸಕ ಎಸ್.ಟಿ.ಸೋಮಶೇಖರ್ ಪ್ರತಿನಿಧಿಸುವ ಯಶವಂತಪುರ ಕ್ಷೇತ್ರಕ್ಕೆ 75 ಕೋಟಿ ರೂ. ಹಂಚಲಾಗಿದೆ.

ಒಟ್ಟು 2000 ಕೋಟಿ ರೂ. ಅನುದಾನದಲ್ಲಿ 664 ಕಾಮಗಾರಿಗಳನ್ನು ಕೈಗೊಳ್ಳಲು ಐದು ನಗರ ಪಾಲಿಕೆಗಳು ಕ್ರಿಯಾ ಯೋಜನೆ ಸಿದ್ಧಪಡಿಸಿದ್ದವು. ಇದಕ್ಕೆ ಸರಕಾರ ಅನುಮೋದನೆ ನೀಡಿದೆ. ಈ ಮೊದಲು 2 ಸಾವಿರ ಕೋಟಿ ಅನುದಾನವನ್ನು ಕೇವಲ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗಷ್ಟೇ ಬಳಸಲು ತೀರ್ಮಾನಿಸಲಾಗಿತ್ತು. ಆದರೆ, ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ 1631 ಕೋಟಿ ರೂ. ಮಾತ್ರ ವ್ಯಯಿಸಲಾಗುತ್ತಿದೆ. ಉಳಿದ 369 ಕೋಟಿ ರೂ.ಗಳನ್ನು ಶಾಸಕರ ಕಚೇರಿ ನಿರ್ಮಾಣ, ರಸ್ತೆ ನಾಮಫಲಕಗಳ ಅಳವಡಿಕೆ ಸೇರಿದಂತೆ ಇನ್ನಿತರೆ ಅನಗತ್ಯ ಕಾಮಗಾರಿಗಳಿಗೆ ವೆಚ್ಚ ಮಾಡಲಾಗುತ್ತಿದೆ.

ನಗರದ ಕೇಂದ್ರ ಭಾಗದಲ್ಲಿರುವ ವಿಧಾನಸಭಾ ಕ್ಷೇತ್ರಗಳಲ್ಲಿನ ರಸ್ತೆಗಳು ಸುಸ್ಥಿತಿಯಲ್ಲಿವೆ. ಆದಾಗ್ಯೂ, ರಸ್ತೆಗಳ ಅಭಿವೃದ್ಧಿ ಹೆಸರಿನಲ್ಲಿ ಕೋಟ್ಯಂತರ ರೂ. ವ್ಯಯಿಸಲಾಗುತ್ತಿದೆ. ಹೊರವಲಯದ ಕ್ಷೇತ್ರಗಳಲ್ಲಿನ ರಸ್ತೆಗಳು ತುಂಬಾ ಅಧ್ವಾನವಾಗಿದ್ದು, ಸಾರ್ವಜನಿಕರು ನಿತ್ಯ ನರಕಯಾತನೆ ಅನುಭವಿಸುತ್ತಿದ್ದಾರೆ. ಆದರೆ, ಸರಕಾರ ಈ ಕ್ಷೇತ್ರಗಳ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಒದಗಿಸಿಲ್ಲ.

ಸಾಂದರ್ಭಿಕ ಚಿತ್ರ

ಯಾವ ಕ್ಷೇತ್ರಕ್ಕೆ ಎಷ್ಟು ಅನುದಾನ? (ಕೋಟಿ ರೂ.ಗಳಲ್ಲಿ)

ಕ್ಷೇತ್ರ	ಮೊತ್ತ
ಸಿ.ವಿ.ರಾಮನ್‌ನಗರ	40
ಶಾಂತಿನಗರ	100
ಗಾಂಧಿನಗರ	100
ಶಿವಾಜಿನಗರ	100
ಚಾಮರಾಜಪೇಟೆ	100
ಚಿಕ್ಕಪೇಟೆ	40
ಮಹದೇವಪುರ	60
ಕೆ.ಆರ್.ಪುರ	60
ಆರ್.ಆರ್.ನಗರ	60
ಯಶವಂತಪುರ	75
ದಾಸರಹಳ್ಳಿ	60
ಮಹಾಲಕ್ಷ್ಮಿ ಲೇಔಟ್	40
ಮಲ್ಲೇಶ್ವರಂ	40
ರಾಜಾಜಿನಗರ	40
ಗೋವಿಂದರಾಜನಗರ	100
ವಿಜಯನಗರ	100
ಬಸವನಗುಡಿ	40
ಪದ್ಮನಾಭನಗರ	80
ಬ್ಯಾಟರಾಯನಪುರ	100
ಸರ್ವಜ್ಞನಗರ	100
ಪುಲಕೇಶಿನಗರ	100
ಯಲಹಂಕ	60
ಹೆಬ್ಬಾಳ	100
ಜಯನಗರ	40
ಬೆಂಗಳೂರು ದಕ್ಷಿಣ	60
ಬೊಮ್ಮನಹಳ್ಳಿ	60
ಬಿಟಿಎಂ ಲೇಔಟ್	100
ಆನೇಕಲ್	45
ಒಟ್ಟು	2000

ಪಾಲಿಕೆವಾರು ಅನುದಾನ ಹಂಚಿಕೆ ವಿವರ (ಕೋಟಿ ರೂ.ಗಳಲ್ಲಿ)

ಪಾಲಿಕೆ	ಮೊತ್ತ
ಬೆಂಗಳೂರು ಕೇಂದ್ರ	480
ಬೆಂಗಳೂರು ಪೂರ್ವ	110
ಬೆಂಗಳೂರು ಪಶ್ಚಿಮ	534
ಬೆಂಗಳೂರು ಉತ್ತರ	498
ಬೆಂಗಳೂರು ದಕ್ಷಿಣ	378
ಒಟ್ಟು	2000

ರಸ್ತೆಗಳ ಅಭಿವೃದ್ಧಿಗೆ ಕಿ.ಮೀ.ಗೆ 5-6 ಲಕ್ಷ ನಿಗದಿ

''ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರಾಗಿ ಕೃಷ್ಣ ಬೈರೇಗೌಡ ಅವರು ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ ರಸ್ತೆಗಳ ಅಭಿವೃದ್ಧಿಗಾಗಿ 2000 ಕೋಟಿ ರೂ. ಅನುದಾನ ಘೋಷಿಸಲಾಯಿತು. ಅನಂತರ ರಸ್ತೆಗಳ ಅಭಿವೃದ್ಧಿ ಜತೆಗೆ ಇನ್ನಿತರೆ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ಪಡೆಯಲಾಗಿದೆ. ಈ ಅನುದಾನವನ್ನು ಶಾಸಕರ ಕಚೇರಿ ನಿರ್ಮಾಣ, ರಸ್ತೆಗಳ ನಾಮಫಲಕಗಳ ಅಳವಡಿಕೆ, ಕಟ್ಟಡ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗುತ್ತಿದೆ,'' ಎಂದು ನವ ನಿರ್ಮಾಣ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನರಸಿಂಹನ್ ದೂರಿದರು. ''ಕೇಂದ್ರ ಭಾಗದಲ್ಲಿನ ಕ್ಷೇತ್ರಗಳಲ್ಲಿ ರಸ್ತೆಗಳ ಅಭಿವೃದ್ಧಿಗೆ ಪ್ರತಿ ಕಿ.ಮೀ.ಗೆ 30-50 ಲಕ್ಷ ರೂ. ನಿಗದಿಪಡಿಸಲಾಗಿದೆ. ಹೊರವಲಯದಲ್ಲಿರುವ ಕ್ಷೇತ್ರಗಳಿಗೆ ಪ್ರತಿ ಕಿ.ಮೀ.ಗೆ 5-6 ಲಕ್ಷ ರೂ. ಹಂಚಿಕೆ ಮಾಡಿ, ತಾರತಮ್ಯವೆಸಲಾಗಿದೆ. ಇದು ಜನರಿಗೆ ಮಾಡಿರುವ ದ್ರೋಹ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಬಕಾರಿ ಆಯುಕ್ತರ ಕಚೇರಿಗಳಲ್ಲಿ ಭ್ರಷ್ಟಾಚಾರ: ಲೋಕಾಯುಕ್ತ ದಾಳಿ

ಬೆಂಗಳೂರು: ಇತ್ತೀಚೆಗೆ ಜಾರಿ ನಿರ್ದೇಶನಾಲಯವು (ಇಡಿ) ಅಬಕಾರಿ ಇಲಾಖೆಯ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಬಟಾಬಯಲು ಮಾಡಿದ ಬೆನ್ನಲ್ಲೇ ಲೋಕಾಯುಕ್ತ ಸಂಸ್ಥೆಯು ಸೋಮವಾರ ಗದಾಪ್ರಹಾರ ಮಾಡಿದೆ. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಸೇರಿ 9 ಅಬಕಾರಿ ಆಯುಕ್ತರ ಕಚೇರಿಗಳಲ್ಲಿ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ಮಹತ್ವದ ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ಎಂಟು ಅಬಕಾರಿ ಜಿಲ್ಲಾ ಆಯುಕ್ತರು ಹಾಗೂ ಗ್ರಾಮಾಂತರ ಅಬಕಾರಿ ಆಯುಕ್ತರ ಕಚೇರಿಗಳ ಮೇಲೆ ಲೋಕಾಯುಕ್ತ ಪ್ರತ್ಯೇಕ ತಂಡಗಳು ದಾಳಿ ನಡೆಸಿದ್ದವು. ತಡರಾತ್ರಿವರೆಗೂ ದಾಖಲೆಗಳ ಪರಿಶೀಲನೆ ನಡೆಸಿದ್ದು, ಸಾಲು ಸಾಲು ಲೋಪಗಳನ್ನು ಪತ್ತೆ ಹಚ್ಚಲಾಗಿದೆ. ಅಬಕಾರಿ ಪರವಾನಗಿ ನೀಡಿಕೆಯಲ್ಲಿ ಅಕ್ರಮ ಹಾಗೂ ನಿಯಮಗಳ ಉಲ್ಲಂಘನೆ ಸಂಬಂಧ ಪ್ರಮುಖ ಸಾಕ್ಷ್ಯಾಧಾರ ಸಿಕ್ಕಿದೆ. ಹಲವು ಕಚೇರಿಗಳಲ್ಲಿ ಅಧಿಕಾರಿಗಳು ಅನಧಿಕೃತವಾಗಿ ಗೈರಾಗಿದ್ದರು ಎಂದು ಮೂಲಗಳು ತಿಳಿಸಿವೆ. ಅಬಕಾರಿ ಆಯುಕ್ತರ ಕಚೇರಿಯಲ್ಲಿನ ವ್ಯಾಪಕ ಭ್ರಷ್ಟಾಚಾರದ ಕುರಿತು ಹಲವು ದೂರುಗಳು ದಾಖಲಾಗಿದ್ದವು. ಈ ನಿಟ್ಟಿನಲ್ಲಿ ಪ್ರಕರಣ ದಾಖಲಿಸಿಕೊಂಡು ಲೋಕಾಯುಕ್ತರು ವಿಚಾರಣೆ ನಡೆಸುತ್ತಿದ್ದಾರೆ. ಪ್ರಾಥಮಿಕ ಹಂತದಲ್ಲಿ 9 ಶೋಧನಾ ವಾರಂಟ್‌ಗಳನ್ನು ಜಾರಿಗೊಳಿಸಿದ್ದರು. ಪೊಲೀಸ್ ವಿಭಾಗ, ನ್ಯಾಯಾಂಗ ಅಧಿಕಾರಿಗಳನ್ನು ಒಳಗೊಂಡ ಪ್ರತ್ಯೇಕ ತಂಡಗಳು ಶೋಧ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದವು. ಶೋಧ ಕಾರ್ಯಾಚರಣೆ ಮುಗಿದ ಬಳಿಕ ಸಂಪೂರ್ಣ ವರದಿಯನ್ನು ಲೋಕಾಯುಕ್ತರಿಗೆ ಸಲ್ಲಿಸಲಾಗುವುದು. ವರದಿ ಪರಿಶೀಲಿಸಿ ಲೋಕಾಯುಕ್ತರು ಮುಂದಿನ ಕ್ರಮ ಜರುಗಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಪ್ರಾಪ್ತರ ಮೇಲೆ ಹಲ್ಲೆ: ಎಸ್‌ಐ ಸೆರೆ, ಹೆಡ್ ಕಾನ್‌ಸ್ಟೆಬಲ್ ಅಮಾನತು

ಬೆಂಗಳೂರು: ವಿಚಾರಣೆ ನೆಪದಲ್ಲಿ ಅಪ್ರಾಪ್ತರ ಮೇಲೆ ಮನಸೋ ಇಚ್ಛೆ ಹಲ್ಲೆ ನಡೆಸಿ ವಿಕೃತಿ ಮೆರೆದಿದ್ದ ಅಮೃತಹಳ್ಳಿ ಠಾಣೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಪ್ರವೀಣ್ ಎಂಬುವವರನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ಪಿಎಸ್‌ಐ ಪ್ರವೀಣ್ ಹಾಗೂ ಕಾನ್‌ಸ್ಟೆಬಲ್‌ವೊಬ್ಬರು ಅಪ್ರಾಪ್ತರ ಮೇಲೆ ಬೆಲ್ಟ್‌ನಿಂದ ಹಲ್ಲೆ ನಡೆಸಿ ಅಶ್ಲೀಲ ಭಾಷೆ ಬಳಸಿ ವಿಕೃತ ಲೈಂಗಿಕತೆಗೆ ಒತ್ತಾಯಿಸಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಪೊಲೀಸರ ಈ ನಡೆಯು ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಬೆನ್ನಲ್ಲೇ ಅಮೃತಹಳ್ಳಿ ಠಾಣೆ ಪೊಲೀಸರು ಸ್ವಯಂಪ್ರೇರಿತವಾಗಿ ಪ್ರವೀಣ್ ಹಾಗೂ ಇತರರ ವಿರುದ್ಧ ಪೋಕ್ಸೊ ಹಾಗೂ ಬಾಲಾಪರಾಧಿ ಕಾಯಿದೆ ಅನ್ವಯ ಪ್ರಕರಣ ದಾಖಲಿಸಿದ್ದರು. ಪ್ರಕರಣದ ತನಿಖೆಯು ಕೊತ್ತನೂರು ಠಾಣೆಗೆ ವರ್ಗಾವಣೆಯಾಗಿದ್ದು, ಪ್ರವೀಣ್‌ರನ್ನು ಬಂಧಿಸಿದ್ದಾರೆ. ನ್ಯಾಯಾಲಯದ ಮುಂದೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ ಕಸ್ಟಡಿಗೆ ಪಡೆದಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾನ್‌ಸ್ಟೆಬಲ್ ಸಸ್ಪೆಂಡ್: ಕೃತ್ಯಕ್ಕೆ ಸಹಕರಿಸಿದ್ದ ಕಾನ್‌ಸ್ಟೆಬಲ್ ರಾಘವೇಂದ್ರ ಎಂಬುವವರನ್ನು ಕೂಡ ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಮೂಲಗಳು ಹೇಳಿವೆ.

ವಿಡಿಯೊ ರಿಲೀಸ್ ಮಾಡಿದ ಪತ್ನಿ: ಅಮೃತಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಒಂದು ವರ್ಷದ ಹಿಂದೆ ನಡೆದ ಕೊಲೆ ಪ್ರಕರಣದಲ್ಲಿ ಅಪ್ರಾಪ್ತರನ್ನು ಪಿಎಸ್‌ಐ ಪ್ರವೀಣ್ ವಿಚಾರಣೆ ನೆಪದಲ್ಲಿ ಲಾಡ್ಜ್‌ವೊಂದಕ್ಕೆ ಕರೆತಂದಿದ್ದರು. ಅಲ್ಲಿ ಅಪ್ರಾಪ್ತರ ಮೇಲೆ ಹಲ್ಲೆ ನಡೆಸಿ ವಿಡಿಯೊ ಮಾಡಿಕೊಂಡಿದ್ದರು. ಅತ್ಯಂತ ಕೀಳುಮಟ್ಟದ ಲೈಂಗಿಕತೆಯ ಮಾತುಗಳನ್ನಾಡಿ ಅಪ್ರಾಪ್ತರನ್ನು ಪ್ರಚೋದಿಸಿದ್ದರು. ಈ ಕುಕೃತ್ಯವನ್ನು ಮೊಬೈಲ್‌ನಲ್ಲಿ ವಿಡಿಯೊ ಮಾಡಿಟ್ಟುಕೊಂಡಿದ್ದರು. ಇತ್ತೀಚೆಗೆ ಎಸ್‌ಐ ಪ್ರವೀಣ್ ದಾಂಪತ್ಯದಲ್ಲಿ ಕಲಹ ಉಂಟಾಗಿದ್ದು, ಪತ್ನಿಯು ಮೊಬೈಲ್‌ನಲ್ಲಿದ್ದ ವಿಡಿಯೊ ತನಗೆ ವರ್ಗಾಯಿಸಿಕೊಂಡಿದ್ದರು. ಇತ್ತೀಚೆಗೆ ವೈರಲ್ ಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

ಮದುವೆಗೆ ನಿರಾಕರಿಸಿದ ಪ್ರೇಯಸಿ ಇರಿದು ಕೊಂದ ಪ್ರಿಯಕರ

ಬೆಂಗಳೂರು: ಮದುವೆಗೆ ನಿರಾಕರಿಸಿದ ಪ್ರೇಯಸಿಯನ್ನು ಚಾಕುವಿನಿಂದ ಇರಿದು ಪ್ರಿಯಕರ ಕೊಲೆಗೈದಿರುವ ಘಟನೆ ಮಹಾಲಕ್ಷ್ಮೀ ಲೇಔಟ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ನಡೆದಿದೆ. ಕೆ.ಪಿ. ಅಗ್ರಹಾರದ ನಿವಾಸಿ ಅಂಜಲಿ (23) ಕೊಲೆಯಾದವರು. ಆರೋಪಿ ರಾಜೀವ್ (28) ಎಂಬುವನನ್ನು ಪೊಲೀಸರು ಬಂಧಿಸಿದ್ದಾರೆ. ಲಗ್ಗೆರೆ ನಿವಾಸಿ ರಾಜೀವ್ ಹಾಗೂ ಅಂಜಲಿ ಮೂರು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ರಾಜೀವ್ ಕಾರು ಶೋರೂಂನಲ್ಲಿ ಕೆಲಸ ಮಾಡುತ್ತಿದ್ದರೆ, ಖಾಸಗಿ ಕಂಪನಿಯಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಆಗಿದ್ದ ಅಂಜಲಿ ಆರು ತಿಂಗಳ ಹಿಂದೆ ಕೆಲಸ ಬಿಟ್ಟಿದ್ದರು. ಅಪರಾಧ ಕೃತ್ಯಗಳ ಹಿನ್ನೆಲೆ ಹೊಂದಿರುವ ರಾಜೀವ್ ವಿರುದ್ಧ ಡಕಾಯಿತಿ, ಸುಲಿಗೆ ಹಾಗೂ ಕೊಲೆ ಯತ್ನ ಪ್ರಕರಣಗಳು ಬಾಕಿ ಇವೆ. »08

ಸಮಗ್ರ ಯೋಜನೆ ರೂಪಿಸಿ ಫುಟ್‌ಪಾತ್ ಒತ್ತುವರಿ ತೆರವುಗೊಳಿಸಿ

■ ವಿಕ ಸುದ್ದಿಲೋಕ ಬೆಂಗಳೂರು

ಜಿಬಿಎ ವ್ಯಾಪ್ತಿಯ 5 ನಗರ ಪಾಲಿಕೆಗಳಲ್ಲಿ ಸಮಗ್ರ ಯೋಜನೆ ರೂಪಿಸಿಕೊಂಡು ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಳ್ಳಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ಸೂಚಿಸಿದರು.



ಪಾಲಿಕೆಗಳ ವ್ಯಾಪ್ತಿಯಲ್ಲಿ ಜು.1ರಿಂದ 'ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನ' ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸೋಮವಾರ ಅಧಿಕಾರಿಗಳೊಂದಿಗೆ ವರ್ಚುವಲ್ ಸಭೆ ನಡೆಸಿ ಮಾತನಾಡಿದ ಅವರು, ''ಫುಟ್‌ಪಾತ್‌ಗಳ ಒತ್ತುವರಿ ತೆರವು ವೇಳೆ ಸುಪ್ರೀಂಕೋರ್ಟ್ ಆದೇಶ ಹಾಗೂ ಬೀದಿ ಬದಿ ವ್ಯಾಪಾರಿಗಳ ಸಂರಕ್ಷಣಾ ಕಾಯಿದೆಯನ್ನು ಪಾಲಿಸಬೇಕು. ಸಮಗ್ರ ಯೋಜನೆ ರೂಪಿಸಿಕೊಂಡು ತೆರವು ಕಾರ್ಯಾಚರಣೆ ನಡೆಸಬೇಕು,'' ಎಂದು ಹೇಳಿದರು.

''ಮೊದಲಿಗೆ ಯಾವ್ಯಾವ ರಸ್ತೆಗಳಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ ಎಂಬ ಪಟ್ಟಿ ಸಿದ್ಧಪಡಿಸಬೇಕು. ಬಳಿಕ ಅಂಗಡಿ-ಮುಂಗಟ್ಟುಗಳ ಮಾಲೀಕರು ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಬಳಿಕ ನೋಟಿಸ್ ಜಾರಿ ಮಾಡಿ, ನಿಯಮಾನುಸಾರ ತೆರವಿಗೆ ಕ್ರಮ ಕೈಗೊಳ್ಳಬೇಕು,'' ಎಂದು ನಿರ್ದೇಶನ ನೀಡಿದರು.

ಸಚಿವ ಕೃಷ್ಣ ಬೈರೇಗೌಡ ಸೂಚನೆ

''ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಪಾಲಿಕೆ ಅಧಿಕಾರಿಗಳು, ಉದ್ದಿಮೆ ಪರವಾನಗಿ ವಿತರಿಸುವ ಆರೋಗ್ಯಾಧಿಕಾರಿಗಳು, ಪೊಲೀಸ್ ಸಿಬ್ಬಂದಿ ಹಾಗೂ ಒತ್ತುವರಿ ತೆರವು ತಂಡಗಳ ಸಮನ್ವಯದೊಂದಿಗೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು,'' ಎಂದು ತಿಳಿಸಿದರು.

''ನಗರದ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳೂ ಸೇರಿದಂತೆ ಪ್ರಮುಖ ರಸ್ತೆಗಳನ್ನು 'ನಾನ್ ವೆಂಡಿಂಗ್ ವಲಯ'ಗಳನ್ನಾಗಿ ಗುರುತಿಸಿ ಅಧಿಸೂಚನೆ ಹೊರಡಿಸಬೇಕು. ಬೆಂಗಳೂರಿನಲ್ಲಿ ಸುಮಾರು 15 ಸಾವಿರ ಕಿ.ಮೀ. ಉದ್ದದ ರಸ್ತೆಗಳಿದ್ದು, ಈ ಪೈಕಿ 1500 ಕಿ.ಮೀ. ಉದ್ದದ ಪ್ರಮುಖ ರಸ್ತೆಗಳನ್ನು ನಾನ್ ವೆಂಡಿಂಗ್ ವಲಯಗಳಾಗಿ ಗುರುತಿಸಬೇಕು. ಉಳಿದ ರಸ್ತೆಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ವ್ಯಾಪಾರ ನಡೆಸಲು ಬೀದಿ ವ್ಯಾಪಾರಿಗಳಿಗೆ ಅವಕಾಶ ಕಲ್ಪಿಸಬೇಕು,'' ಎಂದು ಸೂಚನೆ ನೀಡಿದರು. »08

ಸುರಂಗ ರಸ್ತೆ: ಜು.6ಕ್ಕೆ ವಿಚಾರಣೆ

ಬೆಂಗಳೂರು: ನಗರದಲ್ಲಿ ಸುರಂಗ ರಸ್ತೆ ನಿರ್ಮಾಣ ಪ್ರಶ್ನಿಸಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಅಂತಿಮ ವಿಚಾರಣೆಯನ್ನು ಹೈಕೋರ್ಟ್ ಜು.6ಕ್ಕೆ ನಿಗದಿಪಡಿಸಿದೆ.

ನಟ, ನಿರ್ದೇಶಕ ಪ್ರಕಾಶ್ ಬೆಳವಾಡಿ, ಡಾ.ಎ. ರವೀಂದ್ರ, ಸಿಟಿಜನ್ ಆ್ಯಕ್ಷನ್ ಫೋರಂ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಸೋಮವಾರ ಸಿಜೆ ವಿಭು ಬಖ್ರು ಮತ್ತು ನ್ಯಾ. ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದವು.

ಅರ್ಜಿದಾರರ ಪರ ವಕೀಲರು, ''ಸುರಂಗ ಮಾರ್ಗಕ್ಕೆ ಲಾಲ್‌ಬಾಗ್‌ನ 5 ಎಕರೆ ಸ್ವಾಧೀನಕ್ಕೆ ಸರಕಾರ ಉದ್ದೇಶಿಸಿದೆ. ಇದರಿಂದ ಪಾರಂಪರಿಕ ತಾಣವಾಗಿರುವ ಲಾಲ್‌ಬಾಗ್‌ಗೆ ಸರಿಪಡಿಸಲಾಗದ ಹಾನಿಯಾಗಲಿದೆ. ಹಾಗಾಗಿ, ಯೋಜನೆಗೆ ತಡೆಯಾಜ್ಞೆ ನೀಡುವ ಕುರಿತು ಆದೇಶಿಸಬೇಕು,'' ಎಂದು ಕೋರಿದರು.

ಆದರೆ, ಪ್ರತಿವಾದಿ ವಕೀಲರು ವಿಚಾರಣೆಗೆ ಸಮಯ ಕೋರಿದ್ದರಿಂದ ನ್ಯಾಯಾಲಯ ಅರ್ಜಿಗಳ ವಿಚಾರಣೆಯನ್ನು ಜುಲೈ 6ಕ್ಕೆ ನಿಗದಿಪಡಿಸಿತು.

ಕಳೆದ ವಿಚಾರಣೆ ವೇಳೆ ನ್ಯಾಯಾಲಯ ಸರಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ರಾಜ್ಯ ಪರಿಸರ ಅಧ್ಯಯನ ಮೌಲ್ಯಮಾಪನ ಪ್ರಾಧಿಕಾರ, ನಗರ ಭೂಸಾರಿಗೆ ನಿರ್ದೇಶನಾಲಯ, ಬೆಂಗಳೂರು ಸ್ಮಾರ್ಟ್ ಮೂಲಸೌಕರ್ಯ ನಿಯಮಿತ (ಸ್ಮೈಲ್), ರಾಡಿಕ್ ಕನ್ಸಲ್ಟೆಂಟ್ಸ್ ಮತ್ತು ಆಲ್ಟಿನೋಕ್ ಕನ್ಸಲ್ಟೆಂಟ್ಸ್ ಸೇರಿ ಎಲ್ಲಾ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಮುಂದೂಡಿತ್ತು.

ಅಲ್ಲದೆ, ಲಾಲ್‌ಬಾಗ್ ನಂತಹ ಸೂಕ್ಷ್ಮ ಪ್ರದೇಶಗಳಡಿಯಲ್ಲಿ ಸುರಂಗ ನಿರ್ಮಾಣ ಮಾಡುವುದರಿಂದಾಗುವ ಅಪಾಯಗಳ ಬಗ್ಗೆ ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾದಿಂದ ಅಭಿಪ್ರಾಯ ಪಡೆಯುವಂತೆ ನ್ಯಾಯಾಲಯ ಸೂಚನೆ ನೀಡಿತ್ತು.

ಬೆಂಗಳೂರು ಮಹಾನಗರದ ಸಂಚಾರ ದಟ್ಟಣೆ ಸಮಸ್ಯೆ ಪರಿಹರಿಸುವ ಸಲುವಾಗಿ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೆ ಸುಮಾರು 19 ಸಾವಿರ ಕೋಟಿ ರೂ. ವೆಚ್ಚದಲ್ಲಿ ಸುರಂಗ ಮಾರ್ಗ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಬೆಂಗಳೂರು ಜೋಡಿ ಸುರಂಗ ರಸ್ತೆ ಯೋಜನೆಗೆ 2025ರ ಜು.14ರಂದು ಕರೆದಿರುವ ಟೆಂಡರ್ ಅಧಿಸೂಚನೆಯನ್ನು ರದ್ದುಗೊಳಿಸಲು ಅರ್ಜಿಯಲ್ಲಿ ಕೋರಲಾಗಿದೆ.

ಜತೆಗೆ, ಆರ್‌ಎಫ್‌ಪಿ ಪ್ರಕಟಣೆ, ಪೂರ್ವ-ಬಿಡ್ ಪ್ರಕ್ರಿಯೆಗಳು, ಬಿಡ್ ಸಲ್ಲಿಕೆ, ಬಿಡ್ ಮೌಲ್ಯಮಾಪನ ಮತ್ತು ಉದ್ದೇಶಿತ ಟೆಂಡರ್ ಪ್ರಸ್ತಾವ ಅಂತಿಮಗೊಳಿಸುವ ಪತ್ರ ಸೇರಿದಂತೆ ಎಲ್ಲಾ ಹಂತಗಳನ್ನು ರದ್ದುಗೊಳಿಸಲು ಕೋರಲಾಗಿದೆ. ಸುರಂಗ ಮಾರ್ಗ ಯೋಜನೆಗೆ ಪೂರ್ವ ಪರಿಸರ ಅನುಮತಿ ಅಗತ್ಯವಿಲ್ಲ ಎಂದು ಕರ್ನಾಟಕ ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ 2024ರ ನ.26ರಂದು ನೀಡಿರುವ ಪತ್ರವನ್ನು ರದ್ದುಗೊಳಿಸಲು ಕೂಡ ಕೋರಲಾಗಿದೆ.

'ಎಸ್.ಎಂ. ಕೃಷ್ಣ ರಸ್ತೆ' ದೀಪಾಲಂಕಾರಕ್ಕೆ ಮನಸೋತ ನಗರಿಗರು

ಬೆಂಗಳೂರು: ಕೆಂಪೇಗೌಡರ 517ನೇ ಜಯಂತಿಯಂದು ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಲೋಕಾರ್ಪಣೆಗೊಂಡಿರುವ 10.7 ಕಿ.ಮೀ. ಉದ್ದದ 'ಎಸ್.ಎಂ. ಕೃಷ್ಣ ರಸ್ತೆ' ಕೇವಲ ಸಂಚಾರಕ್ಕೆ ಮಾತ್ರವಲ್ಲ, ರಾತ್ರಿ ವೇಳೆಯಲ್ಲಿ ತನ್ನ ಆಕರ್ಷಕ ದೀಪಾಲಂಕಾರದಿಂದಲೂ ಗಮನ ಸೆಳೆಯುತ್ತಿದೆ.

ಬೆಂಗಳೂರು ನಗರದ ಅಭಿವೃದ್ಧಿಯ ಹೊಸ ಹೆಗ್ಗುರುತಾಗಿರುವ 'ಎಸ್.ಎಂ. ಕೃಷ್ಣ ರಸ್ತೆ' ಇದೀಗ ದಸರಾ ಮಾದರಿಯ ಭವ್ಯ ದೀಪಾಲಂಕಾರದಿಂದ ನಗರದ ಜನತೆಯನ್ನು ಆಕರ್ಷಿಸುತ್ತಿದೆ. ವಿಶ್ವವಿಖ್ಯಾತ ಮೈಸೂರು ದಸರಾ ಸಂದರ್ಭದಲ್ಲಿ ಅರಮನೆ ಹಾಗೂ ಪ್ರಮುಖ ರಸ್ತೆಗಳಲ್ಲಿ ಕಾಣಸಿಗುವ ಬೆಳಕಿನ ವೈಭವವನ್ನು ನೆನಪಿಸುವ ರೀತಿಯಲ್ಲಿ ಈ ರಸ್ತೆಯನ್ನು ಅಲಂಕರಿಸಲಾಗಿದೆ.

ಮಾಗಡಿ ರಸ್ತೆಯ ಕಡಬಗೆರೆ ಕ್ರಾಸ್‌ನಿಂದ ಮೈಸೂರು ರಸ್ತೆ ಚಲ್ಲಘಟ್ಟ ಮೆಟ್ರೊ ನಿಲ್ದಾಣದವರೆಗಿನ 100.0 ಮೀ ಅಗಲದ (330 ಅಡಿ), 10 ಲೇನ್‌ಗಳ ರಸ್ತೆ ಕಾಮಗಾರಿ ಹೊಣೆಯನ್ನು ಸ್ಟಾರ್ ಇನ್ಫೋಟೆಕ್ ಕಂಪನಿ ವಹಿಸಿಕೊಂಡಿತ್ತು. ದಕ್ಷಿಣ ಮತ್ತು ಪಶ್ಚಿಮ ಬೆಂಗಳೂರನ್ನು ಬೆಸೆಯುವ ಈ ರಸ್ತೆ 3 ಪ್ರಮುಖ ಅಂಡರ್ ಪಾಸ್‌ಗಳು, 11 ಸೇತುವೆಗಳು, 270 ಮೀಟರ್ ಉದ್ದದ ಸುರಂಗ ಮಾರ್ಗ, ಆಧುನಿಕ ಸರ್ವಿಸ್ ರಸ್ತೆ, ಸೈಕಲ್ ಟ್ರ್ಯಾಕ್ ವ್ಯವಸ್ಥೆ ಒಳಗೊಂಡಿದೆ. ರಸ್ತೆಯು ಬೆಂಗಳೂರು-ಮೈಸೂರು ಜೋಡಿ ಮಾರ್ಗದ ರೈಲ್ವೆ ಹಳಿಗಳಿಗೆ ಅಡ್ಡಲಾಗಿ ಹಾದುಹೋಗಿದ್ದು, ರೈಲು ಸಂಚಾರಕ್ಕೆ ಅಡ್ಡಿಯಾಗದಂತೆ ಕೇವಲ ಮೂರು ತಿಂಗಳಲ್ಲಿ ಕೆಳಸೇತುವೆ ನಿರ್ಮಿಸಿದ ಸ್ಟಾರ್ ಇನ್ಫೋಟೆಕ್ ಕಂಪನಿಯ ಕಾರ್ಯವೈಖರಿಗೆ ರೈಲ್ವೆ ಇಲಾಖೆಯೇ ಅಚ್ಚರಿ ವ್ಯಕ್ತಪಡಿಸಿತ್ತು.

ಇಂದಿನಿಂದ ಅಧಿಕಾರಿಗಳಿಂದ ಮನೆ ಭೇಟಿ | ಆನ್‌ಲೈನ್ ಅಪ್‌ಲೋಡ್‌ಗೂ ಅವಕಾಶ

ಎಸ್‌ಐಆರ್: ನಗರದಲ್ಲಿ 2,855 ಸಹಾಯ ಕೇಂದ್ರ

■ ವಿಕ ಸುದ್ದಿಲೋಕ ಬೆಂಗಳೂರು

ಜಿಬಿಎ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗಾಗಿ (ಎಸ್‌ಐಆರ್) ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಜೂ.30 ರಿಂದ ಜು.29ರವರೆಗೆ ಮನೆ ಮನೆಗೆ ಭೇಟಿ ನೀಡಿ ಗಣತಿ ನಮೂನೆಗಳನ್ನು ವಿತರಿಸಲಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿ ಮಹೇಶ್ವರ ರಾವ್ ತಿಳಿಸಿದರು.

ಜಿಬಿಎ ಕೇಂದ್ರ ಕಚೇರಿಯಲ್ಲಿ ಸೋಮವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ''ಬಿಎಲ್‌ಒಗಳು ಮತದಾರರಿಗೆ ದ್ವಿಪ್ರತಿಯಲ್ಲಿ ಗಣತಿ ನಮೂನೆಗಳನ್ನು ವಿತರಿಸಿ, ಅರ್ಜಿಗಳನ್ನು ಭರ್ತಿ ಮಾಡಲು ನೆರವಾಗುತ್ತಾರೆ. ಬಳಿಕ ಆ ಅರ್ಜಿಗಳನ್ನು ಸಂಗ್ರಹಿಸಿ, ಸ್ವೀಕೃತಿ ನೀಡಲಿದ್ದಾರೆ. ಮನೆ ಮನೆ ಭೇಟಿ ಸಂದರ್ಭದಲ್ಲಿ ನಿವಾಸಿಗಳು ಲಭ್ಯವಿಲ್ಲದಿದ್ದರೆ, ಬಿಎಲ್‌ಒಗಳು ಇನ್ನೂ ಎರಡು ಬಾರಿ ಭೇಟಿ ನೀಡಿ ಗಣತಿ ನಮೂನೆಗಳನ್ನು ವಿತರಿಸಲಿದ್ದಾರೆ. ಜಿಬಿಎ ವ್ಯಾಪ್ತಿಯಲ್ಲಿ ಯಾವುದೇ ಮನೆ ಸಮೀಕ್ಷೆಯಿಂದ ಹೊರಗುಳಿಯದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು,'' ಎಂದರು.

''ಅಸ್ತಿತ್ವದಲ್ಲಿರುವ ಮತದಾರರಿಗೆ ಮೊದಲೇ ಭರ್ತಿ ಗಣತಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಮತ್ತು ಭರ್ತಿ ಮಾಡಿದ ನಮೂನೆಗಳು, ದಾಖಲೆಗಳನ್ನು ಆನ್‌ಲೈನ್ ವಿಧಾನದ ಮೂಲಕ ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಪ್ರತಿಯೊಬ್ಬ ಮತದಾರರು ಈ ನಮೂನೆಗಳನ್ನು ಅಗತ್ಯ ಮಾಹಿತಿ ಮತ್ತು ಸ್ವಯಂ ದೃಢೀಕರಿಸಿದ ದಾಖಲೆಗಳೊಂದಿಗೆ ಮತಗಟ್ಟೆ ಸ್ತರದ ಅಧಿಕಾರಿಗಳಿಗೆ ಕಡ್ಡಾಯವಾಗಿ ಸಲ್ಲಿಸಬೇಕು,'' ಎಂದು ಹೇಳಿದರು.

ಶೇ.76.32ರಷ್ಟು ಮ್ಯಾಪಿಂಗ್ ಪೂರ್ಣ: ''ಎಸ್‌ಐಆರ್‌ನ ಪೂರ್ವಭಾವಿ ಚಟುವಟಿಕೆಯಾಗಿ 2002ರ ಮತದಾರರ ಪಟ್ಟಿಯನ್ನು 2025ರ ಮತದಾರರ ಪಟ್ಟಿಯೊಂದಿಗೆ ಮ್ಯಾಪಿಂಗ್ ಮಾಡುವ ಕಾರ್ಯವು ಶೇ.76.32ರಷ್ಟು ಪೂರ್ಣಗೊಂಡಿದೆ. ಒಟ್ಟು 1,03,88,363 ಮತದಾರರಲ್ಲಿ 79,27,902 ಮತದಾರರ ಮ್ಯಾಪಿಂಗ್ ಪೂರ್ಣಗೊಂಡಿದ್ದು, ಇನ್ನೂ 24,60,461 ಮತದಾರರ ಮ್ಯಾಪಿಂಗ್ ಬಾಕಿಯಿದೆ. ಉಳಿದ ಮತದಾರರ ಮ್ಯಾಪಿಂಗ್ ಕಾರ್ಯವನ್ನು ಶೀಘ್ರ ಪೂರ್ಣಗೊಳಿಸಲಾಗುವುದು,'' ಎಂದು ತಿಳಿಸಿದರು.

ಸಂಜೆ ವೇಳೆಗೆ ನಮೂನೆಗಳ ಡಿಜಿಟಲೀಕರಣ

''ಬಿಎಲ್‌ಒಗಳು ಬೆಳಗ್ಗೆ ಮನೆಗೆ ಭೇಟಿ ನೀಡಿ, ಗಣತಿ ನಮೂನೆಗಳನ್ನು ವಿತರಿಸಲಿದ್ದಾರೆ. ಸಂಜೆ ವೇಳೆಗೆ ಭರ್ತಿ ಮಾಡಿದ ನಮೂನೆಗಳನ್ನು ಸಂಗ್ರಹಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ವ್ಯವಸ್ಥೆ ಮಾಡಲಾಗಿದೆ. ಮತದಾರರು ಭರ್ತಿ ಮಾಡಿದ ನಮೂನೆಗಳೊಂದಿಗೆ ಭಾವಚಿತ್ರ ಬದಲಿಸಲು ಇಚ್ಛಿಸಿದಲ್ಲಿ, ಇತ್ತೀಚಿನ ಭಾವಚಿತ್ರ ಸಲ್ಲಿಸಬೇಕು. ಅಲ್ಲದೆ, ಗಣತಿ ನಮೂನೆಗಳನ್ನು ವೋಟರ್ ಫೆಸಿಲಿಟೇಷನ್ ಸೆಂಟರ್‌ಗಳು ಹಾಗೂ ರಜಾ ದಿನಗಳಲ್ಲಿ ಮತಗಟ್ಟೆಗಳಲ್ಲಿ ಸಲ್ಲಿಸಬಹುದಾಗಿದೆ,'' ಎಂದು ಮಾಹಿತಿ ನೀಡಿದರು.

ಎಸ್‌ಐಆರ್ ಸಹಾಯವಾಣಿ

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ 7 ವಿಧಾನಸಭಾ ಕ್ಷೇತ್ರಗಳಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಲು ಸಹಾಯವಾಣಿ ಕೇಂದ್ರ ಸ್ಥಾಪಿಸಲಾಗಿದೆ. ಯಲಹಂಕ, ಬ್ಯಾಟರಾಯನಪುರ, ಯಶವಂತಪುರ, ದಾಸರಹಳ್ಳಿ, ಮಹದೇವಪುರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್ ಕ್ಷೇತ್ರಗಳ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅಹವಾಲುಗಳ ನಿವಾರಣೆ ಹಾಗೂ ಸ್ಪಷ್ಟೀಕರಣಕ್ಕಾಗಿ ಜಿಲ್ಲಾಧಿಕಾರಿಗಳ ಕಚೇರಿ, ಬೆಂಗಳೂರು ನಗರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು- ಇಲ್ಲಿ ಕಚೇರಿ ವೇಳೆಯಲ್ಲಿ ಕಾರ್ಯನಿರ್ವಹಿಸಲು ಸಹಾಯವಾಣಿ ಕೇಂದ್ರ ಸ್ಥಾಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪಿ.ಎಸ್.ಕಾಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮತದಾರರು/ಸಾರ್ವಜನಿಕರು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ತಮ್ಮ ಅಹವಾಲುಗಳ ನಿವಾರಣೆಗಾಗಿ ಹಾಗೂ ಸ್ಪಷ್ಟೀಕರಣಕ್ಕಾಗಿ ಸಹಾಯವಾಣಿ ಸಂಖ್ಯೆ 080-22967200 ಗೆ ಕರೆ ಮಾಡಬಹುದು ಅಥವಾ ಇ-ಮೇಲ್ adeobangaloreurban@gmail.com ಮೂಲಕ ಸಲ್ಲಿಸಬಹುದು. ಕಚೇರಿಯ ಸಾಮಾಜಿಕ ಮಾಧ್ಯಮ/ಜಾಲತಾಣಗಳ ಮೂಲಕವೂ ಅಹವಾಲು ಸಲ್ಲಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

2,855 ಮತದಾರರ ಸಹಾಯ ಕೇಂದ್ರಗಳ ಸ್ಥಾಪನೆ: ''ಗಣತಿ ನಮೂನೆ ಭರ್ತಿ ಮಾಡುವ ವೇಳೆ ಅಥವಾ ಮತದಾರರ ನೋಂದಣಿಗೆ ಸಂಬಂಧಿಸಿದ ಯಾವುದೇ ಗೊಂದಲಗಳಿದ್ದಲ್ಲಿ ಮಾರ್ಗದರ್ಶನ ನೀಡಲು ಮತದಾರರ ನೋಂದಣಾಧಿಕಾರಿಗಳು ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ 2,855 ಮತದಾರರ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

16,505 ಬಿಎಲ್‌ಎ ನೇಮಕ: ''ಜಿಲ್ಲೆಯಲ್ಲಿ 28 ಮತದಾರರ ನೋಂದಣಾಧಿಕಾರಿಗಳು, 75 ಸಹಾಯಕ ಮತದಾರರ ನೋಂದಣಾಧಿಕಾರಿಗಳು, 905 ಬಿಎಲ್‌ಒ ಮೇಲ್ವಿಚಾರಕರು ಹಾಗೂ 8,972 ಬಿಎಲ್‌ಒಗಳು ಕಾರ್ಯನಿರ್ವಹಿಸುತ್ತಿದ್ದು, ಮನೆ-ಮನೆ ಸಮೀಕ್ಷೆ ಕಾರ್ಯಕ್ಕೆ ಅಗತ್ಯ ತರಬೇತಿ ನೀಡಲಾಗಿದೆ. ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಂದ 16,505 ಬಿಎಲ್‌ಎ-2 ನೇಮಕ ಮಾಡಲಾಗಿದ್ದು, ಅದರ ಮಾಹಿತಿಯನ್ನು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಮತದಾರರ ನೋಂದಣಾಧಿಕಾರಿಗಳಿಗೆ ಸಲ್ಲಿಸಲಾಗಿದೆ,'' ಎಂದರು.

ಕಾರು ಚಾಲಕನೇ ದರೋಡೆಯ ಸೂತ್ರಧಾರ

ಐವರ ಬಂಧನ | 85 ಲಕ್ಷ ರೂ. ನಗದು ಜಪ್ತಿ

ಬೆಂಗಳೂರು: ಇತ್ತೀಚೆಗೆ ಉದ್ಯಮಿಯ ಕಾರು ಅಡ್ಡಗಟ್ಟಿ 1.9 ಕೋಟಿ ರೂ. ದರೋಡೆ ಪ್ರಕರಣ ಭೇದಿಸಿರುವ ಮಾದನಾಯಕನಹಳ್ಳಿ ಠಾಣೆ ಪೊಲೀಸರು, ಕಾರು ಚಾಲಕ ಸೇರಿದಂತೆ ಐವರು ಆರೋಪಿಗಳನ್ನು ಬಂಧಿಸಿ 85 ಲಕ್ಷ ರೂ. ನಗದು ಜಪ್ತಿ ಮಾಡಿದ್ದಾರೆ.

ಪೀಣ್ಯದ ಕಾರು ಚಾಲಕ ಎಂ.ಚೇತನ್ (29), ರೌಡಿಶೀಟರ್‌ಗಳಾದ ಸೋಮ ಅಲಿಯಾಸ್ ಡೆಡ್ಲಿ ಸೋಮ (29), ಸೂರ್ಯ ಅಲಿಯಾಸ್ ಸೂರಿ (25), ಸಿವಿಲ್ ಎಂಜಿನಿಯರ್ ಬಸವನಗೌಡ (28), ಆಟೋ ಚಾಲಕ ಎಂ.ವಿನಯ್ (26) ಬಂಧಿತರು.

ಹಲವು ವರ್ಷಗಳಿಂದ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ಚಿಕ್ಕಲ್ಲಸಂದ್ರದ ಸೋಮನ ವಿರುದ್ಧ 2021ರಲ್ಲಿ ಸೋಲದೇವನಹಳ್ಳಿ ಠಾಣೆಯಲ್ಲಿ ಒಂದು ಕೊಲೆ ಪ್ರಕರಣ, ಕೊಲೆ ಯತ್ನ ಕೇಸ್ ದಾಖಲಾಗಿದೆ. ಆರೋಪಿ ವಿರುದ್ಧ ಹಾಲಿ ಚಿಕ್ಕಬಾಣಾವಾರ ಠಾಣೆಯಲ್ಲಿ ರೌಡಿಶೀಟ್ ಇದೆ. ಆರೋಪಿ ಸೂರ್ಯ ಕೆ.ಪಿ. ಅಗ್ರಹಾರ ಠಾಣೆಯಲ್ಲಿ ರೌಡಿಶೀಟರ್ ಆಗಿದ್ದಾನೆ. ಆರೋಪಿಗಳು ಜೂ.16ರಂದು ರಾತ್ರಿ ಸೆಕ್ಯೂರಿಟಿ ಏಜೆನ್ಸಿ ಮಾಲೀಕ ಆರ್.ಐ. ಶಿವಶಂಕರ್ ಅವರನ್ನು ಕುದುರೆಗೆರೆ ಕ್ರಾಸ್ ಬಳಿ ಕಾರು ಅಡ್ಡಗಟ್ಟಿ ಅಪಹರಣ ಮಾಡಿ 1.9 ಕೋಟಿ ರೂ. ದೋಚಿದ್ದರು.

ಈ ಪ್ರಕರಣದ ತನಿಖೆ ಚುರುಕುಗೊಳಿಸಿದ ಇನ್‌ಸ್ಪೆಕ್ಟರ್ ಎಂ.ಪ್ರಶಾಂತ್ ನೇತೃತ್ವದ ತಂಡವು ಹಲವು ಆಯಾಮಗಳಲ್ಲಿ ಮಾಹಿತಿ ಕಲೆ ಹಾಕಿ ರೌಡಿ ಸೋಮನನ್ನು ಬಂಧಿಸಿತ್ತು. ಸೋಮನ ವಿಚಾರಣೆ ನಡೆಸಿದಾಗ ಇಡೀ ದರೋಡೆಯ ಸೂತ್ರಧಾರ ದೂರುದಾರ ಶಿವಶಂಕರ್‌ನ ಕಾರು ಚಾಲಕ ಚೇತನ್ ಎಂಬುದನ್ನು ಬಾಯ್ಬಿಟ್ಟಿದ್ದ. ಈ ಜಾಡಿನನ್ವಯ ಮುಂದಿನ ತನಿಖೆ ಕೈಗೊಂಡು ಇತರ ಆರೋಪಿಗಳನ್ನು ಬಂಧಿಸಿ 85 ಲಕ್ಷ ರೂ.ನಗದು ವಶಪಡಿಸಿಕೊಳ್ಳಲಾಗಿದೆ. ಕೃತ್ಯದಲ್ಲಿ ಶಾಮೀಲಾಗಿದ್ದ ನಾಲ್ವರು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಕಾರ್ಯಾಚರಣೆ ಮುಂದುವರಿದಿದೆ ಎಂದು ಪೊಲೀಸರು ವಿವರಿಸಿದ್ದಾರೆ.

ಹಣದಾಸೆಗೆ ನಂಬಿಕೆ ದ್ರೋಹ ಮಾಡಿದ ಚಾಲಕ: ರೈಸ್ ಪುಲ್ಲಿಂಗ್ ದಂಧೆಯಲ್ಲಿ ತೊಡಗಿಸಿಕೊಂಡಿರುವ ಶಿವಶಂಕರ್ ಬಳಿ ಕಾರು ಚಾಲಕನಾಗಿ ಎರಡು ವರ್ಷಗಳಿಂದ ಚೇತನ್ ಕೆಲಸ ಮಾಡುತ್ತಿದ್ದ. ಶಿವಶಂಕರ್ ಅವರ ಹಣಕಾಸು ವ್ಯವಹಾರ ಸಂಪೂರ್ಣ ತಿಳಿದುಕೊಂಡಿದ್ದ. ರೈಸ್ ಪುಲ್ಲಿಂಗ್ ದಂಧೆಯ ಹಣವನ್ನು ದರೋಡೆ ಮಾಡಿಸಿದರೆ ಪೊಲೀಸರಿಗೆ ದೂರು ನೀಡುವುದಿಲ್ಲ ಎಂದು ಲೆಕ್ಕಾಚಾರ ಹಾಕಿ ತನ್ನ ಗೆಳೆಯ ರೌಡಿಶೀಟರ್ ಸೋಮನಿಗೆ ಮಾಹಿತಿ ನೀಡಿದ್ದ. ಸೋಮ ಹಾಗೂ ಚೇತನ್ ಇಬ್ಬರೂ ಸೇರಿ ಇತರ ಆರೋಪಿಗಳನ್ನು ಸೇರಿಸಿಕೊಂಡು ದರೋಡೆಯ ರೂಪುರೇಷೆ ಸಿದ್ಧಪಡಿಸಿದ್ದರು.

ಮಾಲೀಕ ಶಿವಶಂಕರ್ ಜತೆ ಜೂ.16ರಂದು 74 ಲಕ್ಷ ರೂ. ಕಾರಿನಲ್ಲಿ ಇಟ್ಟುಕೊಂಡು ಮನೆಗೆ ಹೋಗುತ್ತಿರುವುದರ ಬಗ್ಗೆ ಚೇತನ್ ಸೋಮನಿಗೆ ಮಾಹಿತಿ ನೀಡಿದ್ದ. ಸ್ಕೂಟರ್ ಹಾಗೂ ಕಾರಿನಲ್ಲಿ ಬಂದಿದ್ದ ಸೋಮ ಹಾಗೂ ಮತ್ತವನ ತಂಡ ಕುದುರೆಗೆರೆ ಕಾಲೊನಿಯ ಗಣೇಶ ದೇವಾಲಯದ ರಸ್ತೆಯಲ್ಲಿ ಅಡ್ಡಗಟ್ಟಿತ್ತು. ಬಿಯರ್ ಬಾಟಲಿ ಹಾಗೂ ಚಾಕು ತೆಗೆದು ಶಿವಶಂಕರ್ ಹಾಗೂ ಕಾರು ಚಾಲಕ ಚೇತನ್‌ನನ್ನು ಬೆದರಿಸಿ ಕೆಳಗೆ ಇಳಿಸಿದ್ದರು. ಮತ್ತೊಂದು ಕಾರಿಗೆ ಇಬ್ಬರನ್ನೂ ಹತ್ತಿಸಿಕೊಂಡು ನೆಲಮಂಗಲ ಸಮೀಪದ ಅರಣ್ಯ ಪ್ರದೇಶಕ್ಕೆ ಕರೆದೊಯ್ದು 74 ಲಕ್ಷ ರೂ. ದೋಚಿದ್ದರು. ಬಳಿಕ ಮನೆಯಲ್ಲಿಟ್ಟಿದ್ದ 35 ಲಕ್ಷ ರೂ.ಗಳನ್ನು ಕೂಡ ತರಿಸಿಕೊಂಡು ದರೋಡೆ ಮಾಡಿ ಪರಾರಿಯಾಗಿದ್ದರು ಎಂದು ಪೊಲೀಸರು ವಿವರಿಸಿದರು.

ಡ್ರಗ್ಸ್ ವಿರುದ್ಧ ನಗರ ಪೊಲೀಸರ ಸಮರ | ಸಿಸಿಬಿ ಬೇಟೆಗೆ ಬಿದ್ದ ಮೂವರು ವಿದೇಶಿಯರು | 17 ಮಂದಿ ಪೆಡ್ಲರ್‌ಗಳ ಸೆರೆ

25 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ

■ ವಿಕ ಸುದ್ದಿಲೋಕ ಬೆಂಗಳೂರು

ಡ್ರಗ್ಸ್ ಜಾಲದ ವಿರುದ್ಧ ಸಮರ ಮುಂದುವರಿಸಿರುವ ನಗರ ಪೊಲೀಸರು, ಮೂವರು ವಿದೇಶಿಯರೂ ಸೇರಿದಂತೆ 17 ಪೆಡ್ಲರ್‌ಗಳನ್ನು ಬಂಧಿಸಿ ಬರೋಬ್ಬರಿ 25.33 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಕೇಂದ್ರ ಅಪರಾಧ ವಿಭಾಗ (ಸಿಸಿಬಿ)ದ ಮಾದಕ ದ್ರವ್ಯ ನಿಗ್ರಹ ಘಟಕವು ಮೂವರು ವಿದೇಶಿಯರು ಹಾಗೂ ಒಬ್ಬ ಕೇರಳೀಯನನ್ನು ಬಂಧಿಸಿದೆ. ಆರೋಪಿಗಳು ನಗರಾದ್ಯಂತ ವ್ಯಸನಿಗಳಿಗೆ ಪೂರೈಸಲು ಸಂಗ್ರಹಿಸಿಟ್ಟಿದ್ದ 23 ಕೋಟಿ ರೂ. ಮೌಲ್ಯದ ಎಂಡಿಎಂಎ ಹಾಗೂ ಹೈಡ್ರೋಗಾಂಜಾ ವಶಪಡಿಸಿಕೊಂಡಿದೆ.

ನೈಜೀರಿಯಾದ ಆಂಜಿಯೊ ಜೋನ್ ವಿಕ್ಟರ್ ಅಲಿಯಾಸ್ ವಿಸ್ಸಂ, ಚಿಮೆ ನಾಡುಬುಸಿ ಮೋಸೆಸ್, ಕರಿಕಾರಿ ಆಮೋಸ್, ಕೇರಳದ ಫಾರೂಕ್ ಬಂಧಿತರು. ಆರೋಪಿಗಳು ವ್ಯವಸ್ಥಿತ ಡ್ರಗ್ಸ್ ಸಿಂಡಿಕೇಟ್ ಕಟ್ಟಿಕೊಂಡು ದಿಲ್ಲಿ, ಮುಂಬಯಿಯಿಂದ ಹೈಡ್ರೋಗಾಂಜಾ ತರಿಸಿಕೊಂಡು ಕಾಲೇಜು ವಿದ್ಯಾರ್ಥಿಗಳು ಹಾಗೂ ಐಟಿ ಉದ್ಯೋಗಿಗಳಿಗೆ ಮಾರುತ್ತಿದ್ದರು. ಈ ಬಗ್ಗೆ ಖಚಿತ ಮಾಹಿತಿ ಆಧರಿಸಿ ವಿಶೇಷ ಕಾರ್ಯಾಚರಣೆ ನಡೆಸಿದ ಡಿಸಿಪಿ ರಾಜಾ ಇಮಾಮ್ ಕಾಸಿಂ ಮಾರ್ಗದರ್ಶನದಲ್ಲಿ, ಎಸಿಪಿ ಎಲ್.ವೈ. ರಾಜೇಶ್ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್‌ಗಳಾದ ಪ್ರವೀಣ್ ಸಿ. ಯಲಿಗಾರ್, ಸಿ.ಎಂ.ಮಂಜಪ್ಪ ಹಾಗೂ ಪಿಎಸ್‌ಐ ಕೇಶವಮೂರ್ತಿ, ಹೆಡ್‌ಕಾನ್ಸ್‌ಟೆಬಲ್ ಶಶಿಧರ ಅವರನ್ನೊಳಗೊಂಡ ತಂಡವು ಆರೋಪಿಗಳನ್ನು ಬಂಧಿಸಿದೆ.

ಮಾದನಾಯಕನಹಳ್ಳಿ ವ್ಯಾಪ್ತಿಯಲ್ಲಿ ವಿದೇಶಿ ಆರೋಪಿಗಳು ಸಂಗ್ರಹಿಸಿಟ್ಟಿದ್ದ 10.270 ಕೆಜಿ ಎಂಡಿಎಂಎ ಹಾಗೂ ಫಾರೂಕ್ ಸಂಗ್ರಹಿಸಿದ್ದ 2.44 ಕೆಜಿ ಹೈಡ್ರೋ ಗಾಂಜಾ ಜಪ್ತಿ ಮಾಡಲಾಗಿದೆ.

ಟ್ರೇಡಿಂಗ್ ಬಿಟ್ಟ ಪೆಡ್ಲರ್: ಆರು ತಿಂಗಳ ಹಿಂದೆ ಉದ್ಯೋಗ ಅರಸಿ ನಗರಕ್ಕೆ ಬಂದಿದ್ದ ಫಾರೂಕ್, ಷೇರು ಟ್ರೇಡಿಂಗ್ ವ್ಯವಹಾರ ನಡೆಸುತ್ತಿದ್ದ. ಕೆಲ ತಿಂಗಳಿಂದ ಸುಲಭವಾಗಿ ಹಣ ಸಂಪಾದನೆ ಮಾಡಲು ತನ್ನ ಸ್ನೇಹಿತ ಪ್ಯಾರಿಸ್ ಎಂಬುವನ ಜತೆ ಸೇರಿ ಡ್ರಗ್ಸ್ ದಂಧೆಗೆ ಇಳಿದಿದ್ದ.

1 ಲಕ್ಷ ರೂ. ಬಹುಮಾನ: ಸಿಸಿಬಿ ಪೊಲೀಸರ ಕಾರ್ಯಾಚರಣೆಯನ್ನು ಶ್ಲಾಘಿಸಿರುವ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, 1 ಲಕ್ಷ ರೂ.ನಗದು ಬಹುಮಾನ ಘೋಷಿಸಿದರು.

'ಡ್ರಗ್ಸ್ ಮುಕ್ತ ಬೆಂಗಳೂರು' ಗುರಿ ಆಧರಿಸಿ ಮಾದಕ ವಸ್ತು ಜಾಲದ ವಿರುದ್ಧ ನಿರಂತರ ಕಾರ್ಯಾಚರಣೆ ನಡೆಸಲಾಗುತ್ತಿದೆ.
-ಸೀಮಂತ್ ಕುಮಾರ್ ಸಿಂಗ್
ನಗರ ಪೊಲೀಸ್ ಆಯುಕ್ತರು

ಫ್ರಿಜ್ ರಿಪೇರಿ ಕೆಲಸಗಾರನ ಬಂಧನ: ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಆಂಧ್ರ ಮೂಲದ ಕೆ.ಪ್ರಸಾದ್ ಎಂಬಾತನನ್ನು ಬಂಧಿಸಿ, 45.855 ಕೆಜಿ ಗಾಂಜಾ, 237 ಗ್ರಾಂ ಹೈಡ್ರೋ ಗಾಂಜಾ ಹಾಗೂ ಮೊಬೈಲ್ ಸೇರಿದಂತೆ 69.64 ಲಕ್ಷ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಕೆ.ಆರ್.ಪುರ ಸಮೀಪದ ನೆಲ್ಲೂರಿನಲ್ಲಿ ನೆಲೆಸಿದ್ದ ಪ್ರಸಾದ್, ಈ ಮೊದಲು ಫ್ರಿಜ್, ಎಸಿ ರಿಪೇರಿ ಕೆಲಸಗಾರನಾಗಿ ಜೀವನ ಸಾಗಿಸುತ್ತಿದ್ದ. ಆದರೆ, ಸುಲಭವಾಗಿ ಹಣ ಸಂಪಾದನೆ ಸಲುವಾಗಿ ಡ್ರಗ್ಸ್ ಮಾರಾಟಕ್ಕೆ ಮುಂದಾಗಿದ್ದ.

ಮಡಿವಾಳ, ವೈಟ್‌ಫೀಲ್ಡ್ ಪೊಲೀಸರ ಕಾರ್ಯಾಚರಣೆ: ಮಡಿವಾಳ ಪೊಲೀಸರು 36 ಲಕ್ಷ ರೂ. ಮೌಲ್ಯದ 36 ಕೆಜಿ ಗಾಂಜಾ, ವೈಟ್ ಫೀಲ್ಡ್ ಪೊಲೀಸರು 22 ಲಕ್ಷ ರೂ. ಬೆಲೆಯ 22 ಕೆಜಿ ಗಾಂಜಾ ಹಾಗೂ ತಿಲಕ್‌ನಗರ ಠಾಣೆ ಪೊಲೀಸರು 20 ಲಕ್ಷ ರೂ. ಮೌಲ್ಯದ 20.200 ಕೆಜಿ ಗಾಂಜಾ, ಆರ್‌ಎಂಸಿ ಯಾರ್ಡ್ ಪೊಲೀಸರು 72.30 ಲಕ್ಷ ರೂ. ಮೌಲ್ಯದ 1.33 ಗ್ರಾಂ ಹೈಡ್ರೋ ಗಾಂಜಾ ಹಾಗೂ ಇಂದಿರಾನಗರ ಠಾಣೆ ಪೊಲೀಸರು 3.24 ಲಕ್ಷ ರೂ. ಬೆಲೆಯ 3.247 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ನಂದಿ ಬಳಿಯ ಹೋಂ ಸ್ಟೇನಲ್ಲಿ ಯುವತಿ ಸಾವು

ತಾಯಿಯಿಂದ ಲವ್ ಜಿಹಾದ್ ಆರೋಪ

ಚಿಕ್ಕಬಳ್ಳಾಪುರ: ತಾಲೂಕಿನ ನಂದಿಗಿರಿಧಾಮ ಪೊಲೀಸ್ ಠಾಣಾ ವ್ಯಾಪ್ತಿಯ ಮುದ್ದೇನಹಳ್ಳಿ ಬಳಿಯ ಹೋಂ ಸ್ಟೇನಲ್ಲಿ ಬೆಂಗಳೂರು ಮೂಲದ ಯುವತಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದು ಮೃತಳ ತಾಯಿ ಲವ್ ಜಿಹಾದ್ ಆರೋಪ ಮಾಡಿದ್ದಾರೆ.

ಮೃತ ಯುವತಿಯನ್ನು ಸಾಯಿ ಸುರಭಿ (30) ಎಂದು ಗುರುತಿಸಲಾಗಿದೆ. ಈಕೆಯ ಪ್ರಿಯಕರ ಎನ್ನಲಾದ ಕೇರಳ ಮೂಲದ ಸಂಜೀತ್ ಅಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಯುವತಿಯ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು ನೇಣು ಹಾಕಿದ್ದ ಹಗ್ಗ ಕತ್ತರಿಸಿದ ಸ್ಥಿತಿಯಲ್ಲಿತ್ತು. ಅಲ್ಲದೆ, ಸ್ಥಳದಲ್ಲಿ ಕೆಲವು ಮಾತ್ರೆಗಳು ಪತ್ತೆಯಾಗಿದ್ದು ವಿಷ ಸೇವಿಸಿರುವ ಸಾಧ್ಯತೆಗಳೂ ಇವೆ.

ಬೆಂಗಳೂರು ಮೂಲದ ಸಾಯಿ ಸುರಭಿ ಹಾಗೂ ಕೇರಳದ ಕೋಳಿಕ್ಕೋಡ್ ನಿವಾಸಿ ಕ್ಯಾಬ್ ಡ್ರೈವರ್ ಸಂಜೀತ್ ಅಲಿ ಶನಿವಾರ ಮುದ್ದೇನಹಳ್ಳಿ ಬಳಿಯ ಹೋಂ ಸ್ಟೇಗೆ ಬಂದು ತಂಗಿದ್ದರು. ಸೋಮವಾರ ಚೆಕ್ ಔಟ್ ಸಮಯ ಮುಗಿದರೂ ಕೊಠಡಿಯ ಬಾಗಿಲು ತೆರೆಯದಿದ್ದಾಗ ಹೋಂ ಸ್ಟೇ ಕೇರ್‌ಟೇಕರ್ ಬಂದು ಪರಿಶೀಲಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ಈ ನಡುವೆ, 'ಇದು ಲವ್ ಜಿಹಾದ್ ಕೊಲೆ' ಎಂದು ಸಾಯಿ ಸುರಭಿ ತಾಯಿ ಗೀತಾ ಆರೋಪಿಸಿದ್ದಾರೆ. ಕ್ಯಾಬ್ ಡ್ರೈವರ್ ಆಗಿದ್ದ ಸಂಜೀತ್ ಅಲಿ ಬೆಂಗಳೂರಿನ ದಯಾನಂದ ಸಾಗರ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವಾಗ ಸುರಭಿಗೆ ಪರಿಚಯವಾಗಿ ಪ್ರೀತಿ ಹೆಸರಲ್ಲಿ ಕಿರುಕುಳ ನೀಡುತ್ತಿದ್ದ. ಈತನ ಕಾಟ ತಪ್ಪಿಸಲು ಬೇರೆ ಕಡೆ ಕಾಲೇಜಿಗೆ ಸೇರಿಸಿದರೂ ಅಲ್ಲಿಗೆ ಹೋಗಿ ಕಾಟ ಕೊಡುತ್ತಿದ್ದ. ತನ್ನ ಮಗಳನ್ನು ಮರುಳು ಮಾಡಿ ಡ್ರಗ್ ಅಡಿಕ್ಟ್ ಮಾಡಿದ್ದ. ಚಿಕಿತ್ಸೆ ಕೊಡಿಸಿ ಸರಿಯಾದ ನಂತರ ಮುದ್ದೇನಹಳ್ಳಿಯಲ್ಲಿ ಕಾಲೇಜಿಗೆ ಸೇರಿದ್ದಳು. ಆದರೆ, ಇಲ್ಲಿಗೂ ಬಂದು ಅವಳನ್ನು ಮರಳು ಮಾಡಿ ಹೋಂ ಸ್ಟೇಗೆ ಕರೆದೊಯ್ದು ಕೊಲೆ ಮಾಡಿದ್ದಾನೆ ಎಂದು ಆರೋಪಿಸಿದ್ದಾರೆ. ತೀವ್ರ ಅಸ್ವಸ್ಥಗೊಂಡು ಆಸ್ಪತ್ರೆ ಸೇರಿರುವ ಸಂಜೀತ್ ಅಲಿಗೆ ಪ್ರಜ್ಞೆ ಬಂದು ವಿಚಾರಣೆ ನಡೆಸಿದ ನಂತರವಷ್ಟೇ ಕೊಲೆಗೆ ಕಾರಣ ಸ್ಪಷ್ಟವಾಗಿ ತಿಳಿದು ಬರಲಿದೆ ಎಂದು ಎಸ್‌ಪಿ ಕುಶಾಲ್ ಚೌಕ್ಸೆ ತಿಳಿಸಿದ್ದಾರೆ.

ಕೆಲಸ ಮಾಡುತ್ತಿದ್ದ ಮನೆಗೆ ಕನ್ನ: ಸೆರೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಗೆ ಕನ್ನ ಹಾಕಿ ಆಭರಣ, ನಗದು ದೋಚಿದ್ದ ಆರೋಪಿಯನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನ ಮೂಲದ ಬಾಲಚಂದ್ (36) ಬಂಧಿತ. ಮನೋರಾಯನಪಾಳ್ಯದ ಪುರುಷೋತ್ತಮ್ ಎಂಬುವವರ ಬಳಿ ಕಾರ್ಪೆಂಟರ್ ಆಗಿ ಬಾಲಚಂದ್ ಕೆಲಸ ಮಾಡುತ್ತಿದ್ದರು. ಜೂನ್ 6 ಹಾಗೂ 7ರಂದು ಪುರುಷೋತ್ತಮ್ ಅವರು ಕುಟುಂಬದ ಜತೆ ಹೊರಗಡೆ ಹೋಗಿದ್ದರು. ಇದೇ ಸಮಯಕ್ಕೆ ಹೊಂಚು ಹಾಕಿದ್ದ ಬಾಲಚಂದ್ ಮನೆಯಲ್ಲಿದ್ದ ಆಭರಣ ಹಾಗೂ ನಗದು ದೋಚಿ ಪರಾರಿಯಾಗಿದ್ದ.

ಈ ಸಂಬಂಧ ಜೂ.13ರಂದು ಪುರುಷೋತ್ತಮ್ ನೀಡಿದ ದೂರಿನನ್ವಯ ತನಿಖೆ ನಡೆಸಿದ ಇನ್ಸ್‌ಪೆಕ್ಟರ್ ಭೈರ ನೇತೃತ್ವದ ತಂಡವು ಆರೋಪಿ ಬಾಲಚಂದ್‌ನನ್ನು ಬಂಧಿಸಿ, 80 ಸಾವಿರ ರೂ. ನಗದು ಸೇರಿ 22.90 ಲಕ್ಷ ರೂ.ಮೌಲ್ಯದ ಆಭರಣ ವಶಪಡಿಸಿಕೊಂಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹದೇವಪುರ ಕ್ಷೇತ್ರದ ಬಿಜೆಪಿ ಮಂಡಲಗಳ ವತಿಯಿಂದ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿ, ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಹೂಡಿ ಪಿಳ್ಳಪ್ಪ, ನಗರ ಮಂಡಲ ಅಧ್ಯಕ್ಷ ಶ್ರೀಧರ್‌ರೆಡ್ಡಿ, ಮನೋಹರ್‌ರೆಡ್ಡಿ, ಪಾಪಣ್ಣ, ಎಲ್. ರಾಜೇಶ್, ಮಹೇಂದ್ರ ಮೋದಿ ಉಪಸ್ಥಿತರಿದ್ದರು.

ಪೀಣ್ಯ ಕೈಗಾರಿಕಾ ಸಂಘದ ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಇತರ ಪದಾಧಿಕಾರಿಗಳು ಸೋಮವಾರ ಅಧಿಕಾರ ಸ್ವೀಕರಿಸಿದರು. ಹಿರಿಯ ಉಪಾಧ್ಯಕ್ಷ ಮಲ್ಲೇಶ್‌ಗೌಡ ಎಚ್.ಕೆ, ಉಪಾಧ್ಯಕ್ಷ ಎ.ಪಿ.ಸೆಲ್ವಕುಮಾರ್, ಗೌರವ ಕಾರ್ಯದರ್ಶಿ ರಾಜಗೋಪಾಲ್, ಜಂಟಿ ಕಾರ್ಯದರ್ಶಿ ಮೀನೇಶ್ ಕುಮಾರ್, ಖಜಾಂಚಿ ಮಂಜಪ್ಪ ಎಸ್., ಜಂಟಿ ಖಜಾಂಚಿ ನಿರ್ಮಯ್ ಎ ಬುರ್ಜಿ, ಡಿ.ಪಿ. ದಾನಪ್ಪ ಇದ್ದರು.

ಒಂಟಿ ಮಹಿಳೆ ಕೊಲೆ

ಪರಿಚಯಸ್ಥರಿಂದಲೇ ಕೃತ್ಯ ಶಂಕೆ

ಅರಬೆತ್ತಲೆ ಮೃತದೇಹ ಕಂಡು ಸ್ಥಳೀಯರು ಶಾಕ್

ಅಪರಾಧ ಸುದ್ದಿ

ಬೆಂಗಳೂರು: ಪಶ್ಚಿಮ ಬಂಗಾಳ ಮೂಲದ ಒಂಟಿ ಮಹಿಳೆಯೊಬ್ಬರನ್ನು ಉಸಿರುಗಟ್ಟಿಸಿ ಕೊಲೆಗೈದಿರುವ ಘಟನೆ ಬೊಮ್ಮನಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ಬೆಳಕಿಗೆ ಬಂದಿದೆ.

ಕೃಷ್ಣಾ ಬರ್ಮನ್ (40) ಕೊಲೆಯಾದವರು.

ಮುನಿಯಪ್ಪ ಲೇಔಟ್‌ನ ಚಿಕ್ಕ ಕೊಠಡಿಯೊಂದರಲ್ಲಿ ನಾಲ್ಕು ತಿಂಗಳಿನಿಂದ ಕೃಷ್ಣಾ ಬರ್ಮನ್ ಒಂಟಿಯಾಗಿ ವಾಸಿಸುತ್ತಿದ್ದರು. ಅಪಾರ್ಟ್‌ಮೆಂಟ್‌ವೊಂದರಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದರು.

ಭಾನುವಾರ ರಾತ್ರಿ 9.30ರ ಸುಮಾರಿಗೆ ಕೃಷ್ಣಾ ಬರ್ಮನ್ ಅವರ ಕೊಠಡಿಯು ಅರ್ಧ ತೆರೆದಿರುವುದನ್ನು ಸ್ಥಳೀಯರು ಗಮನಿಸಿದ್ದರು. ಹಲವು ಬಾರಿ ಕರೆದರೂ ಒಳಗಿನಿಂದ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. ಹೀಗಾಗಿ,ಬಾಗಿಲು ಸ್ವಲ್ಪ ತಳ್ಳಿ ನೋಡಿದಾಗ ಅರ್ಧ ಬೆತ್ತಲೆಯಾಗಿ ಬರ್ಮನ್ ಅವರು ಮೃತಪಟ್ಟಿರುವುದನ್ನು ಕಂಡು 'ನಮ್ಮ 112'ಕ್ಕೆ ಕರೆ ಮಾಡಿ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಆಗಮಿಸಿದ್ದ ಪೊಲೀಸರು, ಬರ್ಮನ್ ಮೃತದೇಹವನ್ನು ವಶಕ್ಕೆ ಪಡೆದು ಆಸ್ಪತ್ರೆಗೆ ದಾಖಲಿಸಿದ್ದರು. ಮೇಲ್ನೋಟಕ್ಕೆ ಉಸಿರುಗಟ್ಟಿಸಿ ಕೊಂದಿರುವ ಶಂಕೆಯಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಘಟನಾ ಸ್ಥಳದ ಸುತ್ತಮುತ್ತಲ ಪ್ರದೇಶದ ಸಿಸಿಟಿವಿ ಪರಿಶೀಲಿಸುತ್ತಿದ್ದು, ಬರ್ಮನ್ ಪರಿಚಯಸ್ಥರು ಕೊಠಡಿಗೆ ಬಂದು ಹೋಗಿದ್ದರೇ ಎಂಬುದರ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ.

''ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಸಾವಿನ ಬಗ್ಗೆ ಸ್ಪಷ್ಟತೆ ಸಿಗಲಿದೆ. ವರದಿ ಬಂದ ಕೂಡಲೇ ಇತರೆ ಸೆಕ್ಷನ್‌ಗಳನ್ನು ಅಳವಡಿಸಿ ತನಿಖೆ ನಡೆಸಲಾಗುವುದು,'' ಎಂದು ಆಗ್ನೇಯ ವಿಭಾಗದ ಡಿಸಿಪಿ ಮೊಹಮದ್ ಸುಜೀತಾ ತಿಳಿಸಿದರು.

ಇಬ್ಬರು ಸುಲಿಗೆಕೋರರ ಬಂಧನ

ಬೆಂಗಳೂರು: ವಾಯುವಿಹಾರಕ್ಕೆ ತೆರಳುತ್ತಿದ್ದ ಮಹಿಳೆಯರನ್ನು ಗುರಿಯಾಗಿಸಿ ಸರ ಕಸಿಯುತ್ತಿದ್ದ ರೌಡಿ ಸೇರಿದಂತೆ ಇಬ್ಬರು ಆರೋಪಿಗಳನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಾಮಣ್ಣ ಗಾರ್ಡನ್ ನಿವಾಸಿ ನಯೀಮ್ ಪಾಷಾ ಅಲಿಯಾಸ್ ಪಿಂಟು (30), ಮುದಾಸಿರ್ ಅಲಿಯಾಸ್ ಇಮ್ರಾನ್ (25) ಬಂಧಿತರು.

ಆರೋಪಿಗಳ ಬಂಧನದಿಂದ ಸರಗಳವು, ಸುಲಿಗೆ, ಮನೆಗಳವು ಸೇರಿದಂತೆ ಎಂಟು ಅಪರಾಧ ಪ್ರಕರಣಗಳು ಪತ್ತೆಯಾಗಿದ್ದು, 23 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಲ ದಿನಗಳ ಹಿಂದೆ ವಿಜಯನಗರದ ರೆಮ್ಕೋ ಲೇಔಟ್‌ನಲ್ಲಿ ರೇಣುಕಾ ಎಂಬುವವರು ವಾಯುವಿಹಾರ ಮಾಡುವಾಗ ಹಿಂಬಾಲಿಸಿದ್ದ ದುಷ್ಕರ್ಮಿಗಳು, ಸರ ಕಸಿದು ಪರಾರಿಯಾಗಿದ್ದರು. ಈ ಪ್ರಕರಣದ ತನಿಖೆ ನಡೆಸಿದ ಇನ್ಸ್‌ಪೆಕ್ಟರ್ ಸುರೇಶ್ ಹಾಗೂ ಸಬ್ ಇನ್ಸ್‌ಪೆಕ್ಟರ್ ಶೈಲಾ ನೇತೃತ್ವದ ತಂಡವು ತಾಂತ್ರಿಕ ಮಾಹಿತಿ ಆಧರಿಸಿ ಆರೋಪಿಗಳನ್ನು ಬಂಧಿಸಿತ್ತು.

ದುಷ್ಕೃತ್ಯವೇ ಉದ್ಯೋಗ

ಆರೋಪಿಗಳಾದ ಮುದಾಸಿರ್ ಪಾಷ ಹಾಗೂ ಇಮ್ರಾನ್ ವೃತ್ತಿಪರ ಸುಲಿಗೆಕೋರರಾಗಿದ್ದಾರೆ. ಹಲವು ವರ್ಷಗಳಿಂದ ಅಪರಾಧ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗಿಯಾಗಿದ್ದಾರೆ. ಮುದಾಸಿರ್ ವಿರುದ್ಧ ಮನೆ ಕಳವು ಹಾಗೂ ಕೊಲೆ ಸೇರಿದಂತೆ 30ಕ್ಕೂ ಹೆಚ್ಚು ಪ್ರಕರಣಗಳಿವೆ. ಈ ಪೈಕಿ ಹಳೆ ಪ್ರಕರಣಗಳಲ್ಲಿ ವಿಚಾರಣೆಗೆ ಗೈರಾದ ಕಾರಣಕ್ಕೆ ಆರೋಪಿ ವಿರುದ್ಧ 14ಕ್ಕೂ ಹೆಚ್ಚು ಜಾಮೀನು ರಹಿತ ವಾರಂಟ್‌ಗಳು ಬಾಕಿ ಇವೆ. ನಯೀಮ್ ಪಾಷ ವಿರುದ್ಧ ಕೊಲೆ, ರಾಬರಿ, ಸರ ಅಪಹರಣ, ಮನೆಕಳವು ಹಾಗೂ ವಾಹನ ಕಳವು ಸೇರಿದಂತೆ 10ಕ್ಕೂ ಹೆಚ್ಚಿನ ಪ್ರಕರಣಗಳು ವಿವಿಧ ಠಾಣೆಗಳಲ್ಲಿ ದಾಖಲಾಗಿವೆ. ಈ ಕಾರಣಕ್ಕೆ ಬ್ಯಾಟರಾಯನಪುರ ಠಾಣೆಯಲ್ಲಿ ರೌಡಿಪಟ್ಟಿ ತೆರೆಯಲಾಗಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ವಿವರಿಸಿದರು.

ಒತ್ತುವರಿ ತೆರವುಗೊಳಿಸಿ

» ನಮ್ಮ ಮೊದಲ ಪುಟದಿಂದ

ಬೀದಿ ವ್ಯಾಪಾರಿಗಳಿಗೆ ಮುಕ್ತ ಅವಕಾಶ: ''ನಗರದಲ್ಲಿ ಬೀದಿ ವ್ಯಾಪಾರಿಗಳು ಜೀವನ ನಡೆಸಲು ಮುಕ್ತ ಅವಕಾಶವಿದೆ. ಪಾಲಿಕೆ ಗುರುತಿಸುವ ನಾನ್ ವೆಂಡಿಂಗ್ ವಲಯಗಳ ರಸ್ತೆಗಳನ್ನು ಹೊರತುಪಡಿಸಿ ಉಳಿದ ರಸ್ತೆಗಳಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಮುಕ್ತವಾಗಿ ವ್ಯಾಪಾರ ನಡೆಸಬಹುದು,'' ಎಂದು ಹೇಳಿದರು.

''ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ಕುರಿತು ನಾಗರಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸಬೇಕು. ಯಾವ ರಸ್ತೆಗಳಲ್ಲಿ ಕಾರ್ಯಾಚರಣೆ ನಡೆಯಲಿದೆಯೋ, ಆ ರಸ್ತೆಗಳಲ್ಲಿ ಮುಂಚಿತವಾಗಿಯೇ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಜಾಗೃತಿ ಕಾರ್ಯಕ್ರಮದ ವೇಳೆ ಒತ್ತುವರಿಯನ್ನು ಸ್ವಯಂಪ್ರೇರಿತವಾಗಿ ತೆರವುಗೊಳಿಸದಿದ್ದರೆ ಪಾಲಿಕೆಯಿಂದ ತೆರವುಗೊಳಿಸಿ, ಕಾನೂನಿನ ಪ್ರಕಾರ ದಂಡ ವಿಧಿಸುವುದಾಗಿ ಮನವರಿಕೆ ಮಾಡಿಕೊಡಬೇಕು,'' ಎಂದು ತಿಳಿಸಿದರು.

''ಎಲ್ಲೆಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ನಡೆಯುತ್ತದೆಯೋ, ಅದೇ ಸ್ಥಳಗಳಲ್ಲಿ ಸಮಾನಾಂತರವಾಗಿ ಪಾದಚಾರಿ ಮಾರ್ಗಗಳ ದುರಸ್ತಿ ಕಾರ್ಯವನ್ನೂ ತಕ್ಷಣ ಕೈಗೊಳ್ಳಬೇಕು. ಪಾದಚಾರಿಗಳಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಆದ್ಯತೆ ನೀಡಿ, ಹಾಳಾಗಿರುವ ಸ್ಲ್ಯಾಬ್‌ಗಳು, ಕರ್ಬ್‌ಗಳು ಹಾಗೂ ಅಗತ್ಯ ಸಿವಿಲ್ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು,'' ಎಂದು ಹೇಳಿದರು.

ಪಾರ್ವತೀಸುತ ಸಂಸ್ಮರಣೆ ಇಂದು

ಬೆಂಗಳೂರು: ಎ.ಜೀಸ್. ಕಲಾಶ್ರೀ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಮಲ್ಲತ್ತಹಳ್ಳಿಯ ಕಲಾಗ್ರಾಮ ಸಭಾಂಗಣದಲ್ಲಿ ಜೂ.30ರಂದು ಮೂರನೇ ವರ್ಷದ 'ಪಾರ್ವತೀಸುತ ಸಂಸ್ಮರಣೆ' ಕಾರ್ಯಕ್ರಮ ಆಯೋಜಿಸಲಾಗಿದೆ.

ನರಸಿಂಹ ನಾಯಕ್

ಬೆಳಗ್ಗೆ 9 ರಿಂದ ಭಕ್ತಿಗೀತೆಗಳ ಗಾಯನ, ಮಧ್ಯಾಹ್ನ 1.30 ರಿಂದ ಭಾವಗೀತೆಗಳ ಗಾಯನ, ಸಂಜೆ 6ಕ್ಕೆ ರಂಗ ಶಿಖರ ವತಿಯಿಂದ 'ಗಾನ ವಿನೋದಿನಿ' ಹಾಸ್ಯ ಕಾರ್ಯಕ್ರಮ, ಪಾರ್ವತೀಸುತ ನೆನಪಿನಂಗಳ – ಗೀತೆಗಳ ಸಂಗೀತಯಾನ ನಡೆಯಲಿದೆ. 7ಕ್ಕೆ ಪುತ್ತೂರು ನರಸಿಂಹ ನಾಯಕ್ ಅವರಿಗೆ ಪಾರ್ವತೀಸುತ ಸಂಗೀತ ಶ್ರೇಷ್ಠ ಪ್ರಶಸ್ತಿ ಪ್ರದಾನ ಮಾಡಲಾಗುವುದು. ವಿದುಷಿ ಗೀತಾ ಸತ್ಯಮೂರ್ತಿ, ಗಾಯಕರಾದ ನರಹರಿ ದೀಕ್ಷಿತ್, ವಿಷ್ಣುರಾಮನ್, ಕೆ.ಎಂ. ಕುಸುಮಾ, ಲೇಖಕ ಎನ್. ರಾಮನಾಥ್ ಪಾಲ್ಗೊಳ್ಳಲಿದ್ದಾರೆ.

ಎಲ್ಲಿ-ಏನು? ಮಂಗಳವಾರ

ಕನ್ನಡ ಮೊದಲು: ಖಾಸಗಿ ಶಾಲೆಗಳಲ್ಲಿ ಕನ್ನಡ ಕಲಿಕೆ ಮತ್ತು ಸಮಗ್ರ ಕನ್ನಡ ಅನುಷ್ಠಾನದ ಬಗ್ಗೆ ಸಿಎಂ ಭೇಟಿಯ ಪೂರ್ವಭಾವಿ ಸಭೆ. **ಸ್ಥಳ:** ಕರ್ನಾಟಕ ಸಾಹಿತ್ಯ ಅಕಾಡೆಮಿ, ರವೀಂದ್ರ ಕಲಾಕ್ಷೇತ್ರ. ಮಧ್ಯಾಹ್ನ 2.45.

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ: ಅಂತಾರಾಷ್ಟ್ರೀಯ ಮಾದಕ ವ್ಯಸನ ಮತ್ತು ಕಳ್ಳ ಸಾಗಾಟ ವಿರೋಧಿ ದಿನ–2026. ಉದ್ಘಾಟನೆ: ಸಿಎಂ ಡಿ.ಕೆ.ಶಿವಕುಮಾರ್. ಉಪಸ್ಥಿತಿ: ಗೃಹ ಸಚಿವ ಪ್ರಿಯಾಂಕ್ ಖರ್ಗೆ.
ಸ್ಥಳ: ಕಂಠೀರವ ಕ್ರೀಡಾಂಗಣ. ಬೆಳಗ್ಗೆ 11.

ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ವೇದಿಕೆ: ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ವೇದಿಕೆ ಉದ್ಘಾಟನೆ ಹಾಗೂ ತಿಮ್ಮಕ್ಕನವರ 114ನೇ ಜನ್ಮ ದಿನೋತ್ಸವ. ಬೆಳಗ್ಗೆ 10ಕ್ಕೆ ಯಲಹಂಕ ಎಲ್‌ಬಿಎಸ್ ನಗರ ಹಾಗೂ ಹೆಸರಘಟ್ಟ ಹೋಬಳಿಯ ಅದ್ದಿಗಾನಹಳ್ಳಿಯಲ್ಲಿ ಗಿಡ ನೆಡುವ ಕಾರ್ಯಕ್ರಮ. ಮಧ್ಯಾಹ್ನ 3ಕ್ಕೆ ಯಲಹಂಕ ಉಪನಗರ ಮದರ್ ಡೇರಿ ಸರ್ಕಲ್‌ನಿಂದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ವೃತ್ತದವರೆಗೆ ತಿಮ್ಮಕ್ಕನವರ ಭಾವಚಿತ್ರ ಬೆಳ್ಳಿರಥದಲ್ಲಿ ಮೆರವಣಿಗೆ. ಸಂಜೆ 5ಕ್ಕೆ ವೇದಿಕೆ ಕಾರ್ಯಕ್ರಮ. ಉದ್ಘಾಟನೆ : ಸಚಿವ ಕೃಷ್ಣ ಬೈರೇಗೌಡ. ನಾಮಫಲಕ ಅನಾವರಣ: ಶಾಸಕ ಎಸ್.ಆರ್.ವಿಶ್ವನಾಥ್. ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಚ್. ಮಾರಪ್ಪ.
ಸ್ಥಳ: ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ವೃತ್ತ, ದಿ ನ್ಯೂ ಟೌನ್ ಕ್ಲಬ್ ಮುಂಭಾಗ, ಯಲಹಂಕ ಉಪನಗರ.

ನಿಧನ

ಸಾಹಿತಿ ಬಿ.ಜಿ. ಸತ್ಯಮೂರ್ತಿ

ಬೆಂಗಳೂರು: ಕೃಷಿ ಇಲಾಖೆಯಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ ಅಧೀಕ್ಷಕರಾಗಿ ನಿವೃತ್ತರಾಗಿದ್ದ ಹಿರಿಯ ಸಾಹಿತಿ, ಪ್ರಕಾಶಕ ಬಿ.ಜಿ. ಸತ್ಯಮೂರ್ತಿ (88) ಅವರು ಭಾನುವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾಗಿದ್ದು, ಸಂಜೆಯೇ ಟಿ.ಆರ್. ಮಿಲ್‌ನ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು.



ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಇದ್ದಾರೆ. ನಗರದ ಹುಳಿಮಾವು ಬಡಾವಣೆಯಲ್ಲಿ ಅವರು ವಾಸವಾಗಿದ್ದರು. ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ 1937ರ ಸೆಪ್ಟೆಂಬರ್ 10ರಂದು ಜನಿಸಿದ ಸತ್ಯಮೂರ್ತಿ ಅವರು ಎಂಎ (ಕನ್ನಡ) ಪದವೀಧರರು. ಕೃಷಿ ಇಲಾಖೆಯಲ್ಲಿ ಹೆಚ್ಚು ಕಾಲ, ಆನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾ ಕಥೆ ಕಾದಂಬರಿಗಳನ್ನು ಬರೆಯಲು ಪ್ರಾರಂಭಿಸಿದರು. 80ರ ದಶಕದಲ್ಲಿ ಅವರು ಬರೆದ ಕಥೆಗಳು ದಿನಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ. ಪ್ರೇಮದ ಬಾಳು, ಹೃದಯ ವೀಣೆ, ದೇವರಿಲ್ಲದ ಗುಡಿ, ವಸಂತದಹನ, ನಿಯತ್ತಿನ ನೇಣು, ಸರಳ ಭಾರತ ಮುಂತಾದ 75ಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಲವ್ ಇನ್ ನಂದಿ, ಬುದ್ಧನದೇ ಚಿಂತೆ, ಶೈಲಾ ಟೀಚರ್, ಮುನಿಯನ ಮನವಿ, ಇತ್ಯಾದಿ ಕಥೆಗಳು, ಯಜ್ಞಪಶು, ಆಹುತಿ ಮತ್ತಿತರ ನಾಟಕಗಳು, ರಾಘವೇಂದ್ರ ಸ್ವಾಮೀಜಿ ಕುರಿತು ಬರೆದ 'ಗುರುದಕ್ಷಿಣೆ' ಮತ್ತು ಮಹಾಭಾರತದ ವಸ್ತುನಿಷ್ಠ ಅಧ್ಯಯನದ ಕೃತಿ 'ಸರಳಭಾರತ' ಹೀಗೆ ಹಲವು ಕೃತಿಗಳನ್ನು ರಚಿಸಿದ್ದಾರೆ. 'ಸಾಹಿತಿ ಮಾಹಿತಿ ಕೋಶ' ಎಂಟು ಸಂಪುಟಗಳಲ್ಲಿ ಸುಮಾರು 1,454 ಸಾಹಿತಿಗಳ ಸಂಕ್ಷಿಪ್ತ ವಿವರಗಳನ್ನು ಪ್ರಕಟಿಸಿದ್ದರು. ಇದು ಸತ್ಯಮೂರ್ತಿಯವರ ಪ್ರಮುಖ ಕೃತಿಯಾಗಿದೆ. ಸತ್ಯಮೂರ್ತಿ ಅವರಿಗೆ ಅತ್ತಿಮಬ್ಬೆ ಪ್ರತಿಷ್ಠಾನದ ಪ್ರಶಸ್ತಿ, ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ, ರತ್ನ ಪ್ರಶಸ್ತಿ, ಕೃಷಿ ಇಲಾಖೆಯ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಲಭಿಸಿವೆ.

ಬೀದಿ ವ್ಯಾಪಾರಿಗಳಿಗೆ ನೀಡುತ್ತಿರುವ ಕಿರುಕುಳ ನಿಲ್ಲಲಿ: ಎಐಸಿಸಿಟಿಯು

ಬೆಂಗಳೂರು: ನಗರದಲ್ಲಿ ಬೀದಿ ವ್ಯಾಪಾರಿಗಳಿಗೆ ನೀಡುತ್ತಿರುವ ಕಿರುಕುಳ ನಿಲ್ಲಬೇಕು. ಪಾದಚಾರಿ ಮಾರ್ಗವನ್ನು ಅಗಲಗೊಳಿಸಿ, ವ್ಯಾಪಾರಿಗಳಿಗೂ ಅವಕಾಶ ನೀಡಬೇಕು ಎಂಬುದೂ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘ (ಎಐಸಿಸಿಟಿಯು) ಒತ್ತಾಯಿಸಿದೆ.

ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಅವರು ನಗರದ ಪಾದಚಾರಿ ಮಾರ್ಗಗಳ ಸುರಕ್ಷತೆ ಮತ್ತು ಸೂಕ್ತ ಬಳಕೆ ಬಗ್ಗೆ ಕಾಳಜಿ ವ್ಯಕ್ತಪಡಿಸಿರುವುದನ್ನು ಸ್ವಾಗತಿಸಿರುವ ಸಂಘಟನೆ, ''ಸ್ವಚ್ಛ, ಅಗಲ, , ಸುರಕ್ಷಿತ ಮತ್ತು ಎಲ್ಲರೂ ಉಪಯೋಗಿಸುವಂತಹ ಪಾದಚಾರಿ ಮಾರ್ಗಗಳ ನಿರ್ಮಾಣದ ಅಗತ್ಯವಿದೆ,'' ಎಂದು ಸಲಹೆ ನೀಡಿದೆ.

ಅಲ್ಲದೆ, ''ಯಾವುದೇ ಅಧಿಕೃತ ಆದೇಶ ಹೊರ ಬೀಳುವ ಮುನ್ನವೇ ಸಚಿವರ ಹೇಳಿಕೆ ಆಧರಿಸಿ, ಜಿಬಿಎ ವ್ಯಾಪ್ತಿಯ ಮಹಾನಗರ ಪಾಲಿಕೆಗಳ ಅಧಿಕಾರಿಗಳು ಪಾದಚಾರಿ ಮಾರ್ಗಗಳಿದ್ದರೂ ಬೀದಿ ವ್ಯಾಪಾರಿಗಳನ್ನು ಎತ್ತಂಗಡಿ ಮಾಡುತ್ತೇವೆ ಎಂದು ಬೆದರಿಸುತ್ತಿದ್ದಾರೆ,'' ಎಂದು ಆರೋಪಿಸಿದೆ.

''ನಗರದಲ್ಲಿ ಸುಮಾರು 2 ಲಕ್ಷ ಬೀದಿ ವ್ಯಾಪಾರಿಗಳಿದ್ದಾರೆ. ಅನೇಕರು ಮಹಾನಗರ ಪಾಲಿಕೆಗಳ ಸಮೀಕ್ಷೆಗೆ ಒಳಗಾಗಿದ್ದಾರೆ. ಸರಕಾರದ 'ಪಿಎಂ ಸ್ವನಿಧಿ' ಸಾಲ ಪಡೆದಿದ್ದಾರೆ ಮತ್ತು ಮಾನ್ಯತೆ ಪಡೆದ ಕಾರ್ಮಿಕ ಸಂಘಗಳ ನೋಂದಾಯಿತ ಸದಸ್ಯರಾಗಿದ್ದಾರೆ. ಯಾರೂ ಒತ್ತುವರಿ ದಾರರಲ್ಲ, ಬೀದಿ ವ್ಯಾಪಾರಿಗಳ (ಜೀವನೋಪಾಯ ರಕ್ಷಣೆ ಹಾಗೂ ನಿಯಂತ್ರಣ) ಕಾಯಿದೆ–2014ರಡಿ ನಿರೀಕ್ಷಿತ ಸಾರ್ವಜನಿಕ ಸ್ಥಳದ ಕಾನೂನುಬದ್ಧ ಬಳಕೆದಾರರು. ಆದರೆ, ಸಚಿವರ ಈ ಹೇಳಿಕೆಗಳು, ಅಧಿಕಾರಿಗಳ ನಡೆ ಇಬ್ಬರು ವೈರಿಗಳಂತೆ ಬಿಂಬಿಸುತ್ತಿದೆ,'' ಎಂದು ಪ್ರಕಟಣೆಯಲ್ಲಿ ಬೇಸರ ವ್ಯಕ್ತಪಡಿಸಿದೆ.

''ಈ ಕಾಯಿದೆ 2014ರಲ್ಲಿ ಜಾರಿಗೆ ತಂದದ್ದು ಕಾಂಗ್ರೆಸ್ ನೇತೃತ್ವದ ಕೇಂದ್ರ ಸರಕಾರ. ಬೀದಿ ವ್ಯಾಪಾರಿಗಳ ಹಕ್ಕುಗಳ ರಕ್ಷಣೆ ಕಾಂಗ್ರೆಸ್ ಪಕ್ಷದ ಸ್ಥಾಪಿತ ಬದ್ಧತೆ. 2023ರ ಕರ್ನಾಟಕ ವಿಧಾನಸಭಾ ಚುನಾವಣೆಯ ಮುನ್ನ, ರಾಹುಲ್ ಗಾಂಧಿ ಅವರು ಬೀದಿ ವ್ಯಾಪಾರಿಗಳನ್ನು ಭೇಟಿ ಮಾಡಿ, ಅವರ ಜತೆ ನಿಂತು, ಅವರ ಹಕ್ಕುಗಳಿಗಾಗಿ ಹೋರಾಡುವ ಭರವಸೆ ನೀಡಿದರು. ಆ ಮಾತು ಇನ್ನೂ ನಮ್ಮ ಕಿವಿಯಲ್ಲಿ ಅನುರಣಿಸುತ್ತಿದೆ. ಚುನಾವಣೆ ಮುಗಿದ ನಂತರ ಆ ಭರವಸೆ ಮರೆತು ಹೋಗಬಾರದು. ಕರ್ನಾಟಕದ ಕಾಂಗ್ರೆಸ್ ಸರಕಾರ ಬೀದಿ ವ್ಯಾಪಾರಿಗಳ ಮೇಲೆ ದಾಳಿ ಮಾಡುವ ಅಭಿಯಾನ ನಡೆಸಿದರೆ, ಅದು ಕಾಂಗ್ರೆಸ್ ಪಕ್ಷದ ಸ್ವಂತ ಮೌಲ್ಯಗಳಿಗೆ ದ್ರೋಹ ಬಗೆದಂತೆ,'' ಎಂದಿದೆ.

ಹಕ್ಕೊತ್ತಾಯ

''ಬೀದಿ ವ್ಯಾಪಾರಿಗಳ ಜೀವನೋಪಾಯ ರಕ್ಷಣಾ ಕಾಯಿದೆಯನ್ನು ಸಂಪೂರ್ಣವಾಗಿ ಜಾರಿಗೊಳಿಸಿ, ಸಮಗ್ರ ಸಮೀಕ್ಷೆ ನಡೆಸಿ ಎಲ್ಲರಿಗೂ ಗುರುತಿನ ಚೀಟಿ ನೀಡಬೇಕು. ನಗರದ ಎಲ್ಲ ಪಾಲಿಕೆಗಳ ವ್ಯಾಪ್ತಿಯಲ್ಲಿ ಟೌನ್ ವೆಂಡಿಂಗ್ ಸಮಿತಿ ರಚಿಸಿ, ವ್ಯಾಪಾರಿಗಳ ನೈಜ ಪ್ರತಿನಿಧಿತ್ವ ಬಲಪಡಿಸಬೇಕು. ಕಾನೂನು ಬಾಹಿರ ತೆರವು, ಜಪ್ತಿ ಮತ್ತು ಕಿರುಕುಳವನ್ನು ತಕ್ಷಣ ನಿಲ್ಲಿಸಬೇಕು. ನಗರಾದ್ಯಂತ ಪಾದಚಾರಿ ಮಾರ್ಗಗಳನ್ನು ಅಗಲ ಮಾಡಿ, ಪಾದಚಾರಿಗಳು ಹಾಗೂ ವ್ಯಾಪಾರಿಗಳು ಇಬ್ಬರಿಗೂ ಅವಕಾಶ ನೀಡಬೇಕು. ನಿಜವಾದ ಒತ್ತುವರಿದಾರರ ವಿರುದ್ಧ ಕ್ರಮ ಜರುಗಿಸಬೇಕು. ಸಚಿವರು ಅಭಿಯಾನ ಆರಂಭಿಸುವ ಮುನ್ನ ಬೀದಿ ವ್ಯಾಪಾರಿ ಸಂಘಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ, ಪ್ರಕ್ರಿಯೆ ಕಾನೂನಾತ್ಮಕ, ಮಾನವೀಯ ಮತ್ತು ನ್ಯಾಯಯುತವಾಗಿದೆ ಎಂದು ಖಚಿತಪಡಿಸಬೇಕು,'' ಎಂದು ಆಗ್ರಹಿಸಿದೆ.

ಮದುವೆಗೆ ನಿರಾಕರಿಸಿದ ಪ್ರೇಯಸಿ ಇರಿದು ಕೊಂದ ಪ್ರಿಯಕರ

» ನಮ್ಮ ಮೊದಲ ಪುಟದಿಂದ

ಜೈಲಿಗೆ ತೆರಳಿದ್ದ ರಾಜೀವ್ ಜಾಮೀನಿನ ಮೇಲೆ ಹೊರಗಡೆ ಬಂದಿದ್ದ. ಅಂಜಲಿಯನ್ನು ಮದುವೆ ಮಾಡಿಕೊಡುವಂತೆ ಅವರ ಕುಟುಂಬಸ್ಥರ ಬಳಿ ರಾಜೀವ್ ಕೇಳಿದ್ದ. ಆದರೆ, ಕ್ರಿಮಿನಲ್ ಕೇಸ್‌ಗಳ ಹಿನ್ನೆಲೆ ಕಾರಣಕ್ಕೆ ಅವರ ಮನೆಯವರು ಮದುವೆ ನಿರಾಕರಿಸಿದ್ದರು. ಇತ್ತೀಚೆಗೆ ಅಂಜಲಿ ಅಂತರ ಕಾಯ್ದುಕೊಂಡಿದ್ದರು. ಭಾನುವಾರ ರಾತ್ರಿ ಎಂಟು ಗಂಟೆ ಸುಮಾರಿಗೆ ಅಂಜಲಿಗೆ ದೂರವಾಣಿ ಕರೆ ಮಾಡಿ ಊಟಕ್ಕೆ ಆಹ್ವಾನ ನೀಡಿದ್ದ ರಾಜೀವ್, ಆದಿತ್ಯ ಜಂಕ್ಷನ್‌ಗೆ ಕರೆದೊಯ್ದಿದ್ದ. ಊಟದ ಬಳಿಕ ಮಾತನಾಡುವ ನೆಪದಲ್ಲಿ ಸಮೀಪದ ಕಸ ವಿಂಗಡಣಾ ಘಟಕದ ಖಾಲಿ ಪ್ರದೇಶಕ್ಕೆ ಕರೆದೊಯ್ದಿದ್ದ. ಅಲ್ಲಿಯೂ ಮದುವೆ ಪ್ರಸ್ತಾಪ ಮಾಡಿದಾಗ ಅಂಜಲಿ ನಿರಾಕರಿಸಿ ವಾಪಸ್ ತೆರಳುತ್ತಿದ್ದರು. ಅಂಜಲಿಯನ್ನು ಹಿಂಬಾಲಿಸಿದ ರಾಜೀವ್, ಚಾಕುವಿನಿಂದ ಎದೆಯ ಭಾಗಕ್ಕೆ ಇರಿಯತೊಡಗಿದ್ದ. ಇದನ್ನು ಕಂಡ ಸ್ಥಳೀಯರು ರಕ್ತದ ಮಡುವಿನಲ್ಲಿ ಬಿದ್ದಿದ್ದ ಅಂಜಲಿಯನ್ನು ಆಸ್ಪತ್ರೆಗೆ ದಾಖಲಿಸಿದರೂ ಮಾರ್ಗಮಧ್ಯೆ ಅಸುನೀಗಿದ್ದರು. ವಿಷಯ ತಿಳಿದ ಕೂಡಲೇ ಘಟನಾ ಸ್ಥಳಕ್ಕೆ ತೆರಳಿದ ಪೊಲೀಸರು, ಆರೋಪಿ ರಾಜೀವ್‌ನನ್ನು ಬಂಧಿಸಿದ್ದಾರೆ. ಹಲವು ಆಯಾಮಗಳಲ್ಲಿ ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡಿಯಿಂದ ನಾಗರಿಕರು ಹೈರಾಣ

ಕೆಂಪಮ್ಮ ದೇವಿ ಮುಖ್ಯರಸ್ತೆ, ನ್ಯೂ ತಿಪ್ಪಸಂದ್ರ

ಲಕ್ಕೇಗೌಡ ನಗರ ಕ್ರಾಸ್, ಬಿಎಸ್‌ಕೆ 6ನೇ ಹಂತ

ರಸ್ತೆ ಗುಂಡಿ ಚಿತ್ರ ನೀವೂ ಕಳಿಸಿ...

ಸಾರ್ವಜನಿಕರು ತಾವು ನಿತ್ಯ ಸಂಚರಿಸುವ ರಸ್ತೆ ಹಾಗೂ ತಮ್ಮ ಪ್ರದೇಶದ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳು ಕಂಡು ಬಂದರೆ, ಫೋಟೊ ತೆಗೆದು ಕಳುಹಿಸಬಹುದು. ಫೋಟೊ ಜತೆಗೆ ರಸ್ತೆಯ ಹೆಸರು, ಯಾವ ಪ್ರದೇಶ ಎಂಬುದನ್ನೂ ನಮೂದಿಸಿ.

76766 68588

ದೊಡ್ಡಕಲ್ಲಸಂದ್ರ, ಕನಕಪುರ ರಸ್ತೆ

ಜ್ಯುಡಿಶಿಯಲ್ ಲೇಔಟ್, ತಲಘಟ್ಟಪುರ

80 ಅಡಿ ರಸ್ತೆ, ಸರ್ ಎಂ.ವಿಶ್ವೇಶ್ವರಯ್ಯ ಲೇಔಟ್

ನ್ಯಾಯಾಲಯಗಳು ಪರಿಸ್ಥಿತಿ ಅವಲೋಕಿಸಿ ಆದೇಶ ಹೊರಡಿಸಬೇಕಾಗುತ್ತದೆ: ಹೈಕೋರ್ಟ್

ಆರ್ಥಿಕ ಸಬಲ ಪತ್ನಿಗಿಲ್ಲ ಜೀವನಾಂಶ

■ **ವಿಕ ಸುದ್ದಿಲೋಕ** ಬೆಂಗಳೂರು

ತನಗಿಂತ ಹೆಚ್ಚು ದುಡಿಯುವ ಪತ್ನಿಗೆ ಪತಿ ಜೀವನಾಂಶ ನೀಡಬೇಕಿಲ್ಲ ಎಂದು ಮಹತ್ವದ ಆದೇಶ ನೀಡಿರುವ ಹೈಕೋರ್ಟ್, ಆರ್ಥಿಕವಾಗಿ ಸದೃಢವಾಗಿರುವ ಪತ್ನಿಗೆ ಜೀವನಾಂಶ ನೀಡಲು ನಿರಾಕರಿಸಿದೆ. ಅಲ್ಲದೆ, ಪತಿಯು ಪತ್ನಿಗೆ ಮಾಸಿಕ 20 ಸಾವಿರ ರೂ. ಜೀವನಾಂಶ ನೀಡಬೇಕೆಂದು ವಿಚಾರಣಾ ನ್ಯಾಯಾಲಯ ನೀಡಿದ್ದ ಆದೇಶವನ್ನೂ ರದ್ದುಗೊಳಿಸಿದೆ.

ವಿಚಾರಣಾ ನ್ಯಾಯಾಲಯ ಜೀವನಾಂಶ ನೀಡಲು ಹೊರಡಿಸಿದ್ದ ಆದೇಶ ಪ್ರಶ್ನಿಸಿ ಪತಿ ಸಲ್ಲಿಸಿದ್ದ ಅರ್ಜಿ ಪರಿಶೀಲಿಸಿದ ನ್ಯಾ. ಡಾ. ಚಿಲ್ಲಕೂರ್ ಸುಮಲತಾ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ವಾದ-ಪ್ರತಿವಾದ ಆಲಿಸಿ, ಪ್ರಕರಣದ ವಿವರಗಳನ್ನು ಆಲೋಕಿಸಿದ ಬಳಿಕ ನ್ಯಾಯಪೀಠ, ''ಮಹಿಳೆಯರಿಗೆ ಪುರುಷರು ಜೀವನಾಂಶ ನೀಡಬೇಕೆಂಬ ಕೇವಲ ಲಿಂಗ ಆಧಾರಿತ ಊಹೆಗಳ ಮೇಲೆ ನ್ಯಾಯಾಲಯಗಳು ಜೀವನಾಂಶ ನೀಡಲು ಒಲವು ತೋರಬಾರದು. ವಿಶೇಷವಾಗಿ ಮಹಿಳೆಗೆ ಅಂತಹ ಆರ್ಥಿಕ ನೆರವು ಅಗತ್ಯವಿಲ್ಲದಿದ್ದಾಗ ನ್ಯಾಯಾಲಯಗಳು ಪರಿಸ್ಥಿತಿ ಅವಲೋಕಿಸಿ ಜೀವನಾಂಶ ಆದೇಶಗಳನ್ನು ಹೊರಡಿಸಬೇಕಾಗುತ್ತದೆ,'' ಎಂದು ಆದೇಶಿಸಿದೆ.

> ಪತ್ನಿಯರನ್ನು ಸದಾ ಗಂಡಂದಿರೇ ಸಾಕಬೇಕು ಎಂಬ ಲಿಂಗ ಆಧಾರಿತ ಕಲ್ಪನೆಗಳಿಂದ ಕುಟುಂಬ ನ್ಯಾಯಾಲಯಗಳು ಪ್ರಭಾವಕ್ಕೆ ಒಳಗಾಗಬಾರದು.
> -ಹೈಕೋರ್ಟ್

ಆ ಮೂಲಕ ಹೈಕೋರ್ಟ್ ಇತ್ತೀಚೆಗೆ ಆರ್ಥಿಕ ಸಹಾಯದ ಅಗತ್ಯವಿಲ್ಲದ ಪತ್ನಿಯರಿಗೆ ಗಂಡಂದಿರು ಜೀವನಾಂಶ ನೀಡಬೇಕೆಂದು ನಿರ್ದೇಶಿಸುವ ಆದೇಶಗಳನ್ನು ಹೊರಡಿಸುವುದರ ವಿರುದ್ಧ ಎಚ್ಚರಿಕೆ ನೀಡಿತು.

''ಪತ್ನಿ ಆರ್ಥಿಕವಾಗಿ ಸದೃಢಳಾಗಿದ್ದಾಗ ಮತ್ತು ಆಕೆಯ ಆದಾಯವು ಗಂಡನ ಆದಾಯಕ್ಕಿಂತ ಹೆಚ್ಚಿದ್ದಾಗ ಮತ್ತು ಮಕ್ಕಳನ್ನು ನೋಡಿಕೊಳ್ಳುವಂತಹ ಯಾವುದೇ ಇತರ ಹೊಣೆಗಾರಿಕೆಗಳು ಹೆಂಡತಿಯ ಕಡೆಯಿಂದ ಕಂಡು ಬರದಿದ್ದರೆ, ಮಹಿಳೆಯರನ್ನು ಪುರುಷರೇ ಸಲಹಬೇಕು ಅಥವಾ ಹೆಂಡತಿಯನ್ನು ಆಕೆಯ ಗಂಡನೇ ಸಾಕಬೇಕು ಎಂಬ ಆಧಾರದ ಮೇಲೆ ನ್ಯಾಯಾಲಯಗಳು ಜೀವನಾಂಶ ನೀಡುವ ಆದೇಶವನ್ನು ಹೊರಡಿಸಬಾರದು,'' ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

''ಪತ್ನಿಯರನ್ನು ಸದಾ ಗಂಡಂದಿರೇ ಸಾಕಬೇಕು ಎಂಬ ಲಿಂಗ ಆಧಾರಿತ ಕಲ್ಪನೆಗಳಿಂದ ಕುಟುಂಬ ನ್ಯಾಯಾಲಯಗಳು ಪ್ರಭಾವಕ್ಕೆ ಒಳಗಾಗಬಾರದು,'' ಎಂದು ಎಚ್ಚರಿಸಿರುವ ನ್ಯಾಯಾಲಯ, ''ಪತ್ನಿಯರಿಗೆ ತನ್ನ ಗಂಡನಿಂದ ಜೀವನಾಂಶ ಪಡೆಯುವುದನ್ನು ಬಿಟ್ಟು, ತನ್ನನ್ನು ತಾನು ನಿರ್ವಹಿಸಲು ಯಾವುದೇ ಆರ್ಥಿಕ ಮೂಲಗಳು ಇಲ್ಲ ಎಂದು ತೋರಿಸಿದಾಗ ಮಾತ್ರ ನ್ಯಾಯಾಲಯಗಳು ಮಧ್ಯಂತರ ಅಥವಾ ಅಂತಿಮ ಜೀವನಾಂಶ ನೀಡುವ ಆದೇಶ ಹೊರಡಿಸುವ ಅಗತ್ಯವಿದೆ,'' ಎಂದು ಹೇಳಿದೆ.

''ಪ್ರಕರಣದಲ್ಲಿ ಪತ್ನಿಯ ಆದಾಯವು ಪತಿಯ ಆದಾಯಕ್ಕಿಂತ ಹೆಚ್ಚಾಗಿದೆ. ಪತ್ನಿಯೇ ಒಪ್ಪಿಕೊಂಡಂತೆ ಆಕೆಯ ಆದಾಯ 1 ಲಕ್ಷ ರೂ. ಆಗಿದೆ. ಆದರಿಂದ ಆಕೆ ತನ್ನನ್ನು ತಾನು ನಿರ್ವಹಿಸಿಕೊಳ್ಳಬಹುದು. ಆದ್ದರಿಂದ, ವಿಚಾರಣಾ ನ್ಯಾಯಾಲಯವು ಪತಿಯು ತನ್ನ ಮಾಸಿಕ ಗಳಿಕೆ 60,000 ರೂ.ಗಳಿಂದ ತಿಂಗಳಿಗೆ 20,000 ರೂ. ಜೀವನಾಂಶ ಪಾವತಿಸಲು ಆದೇಶಿಸುವ ಅಗತ್ಯವಿಲ್ಲ, ಅದು ಕಾನೂನಿನ ದೃಷ್ಟಿಯಲ್ಲಿ ಸಮರ್ಥನೀಯವಲ್ಲ. ಆದರೂ, ಈ ಆದೇಶ ಮಧ್ಯಂತರ ನಿರ್ವಹಣಾ ಆದೇಶಕ್ಕೆ ಮಾತ್ರ ಸಂಬಂಧಿಸಿದೆ ಮತ್ತು ಉಳಿದಂತೆ ಜೀವನಾಂಶದ ಈ ಆದೇಶವು ಪ್ರಕರಣದ ಅಂತಿಮ ಫಲಿತಾಂಶದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ'' ಎಂದು ಸ್ಪಷ್ಟಪಡಿಸಿತು.

ಆರಿದ್ರೆಯ ಆರ್ಭಟಕ್ಕೆ ಮುಳುಗಿದ ಈಶಾನ್ಯ

ಅಸ್ಸಾಂನಲ್ಲಿ 22,000 ಜನ ನಿರಾಶ್ರಿತ | ಅರುಣಾಚಲದಲ್ಲಿ ಮೂವರು ಸಾವು | ಜನಜೀವನ ಅಸ್ತವ್ಯಸ್ತ

ಅರುಣಾಚಲಪ್ರದೇಶದ ಕೀಯಿ ಪ್ಯಾನೋರ್ ಜಿಲ್ಲೆಯಲ್ಲಿ ಅವಶೇಷಗಳ ಮಧ್ಯೆ ಜಖಂಗೊಂಡ ಕಾರು.

ಪ್ರವಾಹ ಅಬ್ಬರಕ್ಕೆ ಮುರಿದುಬಿದ್ದ ಅಸ್ಸಾಂನ ಧೇಮಾಜಿ ಜಿಲ್ಲೆಯ ಅರ್ಚಿಪತಾರ್-ಸಿಮನ್ ಚಾಪರಿ ನಡುವಿನ ರೈಲ್ವೆ ಸೇತುವೆ.

ಗುವಾಹಟಿ: ಮುಂಗಾರು ಮಳೆ ಆರ್ಭಟದಿಂದ ಈಶಾನ್ಯ ಭಾರತದ ಅರುಣಾಚಲ ಪ್ರದೇಶ, ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಉಲ್ಬಣಿಸಿದೆ. ಥಿರಸ್ತೆಗಳು, ಸೇತುವೆಗಳು ಹಾನಿಗೀಡಾಗಿದ್ದು, ರೈಲು ಸೇರಿದಂತೆ ಸಾರಿಗೆ ಸಂಚಾರ ವ್ಯತ್ಯಯವಾಗಿದೆ. ಇತ್ತ ಮುಂಬಯಿನಲ್ಲೂ ಭಾನುವಾರ ರಾತ್ರಿಯಿಡೀ ಸುರಿದ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿದೆ.

ಹಲವು ದಿನಗಳಿಂದ ಎಡಬಿಡದೆ ಸುರಿಯುತ್ತಿರುವ ಮಳೆಯಿಂದ ಅಸ್ಸಾಂನ ಧೇಮಾಜಿ, ಮೋರಿಗಾಂವ್ ಸೇರಿ ಹಲವು ಜಿಲ್ಲೆಗಳಲ್ಲಿ ವ್ಯಾಪಕ ಹಾನಿಯಾಗಿದೆ. ಬ್ರಹ್ಮಪುತ್ರ ನದಿ ಪ್ರವಾಹದಿಂದ ಸಾವಿರಾರು ಎಕರೆ ಕೃಷಿ ಭೂಮಿ ನೀರಿನಿಂದ ಆವೃತವಾಗಿದೆ. ಭಾರಿ ಪ್ರವಾಹದಿಂದ ಧೇಮಾಜಿ ಜಿಲ್ಲೆಯಲ್ಲಿ 16 ಹಳ್ಳಿಗಳು ಮುಳುಗಡೆಯಾಗಿದ್ದು, 22 ಸಾವಿರ ಜನ ನಿರಾಶ್ರಿತರಾಗಿದ್ದಾರೆ.

ಬ್ರಹ್ಮಪುತ್ರ ನದಿ ಪ್ರವಾಹದಲ್ಲಿ ಮುಳುಗಿರುವ ಮೋರಿಗಾಂವ್ ಜಿಲ್ಲೆಯ ಹಲವು ಹಳ್ಳಿಗಳ ಜನ ಬೋಟ್‌ಗಳ ಮೂಲಕ ಸುರಕ್ಷಿತ ಪ್ರದೇಶದತ್ತ ತೆರಳುತ್ತಿರುವ ದೃಶ್ಯಗಳು ಕಂಡು ಬಂದಿವೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಜಿಲ್ಲಾಡಳಿತ ಸೇರಿದಂತೆ ವಿವಿಧ ರಕ್ಷಣಾ ತಂಡಗಳು ಪ್ರವಾಹ ಪೀಡಿತ ಪ್ರದೇಶದಲ್ಲಿ ರಕ್ಷಣೆ ಹಾಗೂ ಪರಿಹಾರ ಕಾರ್ಯ ಕೈಗೊಂಡಿವೆ.

ಪ್ರವಾಹ ಪರಿಸ್ಥಿತಿ ಅವಲೋಕಿಸಿದ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಕೂಡಲೇ ಸಮರೋಪಾದಿಯಲ್ಲಿ ರಕ್ಷಣೆ ಹಾಗೂ ಪರಿಹಾರ ಕಾರ್ಯ ಕೈಗೊಳ್ಳುವಂತೆ ಜಲಸಂಪನ್ಮೂಲ, ಕಂದಾಯ, ವಿಪತ್ತು ನಿರ್ವಹಣಾ ಸಚಿವಾಲಯಗಳಿಗೆ ಆದೇಶ ನೀಡಿದ್ದಾರೆ.

ಅರುಣಾಚಲದಲ್ಲಿ ಭೂಕುಸಿತ: ಮತ್ತೊಂದೆಡೆ ಅರುಣಾಚಲ ಪ್ರದೇಶದಲ್ಲಿ ಭಾರಿ ಮಳೆ, ಹಠಾತ್ ಪ್ರವಾಹದಿಂದ ಹಲವು ಕಡೆ ಭೂಕುಸಿತ ಸಂಭವಿಸಿದೆ. ನೆರೆಯ ಸುಳಿಗೆ ಸಿಲುಕಿ ಕೀಯಿ ಪನ್ಯೋರ್ ಜಿಲ್ಲೆಯಲ್ಲಿ ಮೂವರು ಮೃತಪಟ್ಟಿದ್ದು, ಹಲವರು ಕಾಣೆಯಾಗಿದ್ದಾರೆ. ರಸ್ತೆಗಳು ಕೊಚ್ಚಿ ಹೋಗಿದ್ದು, ಸಂಪರ್ಕ ಸೇತುವೆಗಳು ಕುಸಿದು ಬಿದ್ದಿವೆ. ಪ್ರವಾಹದಿಂದ ನಡುಗಡ್ಡೆಯಲ್ಲಿ ಸಿಲುಕಿದ್ದ 30 ಮಂದಿಯನ್ನು ಏರ್‌ಲಿಫ್ಟ್ ಮಾಡಲಾಗಿದೆ.

ಲೋವರ್ ಸಿಯಾಂಗ್ ಜಿಲ್ಲೆಯಲ್ಲಿ ಭಾರಿ ಮಳೆಯಿಂದ ಗುಡ್ಡ ಕುಸಿದಿದೆ. ಬೈಕ್ ಸವಾರನೊಬ್ಬ ಮಣ್ಣು, ಕಲ್ಲುಗಳ ನಡುವೆ ಪ್ರಪಾತದತ್ತ ಕೊಚ್ಚಿಹೋಗುತ್ತಿರುವ ದೃಶ್ಯ ಕಂಡುಬಂದಿದೆ. ಮಳೆಯಿಂದ ಕೆಸರುಮಯವಾಗಿದ್ದ ಬೆಟ್ಟದ ಇಳಿಜಾರಿನ ಕಿರಿದಾದ ರಸ್ತೆಯಲ್ಲಿ ಬೈಕ್ ಸವಾರ ಎಚ್ಚರಿಕೆಯಿಂದ ಸಾಗುತ್ತಿದ್ದಾರೆ. ಏಕಾಏಕಿ ರಸ್ತೆಯ ಒಂದು ಭಾಗ ಕುಸಿಯುತ್ತಿದ್ದಂತೆ ಮಣ್ಣು, ಕಲ್ಲು ಸೇರಿ ಅವಶೇಷಗಳು ದೊಡ್ಡ ಪ್ರಮಾಣದಲ್ಲಿ ಜಾರಿ ಕೆಳಗೆ ಬರುತ್ತವೆ. ಬೈಕ್ ಸವಾರ ಬೆಟ್ಟದ ಇಳಿಜಾರಿನಲ್ಲಿ ಕೊಚ್ಚಿಹೋಗುತ್ತಾರೆ. ಜೀವ ಉಳಿಸಿಕೊಳ್ಳಲು ಬೈಕ್ ಬಿಟ್ಟು ಸುರಕ್ಷಿತ ಪ್ರದೇಶದತ್ತ ಓಡಿ ಬಂದ ಸವಾರ, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕೇಂದ್ರದ ನೆರವಿನ ಭರವಸೆ

ಪ್ರವಾಹ ಪೀಡಿತ ಅಸ್ಸಾಂ, ಅರುಣಾಚಲ ಪ್ರದೇಶ, ಮಣಿಪುರ, ಸಿಕ್ಕಿಂ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಮಾತುಕತೆ ನಡೆಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ನೆರೆ ಪರಿಸ್ಥಿತಿ ನಿರ್ವಹಣೆಗೆ ಸಂಪೂರ್ಣ ಸಹಕಾರ ನೀಡುವ ಭರವಸೆ ನೀಡಿದ್ದಾರೆ.

23 ರಾಜ್ಯಗಳಿಗೆ ವ್ಯಾಪಿಸಿದ ಮುಂಗಾರು

ಹೊಸದಿಲ್ಲಿ: ತಡವಾಗಿ ಆರಂಭವಾದರೂ ದೇಶದ 23 ರಾಜ್ಯಗಳಿಗೆ ಮುಂಗಾರು ಪ್ರವೇಶಿಸಿದೆ. ಮುಂದಿನ ಒಂದು ವಾರದಲ್ಲಿ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮದ 23 ರಾಜ್ಯಗಳಲ್ಲಿ ವ್ಯಾಪಕ ಮಳೆಯಾಗಲಿದೆ. ಕೆಲವು ಪ್ರದೇಶಗಳಲ್ಲಿ 80 ರಿಂದ 90 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ದಿಲ್ಲಿ, ಉತ್ತರ ಪ್ರದೇಶ, ಬಿಹಾರ, ಹರಿಯಾಣ, ಜಾರ್ಖಂಡ್, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಉತ್ತರಾಖಂಡ, ಪಶ್ಚಿಮ ಬಂಗಾಳ, ಒಡಿಶಾ. ಸಿಕ್ಕಿಂ, ಛತ್ತೀಸ್‌ಗಢ, ಮಧ್ಯಪ್ರದೇಶ, ಅಸ್ಸಾಂ, ತ್ರಿಪುರ, ಮೇಘಾಲಯ, ಕೇರಳ, ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣದಲ್ಲಿ ಭಾರಿ ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಿದೆ. ಹಲವು ರಾಜ್ಯಗಳಲ್ಲಿ ಗುಡುಗು, ಸಿಡಿಲು ಸಮೇತ ಭಾರಿ ಮಳೆ ಸುರಿಯಲಿದೆ ಎಂದು ಐಎಂಡಿ ಎಚ್ಚರಿಸಿದೆ.'

ದಿಲ್ಲಿಯಲ್ಲಿ ಬಿಸಿಲ ಧಗೆ: ಮಳೆ ಮುನ್ಸೂಚನೆ ನಡುವೆಯೂ ದಿಲ್ಲಿಯಲ್ಲಿ ತಾಪಮಾನ ದಾಖಲೆ ಪ್ರಮಾಣದಲ್ಲಿ ಏರಿಕೆಯಾಗಿದೆ. ಕಳೆದ ಎರಡು ದಿನಗಳಿಂದ ಗರಿಷ್ಠ ಉಷ್ಣಾಂಶ 40 ರಿಂದ 42 ಡಿಗ್ರಿ ಸೆಲ್ಸಿಯಸ್ ನಡುವೆ ದಾಖಲಾಗಿದೆ. ಮುಂದಿನ ಒಂದು ವಾರದಲ್ಲಿ ಗಣನೀಯ ಪ್ರಮಾಣದಲ್ಲಿ ತಾಪಮಾನ ಇಳಿಕೆಯಾಗಲಿದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ.

ಏಕರೂಪ, ಪಾರದರ್ಶಕ, ಕಾನೂನುಬದ್ಧ ವ್ಯವಸ್ಥೆ ತರಲು ಸರಕಾರ ಕ್ರಮ

ಶಾಶ್ವತ ನಿವಾಸಿ ಪ್ರಮಾಣಪತ್ರಕ್ಕೆ ಮಾರ್ಗಸೂಚಿ

■ **ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕದ ಶಾಶ್ವತ ನಿವಾಸಿ ಎಂಬುದನ್ನು ದೃಢೀಕರಿಸುವ 'ಶಾಶ್ವತ ನಿವಾಸಿ ಪ್ರಮಾಣಪತ್ರ' (ಪರ್ಮನೆಂಟ್ ರೆಸಿಡೆನ್ಷಿಯಲ್ ಸರ್ಟಿಫಿಕೇಟ್-ಪಿಆರ್‌ಸಿ) ನೀಡುವ ಸಂಬಂಧ ಏಕರೂಪದ, ಪಾರದರ್ಶಕ ಹಾಗೂ ಕಾನೂನುಬದ್ಧವಾಗಿ ಸುಸ್ಥಿರ ವ್ಯವಸ್ಥೆ ತರುವ ನಿಟ್ಟಿನಲ್ಲಿ ಸರಕಾರ ಮಾರ್ಗಸೂಚಿಗಳನ್ನು ರೂಪಿಸಿ ಸೋಮವಾರ ಆದೇಶ ಹೊರಡಿಸಿದೆ.

ಅದರಂತೆ, ಎಲ್ಲ ಜಿಲ್ಲಾಧಿಕಾರಿಗಳಿಂದ ಅಧಿಕೃತಗೊಳಿಸಲಾದ ಉಪ ತಹಸೀಲ್ದಾರ್/ ತಹಸೀಲ್ದಾರ್ ಅಥವಾ ಇತರೆ ಯಾವುದೇ ಅಧಿಕಾರಿ ಪ್ರಮಾಣಪತ್ರ ನೀಡುವ ಪ್ರಾಧಿಕಾರವಾಗಿರುತ್ತಾರೆ. ಸಹಾಯಕ ಆಯುಕ್ತರು (ಎ.ಸಿ) ಮೇಲ್ಮನವಿ ಪ್ರಾಧಿಕಾರವಾಗಿದ್ದರೆ, ಜಿಲ್ಲಾಧಿಕಾರಿಗಳು ಪುನರ್ ಪರಿಶೀಲನಾ ಪ್ರಾಧಿಕಾರವಾಗಿರುತ್ತಾರೆ. ಪ್ರಮಾಣಪತ್ರ ನೀಡುವ ಪ್ರಾಧಿಕಾರವು ಅಗತ್ಯ ವಿಚಾರಣೆ, ಪರಿಶೀಲನೆ ನಂತರ ಅರ್ಜಿದಾರರು ರಾಜ್ಯದ ನಿಜವಾದ ಮತ್ತು ಶಾಶ್ವತ ನಿವಾಸಿಯಾಗಿದ್ದಾರೆ ಎಂಬ ಬಗ್ಗೆ ಖಚಿತಪಡಿಸಿಕೊಂಡು ಶಾಶ್ವತ ನಿವಾಸಿ ಪ್ರಮಾಣಪತ್ರ ನೀಡಬಹುದು ಎಂದು ಕಂದಾಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದರ್‌ಕುಮಾರ್ ಕಟಾರಿಯಾ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಪ್ರಮಾಣಪತ್ರ ವಿತರಣೆಗೆ ಒಂದು ಅಥವಾ ಹೆಚ್ಚಿನ ಅಂಶ ಪರಿಗಣಿಸಬಹುದು

- ಕರ್ನಾಟಕದಲ್ಲಿ ಜನನ- ಅರ್ಜಿದಾರರು ಕರ್ನಾಟಕದಲ್ಲಿ ಜನಿಸಿರಬೇಕು
- ಸಾಮಾನ್ಯ ವಾಸಸ್ಥಳ- ಅರ್ಜಿದಾರರು ಅಥವಾ ಅವರ ತಂದೆ-ತಾಯಿ/ ಕಾನೂನುಬದ್ಧ ಪಾಲಕರು ಕರ್ನಾಟಕದಲ್ಲಿ ಸತತವಾಗಿ ಕನಿಷ್ಠ 10 ವರ್ಷ ಕಾಲ ವಾಸವಾಗಿರಬೇಕು
- ಶಿಕ್ಷಣ- ಅರ್ಜಿದಾರರು ಕರ್ನಾಟಕದಲ್ಲಿ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ದ್ವಿತೀಯ ಪಿಯುಸಿ/ 12ನೇ ತರಗತಿ ಅಥವಾ ತತ್ಸಮಾನ ಹಂತದವರೆಗೆ ವ್ಯಾಸಂಗ ಮಾಡಿರಬೇಕು
- ಪೋಷಕರು ಅಥವಾ ಸಂಗಾತಿಯ ವಾಸಸ್ಥಳ- ಅರ್ಜಿದಾರರ ತಂದೆ, ತಾಯಿ, ಕಾನೂನುಬದ್ಧ ಪಾಲಕರು ಅಥವಾ ಪತಿ/ ಪತ್ನಿಯು ಕರ್ನಾಟಕದಲ್ಲಿ ಸಾಮಾನ್ಯ ಹಾಗೂ ಶಾಶ್ವತ ನಿವಾಸಿಯಾಗಿರಬೇಕು
- ವಸತಿ ಆಸ್ತಿ- ಅರ್ಜಿದಾರರು ಅಥವಾ ಅವರ ಕುಟುಂಬವು ಕರ್ನಾಟಕದಲ್ಲಿ ವಸತಿ ಅಥವಾ ಇತರೆ ಸ್ಥಿರಾಸ್ತಿಯ ಮಾಲೀಕತ್ವ ಹೊಂದಿರಬೇಕು ಅಥವಾ ಕಾನೂನುಬದ್ಧ ವಾರಸುದಾರರಾಗಿರಬೇಕು ಅಥವಾ ಬಳಸುತ್ತಿರಬೇಕು
- ಸರಕಾರಿ ದಾಖಲೆಗಳು- ಮತದಾರರ ಪಟ್ಟಿ, ಆಧಾರ್ ಕಾರ್ಡ್, ಪಡಿತರ ಚೀಟಿ, ಕಂದಾಯ ದಾಖಲೆಗಳು ಅಥವಾ ಇತರೆ ಸರಕಾರಿ ದಾಖಲೆಗಳಲ್ಲಿ ಅರ್ಜಿದಾರರು ಅಥವಾ ಅವರ ಪೋಷಕರ ಹೆಸರು ಸಾಮಾನ್ಯ ನಿವಾಸಿಯಾಗಿ ದಾಖಲಾಗಿರಬೇಕು
- ಸರಕಾರಿ/ ಸಾರ್ವಜನಿಕ ಸೇವೆ- ಅರ್ಜಿದಾರರು ಅಥವಾ ಅವರ ತಂದೆ/ ತಾಯಿಯು ರಾಜ್ಯ ಸರಕಾರ, ಸ್ಥಳೀಯ ಸಂಸ್ಥೆ ಅಥವಾ ಸಾರ್ವಜನಿಕ ಸಂಸ್ಥೆಗಳಲ್ಲಿ ಗಣನೀಯ ಅವಧಿಯ ಸೇವೆ ಸಲ್ಲಿಸಿರಬೇಕು
- ವಿವಾಹ- ಅರ್ಜಿದಾರರು ಕರ್ನಾಟಕದಲ್ಲಿ ವಾಸಿಸುವ ವ್ಯಕ್ತಿಯನ್ನು ವಿವಾಹವಾಗಿದ್ದು, ರಾಜ್ಯದಲ್ಲಿ ವಾಸವಿರಬೇಕು
- ಇತರೆ ಪುರಾವೆಗಳು- ಕರ್ನಾಟಕವೇ ಅರ್ಜಿದಾರರ ಪ್ರಮುಖ ಹಾಗೂ ಶಾಶ್ವತ ವಾಸಸ್ಥಳವಾಗಿದೆ ಎಂಬುದನ್ನು ದೃಢೀಕರಿಸುವ ಯಾವುದೇ ವಿಶ್ವಾಸಾರ್ಹ ದಾಖಲಾತಿ, ವಿದ್ಯುನ್ಮಾನ ಅಥವಾ ಮೌಖಿಕ ಸಾಕ್ಷ್ಯ

ಪ್ರಮುಖ ಅಂಶ

- ಶಾಶ್ವತ ನಿವಾಸಿ ಪ್ರಮಾಣಪತ್ರವು ಆಡಳಿತಾತ್ಮಕ ಉದ್ದೇಶಕಷ್ಟೇ ಶಾಶ್ವತ ನಿವಾಸಿ ಪುರಾವೆಯಾಗಿ ಪರಿಗಣಿಸಲ್ಪಡುತ್ತದೆ. ಯಾವುದೇ ಶಾಸನಬದ್ಧ ಹಕ್ಕು, ಮೀಸಲು, ಸರಕಾರಿ ಭೂ ಮಂಜೂರು, ಉದ್ಯೋಗದಲ್ಲಿ ಆದ್ಯತೆ ಅಥವಾ ಇತರೆ ಯಾವುದೇ ಪ್ರಯೋಜನವಾಗುವುದಿಲ್ಲ
- ಸುಳ್ಳು ಮಾಹಿತಿ ನೀಡಿ ಪಡೆದ ಶಾಶ್ವತ ನಿವಾಸಿ ಪ್ರಮಾಣಪತ್ರ ರದ್ದಾದರೆ ಸಂಬಂಧಪಟ್ಟ ಅರ್ಜಿದಾರರ ಅಥವಾ ಅನ್ವಯವಾಗುವ ಕಾನೂನಿನಡಿ ಯಾವುದೇ ಇತರೆ ವ್ಯಕ್ತಿಯ ವಿರುದ್ಧ ಸಿವಿಲ್, ಕ್ರಿಮಿನಲ್ ಅಥವಾ ಇಲಾಖಾ ವಿಚಾರಣೆ ಕ್ರಮಕ್ಕೆ ಹಾನಿಯಾಗುವಂತಿಲ್ಲ
- ಸುಳ್ಳು ಮಾಹಿತಿ ಒದಗಿಸುವುದು, ಸುಳ್ಳು ಘೋಷಣೆಗಳನ್ನು ಮಾಡುವುದು ಅಥವಾ ನಕಲಿ, ಕೃತಕ ಅಥವಾ ಸುಳ್ಳು ದಾಖಲೆಗಳನ್ನು ತಯಾರಿಸುವುದು ಅರ್ಜಿದಾರರ ವಿರುದ್ಧ ಮೊಕದ್ದಮೆಗೆ ಮತ್ತು ಅನ್ವಯವಾಗುವ ಕಾನೂನಿನಡಿ ಅನುಮತಿಸಬಹುದಾದ ಯಾವುದೇ ಕ್ರಮಕ್ಕೆ ಹೊಣೆಗಾರರನ್ನಾಗಿ ಮಾಡಬಹುದು

ಮೇಲ್ಮನವಿಗೆ 30 ದಿನ ಅವಕಾಶ

ಪ್ರಾಧಿಕಾರದ ಆದೇಶದಿಂದ ಬಾಧಿತರಾದವರು ಆದೇಶದ ದಿನಾಂಕದಿಂದ 30 ದಿನದೊಳಗೆ ಸಹಾಯಕ ಆಯುಕ್ತರ ಮುಂದೆ ಮೇಲ್ಮನವಿ ಸಲ್ಲಿಸಬಹುದು. ಸಹಾಯಕ ಆಯುಕ್ತರ ಆದೇಶದಿಂದ ಬಾಧಿತರಾದ ವ್ಯಕ್ತಿ 60 ದಿನದೊಳಗೆ ಜಿಲ್ಲಾಧಿಕಾರಿಗಳ ಮುಂದೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಬಹುದು

ಮಾರ್ಗದರ್ಶಕ ತತ್ವ

- ಯಾವುದೇ ಒಂದು ಅಂಶದ ಅಲಭ್ಯತೆಯಿಂದ ಅರ್ಜಿದಾರರನ್ನು ಅನರ್ಹರನ್ನಾಗಿ ಪರಿಗಣಿಸುವಂತಿಲ್ಲ
- ಲಭ್ಯವಿರುವ ಎಲ್ಲ ಪುರಾವೆಗಳ ಸಮಗ್ರ ಪರಿಶೀಲನೆ ಆಧಾರದಲ್ಲೇ ನಿರ್ಧಾರ ಕೈಗೊಳ್ಳಬೇಕು
- ದಾಖಲಾತಿ ಪುರಾವೆಗಳು ಅಪೂರ್ಣವಾಗಿದ್ದರೆ ಸ್ಥಳೀಯ ವಿಚಾರಣೆ ಹಾಗೂ ಇತರೆ ವಿಶ್ವಾಸಾರ್ಹ ಪುರಾವೆಗಳ ಆಧಾರದ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ಧಾರ ಕೈಗೊಳ್ಳಬೇಕು
- ಶಾಶ್ವತ ವಾಸ ಪ್ರಮಾಣಪತ್ರ ಮಂಜೂರು ಮಾಡುವ ಇಲ್ಲವೇ ನಿರಾಕರಿಸುವ ಪ್ರತಿಯೊಂದು ಆದೇಶವೂ ಕಾರಣಸಹಿತವಿರಬೇಕು.

ಗ್ರಾಹಕರಿಂದ ಸಿಗದ ನಿರೀಕ್ಷಿತ ಸ್ಪಂದನೆ | ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಜಲಮಂಡಳಿ ಚಿಂತನೆ

ಒಟಿಎಸ್ ಗಡುವು ವಿಸ್ತರಣೆ ಸಾಧ್ಯತೆ

ಬಿ.ಎನ್.ಧನಂಜಯ ಬೆಂಗಳೂರು

dhananjaya.gowda@timesofindia.com

ಬೆಂಗಳೂರು ಜಲಮಂಡಳಿ ಬಾಕಿ ಶುಲ್ಕ ವಸೂಲಿಗೆ ಜಾರಿಗೊಳಿಸಿದ್ದ ಒಟಿಎಸ್ ಯೋಜನೆಗೆ ನಿರೀಕ್ಷಿತ ಮಟ್ಟದಲ್ಲಿ ಸ್ಪಂದನೆ ವ್ಯಕ್ತವಾಗಿಲ್ಲ. ಈ ಹಿನ್ನೆಲೆಯಲ್ಲಿ ಗಡುವು ವಿಸ್ತರಣೆಗೆ ಜಲಮಂಡಳಿ ಚಿಂತನೆ ನಡೆಸಿದೆ.

ನೀರು ಮತ್ತು ಒಳಚರಂಡಿ ಸೇವಾ ಶುಲ್ಕದ ಬಾಕಿ ವಸೂಲಾತಿಗೆ ಬಡ್ಡಿ ರಿಯಾಯಿತಿಯೊಂದಿಗೆ ಮಂಡಳಿಯು ನೀಡಿದ್ದ 'ಒನ್ ಟೈಮ್ ಸೆಟಲ್‌ಮೆಂಟ್ (ಒಟಿಎಸ್)' ಯೋಜನೆಯ ಗಡುವು ಮುಕ್ತಾಯದ ಹಂತಕ್ಕೆ ಬಂದಿದೆ. ಈ ವರೆಗೆ ಶೇ.31.26 ರಷ್ಟು ಗ್ರಾಹಕರು ಮಾತ್ರ ಬಾಕಿ ಪಾವತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಂಡಳಿಯು ಮತ್ತೊಂದು ಅವಕಾಶ ನೀಡಲು ಗಡುವು ವಿಸ್ತರಣೆಗೆ ಅನುಮತಿ ನೀಡಲು ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಚಿಂತಿಸಿದೆ.

ಸರಕಾರಿ ಸಂಘ-ಸಂಸ್ಥೆಗಳು, ಇಲಾಖೆಗಳೂ ಸೇರಿದಂತೆ ಸುಮಾರು 5 ಲಕ್ಷಕ್ಕೂ ಅಧಿಕ ಸಂಪರ್ಕಗಳ ಗ್ರಾಹಕರು, ಹಲವು ವರ್ಷಗಳಿಂದ ನೀರು ಮತ್ತು ಒಳಚರಂಡಿ ಸೇವಾ ಶುಲ್ಕವನ್ನು ಬಾಕಿ ಉಳಿಸಿಕೊಂಡಿದ್ದಾರೆ. ಮಂಡಳಿಯು ಶುಲ್ಕ ಪಾವತಿಸುವಂತೆ ಅನೇಕ ಬಾರಿ ನೋಟಿಸ್ ನೀಡಿದೆ, ಅಲ್ಲದೆ ಬಡ್ಡಿಯನ್ನೂ ವಿಧಿಸುತ್ತಿದೆ. ಈ ಮಧ್ಯೆ ಜಲಮಂಡಳಿಯು ಏಪ್ರಿಲ್ 1 ರಿಂದ ಜೂನ್ 30ರವರೆಗೆ (ಮೂರು ತಿಂಗಳ ಕಾಲ) ಒಟಿಎಸ್ ಜಾರಿಗೊಳಿಸಿತ್ತು. ಪಾವತಿಯ ಗಡುವು ಮುಗಿಯುವ ಹಂತ (ಜೂ.30) ಬಂದರೂ ಯೋಜನೆಗೆ ಅರ್ಹರಾದ ಶೇ.69ರಷ್ಟು ಗ್ರಾಹಕರು ಬಾಕಿ ಶುಲ್ಕ ಪಾವತಿಸಿಲ್ಲ. ಹೀಗಾಗಿ ಗಡುವು ವಿಸ್ತರಣೆಗೆ ಚಿಂತನೆ ನಡೆಸಲಾಗಿದೆ.

ಯೋಜನೆಗೆ ಅರ್ಹವಾದವರು 3 ಲಕ್ಷ!: ಜಲಮಂಡಳಿಯು ನಗರದಲ್ಲಿ 11 ಲಕ್ಷಕ್ಕೂ ಅಧಿಕ ಸಂಪರ್ಕಗಳಿಗೆ ನೀರು ಮತ್ತು ಒಳಚರಂಡಿ ಸೇವೆ ನೀಡುತ್ತಿದೆ. ಈ ಪೈಕಿ ಸುಮಾರು 6 ಲಕ್ಷ ಸಂಪರ್ಕಗಳು ನಿಯಮಿತವಾಗಿ ಸೇವಾ ಶುಲ್ಕ ಪಾವತಿಸುತ್ತಿವೆ. ಉಳಿದಂತೆ ಸುಮಾರು 5,11,854 ಸಂಪರ್ಕಗಳು ಬಾಕಿ ಉಳಿಸಿಕೊಂಡಿವೆ. ಈ ಸಂಖ್ಯೆಯಲ್ಲಿ 3,61,670 ಸಂಪರ್ಕಗಳ ಗ್ರಾಹಕರು ಒಟಿಎಸ್ ಯೋಜನೆಯಡಿ ಸೇವಾ ಶುಲ್ಕದ ಬಾಕಿ ಅಸಲು ಮೊತ್ತವನ್ನು ಪಾವತಿಸಿದರೆ, ಸಂಪೂರ್ಣವಾಗಿ ಶೇ.100ರಷ್ಟು ಬಡ್ಡಿ ಮನ್ನಾ ಮಾಡಲು ಅವಕಾಶ ನೀಡಲಾಗಿತ್ತು. ಆದರೆ, ಈ ಪೈಕಿ ಶೇ.1,13,059 (ಶೇ.31) ಸಂಪರ್ಕಗಳ ಗ್ರಾಹಕರು ಮಾತ್ರ ಬಾಕಿ ಪಾವತಿಸಿದ್ದಾರೆ.

60 ಕೋಟಿಯಷ್ಟೇ ವಸೂಲು: 563.82 ಕೋಟಿ ರೂ. ಅಸಲು ಬಾಕಿ, ಇದರ ಜತೆಗೆ 323.34 ಕೋಟಿ ರೂ. ಬಡ್ಡಿ ಸೇರಿ ಒಟ್ಟು 887.17ಕೋಟಿ ರೂ. ಬಾಕಿ ಇದೆ. 3,61,670 ಸಂಪರ್ಕಗಳ ಗ್ರಾಹಕರು ಒಟಿಎಸ್ ಯೋಜನೆಗೆ ಅರ್ಹರಾಗಿದ್ದರು ಮತ್ತು ಈ ಯೋಜನೆಯಡಿ ಗರಿಷ್ಠ 323.34 ಕೋಟಿ ರೂ. ಬಡ್ಡಿ ಮನ್ನಾ ಮಾಡಲು ರಿಯಾಯಿತಿ ನೀಡಿತ್ತು. ಆದರೆ, ಜೂ.26ರವರೆಗೆ 60,09,05,969 ರೂ. ಮಾತ್ರ ವಸೂಲಾಗಿದೆ.

ಸೆ.30ರವರೆಗೆ ಅವಕಾಶ ?

ಒಟಿಎಸ್ ಯೋಜನೆಯ ಗಡುವು ಮುಗಿದ ನಂತರವೂ ಬಾಕಿ ಪಾವತಿಸದ ಗ್ರಾಹಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಜಲಮಂಡಳಿ ನಿರ್ಧರಿಸಿದೆ. ಆದರೆ, ಇದಕ್ಕೂ ಮುನ್ನ ಮತ್ತೊಂದು ಅವಕಾಶ ನೀಡಲೂ ಚಿಂತನೆ ನಡೆಸಿದೆ. ಮತ್ತೊಂದು ಅವಕಾಶ ನೀಡುವ ಜತೆಗೆ, ಶುಲ್ಕ ಪಾವತಿಗೆ ಸಂಬಂಧಿಸಿದಂತೆ ವ್ಯಾಪಕವಾದ ಜಾಗೃತಿ ಅಭಿಯಾನ ನಡೆಸುವ ಮೂಲಕ ಗ್ರಾಹಕರನ್ನು ಬಾಕಿ ಪಾವತಿಗೆ ಸೆಳೆಯಲು ನಿರ್ಧರಿಸಿದೆ. ಆನಂತರ ಕಠಿಣ ಕ್ರಮ ಕೈಗೊಳ್ಳುವುದು ಸೂಕ್ತವೆಂದು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಸೆ.30ವರೆಗೆ ಒಟಿಎಸ್ ಗಡುವು ವಿಸ್ತರಿಸಲು ಕೋರಿ ನಗರಾಭಿವೃದ್ಧಿ ಇಲಾಖೆಗೆ ಮಂಡಳಿಯು ಪ್ರಸ್ತಾವನೆ ಸಲ್ಲಿಸಲು ಚಿಂತನೆ ನಡೆಸಿದೆ ಎಂದು ಜಲಮಂಡಳಿಯ ಮೂಲಗಳು ತಿಳಿಸಿವೆ.

ಪಾವತಿ ವಿವರ (ಜೂ.26ರವರೆಗೆ)

(ಕೋಟಿ ರೂ.ಗಳಲ್ಲಿ)

ವರ್ಗ	ಸಂಪರ್ಕಗಳು	ವಸೂಲು ಮೊತ್ತ
ಗೃಹ ಬಳಕೆ	1,10,408	57,09,66,264
ಗೃಹಬಳಕೇತರ	2,651	2,99,39,705
ಒಟ್ಟು	1,13,059	60,09,05,969

ಒಟ್ಟು ಬಾಕಿ ವಿವರ

ಒಟಿಎಸ್ ಅರ್ಹವಾದ ಗ್ರಾಹಕರು	3,61,670 ಸಂಪರ್ಕಗಳು
ಒಟ್ಟು ಬಾಕಿ ಅಸಲು	563.82 ಕೋಟಿ ರೂ.
ಇದರ ಬಡ್ಡಿ	323.34 ಕೋಟಿ ರೂ.
ಒಟ್ಟು ಬಾಕಿ	887.17 ಕೋಟಿ ರೂ.

ಒಟಿಎಸ್ ಯೋಜನೆಯಡಿ ಜಲಮಂಡಳಿಯ ಸೇವಾ ಶುಲ್ಕ ಪಾವತಿಗೆ ಸಂಬಂಧಿಸಿದಂತೆ ಬಾಕಿ ಉಳಿಸಿಕೊಂಡಿರುವ ಗ್ರಾಹಕರಲ್ಲಿ ಅರಿವು ಮೂಡಿಸುವ ಮೂಲಕ ಬಾಕಿ ಪಾವತಿಗೆ ಪ್ರೇರೇಪಿಸಬೇಕಿದೆ. ಹಾಗಾಗಿ, ಒಟಿಎಸ್ ಗಡುವು ವಿಸ್ತರಣೆ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು.

- **ಡಾ.ಎನ್.ಮಂಜುಳಾ** ಅಧ್ಯಕ್ಷೆ, ಜಲಮಂಡಳಿ

ಲಾಲ್‌ಬಾಗ್‌ನಲ್ಲಿ ಗಾಜಿನ ಶೌಚಾಲಯ

ವಿಕ ಸುದ್ದಿಲೋಕ ಬೆಂಗಳೂರು

30 ಲಕ್ಷರೂ. ವೆಚ್ಚದಲ್ಲಿ ನಿರ್ಮಾಣ | ಇಂದು ಲೋಕಾರ್ಪಣೆ

ಲಾಲ್‌ಬಾಗ್‌ನಲ್ಲಿ ಇದೇ ಮೊದಲ ಬಾರಿಗೆ 30 ಲಕ್ಷ ರೂ. ವೆಚ್ಚದಲ್ಲಿ ಆಧುನಿಕ ತಂತ್ರಜ್ಞಾನ ಒಳಗೊಂಡ ಸುಸಜ್ಜಿತ ಗಾಜಿನ ಶೌಚಾಲಯವನ್ನು ನಿರ್ಮಿಸಲಾಗಿದೆ. ಮಂಗಳವಾರ ಇದು ಲೋಕಾರ್ಪಣೆಯಾಗಲಿದೆ.

ಬ್ರಿಕ್ ವರ್ಕ್ ಫೌಂಡೇಷನ್‌ನ ಸಿಎಸ್ ಆರ್ ನಿಧಿಯಡಿ ಲಾಲ್‌ಬಾಗ್‌ನ ಮ್ಯೂಸಿಯಂ ಕಟ್ಟಡದ ಬಳಿ ಆಧುನಿಕ ಶೈಲಿಯಲ್ಲಿ ಈ ನೂತನ ಶೌಚಾಲಯ ನಿರ್ಮಿಸಲಾಗಿದೆ. ಈಗಾಗಲೇ ಲಾಲ್ ಬಾಗ್‌ನಲ್ಲಿ 8 ಶೌಚಾಲಯಗಳು ಬಳಕೆಯಲ್ಲಿವೆ. ಆದರೆ, ಲಾಲ್‌ಬಾಗ್ ಮೇನ್ ಗೇಟ್‌ನಿಂದ ಡಬಲ್ ರೋಡ್ ಗೇಟ್‌ವರೆಗೆ ಯಾವುದೇ ಶೌಚಾಲಯಗಳು ಇರಲಿಲ್ಲ, ಇದರಿಂದ ಪ್ರವಾಸಿಗರಿಗೆ ತೊಂದರೆಯಾಗುತ್ತಿತ್ತು. ಇದನ್ನು ಗಮನಿಸಿ ಈ ಅಪಾರದರ್ಶಕ ಶೌಚಾಲಯ ನಿರ್ಮಿಸಲಾಗಿದೆ. ಮಂಗಳವಾರ ಬೆಳಗ್ಗೆ 10.30ಕ್ಕೆ ತೋಟಗಾರಿಕೆ ಇಲಾಖೆ ನಿರ್ದೇಶಕ ಇಬ್ರಾಹಿಂ ಮೈಗೂರ ಅವರು ಶೌಚಾಲಯ ಉದ್ಘಾಟಿಸಲಿದ್ದಾರೆ.

ಶೌಚಾಲಯದ ಮುಂದಿನ ಭಾಗಕ್ಕೆ ಪ್ರತಿಫಲನಗೊಳ್ಳುವ ಗಾಜು ಅಳವಡಿಸಲಾಗಿದೆ. ಇದರಿಂದ ಮುಂಭಾಗದ ಹಸಿರು ಪರಿಸರವು ಪ್ರತಿಬಿಂಬಿತವಾಗುತ್ತಿದೆ. ಜತೆಗೆ, ಶೌಚಾಲಯಕ್ಕೆ ಸಾಕಷ್ಟು ಸೂರ್ಯರಶ್ಮಿ ಬರುವ ಹಾಗೆ ಸ್ಕೈ ಲೈಟ್ಸ್‌ಗಳನ್ನು ಅಳವಡಿಸಲಾಗಿದೆ. ಶೌಚಾಲಯದ ಸುತ್ತಲೂ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಸುರಕ್ಷತೆಗೆ ಒತ್ತು ನೀಡಲಾಗಿದೆ.

ಬ್ರಿಕ್ ವರ್ಕ್ ಫೌಂಡೇಷನ್‌ನ ಸಿಎಸ್‌ಆರ್ ನಿಧಿಯಲ್ಲಿ ಸಂಗೀತಾ ಕುಲಕರ್ಣಿ ಅವರು ಆಧುನಿಕ ಶೌಚಾಲಯ ನಿರ್ಮಿಸಿಕೊಟ್ಟಿದ್ದು, ಮುಂದಿನ ಎರಡು ವರ್ಷ ನಿರ್ವಹಣೆ ಜವಾಬ್ದಾರಿಯನ್ನೂ ವಹಿಸಿಕೊಂಡಿದ್ದಾರೆ. ಆಧುನಿಕ ಶೈಲಿಯ ಪರಿಸರಕ್ಕೆ ಪೂರಕವಾದ ನೈಸರ್ಗಿಕ ಬೆಳಕು ಮತ್ತು ಗಾಳಿ ವ್ಯವಸ್ಥೆಯಿಂದಾಗಿ ಸದಾಕಾಲ ಶುಚಿಯಾಗಿ, ನೈರ್ಮಲ್ಯದಿಂದ ಕೂಡಿರುವ ಶೌಚಾಲಯ ಇದಾಗಿದೆ ಎಂದು ತೋಟಗಾರಿಕೆ ಇಲಾಖೆ ಹೆಚ್ಚುವರಿ ನಿರ್ದೇಶಕ ಡಾ.ಎಂ. ಜಗದೀಶ್ ತಿಳಿಸಿದ್ದಾರೆ.

ಶೌಚಾಲಯವು ದಿನಪೂರ್ತಿ ಕಾರ್ಯ ನಿರ್ವಹಿಸುತ್ತದೆ. ಇದಕ್ಕಾಗಿ ಇಬ್ಬರು ಪ್ರತ್ಯೇಕ ಸ್ವಚ್ಛತಾ ಸಿಬ್ಬಂದಿ ನಿಯೋಜಿಸಿ ಸದಾಕಾಲ ಶೌಚಾಲಯದ ಒಳಾಂಗಣವು ಸ್ವಚ್ಛತೆ ಮತ್ತು ನೈರ್ಮಲ್ಯತೆಯಿಂದ ಕೂಡಿರುವಂತೆ ನೋಡಿಕೊಳ್ಳಲಾಗುತ್ತಿದೆ. ಶೌಚಾಲಯಕ್ಕೆ ಎಲ್ಲಾ ವಯೋಮಾನದವರೂ ಬರುವ ರೀತಿ ವ್ಯವಸ್ಥೆ ಕಲ್ಪಿಸಲಾಗಿದೆ. ಶೌಚಾಲಯದ ಒಳಭಾಗದಲ್ಲಿ ಮಕ್ಕಳಿಗಾಗಿ ಕಡಿಮೆ ಎತ್ತರದಲ್ಲಿ ಹ್ಯಾಂಡ್‌ವಾಶ್, ಡೈಪರ್ ಬದಲಿಸುವ ವ್ಯವಸ್ಥೆ, ತಾಯಂದಿರಿಗಾಗಿ ಹಾಲುಣಿಸುವ ಕೊಠಡಿಗಳನ್ನು ನಿರ್ಮಿಸಲಾಗಿದೆ.



6 ರೂ. ಶುಲ್ಕ ನಿಗದಿ

ಶೌಚಾಲಯ ಬಳಕೆಗಾಗಿ 6 ರೂ. ದರ ನಿಗದಿಪಡಿಸಲಾಗಿದೆ. ಹಣ ಪಾವತಿಗಾಗಿ ಕ್ಯೂಆರ್ ಕೋಡ್‌ನ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

ಕಾಸಿಯಾ ಅಧ್ಯಕ್ಷರಾಗಿ ನಿಂಗಣ್ಣ ಆಯ್ಕೆ

ಬೆಂಗಳೂರು: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) 2026-27ನೇ ಸಾಲಿನ ಅಧ್ಯಕ್ಷರಾಗಿ ನಿಂಗಣ್ಣ ಎಸ್. ಬಿರಾದಾರ್ ಅಧಿಕಾರ ಸ್ವೀಕರಿಸಿದರು. ವಾಣಿಜ್ಯ ಪದವೀಧರರಾಗಿರುವ ನಿಂಗಣ್ಣ ಎಸ್. ಬಿರಾದಾರ್, ವಿದ್ಯುತ್ ಹಾರ್ಡ್‌ವೇರ್ ಲೈನ್ ಸಾಮಗ್ರಿಗಳ ತಯಾರಿಕೆಯ ಉದ್ಯಮಿಯಾಗಿದ್ದು, ಉತ್ತರ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಹುಬ್ಬಳ್ಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಹುಬ್ಬಳ್ಳಿಯ ಕೈಗಾರಿಕಾ ಪ್ರದೇಶದ ಕೆಎಂಟಿಆರ್‌ಸಿ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕಾಸಿಯಾದಲ್ಲಿ 6 ಅವಧಿಗಳ ಕಾಲ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಹಾಗೂ ಒಂದು ಅವಧಿಗೆ ಜಂಟಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಉಪಾಧ್ಯಕ್ಷರಾಗಿ ಎಚ್.ಎನ್. ರಾಮಕೃಷ್ಣಯ್ಯ, ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಸಿ. ಪ್ರಕಾಶ್, ಖಜಾಂಚಿಯಾಗಿ ಎಸ್. ರವಿರಾಜ್ ಶೆಟ್ಟಿ, ನಗರ ಜಂಟಿ ಕಾರ್ಯದರ್ಶಿಯಾಗಿ ಎಂ.ಎ. ಗಿರಿ, ಗ್ರಾಮೀಣ ಜಂಟಿ ಕಾರ್ಯದರ್ಶಿಯಾಗಿ ಮಲ್ಲೇಶ್ ಬಿ. ಜಾಡರ್ ಆಯ್ಕೆಯಾಗಿದ್ದಾರೆ.

3ನೇ ಹಂತದ ಡಬಲ್ ಡೆಕ್ಕರ್‌ನಿಂದ ಪರಿಸರಕ್ಕೆ ಹಾನಿ

ವಿಕ ಸುದ್ದಿಲೋಕ ಬೆಂಗಳೂರು

ನಮ್ಮ ಮೆಟ್ರೊ ಮೂರನೇ ಹಂತದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಡಬಲ್ ಡೆಕ್ಕರ್‌ನಿಂದ ಆರ್ಥಿಕವಾಗಿಯೂ ನಷ್ಟವಾಗಲಿದೆ. ಪರಿಸರದ ದೃಷ್ಟಿಯಿಂದಲೂ ಹಾನಿಯಾಗಲಿದ್ದು, ಸಂಚಾರ ದಟ್ಟಣೆ ಹೆಚ್ಚಾಗಲಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸುಸ್ಥಿರ ಸಾರಿಗೆ ಪ್ರಯೋಗಾಲಯದ ಅಧ್ಯಯನ ವರದಿ ಹೇಳಿದೆ.

ಐಐಎಸ್‌ಸಿಯ ಪ್ರೊ. ಆಶಿಶ್ ವರ್ಮಾ ನೇತೃತ್ವದಲ್ಲಿ ಕೇಂದ್ರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕಾಗಿ ಅಧ್ಯಯನ ನಡೆಸಿ ರೂಪಿಸಲಾದ ತಾಂತ್ರಿಕ ವರದಿಯಲ್ಲಿ ಈ ಅಂಶಗಳನ್ನು ಪ್ರಸ್ತಾಪಿಸಿದೆ. ಕೇವಲ ಮೆಟ್ರೊ ಮಾರ್ಗ ಇದ್ದರೆ ಪರಿಣಾಮವೇನು ಹಾಗೂ ಡಬ್ಬಲ್ ಡೆಕ್ಕರ್ ನಿರ್ಮಾಣವಾಗದಲ್ಲಿ ಏನಾಗಲಿದೆ ಎಂಬುದನ್ನು ಹೋಲಿಸಿ 2041ರಲ್ಲಿ ಆಗುವ ಪರಿಣಾಮದ ಬಗ್ಗೆ ವರದಿ ಹೇಳಿದೆ.

ಕೇವಲ ಮೆಟ್ರೊ ಮಾರ್ಗ ಇದ್ದಲ್ಲಿ ಪ್ರತಿ ದಿನ ಸುಮಾರು 8.09 ಲಕ್ಷ ಪ್ರಯಾಣಿಕರು ಸಂಚರಿಸಲಿದ್ದು, ಡಬಲ್ ಡೆಕ್ಕರ್ ನಿರ್ಮಾಣವಾದಲ್ಲಿ 7.98 ಲಕ್ಷ ಪ್ರಯಾಣಿಕರು ಮಾತ್ರ ಸಂಚರಿಸಬಹುದು. ಅಂದರೆ ಪ್ರತಿದಿನ 11 ಸಾವಿರ ಪ್ರಯಾಣಿಕರ ಸಂಖ್ಯೆ ಕಡಿಮೆ ಆಗಲಿದೆ. ಮೆಟ್ರೊ ಬಿಟ್ಟು ಡಬಲ್ ಡೆಕ್ಕರ್ ಫ್ಲೈಓವರ್‌ನಲ್ಲಿ ಖಾಸಗಿ ವಾಹನ ಬಳಸಿ ಜನ ಓಡಾಡಬಹುದು. ಬಸ್ ಶೇ.6.4 ಹಾಗೂ ಮೆಟ್ರೊ ಶೇ.1.4 ಪ್ರಯಾಣ ಕಡಿಮೆಯಾಗಿ ಇದೇ ವೇಳೆ ಕಾರು ಶೇ. 3.8, ಬೈಕ್ ಶೇ. 1.28, ಆಟೋ ಟ್ಯಾಕ್ಸಿಗಳು ಶೇ. 2.8 ರಷ್ಟು ಹೆಚ್ಚಾಗಲಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಖಾಸಗಿ ವಾಹನಗಳ ಸಂಚಾರ ಹೆಚ್ಚಾಗುವುದರಿಂದ ಪರಿಸರಕ್ಕೆ ಹಾನಿಯಾಗಲಿದೆ. ಮಾಲಿನ್ಯಕಾರಕಗಳಾದ ಕಾರ್ಬನ್ ಡೈಆಕ್ಸೈಡ್, ಕಾರ್ಬನ್ ಮೊನಾಕ್ಸೈಡ್, ನೈಟ್ರೋಜನ್ ಆಕ್ಸೈಡ್, ಹೈಡ್ರೊಕಾರ್ಬನ್ ಹಾಗೂ ಉಸಿರಾಟಕ್ಕೆ ತೊಂದರೆ ಮಾಡುವ ಪಿಎಂ 2.5 ಕಣಗಳು ವಿಪರೀತ ಹೆಚ್ಚಾಗಲಿವೆ. ಪ್ರತಿದಿನ 7ಸಾವಿರ ಲೀ. ಇಂಧನ ಹೆಚ್ಚುವರಿ ಬಳಕೆಯಾಗಲಿದ್ದು, ಇದಕ್ಕಾಗಿ 6.45 ಲಕ್ಷ ರೂ. ಖರ್ಚಾಗಲಿದೆ. ಕೇವಲ ಮೆಟ್ರೊಗೆ ಹೋಲಿಸಿದರೆ, ಡಬಲ್ ಡೆಕ್ಕರ್ ಹೆಚ್ಚಿನ ಖರ್ಚಿಗೆ ಕಾರಣವಾಗಲಿದ್ದು, 2863 ಕೋಟಿ ರೂ. ಹೆಚ್ಚುವರಿ ಬಂಡವಾಳ ವೆಚ್ಚವಾಗಲಿದೆ. ಬೃಹತ್ ಪಿಲ್ಲರ್, ಎತ್ತರಿಸಿದ ನಿಲ್ದಾಣ, ಆಳವಾದ ಫೌಂಡೇಶನ್, ಮಲ್ಟಿಮಾಡೆಲ್ ಇಂಟಿಗ್ರೇಷನ್ ವೆಚ್ಚ ದುಬಾರಿಯಾಗಲಿದೆ. ಜತೆಗೆ, ಡಬಲ್‌ಡೆಕ್ಕರ್‌ನಿಂದ ಯೋಜನೆಯ ಆಂತರಿಕ ಆರ್ಥಿಕ ಆದಾಯ ದರ ಕುಸಿತವಾಗಲಿದೆ. ಇದು ಸಂಪೂರ್ಣ ಆರ್ಥಿಕ ನಷ್ಟಕ್ಕೆ ಕಾರಣವಾಗಲಿದೆ ಎಂದು ವರದಿ ಹೇಳಿದೆ.

ಕೊಯಮತ್ತೂರು-ಮುಂಬಯಿ ರೈಲಿಗೆ ಯಲಹಂಕದಲ್ಲಿ ನಿಲುಗಡೆಗೆ ಚಾಲನೆ

ಯಲಹಂಕ (ಬೆಂಗಳೂರು): ಯಲಹಂಕ ರೈಲು ನಿಲ್ದಾಣದಲ್ಲಿ ಕೊಯಮತ್ತೂರು-ಲೋಕಮಾನ್ಯ ತಿಲಕ್ ಟರ್ಮಿನಸ್ (ಮುಂಬಯಿ)ಎಕ್ಸ್‌ಪ್ರೆಸ್ ಹೆಚ್ಚುವರಿ ನಿಲುಗಡೆಗೆ ರೈಲ್ವೆ ಸಹಾಯಕ ಸಚಿವ ವಿ. ಸೋಮಣ್ಣ ಸೋಮವಾರ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ''ಯಲಹಂಕದ ವೇಗದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಬೆಂಗಳೂರಿನ ರೈಲು ನಿಲ್ದಾಣಗಳ ಮೇಲಿನ ಒತ್ತಡ ತಗ್ಗಿಸಲು ಯಲಹಂಕದಲ್ಲಿ ಹೊಸ ಮೆಗಾ ರೈಲ್ವೆ ಟರ್ಮಿನಲ್ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಬೆಂಗಳೂರು ಕಂಟೋನ್ಮೆಂಟ್ ಹಾಗೂ ಯಶವಂತಪುರ ರೈಲು ನಿಲ್ದಾಣಗಳನ್ನು ವಿಶ್ವದರ್ಜೆಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಬೆಂಗಳೂರು ಕಂಟೋನ್ಮೆಂಟ್-ವೈಟ್‌ಫೀಲ್ಡ್ ಚತುಷ್ಪಥ ಯೋಜನೆ ಪ್ರಗತಿಯಲ್ಲಿದೆ,'' ಎಂದರು.

ಸಂಸದ ಡಾ.ಕೆ.ಸುಧಾಕರ್ ಮಾತನಾಡಿ, ''ಚಿಕ್ಕಬಾಣಾವರ, ಗೊಲ್ಲಹಳ್ಳಿ ಹಾಗೂ ಸೋಲದೇವನಹಳ್ಳಿ ರೈಲ್ವೆ ಮೇಲ್ಸೇತುವೆ ಕಾಮಗಾರಿಗಳ ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು,'' ಎಂದು ಸಚಿವರಲ್ಲಿ ಮನವಿ ಮಾಡಿದರು.

ಶಾಸಕ ಎಸ್.ಆರ್. ವಿಶ್ವನಾಥ್ ಮಾತನಾಡಿ, ''ಯಲಹಂಕದಲ್ಲಿ ಈ ರೈಲಿನ ನಿಲುಗಡೆಯಿಂದ ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ,'' ಎಂದರು.

ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್, ಬೆಂಗಳೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಪರೀಕ್ಷಿತ್ ಮೋಹನ್‌ಪುರಿಯಾ ಉಪಸ್ಥಿತರಿದ್ದರು.

ಕೊಯಮತ್ತೂರು-ಲೋಕಮಾನ್ಯ ತಿಲಕ್ ಟರ್ಮಿನಸ್ (ಮುಂಬಯಿ)ಎಕ್ಸ್‌ಪ್ರೆಸ್ ರೈಲು ಹೆಚ್ಚುವರಿ ನಿಲುಗಡೆಗೆ ರೈಲ್ವೆ ಸಹಾಯಕ ಸಚಿವ ವಿ. ಸೋಮಣ್ಣ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಚತುಷ್ಪಥ ರೈಲು ಮಾರ್ಗ

ಚನ್ನಪಟ್ಟಣ: ರಾಜಧಾನಿ ಬೆಂಗಳೂರಿನಿಂದ 100 ಕಿ.ಮೀ. ಸುತ್ತಮುತ್ತಲಿನ ನಗರಗಳಿಗೆ ಚತುಷ್ಪಥ ರೈಲ್ವೆ ಮಾರ್ಗಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ವಿ.ಸೋಮಣ್ಣ ಘೋಷಣೆ ಮಾಡಿದರು. ಪಟ್ಟಣದ ಎಲೆಕೇರಿ ಬಳಿ ನೂತನವಾಗಿ ನಿರ್ಮಿಸಿರುವ ಮೇಲ್ಸೇತುವೆಯನ್ನು ಉದ್ಘಾಟಿಸಿ ಮಾತನಾಡಿದರು. ಇದಕ್ಕೂ ಮೊದಲು ಮಾತನಾಡಿದ ಸಚಿವ ಎಂ.ಬಿ.ಪಾಟೀಲ್, ''ರಾಜ್ಯದ ರೈಲ್ವೆ ಬೇಡಿಕೆಗಳನ್ನು ಸೋಮಣ್ಣ ಅವರ ಮುಂದಿಡಲಾಗಿತ್ತು. ಬೆಂಗಳೂರಿನಿಂದ ತುಮಕೂರು, ಮೈಸೂರು, ಗೌರಿಬಿದನೂರು ಮಾರ್ಗವಾಗಿ ಹಿಂದೂಪುರ, ಕೋಲಾರಕ್ಕೆ ಚತುಷ್ಪಥ ಹಳಿ ನಿರ್ಮಿಸಬೇಕು ಎಂದು ಕೋರಲಾಗಿತ್ತು,'' ಎಂದರು.

ದೇಣಿಗೆ ಲೂಟಿಕೋರರ ಪರ ವಕಾಲತ್ತು ಇಲ್ಲ

ಫೈಜಾಬಾದ್ ವಕೀಲರ ಸಂಘ ನಿರ್ಣಯ | ನಿರ್ಬಂಧ ಉಲ್ಲಂಘಿಸಿದರೆ 5 ಲಕ್ಷ ರೂ. ದಂಡ ವಿಧಿಸುವ ಎಚ್ಚರಿಕೆ

ಅಯೋಧ್ಯೆ: ಉತ್ತರ ಪ್ರದೇಶದ ಅಯೋಧ್ಯೆ ರಾಮಮಂದಿರ ದೇಣಿಗೆ ಕಳವು ಪ್ರಕರಣದ ಎಂಟು ಆರೋಪಿಗಳ ಪರವಾಗಿ ವಕಾಲತ್ತು ವಹಿಸದಿರಲು ವಕೀಲರು ತೀರ್ಮಾನಿಸಿದ್ದಾರೆ.

ದೇಣಿಗೆ ಕಳವಿನಿಂದ ಭಕ್ತರ ಭಾವನೆಗಳಿಗೆ ಧಕ್ಕೆಯಾಗಿದೆ. ಇಂತಹ ಕಳಂಕ ಹೊತ್ತಿರುವ ಬಂಧಿತ ಎಂಟು ಆರೋಪಿಗಳ ಪರವಾಗಿ ಯಾವುದೇ ಸದಸ್ಯರು ವಕಾಲತ್ತು ವಹಿಸಬಾರದು ಎಂದು ಫೈಜಾಬಾದ್ ವಕೀಲರ ಸಂಘ ಸೋಮವಾರ ನಿರ್ಣಯ ಕೈಗೊಂಡಿದೆ. ಈ ನಿರ್ಧಾರ ಉಲ್ಲಂಘಿಸುವ ಯಾವುದೇ ವಕೀಲರಿಗೆ 5 ಲಕ್ಷ ರೂಪಾಯಿ ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ.

ದೇಣಿಗೆ ಕಳವು ಪ್ರಕರಣದಲ್ಲಿ 8 ಆರೋಪಿಗಳನ್ನು ಬಂಧಿಸಿದ್ದೇನೋ ಸರಿ. ಆದರೆ, ಎಫ್ಐಆರ್‌ನಲ್ಲಿ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಮಾಜಿ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್, ಮಾಜಿ ಟ್ರಸ್ಟಿ ಡಾ. ಅನಿಲ್ ಮಿಶ್ರಾ ಹಾಗೂ ಮಂದಿರ ನಿರ್ಮಾಣ ಉಸ್ತುವಾರಿ ಗೋಪಾಲ್ ರಾವ್ ಹೆಸರು ಉಲ್ಲೇಖವಿಲ್ಲ, ಆದರೆ ಈ ಅಕ್ರಮದ ಹಿಂದೆ ಇವರ ಪಾತ್ರವಿರುವ ಶಂಕೆ ಇದ್ದು, ಇವರನ್ನೂ ವಿಚಾರಣೆಗೊಳಪಡಿಸಬೇಕು ಎಂದು ಫೈಜಾಬಾದ್ ವಕೀಲರ ಸಂಘದ ಸಭೆ ಒತ್ತಾಯಿಸಿದೆ.

ಚಂಪತ್ ರಾಯ್, ಅನಿಲ್ ಮಿಶ್ರಾ, ಗೋಪಾಲ್ ರಾವ್ ಮೂರು ದಿನಗಳೊಳಗೆ ಅಯೋಧ್ಯೆಯನ್ನು ತೊರೆಯಬೇಕು ಎಂದು ಸಂಘವು ಗಡುವು ವಿಧಿಸಿದೆ. ಇಲ್ಲದಿದ್ದರೆ ಇಡೀ ನಗರವನ್ನು ಬಂದ್ ಮಾಡಲಾಗುವುದು ಮತ್ತು ಯಾರನ್ನೂ ನಗರದೊಳಗೆ ಪ್ರವೇಶಿಸಲು ಬಿಡುವುದಿಲ್ಲ ಎಂದು ಎಚ್ಚರಿಸಿದೆ.

ಸಿಬಿಐ ಪತ್ರ: ಈ ಹಣ ದುರುಪಯೋಗ ಆರೋಪದ ಕುರಿತು ತನಿಖೆ ನಡೆಸುವಂತೆ ಕೋರಿ ಸಿಬಿಐಗೆ ಪತ್ರ ಬರೆಯಲಾಗುವುದು. ಅಲ್ಲದೇ ಸಿಬಿಐ ತನಿಖೆಗೆ ಆಗ್ರಹಿಸಿ ಅಲಹಾಬಾದ್ ಹೈಕೋರ್ಟ್, ಅಗತ್ಯಬಿದ್ದರೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಲೂ ಸಂಘವು ಸಭೆಯಲ್ಲಿ ತೀರ್ಮಾನ ಕೈಗೊಂಡಿದೆ. ಚಂಪತ್ ರಾಯ್, ಅನಿಲ್ ಮಿಶ್ರಾ, ಗೋಪಾಲ್ ರಾವ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 156(3) ಅಡಿಯಲ್ಲಿ ಪ್ರಕರಣ ದಾಖಲಿಸುವಂತೆ ಕೋರ್ಟ್ ಮೊರೆ ಹೋಗುವುದಾಗಿಯೂ ಹೇಳಿದೆ.

ಈ ಮಧ್ಯೆ ಬಂಧಿತ ಆರೋಪಿಗಳಾದ ಅವಿನಾಶ್ ಶುಕ್ಲಾ, ಅನುಕಲ್ಪ್ ಮಿಶ್ರಾ, ಲವ್ ಕುಶ್ ಮಿಶ್ರಾ, ಮನೀಶ್ ಕುಮಾರ್ ಯಾದವ್, ಕರುಣೇಶ್ ಪಾಂಡೆ, ರಾಮ್ ಶಂಕರ್ ಮಿಶ್ರಾ, ಸುಭಾಷ್ ಶ್ರೀವಾಸ್ತವ ಮತ್ತು ರಾಮ್‌ಶಂಕರ್ ಅಲಿಯಾಸ್ ಟಿನ್ನು ಯಾದವ್‌ರನ್ನು ಅವರನ್ನು ಸ್ಥಳೀಯ ನ್ಯಾಯಾಲಯ, 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಜುಲೈ 6ಕ್ಕೆ ಟ್ರಸ್ಟ್ ಸಭೆ: ಜುಲೈ 11ರಂದು ನಡೆಯಬೇಕಿದ್ದ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಸಭೆ ಜುಲೈ 6ಕ್ಕೆ ನಿಗದಿಯಾಗಿದೆ. ದೇಣಿಗೆ ಕಳವು ಪ್ರಕರಣ ಹಿನ್ನೆಲೆಯಲ್ಲಿ ಟ್ರಸ್ಟ್ ನಿರ್ವಹಣೆ ರೂಪುರೇಷೆ ಕುರಿತು ಸಭೆಯಲ್ಲಿ ಚರ್ಚೆಯಾಗಲಿದೆ.

ಅರ್ಜಿಯ ತುರ್ತು ವಿಚಾರಣೆಗೆ ನಕಾರ

ರಾಮಮಂದಿರ ದೇಣಿಗೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ನೇತೃತ್ವದಲ್ಲಿ ತನಿಖೆ ನಡೆಸಬೇಕೆಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ತುರ್ತು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ''ಆಕಾಶವೇನೂ ಕಳಚಿ ಬೀಳುವುದಿಲ್ಲ, ಇದರಲ್ಲಿ ತುರ್ತು ವಿಚಾರಣೆ ನಡೆಸುವ ಅಗತ್ಯವಾದರೂ ಏನಿದೆ'' ಎಂದು ಪ್ರಶ್ನಿಸಿದ ನ್ಯಾಯಮೂರ್ತಿ ಎಂ.ಎಂ. ಸುಂದರೇಶ್ ಮತ್ತು ಶೀಲ್ ನಾಗು ನೇತೃತ್ವದ ಪೀಠವು, ಬೇಸಿಗೆ ರಜೆ ನಂತರ ವಿಚಾರಣೆಗೆ ನಿಗದಿಪಡಿಸಲಾಗುವುದು ಎಂದು ಹೇಳಿತು. ಅಜಯ್ ಕುಮಾರ್ ರಾಯ್ ಮತ್ತು ದಿನೇಶ್ ಕುಮಾರ್ ಯಾದವ್ ಎಂಬುವರು ಈ ಅರ್ಜಿ ಸಲ್ಲಿಸಿದ್ದರು.

ರಾಮನ ದುಡ್ಡಲ್ಲಿ ಜಮೀನು ಖರೀದಿಸಿದರು!

ರಾಮಮಂದಿರ ದೇಣಿಗೆ ಕಳವು ಪ್ರಕರಣದ ಪ್ರಮುಖ ಆರೋಪಿ ಅನುಕಲ್ಪ್ ಮಿಶ್ರಾನ ಆಸ್ತಿ ಪರಿಶೀಲಿಸಿದ ಪೊಲೀಸರೇ ದಂಗಾಗಿ ಹೋಗಿದ್ದಾರೆ. ತಿಂಗಳಿಗೆ 15,000 ರೂ. ಸಂಬಳದ ಮೇರೆಗೆ ದೇಣಿಗೆ ಎಣಿಕೆ ತಂಡದ ಸಿಬ್ಬಂದಿಯಾಗಿ ನೇಮಕಗೊಂಡಿದ್ದ ಈತ ರಾಮನ ದುಡ್ಡನ್ನು ಕದ್ದು ಅಲ್ಪಾವಧಿಯಲ್ಲೇ ಕೋಟ್ಯಧಿಪತಿಯಾಗಿರುವ ಸತ್ಯ ತನಿಖೆಯಲ್ಲಿ ಬಯಲಾಗಿದೆ. ಅನುಕಲ್ಪ್ ಅಯೋಧ್ಯೆ ಹೊರವಲಯದ ಗ್ರಾಮವೊಂದರಲ್ಲಿ ಫಾರ್ಮ್‌ಹೌಸ್, ಅಯೋಧ್ಯೆಯಲ್ಲಿ 65 ಲಕ್ಷ ರೂ. ಮೌಲ್ಯದ ಮನೆ ಹಾಗೂ ಭಾರಿ ಬೆಲೆಬಾಳುವ ಎಸ್‌ಯುವಿ ಕಾರನ್ನು ಬುಕ್ ಮಾಡಿರುವುದು ತನಿಖೆ ವೇಳೆ ಬಯಲಿಗೆ ಬಂದಿದೆ.

ಅನುಕಲ್ಪ್ ಶಿಫಾರಸಿನ ಮೇರೆಗೆ 12,000 ರೂ. ಸಂಬಳಕ್ಕೆ ದೇಣಿಗೆ ಎಣಿಕೆ ಕಾರ್ಯದ ತಂಡ ಸೇರಿಕೊಂಡಿದ್ದ ಲವ್‌ಕುಶ್ ಮಿಶ್ರಾ ಕೂಡ ಅಲ್ಪ ಅವಧಿಯಲ್ಲಿ ಅಯೋಧ್ಯೆ-ಲಖನೌ ಹೆದ್ದಾರಿ ಸಮೀಪ 8 ಲಕ್ಷ ರೂ.ಗೆ ನಿವೇಶನ ಖರೀದಿಸಿ, ಸದ್ಯ ಮನೆ ನಿರ್ಮಿಸುತ್ತಿದ್ದು, ಇದರ ಮಾರುಕಟ್ಟೆ ಮೌಲ್ಯ 25 ಲಕ್ಷ ರೂ. ಎಂದು ತಿಳಿದುಬಂದಿದೆ. ಅಲ್ಲದೇ ದುಬಾರಿ ಬೈಕ್ ಖರೀದಿಸಿದ್ದು, ಈತನ ಆದಾಯದ ಮೂಲಗಳನ್ನು ತನಿಖಾ ತಂಡ ಜಾಲಾಡುತ್ತಿದೆ.

ಬ್ರೀಫ್ ಕಾರ್ನರ್

ಖಮೇನಿ ಅಂತ್ಯಕ್ರಿಯೆಯಲ್ಲಿ ಭಾರತದ ಪ್ರತಿನಿಧಿಗಳು ಭಾಗಿ

ಹೊಸದಿಲ್ಲಿ: ಅಮೆರಿಕ-ಇಸ್ರೇಲ್ ವೈಮಾನಿಕ ದಾಳಿಯಲ್ಲಿ ಹತರಾಗಿದ್ದ ಇರಾನ್ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅಂತ್ಯಕ್ರಿಯೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುತ್ತಿಲ್ಲ. ಪೂರ್ವನಿರ್ಧರಿತ ಇಂಡೋನೇಷ್ಯಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಪ್ರವಾಸ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರು ಖಮೇನಿ ಅಂತ್ಯಕ್ರಿಯೆ ವಿಧಿವಿಧಾನದಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದು ಪ್ರಧಾನಿ ಕಾರ್ಯಾಲಯ ಖಚಿತಪಡಿಸಿದೆ. ಮೋದಿ ಅವರ ಬದಲು ಭಾರತದ ಪ್ರತಿನಿಧಿಯಾಗಿ ಬಿಹಾರ ರಾಜ್ಯಪಾಲರಾಗಿರುವ ನಿವೃತ್ತ ಲೆಫ್ಟಿನೆಂಟ್ ಜನರಲ್ ಸೈಯ್ಯದ್ ಅತಾ ಹಸ್ನೈನ್ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಹಾಯಕ ಸಚಿವ ಪಬಿತ್ರಾ ಮಾರ್ಗರಿಟಾ ಪಾಲ್ಗೊಳ್ಳಲಿದ್ದಾರೆ ಎಂದು ಸರಕಾರ ಮಾಹಿತಿ ನೀಡಿದೆ. ಫೆ.28ರಂದು ಮೃತಪಟ್ಟಿದ್ದ ಖಮೇನಿ ಅವರ ಅಂತಿಮ ವಿಧಿವಿಧಾನಗಳು ಜುಲೈ 4ರಿಂದ ಆರಂಭವಾಗಲಿವೆ. ಜುಲೈ 9ರಂದು ಮಶಾದ್‌ನಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಅವರು ಖಮೇನಿ ಅಂತ್ಯಕ್ರಿಯೆಗೆ ಆಗಮಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಳೆದ ವಾರ ಆಹ್ವಾನ ನೀಡಿದ್ದರು.

29 ಆಫ್ಘನ್ ಬಂಡುಕೋರರನ್ನು ಹತ್ಯೆಗೈದ ಪಾಕಿಸ್ತಾನ ಸೇನೆ

ಕಾಬೂಲ್: ಕರಾಚಿಯ ಸಿಂಧ್ ರೇಂಜರ್ಸ್ ಕೇಂದ್ರ ಕಚೇರಿ ಮೇಲೆ ಉಗ್ರರ ಆತ್ಮಾಹುತಿ ದಾಳಿ ಬೆನ್ನಿಗೆ ಪಾಕಿಸ್ತಾನ ಹಾಗೂ ಅಫಘಾನಿಸ್ತಾನ ನಡುವೆ ಮತ್ತೊಮ್ಮೆ ರಾಜತಾಂತ್ರಿಕ ಬಿಕ್ಕಟ್ಟು ತಲೆದೋರಿದೆ. ಸಿಂಧ್ ರೇಂಜರ್ಸ್ ಮೇಲಿನ ಉಗ್ರ ದಾಳಿಗೆ ಪ್ರತೀಕಾರವಾಗಿ ಆಫ್ಘನ್ ಗಡಿಗೆ ಹೊಂದಿಕೊಂಡ ಪ್ರದೇಶಗಳ ಮೇಲೆ ಪಾಕಿಸ್ತಾನ ಸೋಮವಾರ ನಡೆಸಿದ ಸೇನಾ ಕಾರ್ಯಾಚರಣೆಯಲ್ಲಿ 29 ಬಂಡುಕೋರರು ಹತರಾಗಿದ್ದಾರೆ. ಖೈಬರ್ ಪಖ್ತುಂಖ್ವಾ, ಬಲೂಚಿಸ್ತಾನ, ಕರಾಚಿ ಮೇಲೆ ಉಗ್ರರು ದಾಳಿ ನಡೆಸಿದ ಬಳಿಕ ಆಫ್ಘನ್ ಬೆಂಬಲಿತ ಬಂಡುಕೋರ ನೆಲೆಗಳ ಮೇಲೆ ಪಾಕ್ ರಕ್ಷಣಾ ಪಡೆಗಳು ಸೋಮವಾರ ದಾಳಿ ನಡೆಸಿವೆ. ''ಬಜೌರ್, ಪಕ್ತಿಯಾ, ಪಕ್ತಿಕಾ, ಕುನಾರ್ ಪ್ರಾಂತ್ಯಗಳಲ್ಲಿದ್ದ ಉಗ್ರರ ಅಡಗುತಾಣಗಳ ಮೇಲೆ ಭೂ ಸೇನೆ ಕಾರ್ಯಾಚರಣೆ ನಡೆಸಿದೆ. ಪಾಕ್ ಸೇನಾ ದಾಳಿಯಲ್ಲಿ 29 ಬಂಡುಕೋರರು ಹತರಾಗಿದ್ದಾರೆ. ಉಗ್ರರು ಅಡಗುತಾಣ ನಾಶಪಡಿಸುವ ಜತೆಗೆ ಶಸ್ತ್ರಾಸ್ತ್ರ ಸಂಗ್ರಹಗಾರಗಳನ್ನು ಧ್ವಂಸಗೊಳಿಸಲಾಗಿದೆ,'' ಎಂದು ಪಾಕಿಸ್ತಾನದ ವಾರ್ತಾ ಸಚಿವ ಅತ್ತ ತರಾರ್ ಹೇಳಿದ್ದಾರೆ. ಸಿಂಧ್ ರೇಂಜರ್ಸ್ ಮೇಲಿನ ದಾಳಿ ಬಳಿಕ ಆಫ್ಘನ್ ರಾಜತಾಂತ್ರಿಕರಿಗೆ ಸಮನ್ಸ್ ನೀಡಿದ ಪಾಕಿಸ್ತಾನ ವಿದೇಶಾಂಗ ಸಚಿವಾಲಯ ಪ್ರತಿಭಟನೆ ದಾಖಲಿಸಿದೆ. ಆಫ್ಘನ್‌ನಲ್ಲಿರುವ ಪಾಕ್ ರಾಯಭಾರಿ ಕಚೇರಿ ಸಹ ಪ್ರತಿರೋಧ ದಾಖಲಿಸಿತು.

ಅನಿಶ್ಚಿತತೆಯಲ್ಲಿ ದೋಹಾ ಶಾಂತಿ ಮಾತುಕತೆ

ವಾಷಿಂಗ್ಟನ್/ಟೆಹರಾನ್: ಮಧ್ಯಪ್ರಾಚ್ಯ ಸಂಘರ್ಷ ಕೊನೆಗಾಣಿಸಲು ಮುಂದಿನ ಹಂತದ ಮಾತುಕತೆ ಜೂನ್ 30ರಂದು ಕತಾರ್‌ನಲ್ಲಿ ನಡೆಯಲಿದೆ. ಇರಾನ್ ಬೇಡಿಕೆಯಂತೆ ದೋಹಾದಲ್ಲಿ ಮಾತುಕತೆ ನಿಗದಿಯಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಅಮೆರಿಕ ಅಧ್ಯಕ್ಷರ ಪ್ರಸ್ತಾವಿತ ಮಾತುಕತೆಯನ್ನು ತಳ್ಳಿ ಹಾಕಿರುವ ಇರಾನ್, ವಾಷಿಂಗ್ಟನ್ ಜತೆ ಸದ್ಯಕ್ಕೆ ನೇರ ಮಾತುಕತೆ ನಡೆಸುವ ಯಾವುದೇ ಯೋಜನೆ ಹೊಂದಿಲ್ಲ ಎಂದು ಸ್ಪಷ್ಟಪಡಿಸಿದೆ. ಉಭಯ ದೇಶಗಳ ವಿರೋಧಾಭಾಸದ ಹೇಳಿಕೆಯಿಂದ ದೋಹಾ ಶಾಂತಿ ಮಾತುಕತೆ ಮೇಲೆ ಅನಿಶ್ಚಿತತೆ ಕಾರ್ಮೋಡ ಆವರಿಸಿದೆ. ಮಧ್ಯಂತರ ಕದನ ವಿರಾಮ ಜಾರಿಗೆ ಸಹಿ ಹಾಕಿದ ಶಾಂತಿ ಒಪ್ಪಂದದ ನಿಯಮ ಉಲ್ಲಂಘನೆ ನೆಪದಲ್ಲಿ ಅಮೆರಿಕ-ಇರಾನ್ ನಡುವೆ ಶನಿವಾರ-ಭಾನುವಾರ ದಾಳಿ, ಪ್ರತಿದಾಳಿ ನಡೆದಿತ್ತು. ಎರಡು ದೇಶಗಳ ನಡುವೆ ತಲೆದೋರಿದ ಉದ್ವಿಗ್ನ ಸ್ಥಿತಿ ನಡುವೆ ಮುಂದಿನ ಹಂತದ ಶಾಂತಿ ಮಾತುಕತೆ ಕುರಿತು ಮಾತನಾಡಿರುವ ಟ್ರಂಪ್, ''ಇರಾನ್ ಒತ್ತಾಸೆಯಂತೆ ದೋಹಾದಲ್ಲಿ ಶಾಂತಿ ಮಾತುಕತೆಗೆ ಸಭೆ ನಿಗದಿಪಡಿಸಲಾಗಿದೆ. ಮಂಗಳವಾರ ಉದ್ದೇಶಿತ ಮಾತುಕತೆಗಳು ಮುಂದುವರಿಯಲಿವೆ,'' ಎಂದು ಸಾಮಾಜಿಕ ಜಾಲತಾಣ ಟ್ರುಥ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಆದರೆ, ಟ್ರಂಪ್ ಹೇಳಿಕೆಗೆ ತದ್ವಿರುದ್ಧ ಪ್ರತಿಕ್ರಿಯೆ ನೀಡಿರುವ ಇರಾನ್, ''ಸದ್ಯಕ್ಕೆ ಅಮೆರಿಕ ಜತೆ ನೇರ ಮಾತುಕತೆ ನಡೆಸುವ ಪ್ರಸ್ತಾಪ ನಮ್ಮ ಮುಂದೆ ಇಲ್ಲ, ದೋಹಾ ಸಭೆಯಲ್ಲಿ ಪಾಲ್ಗೊಳ್ಳುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ'' ಎಂದು ತಿಳಿಸಿದೆ. ''ಸ್ವಿಜರ್ಲೆಂಡ್‌ನಲ್ಲಿ ನಡೆದ ಮೊದಲ ಸುತ್ತಿನ ಮಾತುಕತೆಯಲ್ಲಿ ಚರ್ಚಿಸಲಾದ ತಾಂತ್ರಿಕ ಅಂಶಗಳ ಅನುಷ್ಠಾನ, ಷರತ್ತುಗಳಿಗೆ ಒಪ್ಪಿಗೆ ನೀಡಿದ ಬಳಿಕವೇ ಮುಂದಿನ ಹಂತದ ಮಾತುಕತೆಗೆ ಇರಾನ್ ಮುಂದಾಗಲಿದೆ,'' ಸಚಿವ ಕಾಜೆಮ್ ಘರಿಬಬಾದಿ ಹೇಳಿದ್ದಾರೆ.

₹60 ಕೋಟಿ ಮೌಲ್ಯದ ಆಸ್ತಿ ರಿಲೀಸ್

ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದ ನಮ್ಮ 60 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಕತಾರ್ ಬಿಡುಗಡೆ ಮಾಡಲಿದೆ ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಸೋಮವಾರ ತಿಳಿಸಿದ್ದಾರೆ. ಅಮೆರಿಕ ಮತ್ತು ಇರಾನ್ ನಡುವೆ ಏರ್ಪಟ್ಟ ಶಾಂತಿ ಒಡಂಬಡಿಕೆ ನಂತರ ಟೆಹರಾನ್‌ನ ತೈಲ ಮತ್ತು ಪೆಟ್ರೋಕೆಮಿಕಲ್ ವಲಯಗಳ ಮೇಲಿನ ನಿರ್ಬಂಧಗಳನ್ನು ಸಡಿಲಗೊಳಿಸಿದ ಬೆನ್ನಲ್ಲೇ ಈ ಘೋಷಣೆ ಹೊರಬಿದ್ದಿದೆ. ಈ ಕ್ರಮವನ್ನು ಪೆಜೆಶ್ಕಿಯಾನ್ ಇರಾನ್ ಜನತೆಗೆ ಸಿಕ್ಕ ದೊಡ್ಡ ಜಯ ಎಂದು ಬಣ್ಣಿಸಿದ್ದಾರೆ. ಕತಾರ್‌ನಲ್ಲಿ ಇರಾನ್‌ಗೆ ಸೇರಿದ ಒಟ್ಟು 120 ಕೋಟಿ ರೂ. ಆಸ್ತಿ ಸ್ಥಗಿತಗೊಂಡಿದ್ದು, ಈ ಹಣವು ಅದರ ಒಂದು ಭಾಗವಾಗಿದೆ.

ಸಿಬಿಎಸ್‌ಇ: ತ್ರಿಭಾಷಾ ನೀತಿಯಿಂದ ವಿನಾಯಿತಿ

ಪ್ರಸಕ್ತ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯ

ಹೊಸ ಮಾರ್ಗಸೂಚಿ ಬಿಡುಗಡೆ ಮಾಡಿದ ಸಿಬಿಎಸ್‌ಇ

ಹೊಸದಿಲ್ಲಿ: ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ತ್ರಿಭಾಷಾ ನೀತಿಯ ಅನುಷ್ಠಾನಕ್ಕಾಗಿ ಸೋಮವಾರ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. 2026-27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ 10ನೇ ತರಗತಿ ವಿದ್ಯಾರ್ಥಿಗಳಿಗೆ ಮೂರು ಭಾಷೆಗಳನ್ನು ಕಲಿಯುವುದರಿಂದ ವಿನಾಯಿತಿ ನೀಡಿದೆ.

ಪ್ರಸಕ್ತ ಸಾಲಿನ 9ನೇ ತರಗತಿ ವಿದ್ಯಾರ್ಥಿಗಳು ಮೂರು ಭಾಷೆಗಳನ್ನು ಕಲಿಯಬೇಕಾಗಿರುವುದು ಕಡ್ಡಾಯವಾಗಿದ್ದರೂ, ಎರಡು ವಿದೇಶಿ ಭಾಷೆಗಳು ಮತ್ತು ಒಂದು ಭಾರತೀಯ ಭಾಷೆಯನ್ನು ಕಲಿಯಬಹುದು ಎಂದು ಸಿಬಿಎಸ್‌ಇ ಸ್ಪಷ್ಟಪಡಿಸಿದೆ. ಜುಲೈ 1ರಿಂದ ಆರಂಭವಾಗುವ 9ನೇ ತರಗತಿ ವಿದ್ಯಾರ್ಥಿಗಳಿಗೆ ಕನಿಷ್ಠ ಎರಡು ಭಾರತೀಯ ಭಾಷೆಗಳು ಸೇರಿದಂತೆ ಒಟ್ಟು ಮೂರು ಭಾಷೆಗಳನ್ನು ಕಲಿಯುವುದನ್ನು ಕಡ್ಡಾಯಗೊಳಿಸಿ ಸಿಬಿಎಸ್‌ಇ ಆದೇಶ ಹೊರಡಿಸಿತ್ತು. ಒಂದು ತಿಂಗಳ ಹಿಂದೆ ಸಿಬಿಎಸ್‌ಇ ಹೊರಡಿಸಿದ್ದ ಈ ಆದೇಶದ ವಿರುದ್ಧ ಹಲವು ವಿದ್ಯಾರ್ಥಿಗಳು ಮತ್ತು ಪೋಷಕರು ನ್ಯಾಯಾಲಯದ ಮೊರೆ ಹೋಗಿದ್ದರು.

''ಪ್ರಸ್ತುತ 10ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳ ಬ್ಯಾಚ್ ತ್ರಿಭಾಷಾ ನೀತಿಯನ್ನು ಅನುಸರಿಸುವ ಅಗತ್ಯವಿಲ್ಲ, ಹಾಗೆಯೇ ಪ್ರಸ್ತುತ 7ರಿಂದ 9ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ 10ನೇ ತರಗತಿಗೆ ಬಂದಾಗ ಮೂರನೇ ಭಾಷೆಯಲ್ಲಿ ಬೋರ್ಡ್ ಪರೀಕ್ಷೆಯನ್ನು ಬರೆಯುವ

ಅಗತ್ಯವಿರುವುದಿಲ್ಲ,'' ಎಂದು ಸಿಬಿಎಸ್‌ಇ ಶೈಕ್ಷಣಿಕ ವಿಭಾಗದ ನಿರ್ದೇಶಕಿ ಪ್ರಜ್ಞಾ ಎಂ. ಸಿಂಗ್ ತಿಳಿಸಿದರು.

ಗಣಿತ ಮತ್ತು ವಿಜ್ಞಾನಕ್ಕೆ ಎರಡು ಹಂತ: ಕಳೆದ ಏಪ್ರಿಲ್‌ನಲ್ಲಿ ಸಿಬಿಎಸ್‌ಇ, 6ನೇ ತರಗತಿಯಿಂದ ತ್ರಿಭಾಷಾ ಸೂತ್ರವನ್ನು ಹಂತಹಂತವಾಗಿ ಜಾರಿಗೆ ತರುವುದಾಗಿ ಮತ್ತು 2026-27ರ ಶೈಕ್ಷಣಿಕ ಸಾಲಿನಿಂದ 9ನೇ ತರಗತಿಗೆ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಎರಡು ಹಂತದ ವ್ಯವಸ್ಥೆಯನ್ನು ಪರಿಚಯಿಸುವುದಾಗಿ ಘೋಷಿಸಿತ್ತು.

ಪ್ರಸ್ತಾವಿತ ರಚನೆಯ ಪ್ರಕಾರ, ಗಣಿತ ಮತ್ತು ವಿಜ್ಞಾನ ವಿಷಯಗಳು ಕಡ್ಡಾಯವಾಗಿರುವ ಸ್ಟಾಂಡರ್ಡ್ ಮತ್ತು ಐಚ್ಛಿಕವಾಗಿರುವ ಅಡ್ವಾನ್ಸ್ಡ್ ಕೋರ್ಸ್ ಎಂಬ ಎರಡು ಹಂತಗಳನ್ನು ಹೊಂದಿರುತ್ತದೆ. ಎಲ್ಲಾ ವಿದ್ಯಾರ್ಥಿಗಳು ಸಾಮಾನ್ಯ 80 ಅಂಕಗಳ ಪರೀಕ್ಷೆಗೆ ಹಾಜರಾಗಲಿದ್ದಾರಾದರೂ, ಉನ್ನತ ಪ್ರಾವೀಣ್ಯತೆಯನ್ನು ಬಯಸುವ ವಿದ್ಯಾರ್ಥಿಗಳು ಆಳವಾದ ತಿಳಿವಳಿಕೆ ಮತ್ತು ಉನ್ನತ ಮಟ್ಟದ ಆಲೋಚನಾ ಕೌಶಲಗಳನ್ನು ಪರೀಕ್ಷಿಸುವ ಹೆಚ್ಚುವರಿ 'ಅಡ್ವಾನ್ಸ್ಡ್' ಮಟ್ಟದ ಪತ್ರಿಕೆಯನ್ನು ತೆಗೆದುಕೊಳ್ಳಬಹುದು.

ಯಾಸಿನ್‌ಗೆ ನರ್ಸ್ ಹತ್ಯೆ ಉರುಳು

ಕಾಶ್ಮೀರಿ ಪಂಡಿತರ ಹತ್ಯಾಕಾಂಡ | ಆರೋಪಪಟ್ಟಿ ಸಲ್ಲಿಸಿದ ಪೊಲೀಸರು

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಕಾಶ್ಮೀರಿ ಪಂಡಿತರ ವಿರುದ್ಧ ನಡೆದ ದೌರ್ಜನ್ಯದ ವೇಳೆ ನರ್ಸ್ ಸರಳಾ ಭಟ್ ಅಪಹರಣ, ಅತ್ಯಾಚಾರ, ಕೊಲೆ ಪ್ರಕರಣ ಸಂಬಂಧ ವಿಶೇಷ ತನಿಖಾ ದಳ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದು, ಜಮ್ಮು-ಕಾಶ್ಮೀರ ಲಿಬರೇಷನ್ ಫ್ರಂಟ್ (ಜೆಕೆಎಲ್‌ಎಫ್) ಮುಖ್ಯಸ್ಥ ಮೊಹಮ್ಮದ್ ಯಾಸಿನ್ ಮಲಿಕ್ ಕೃತ್ಯದ ಮಾಸ್ಟರ್ ಮೈಂಡ್ ಎಂದು ಉಲ್ಲೇಖಿಸಿದೆ.

ಜಮ್ಮು-ಕಾಶ್ಮೀರದಲ್ಲಿ 1990ರ ದಶಕದಲ್ಲಿ ಕಾಶ್ಮೀರಿ ಪಂಡಿತರ ವಿರುದ್ಧ ವ್ಯಾಪಕ ಹಿಂಸಾಚಾರ ನಡೆದಿತ್ತು. 1990ರ ಏಪ್ರಿಲ್ 14ರಂದು ಸೌರಾದಲ್ಲಿ ನವಜಾತ ಶಿಶುಗಳ ಆರೈಕೆ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ನರ್ಸ್ ಸರಳಾ ಭಟ್ ಅವರನ್ನು ಅಪಹರಿಸಲಾಯಿತು. ಇಲಾಯಿಬಾಗ್-ಲಾಲ್ ಬಜಾರ್ ಪ್ರದೇಶಕ್ಕೆ ಎಳೆದೊಯ್ದು ಅತ್ಯಾಚಾರ ಎಸಗಿದ ಜೆಕೆಎಲ್‌ಎಫ್ ಬೆಂಬಲಿತ ಆರೋಪಿಗಳು ಗುಂಡಿಕ್ಕಿ ಕೊಂದಿದ್ದರು. ಮರುದಿನ ಮಲ್ಲಾಬಾಗ್ ಉಮರ್ ಕಾಲೋನಿಯಲ್ಲಿ ನರ್ಸ್ ಮೃತದೇಹ ಪತ್ತೆಯಾಗಿತ್ತು.

ಪ್ರಕರಣ ದಾಖಲಿಸಿಕೊಂಡಿದ್ದ ಜಮ್ಮು-ಕಾಶ್ಮೀರ ರಾಜ್ಯ ತನಿಖಾ ಸಂಸ್ಥೆ (ಎಸ್‌ಐಎ) 35 ವರ್ಷಗಳ ಸುದೀರ್ಘ ತನಿಖೆ ಬಳಿಕ ಶ್ರೀನಗರದ ಟಾಡಾ ನ್ಯಾಯಾಲಯಕ್ಕೆ ಸೋಮವಾರ ಆರೋಪಪಟ್ಟಿ ಸಲ್ಲಿಸಿದೆ. ಯಾಸಿನ್ ಮಲಿಕ್ ಕೃತ್ಯದ ಹಿಂದಿನ ಮಾಸ್ಟರ್ ಮೈಂಡ್ ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದೆ. 737 ಪುಟಗಳ ಆರೋಪ ಪಟ್ಟಿ ಸಲ್ಲಿಸಿರುವ ತನಿಖಾಧಿಕಾರಿಗಳು, ಕಾಶ್ಮೀರಿ ಪಂಡಿತರ ವಿರುದ್ಧ ಸಾಮೂಹಿಕ ಹಿಂಸಾಚಾರಕ್ಕೆ ಕರೆ ನೀಡಿದ್ದ ಯಾಸಿನ್ ಮಲಿಕ್, ಒಂದು ಸಮುದಾಯದ ವಿರುದ್ಧ ಸಂಘಟಿತ ದೌರ್ಜನ್ಯ ನಡೆಸಲು ನಿರ್ದೇಶನ ನೀಡಿದ್ದ. ಜನರಲ್ಲಿ ಭಯ ಸೃಷ್ಟಿಸಲು ಸರಳಾ ಭಟ್ ಅಪಹರಿಸಿ ಹತ್ಯೆಗೆ ಸಂಚು ರೂಪಿಸಿದ್ದ ಎಂದು ಆರೋಪಿಸಲಾಗಿದೆ. ಬೇರೊಂದು ಪ್ರಕರಣದಲ್ಲಿ ಯಾಸಿನ್ ಮಲಿಕ್ ದಿಲ್ಲಿಯ ತಿಹಾರ್ ಜೈಲಿನಲ್ಲಿದ್ದಾನೆ.

ಮುಸ್ಲಿಂ ವರ್ಗಗಳಿಗೆ ಒಬಿಸಿ ಪಟ್ಟಿಯಿಂದ ಕೊಕ್

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಇತರೆ ಹಿಂದುಳಿದ ವರ್ಗಗಳ ಮೀಸಲು ಕಾನೂನಿಗೆ ಬದಲಾವಣೆ ತಂದ ಎರಡು ಮಹತ್ವದ ತಿದ್ದುಪಡಿ ವಿಧೇಯಕಗಳು ವಿಧಾನಸಭೆಯಲ್ಲಿ ಅಂಗೀಕಾರಗೊಂಡಿವೆ. 77 ಮುಸ್ಲಿಂ ಸಮುದಾಯಗಳನ್ನು ಒಬಿಸಿ ಪಟ್ಟಿಯಿಂದ ಹೊರ ಹಾಕಲಾಗಿದೆ. ಇದೇ ವೇಳೆ ಸರಕಾರ, ಜುಲೈ 2ರಂದು ಸಚಿವ ಸಂಪುಟ ಸಭೆಯಲ್ಲಿ ಏಕರೂಪ ನಾಗರಿಕ ಸಂಹಿತೆ ಕರಡು ಚರ್ಚೆಗೆ ಬರಲಿದೆ ಎಂದು ಹೇಳಿದೆ.

ಕೋಲ್ಕೊತಾ ಹೈಕೋರ್ಟ್ ಆದೇಶದಂತೆ ಒಬಿಸಿ ವರ್ಗದಲ್ಲಿದ್ದ ಮುಸ್ಲಿಂ ಸಮುದಾಯದ ಕೆಲವು ಗುಂಪುಗಳನ್ನು ಹೊರಗಿಡಲು ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಸರಕಾರ ತಿದ್ದುಪಡಿ ವಿಧೇಯಕ ಮಂಡಿಸಿತು. ಹಿಂದುಳಿದ ವರ್ಗಗಳ ಅಭಿವೃದ್ಧಿ ಸಚಿವ ಗೌರಿಶಂಕರ್ ಘೋಷ್ ಮಂಡಿಸಿದ 'ಪಶ್ಚಿಮ ಬಂಗಾಳ ಹಿಂದುಳಿದ ವರ್ಗಗಳ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿ) ಸೇವೆಗಳು ಮತ್ತು ಹುದ್ದೆಗಳಲ್ಲಿ ಖಾಲಿ ಹುದ್ದೆಗಳ ಮೀಸಲು (ತಿದ್ದುಪಡಿ) ವಿಧೇಯಕ-2026' ಹಾಗೂ 'ಪಶ್ಚಿಮ ಬಂಗಾಳ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ-2026' ಅಂಗೀಕರಿಸಲಾಯಿತು.

ರಾಜ್ಯಸಭೆ ಸದಸ್ಯರಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಂವಿಧಾನದ ಪ್ರತಿ ಕೈಯಲ್ಲಿ ಹಿಡಿದು ಹಿಂದಿ ಭಾಷೆಯಲ್ಲಿ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. ಪ್ರಮಾಣವಚನದ ಬಳಿಕ ಸಭಾಪತಿ ಸಿ.ಪಿ ರಾಧಾಕೃಷ್ಣನ್ ಅವರಿಗೆ ಹಸ್ತಲಾಘವ ನೀಡಿದರು. ಈ ವೇಳೆ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ವಯನಾಡ್ ಸಂಸದೆ ಪ್ರಿಯಾಂಕಾ ವಾದ್ರಾ ಜತೆಗಿದ್ದರು. ಖರ್ಗೆ ಸೇರಿದಂತೆ ಒಟ್ಟು 8 ನೂತನ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಚಿಕ್ಕಪೇಟೆ ವಿಭಾಗ, 8ನೇ ಮುಖ್ಯರಸ್ತೆ, 2ನೇ ಬ್ಲಾಕ್ ಜಯನಗರ, ಕನಕನಪಾಳ್ಯ, ಬೆಂಗಳೂರು-560011
ನಂ.: ಕಾಪಾಅ/ಚಿಪೇ/ಇ-ಪ್ರೊಕ್/03/2026-27 ದಿನಾಂಕ: 29.06.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ದ್ವಿ ಲಕೋಟೆ) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು (ಚಿಕ್ಕಪೇಟೆ ವಿಭಾಗ), ಬಿಸಿಸಿಸಿ, ಬೆಂಗಳೂರು ಇವರು ಬೆಂಗಳೂರು ಕೇಂದ್ರ ನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್- ಕೆಡಬ್ಲ್ಯು4)

ಕ್ರ ಸಂ.	ಕಾಮಗಾರಿಯ ಹೆಸರು
1	2026-27ನೇ ಸಾಲಿನ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಹೊಂಬೇಗೌಡನಗರ ಮತ್ತು ಅಶೋಕ ಪಿಲ್ಲರ್ ಉಪವಿಭಾಗಗಳಲ್ಲಿನ ಆಯ್ದ ಪ್ರಮುಖ, ಉಪ-ಪ್ರಮುಖ ಮತ್ತು ಇತರ ಪ್ರಮುಖ ರಸ್ತೆಗಳಿಗೆ ಮರುಡಾಂಬರೀಕರಣ ಕಾಮಗಾರಿ (ಸರ್ಕಾರಿ ಅನುಬಂಧ-1ರ ಕ್ರಮ ಸಂಖ್ಯೆ 60 ಮತ್ತು 62ರ ಒಟ್ಟು 02 ಕಾಮಗಾರಿಗಳನ್ನೊಳಗೊಂಡಂತೆ) (ಪ್ಯಾಕೇಜ್-01). **ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ): 796.34, ಇ.ಎಂ.ಡಿ (ರೂ. ಗಳಲ್ಲಿ): ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ರೂ. 10,94,510/- ಬ್ಯಾಂಕ್ ಗ್ಯಾರಂಟಿ ಮೂಲಕ.**
2	2026-27ನೇ ಸಾಲಿನ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿ ಪುರಂ ಉಪವಿಭಾಗದ ಆಯ್ದ ಪ್ರಮುಖ, ಉಪ-ಪ್ರಮುಖ ಮತ್ತು ಇತರ ಪ್ರಮುಖ ರಸ್ತೆಗಳಿಗೆ ಮರುಡಾಂಬರೀಕರಣ ಕಾಮಗಾರಿ (ಸರ್ಕಾರಿ ಅನುಬಂಧ-1ರ ಕ್ರಮ ಸಂಖ್ಯೆ 53, 54 ಮತ್ತು 58 ರ ಒಟ್ಟು 03 ಕಾಮಗಾರಿಗಳನ್ನೊಳಗೊಂಡಂತೆ) (ಪ್ಯಾಕೇಜ್-02). **ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ): 796.28, ಇ.ಎಂ.ಡಿ (ರೂ. ಗಳಲ್ಲಿ): ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ರೂ. 10,94,420/- ಬ್ಯಾಂಕ್ ಗ್ಯಾರಂಟಿ ಮೂಲಕ.**
3	2026-27ನೇ ಸಾಲಿನ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಧರ್ಮರಾಯಸ್ವಾಮಿ ಮತ್ತು ವಿವಿ ಪುರಂ ಉಪವಿಭಾಗಗಳಲ್ಲಿನ ಆಯ್ದ ಪ್ರಮುಖ, ಉಪ-ಪ್ರಮುಖ ಮತ್ತು ಇತರ ಪ್ರಮುಖ ರಸ್ತೆಗಳಿಗೆ ಮರುಡಾಂಬರೀಕರಣ ಕಾಮಗಾರಿ (ಸರ್ಕಾರಿ ಅನುಬಂಧ-1ರ ಕ್ರಮ ಸಂಖ್ಯೆ 52, 57, 59 ಮತ್ತು 61 ರ ಒಟ್ಟು 04 ಕಾಮಗಾರಿಗಳನ್ನೊಳಗೊಂಡಂತೆ) (ಪ್ಯಾಕೇಜ್-03). **ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ): 716.28, ಇ.ಎಂ.ಡಿ (ರೂ. ಗಳಲ್ಲಿ): ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ರೂ. 9,74,420/- ಬ್ಯಾಂಕ್ ಗ್ಯಾರಂಟಿ ಮೂಲಕ.**
4	2026-27ನೇ ಸಾಲಿನ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಧರ್ಮರಾಯಸ್ವಾಮಿ ಮತ್ತು ವಿವಿ ಪುರಂ ಉಪವಿಭಾಗಗಳಲ್ಲಿನ ಆಯ್ದ ಪ್ರಮುಖ, ಉಪ-ಪ್ರಮುಖ ಮತ್ತು ಇತರ ಪ್ರಮುಖ ರಸ್ತೆಗಳಿಗೆ ಮರುಡಾಂಬರೀಕರಣ ಕಾಮಗಾರಿ (ಸರ್ಕಾರಿ ಅನುಬಂಧ-1ರ ಕ್ರಮ ಸಂಖ್ಯೆ 50, 51, 55 & 56ರ ಒಟ್ಟು 04 ಕಾಮಗಾರಿಗಳನ್ನೊಳಗೊಂಡಂತೆ) (ಪ್ಯಾಕೇಜ್-04). **ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ): 796.23, ಇ.ಎಂ.ಡಿ (ರೂ. ಗಳಲ್ಲಿ): ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ರೂ. 10,94,345/- ಬ್ಯಾಂಕ್ ಗ್ಯಾರಂಟಿ ಮೂಲಕ.**

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ (https://kppp.karnataka.gov.in) ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು ದಿನಾಂಕ: **03.07.2026 ರ ಮಧ್ಯಾಹ್ನ 3:00** ಗಂಟೆಗೆ, ಮುಖ್ಯ ಅಭಿಯಂತರರ ಕಛೇರಿ, ವಲಯ-2, ಬೆಂಗಳೂರು ಕೇಂದ್ರ ನಗರ ಪಾಲಿಕೆ, ಅನೆಕ್ಸರ್-3, 4ನೇ ಮಹಡಿ, ಜಿ.ಬಿ.ಎ ಕಛೇರಿ ಆವರಣ, ಎನ್.ಆರ್. ಚೌಕ, ಬೆಂಗಳೂರು ಇಲ್ಲಿ ನಡೆಯಲಿದೆ. (3) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **07.07.2026ರ ಸಂಜೆ 4:00 ಗಂಟೆಯವರೆಗೆ.** (4) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **08.07.2026ರ ಸಂಜೆ 4:30 ಗಂಟೆ.** (5) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ.** ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ **https://kppp.karnataka.gov.in** ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ, ಬಿಸಿಸಿಸಿ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.-1/ಟೆಂಡರ/2026-27/1962 ದಿನಾಂಕ: 25/06/2026
ಇ-ಟೆಂಡರ್/ ಮರುಟೆಂಡರ್ ಹಾಗೂ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (Call-1 & Call-5)
ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2026-27 ನೇ ಸಾಲಿನ 2059-ವಿವಿಧ ಇಲಾಖಾ ಕಟ್ಟಡಗಳ ನಿರ್ವಹಣೆ ಅಡಿ 3 ಕಾಮಗಾರಿಗಳು, 2216-ವಸತಿ ಗೃಹ ಕಟ್ಟಡಗಳ ನಿರ್ವಹಣೆ ಅಡಿ 6 ಕಾಮಗಾರಿಗಳು, 3054-ಜಿಮುರ ನಿರ್ವಹಣೆ ಅಡಿ 1 ಕಾಮಗಾರಿ, 5054-ರಾಹೆ ಸುಧಾರಣೆ ಅಡಿ 1 ಕಾಮಗಾರಿ, 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಅಡಿ 7 ಕಾಮಗಾರಿಗಳು ಹಾಗೂ 4059- ಮುಖ್ಯಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ ಅಡಿ 1 ಕಾಮಗಾರಿ, ಹೀಗೆ ಒಟ್ಟು 19 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 4.80 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 400.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ /ಮರುಟೆಂಡರ್ ಆಹ್ವಾನಿಸಲಾಗಿದೆ.
ಕ್ರ.ಸಂ. 19 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ ದಿನಾಂಕ:06-07-2026 ರಂದು (11.00 ಗಂಟೆಗೆ), 2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:08-07-2026 (ಸಾಯಂಕಾಲ 5.30 ಗಂಟೆಯವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:10-07-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 13-07-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕ್ರ.ಸಂ. 1 ರಿಂದ 18 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ ದಿನಾಂಕ : 10-07-2026 ರಂದು (11.00 ಗಂಟೆಗೆ), 2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:13-07-2026 (ಸಾಯಂಕಾಲ 5.30 ಗಂಟೆಯವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 15-07-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):17-07-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-503/KSMCA/2026-27

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರವರ ಕಛೇರಿ
ಲೋ.ಇ., ಉಡುಪಿ ವಿಭಾಗ- ಉಡುಪಿ- 576101
ದೂರವಾಣಿ ಮತ್ತು ಫ್ಯಾಕ್ಸ್: 0820-2531802
ನಂ:ಪಿಬ್ಲ್ಯೂಡಿ:ಯುಡಿಎನ್:ಎನ್ಐಟಿ: 06:2026-27: ಎಇ-2 ದಿ: 29-06-2026
ಟೆಂಡರ್ ಪ್ರಕಟಣೆ
2025-26 ನೇ ಸಾಲಿನ ರೂ.377.13 ಲಕ್ಷದ 5054-80-190-0-01-132- ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಯೋಜನೆಯಡಿಯ 1 ಕಾಮಗಾರಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in"ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆಕ್ಟ್-2023 ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16-07-2026 ರ ಸಂಜೆ 5.30 ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/-ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಳವಳ್ಳಿ
ಕನಕಪುರ ಮುಖ್ಯ ರಸ್ತೆ, ಮಳವಳ್ಳಿ-571430 ದೂ:08231-244900
ಇ-ಮೇಲ್ : apmcmal@rediffmail.com, malavalliapmc@gmail.com
ಸಂಖ್ಯೆ:ಕೃ.ಉ.ಮಾ.ಸ.(ಮಳವಳ್ಳಿ)/41/2026-27 ದಿ:22-06-2026
ಸಂಕ್ಷಿಪ್ತ ಇ- ಟೆಂಡರ್ ಪ್ರಕಟಣೆ - (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
2026-27 ನೇ ಸಾಲಿಗಾಗಿ (ದಿನಾಂಕ: 01.08.2026 ರಿಂದ 31.05.2027 ರವರೆಗೆ) ಮಳವಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ಕಿರುಗಾವಲು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಭದ್ರತಾ ಸೇವೆಗಾಗಿ ಸಂಬಂಧಿಸಿದ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ-ಪೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ಟೆಂಡರ್‌ಗಳನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. (1) ಭರ್ತಿ ಮಾಡಿದ ಇ-ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 15.07.2026 ಸಂಜೆ 4-30 ಗಂಟೆವರೆಗೆ (2) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 18.07.2026 (3) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ:21.07.2026 ಪೂರ್ವಾಹ್ನ 11-00 ಗಂಟೆಗೆ. ಒಂದು ವೇಳೆ ಸದರಿ ದಿನಾಂಕದಂದು ಸಾರ್ವತ್ರಿಕ ರಜೆ ಘೋಷಣೆ ಆದಲ್ಲಿ ಕಾರ್ಯಾಲಯದ ಮುಂದಿನ ಕೆಲಸದ ದಿನ ಸಿಂಧುವಾಗಿರುತ್ತದೆ.
ಕ್ರ.ಸಂ : 01. ಕೆಲಸದ ಹೆಸರು : ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿ ಪೂರೈಸುವುದು. ಪೂರೈಸಬೇಕಾದ ಸಿಬ್ಬಂದಿ ಸಂಖ್ಯೆ : 06. ಇ.ಎಂ.ಡಿ. ಮೊತ್ತ : 50,000-00. ಖಾಲಿ ಟೆಂಡರ್ ಫಾರಂ ಬೆಲೆ : e-portal ನಿಯಮಗಳನ್ವಯ. ವಿವರ : ಗಣಕ ಯಂತ್ರ ನಿರ್ವಾಹಕರು-02 ವಾಹನ ಚಾಲಕರು-01 ಭದ್ರತಾ ಸಿಬ್ಬಂದಿಗಳು-03. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ-ಪೋರ್ಟಲ್‌ನ ನಿಯಮಗಳನ್ವಯ ಇದ್ದು, ಟೆಂಡರ್ ಷರತ್ತುಗಳು ಹಾಗು ನಿಬಂಧನೆಗಳು ಇ-ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇದ್ದು, ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ http://eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ನೊಂದಾಯಿಸುವ ಬಗ್ಗೆ ಸಹಾಯವಾಣಿ ದೂರವಾಣಿ ಸಂಖ್ಯೆ :08231-244900 ಅನ್ನು ಸಂಪರ್ಕಿಸಬಹುದು.
ಸಹಿ/-ಕಾರ್ಯದರ್ಶಿ(ಪ್ರ) ಕೃ.ಉ.ಮಾ.ಸ.ಮಳವಳ್ಳಿ | ಸಹಿ/-ಆಡಳಿತಾಧಿಕಾರಿಗಳು ಕೃ.ಉ.ಮಾ.ಸ. ಮಳವಳ್ಳಿ
ವಾಸಾಸಂಇ/ಹಿಸನಿ-ಮಂ/ಕೆಎಸ್‌ಎಂಸಿಎ/234/2025-26

Government of Karnataka
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ-580 022
ಇ-ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ)
1) KMCRI/SUP(1)/D/57/2026-27 Dated 22-06-2026 (DME/2026-27/IND2446)
2) KMCRI/SUP(1)/S/169/2026-27 Dated 19-06-2026 (DME/2026-27/IND2421)
3) KMCRI/SUP(1)/C/167/2026-27 Dated 19-06-2026 (DME/2026-27/IND2424)
ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ ಇವರು ಅರ್ಹ ಟೆಂಡರ್‌ದಾರರಾದ ಉತ್ಪಾದಕರು, ಅಧಿಕೃತ ಏಜೆಂಟರು ಮತ್ತು ಅಧಿಕೃತ ವಿತರಕರಿಂದ ಕೆ.ಎಂ.ಸಿ. & ಆರ್.ಐ. ಆಸ್ಪತ್ರೆಯ ದೈನಂದಿನ ಚಿಕಿತ್ಸೆಗಾಗಿ ಅವಶ್ಯವಿರುವ ಔಷಧ/ರಾಸಾಯನಿಕ/ಸರ್ಜಿಕಲ್ಸ್ ಮತ್ತು ಡಿಸ್ಪೋಸೇಬಲ್ಸ್ ಹಾಗೂ ಇತರೆ ಸಾಮಗ್ರಿಗಳನ್ನು ಪೂರೈಸುವುದಕ್ಕಾಗಿ ಕರ್ನಾಟಕ ಪಾರದರ್ಶಕ ಸಾರ್ವಜನಿಕ ಸಂಗ್ರಹಣೆ ಕಾಯ್ದೆ 1999 ಶಾಸನ 2000 ಅನ್ವಯ ಇ-ಟೆಂಡರ್ ಮೂಲಕ ಟೆಂಡರ್ ಪ್ರಕಟಣೆ ಆಹ್ವಾನಿಸಲಾಗಿದೆ. ಈ ದಾಖಲೆಗಳನ್ನು, ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವ ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/- (ನಿರ್ದೇಶಕರು), ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ - (ಜಲಸಂಪನ್ಮೂಲ ಇಲಾಖೆ)
ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇಂಜಿನಿಯರಿಂಗ್ ವಿಭಾಗ ಮಲವಗೊಪ್ಪ, ನಿಧಿಗೆ ಅಂಚೆ, ಶಿವಮೊಗ್ಗ-577222
ನಂ: ಭಕಾಶಿ/ಇಂ,ವಿಭಾಗ/ತಾಂಶಾಖೆ/ಟೆಂಡರ್/2026-27/204
ದಿನಾಂಕ: 25.06.2026
ಅಲ್ಪಾವಧಿ ಟೆಂಡರ್ ಪ್ರಕಟಣೆ Kg-2 ರ ಪ್ರಕಾರ ಟೆಂಡರ್ ಆಹ್ವಾನ
(IFT - 06/2026-27) Head of Account :- 4705- Capital Grant.
ಮಾನ್ಯ ಆಡಳಿತಾಧಿಕಾರಿಗಳು, ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ-1999, ನಿಯಮಗಳು-2000 ರ ಹಾಗೂ ನಿಯಮಾವಳಿಗಳು 2017ರ ಪ್ರಕಾರ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ವಿಭಾಗ, ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗದ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ನೀರು ಬಳಕೆದಾರರ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬರುವ ರೈತರ ಜಮೀನಿನಲ್ಲಿ ಕಳೆ ಕತ್ತರಿಸಲು ಮತ್ತು ಸಸಿಗಳನ್ನು ನೆಡಲು ಹಾಗೂ ಬೆಳೆಗಳನ್ನು ಹಾಕಲು ಗುಂಡಿ ತೆಗೆಯಲು ಅನುಕೂಲವಾಗುವ ಯಂತ್ರೋಪಕರಣಗಳನ್ನು (Power Operated Brush Cutter/ Weed Slasher,Post Hole Digger & HDP/HTP Power Sprayer) ಒದಗಿಸಲು ತಯಾರಕರು/ ವಿತರಕರು/ ಅಧಿಕೃತ ಸರಬರಾಜುದಾರರುಗಳಿಂದ ಅಲ್ಪಾವಧಿ ಟೆಂಡರ್‌ಗಳನ್ನು ದ್ವಿ ಲಕೋಟೆ ಪದ್ಧತಿಯಲ್ಲಿ kppp ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ವಿವರ ಕೆಳಗಿನಂತಿದೆ.1. ಟೆಂಡರನ್ನು ಕೆಪಿಪಿ-ಪೋರ್ಟಲ್‌ನಲ್ಲಿ access ಮಾಡಬಹುದಾದ ದಿ: 29.06.2026 ರಿಂದ ದಿ:10.07.2026 ರವರೆಗೆ. **2.** ಭರ್ತಿ ಮಾಡಿದ ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿ: 10.07.2026 ಸಂಜೆ 04.00 ಗಂಟೆವರೆಗೆ **3.** ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (ದ್ವಿ ಲಕೋಟೆ ಪದ್ಧತಿ): 13.07.2026 ಸಂಜೆ 11.00 ಗಂಟೆಯ ನಂತರ **4.** ಆರ್ಥಿಕ ಬಿಡ್ ತೆರೆಯುವ ದಿ: 15.07.2026 ಬೆಳಿಗ್ಗೆ 11.00 ಗಂಟೆಯ ನಂತರ
ಗೂಡ್ಸ್/ ಇಪ್ರಕ್ಯೂರ್‌ಮೆಂಟ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇಂಜಿನಿಯರಿಂಗ್ ವಿಭಾಗ, ಭದ್ರಾಕಾಡಾ, ಶಿವಮೊಗ್ಗ ಇವರ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಅಥವಾ ವೆಬ್ ಸೈಟ್ http:/www.kppp.karnataka.gov.in ಪಡೆಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್ ಇಂಜಿನಿಯರಿಂಗ್ ವಿಭಾಗ ಭದ್ರಾಕಾಡಾ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/127/06/439

ಬೋಧಿ ವೃಕ್ಷ
ಪ್ರಬುದ್ಧ ದೇಹ, ಮನಸ್ಸು ಮತ್ತು ಆತ್ಮಕ್ಕಾಗಿ

- ವೈದ್ಯರ ಸೇವೆ ಸಮರ್ಪಣೆಯ ಸ್ಮರಣೆ ಜುಲೈ 1 ರಾಷ್ಟ್ರೀಯ ವೈದ್ಯರ ದಿನದ ಹಿನ್ನೆಲೆಯಲ್ಲಿ ವಿಶೇಷ ಬರಹ.
- ತೊನ್ನುರೋಗ, ಕಾರಣ ಮತ್ತು ಪರಿಹಾರ ಏನು? ಆಯುರ್ವೇದ ವೈದ್ಯರಿಂದ ಆರೋಗ್ಯ ಮಾಹಿತಿ.
- ಭೂಮಿತತ್ವದ ರಾಶಿಯಾಗಿರುವ ವೃಷಭ ಲಗ್ನ ಮತ್ತು ಗ್ರಹ ಯೋಗಗಳು

ವಿವರಗಳಿಗೆ ಬೋಧಿವೃಕ್ಷ ಸಂಚಿಕೆ ಓದಿ!

ಪತ್ರಿಕೆಗಾಗಿ ಸಂಪರ್ಕಿಸಿ
72594 58080

ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

ಕಾರು ಅಡ್ಡಗಟ್ಟಿ ಚಿನ್ನಾಭರಣ ದರೋಡೆ

ಮಂಗಳೂರು ಬಳಿ ಏಳು ಮಂದಿ ದುಷ್ಕರ್ಮಿಗಳ ತಂಡದ ಕೃತ್ಯ | ಕಾರು, ನಗದು ದೋಚಿ ಪರಾರಿ

■ **ವಿಕ ಸುದ್ದಿಲೋಕ** ಮಂಗಳೂರು

ಮಹಾರಾಷ್ಟ್ರದ ಸಾಂಗ್ಲಿಯಿಂದ ಕುಟುಂಬದ ಜತೆ ಕಾರಿನಲ್ಲಿ ಕೇರಳದ ಪಯ್ಯನ್ನೂರಿಗೆ ಹೋಗುತ್ತಿದ್ದ ಚಿನ್ನದ ವ್ಯಾಪಾರಿಯೊಬ್ಬರನ್ನು ಭಾನುವಾರ ತಡರಾತ್ರಿ ಮಂಗಳೂರು ಬಳಿಯ ಬೈಕಂಪಾಡಿಯಲ್ಲಿ ದುಷ್ಕರ್ಮಿಗಳು ಅಡ್ಡಗಟ್ಟಿ ಲಕ್ಷಾಂತರ ರೂ. ಮೌಲ್ಯದ ಚಿನ್ನ, ನಗದು, ಕಾರನ್ನು ದರೋಡೆ ಮಾಡಿದ್ದಾರೆ.

ಮೂಲತಃ ಸಾಂಗ್ಲಿ ನಿವಾಸಿಯಾದ ಕೇರಳದ ಪಯ್ಯನ್ನೂರಿನಲ್ಲಿ ಚಿನ್ನದ ಮಳಿಗೆ ಹೊಂದಿರುವ ವಿಕಾಸ್(42) ಅವರು ಪತ್ನಿ ರೂಪಾಲಿ ಹಾಗೂ ಪುತ್ರ ವಿಪುಲ್ ಜತೆ ಕಾರಿನಲ್ಲಿ ಪಯ್ಯನ್ನೂರಿಗೆ ತೆರಳುತ್ತಿದ್ದರು.

ಪಣಂಬೂರು ಬಳಿಯ ಬೈಕಂಪಾಡಿ ಸಮೀಪ ಮೂರು ಕಾರುಗಳಲ್ಲಿ ಬಂದ 7 ದುಷ್ಕರ್ಮಿಗಳ ತಂಡ ವಿಕಾಸ್ ಅವರ ಕಾರನ್ನು ಅಡ್ಡಗಟ್ಟಿ, ಅವರನ್ನು ಹೊರಗೆಳೆದು ಹಲ್ಲೆ ಮಾಡಿ, ಬೆದರಿಸಿತು.

ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದರೋಡೆಕೋರರ 3 ಕಾರುಗಳು.

ಈ ವೇಳೆ ಒಬ್ಬ ದರೋಡೆಕೋರ ವಿಕಾಸ್ ಪತ್ನಿ ಮತ್ತು ಮಗ ಇದ್ದ ಕಾರನ್ನು ಚಲಾಯಿಸಿಕೊಂಡು ಹೋದ. ಉಳಿದ ದುಷ್ಕರ್ಮಿಗಳು ಆ ಕಾರನ್ನು ಹಿಂಬಾಲಿಸಿದರು. ಸುಮಾರು 2 ಕಿ.ಮೀ. ಹೋದ ನಂತರ ಮಹಿಳೆ ಬಳಿಯ ಬ್ಯಾಗ್‌ನಲ್ಲಿದ್ದ ಸುಮಾರು 150 ಗ್ರಾಂ ಚಿನ್ನಾಭರಣ ಮತ್ತು ನಗದನ್ನು ದುಷ್ಕರ್ಮಿಗಳು, ಕಿತ್ತುಕೊಂಡರು. ಮಹಿಳೆ ಧರಿಸಿದ್ದ ಚಿನ್ನಾಭರಣ ಮುಟ್ಟಲಿಲ್ಲ. ಬಳಿಕ ಉದ್ಯಮಿಯ ಮಹಿಳೆ ಮತ್ತು ಪುತ್ರನನ್ನು ಕೂಳೂರು ಬಳಿ ಕೆಳಗಿಳಿಸಿ, ಕಾರು ಸಹಿತ ಪರಾರಿಯಾದರು.

ವಿಕಾಸ್ ಅವರು ಬಂಧುಗಳ ವಿವಾಹ ಸಮಾರಂಭದಲ್ಲಿ ಭಾಗವಹಿಸಿ ವಾಪಸಾಗುತ್ತಿದ್ದರು. ಘಟನೆ ಸಂಬಂಧ ಪಣಂಬೂರು ಠಾಣೆಯಲ್ಲಿ ದರೋಡೆ ಪ್ರಕರಣ ದಾಖಲಾಗಿದೆ. ಆರೋಪಿಗಳು 18 ಲಕ್ಷ ರೂ. ಚಿನ್ನಾಭರಣ, 20 ಸಾವಿರ ರೂ. ನಗದು, 3 ಮೊಬೈಲ್ ಹಾಗೂ ಕಾರೊಂದನ್ನು ದರೋಡೆ ಮಾಡಿದ್ದಾರೆ ಎಂದು ವಿಕಾಸ್ ದೂರಿನಲ್ಲಿ ತಿಳಿಸಿದ್ದಾರೆ. ದರೋಡೆಕೋರರು ಮಲೆಯಾಳದಲ್ಲಿ ಮಾತನಾಡುತ್ತಿದ್ದರು ಎಂದು ವಿಕಾಸ್ ತಿಳಿಸಿದ್ದಾರೆ.

ತನಿಖೆಗೆ ವಿಶೇಷ ತಂಡ ರಚನೆ

''ವ್ಯಾಪಾರಿಯ ಕಾರಿನಲ್ಲಿ ಎರಡು ಮೊಬೈಲ್ ಮತ್ತು ಅವರ ಪತ್ನಿಯ ಒಂದು ಮೊಬೈಲ್ ಇದ್ದು, ಈ ಮೊಬೈಲ್ ನಂಬರ್ ಆಧಾರದಲ್ಲಿ ಶೋಧ ನಡೆಸಿದಾಗ ನಗರದ ಮರೋಳಿ ಬಳಿ ಲೊಕೇಷನ್ ಪತ್ತೆಯಾಗಿದೆ. ದುಷ್ಕರ್ಮಿಗಳು ಮರೋಳಿ, ಬಿ.ಸಿ.ರೋಡ್, ವಿಟ್ಲ ಮಾರ್ಗವಾಗಿ ಕೇರಳದತ್ತ ತೆರಳಿರುವ ಶಂಕೆ ವ್ಯಕ್ತವಾಗಿದೆ,'' ಎಂದು ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ. ''ದರೋಡೆಕೋರರ 3 ಕಾರುಗಳಲ್ಲಿ 2 ಕಾರುಗಳು ಕೇರಳ ನೋಂದಣಿಯಾಗಿದ್ದು, 1 ಕಾರು ಕೊಡಗು ಜಿಲ್ಲೆಯ ನೋಂದಣಿಯದ್ದಾಗಿದೆ. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚನೆ ಮಾಡಲಾಗಿದೆ,'' ಎಂದಿದ್ದಾರೆ. ''ಉದ್ಯಮಿ ವಿಕಾಸ್ ಅವರನ್ನು ಹತ್ತಿರದಿಂದ ಬಲ್ಲವರೇ ಈ ಕೃತ್ಯ ನಡೆಸಿರುವ ಸಾಧ್ಯತೆ ಇದೆ. ಸಾಂಗ್ಲಿಯಿಂದ ಬರುವ ವೇಳೆ ಚಿನ್ನದ ಗಟ್ಟಿ ತಂದಿರಬಹುದೆಂಬ ಲೆಕ್ಕಾಚಾರದಲ್ಲಿ ದರೋಡೆಗೆ ಸ್ಕೆಚ್ ಹಾಕಿರುವ ಅನುಮಾನ ಇದೆ. ಘಟನೆಗೆ ಸಂಬಂಧಿಸಿ ಸಿಸಿಟಿವಿ ಫೂಟೇಜ್, ಸೇರಿ ಇತರ ಕೆಲವೊಂದು ದಾಖಲೆಗಳನ್ನು ಸಂಗ್ರಹಿಸಲಾಗಿದೆ. ಶೀಘ್ರವೇ ಆರೋಪಿಗಳನ್ನು ಬಂಧಿಸಲಾಗುವುದು,'' ಹೇಳಿದ್ದಾರೆ.

ಮುತ್ತತ್ತಿಗೆ ಸಚಿವ ರಾಮಲಿಂಗಾರೆಡ್ಡಿ ಭೇಟಿ

ಋಷಿಕೇಶ, ಹರಿದ್ವಾರ ಮಾದರಿ ಕಾಲುವೆ ನಿರ್ಮಾಣದ ಭರವಸೆ

■ **ವಿಕ ಸುದ್ದಿಲೋಕ** ಮಳವಳ್ಳಿ (ಮಂಡ್ಯ)

ಮುತ್ತತ್ತಿಯಲ್ಲಿ ಭಕ್ತರ ಸ್ನಾನ ವ್ಯವಸ್ಥೆಗೆ ಋಷಿಕೇಶ ಹಾಗೂ ಹರಿದ್ವಾರ ಮಾದರಿಯಲ್ಲಿ ಕಾಲುವೆ ನಿರ್ಮಿಸಲಾಗುವುದು ಎಂದು ಜಲಸಂಪನ್ಮೂಲ ಸಚಿವ ರಾಮಲಿಂಗರೆಡ್ಡಿ ಹೇಳಿದರು. ತಾಲೂಕಿನ ಮುತ್ತತ್ತಿಯಲ್ಲಿನ ಕಾವೇರಿ ನದಿಯಲ್ಲಿ ಇತ್ತೀಚೆಗೆ ಒಂದೇ ಕುಟುಂಬದ ಐವರು ಮುಳುಗಿ ಮೃತಪಟ್ಟ ಘಟನೆ ಹಿನ್ನೆಲೆಯಲ್ಲಿ ಸೋಮವಾರ ಅವರು ಮುತ್ತತ್ತಿಗೆ ಭೇಟಿ ನೀಡಿ ಪರಿಶೀಲಿಸಿದರು. ''ಸ್ಥಳೀಯ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅವರ ಸಲಹೆಯಂತೆ ಕಾಲುವೆ ನಿರ್ಮಿಸಲು ಡಿಪಿಆರ್ ಸಿದ್ಧಪಡಿಸುವಂತೆ ಸೂಚಿಸಿದ್ದೇನೆ. ಪೊಲೀಸ್ ಚೌಕಿ, ಶೌಚಾಲಯ ನಿರ್ಮಾಣ, ಸೂಕ್ತ ಸ್ಥಳಗಳಲ್ಲಿ 20 ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗುವುದು. 8 ಮಾರ್ಷಲ್‌ಗಳನ್ನು ನಿಯೋಜಿಸಲಾಗುವುದು. ರಜಾ ದಿನಗಳಲ್ಲಿ ಸಬ್ ಇನ್ಸ್‌ಪೆಕ್ಟರ್ ನಿಯೋಜನೆಗೆ ಸೂಚನೆ ನೀಡಲಾಗಿದೆ,'' ಎಂದರು. ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಒ ನಂದಿನಿ, ಎಸ್ಪಿ ಡಾ ವಿ.ಜೆ.ಶೋಭಾರಾಣಿ ಇದ್ದರು.

ತಮಿಳುನಾಡಿಗೆ ನೀರು ಬಿಟ್ಟಿಲ್ಲ: ಸಚಿವ ಸ್ಪಷ್ಟನೆ

'' ನಾವು ಇದುವರೆಗೂ ತಮಿಳುನಾಡಿಗೆ ನೀರು ಬಿಟ್ಟಿಲ್ಲ, ಬಿಡಲು ನೀರೂ ಇಲ್ಲ ಎಂದು ಸಚಿವ ರಾಮಲಿಂಗರೆಡ್ಡಿ ಹೇಳಿದರು.''ಕುಡಿಯುವ ನೀರಿಗಾಗಿ ನಮ್ಮ ಮೊದಲ ಆದ್ಯತೆ. ಮೋಡ ಬಿತ್ತನೆಗೆ ಯೋಜನೆ ರೂಪಿಸಲಾಗಿದೆ. ನೀರು ಬಿಡುವುದರ ಕುರಿತು ಮುಂದೆ ತೀರ್ಮಾನಿಸುತ್ತೇವೆ,'' ಎಂದರು

ಧಾರವಾಡ ತಾಲೂಕು ಹೊಸ ತೇಗೂರು ಗ್ರಾಮದ ಬಳಿ ರೈತರು ಕಾರ ಹುಣ್ಣಿಮೆ ನಿಮಿತ್ತ ತಂದಿದ್ದ ಬುತ್ತಿಯೂಟವನ್ನು ಕೇಂದ್ರ ಸಚಿವ ಗಜೇಂದ್ರಸಿಂಗ್ ಶೇಖಾವತ್ ಸವಿದರು.

ತಹಸೀಲ್ದಾರ್ ಜೀಪ್ ಡಿಕ್ಕಿ: ಬೈಕ್ ಸವಾರ ಸಾವು

ಹಾಸನ: ಸಕಲೇಶಪುರ ತಾಲೂಕಿನ ತಹಸೀಲ್ದಾರ್ ಸುಪ್ರೀತಾ ಪ್ರಯಾಣಿಸುತ್ತಿದ್ದ ಸರಕಾರಿ ಜೀಪ್ ಆಲೂರು ತಾಲೂಕಿನ ಈಶ್ವರಹಳ್ಳಿ ಕೂಡಿಗೆ ಬಳಿ ಸೋಮವಾರ ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಬ್ಬರಿಗೆ ಗಂಭೀರವಾಗಿದೆ. ಹಾಸನದ ಜಮೀದ್ (58) ಮೃತ ಪಟ್ಟವರು. ಗಾಯಳು ನದೀಮ್ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಜಮೀದ್ ಹಾಗೂ ನದೀಮ್ ಸಕಲೇಶಪುರದ ಕಡೆ ಕೆಲಸಕ್ಕೆ ತೆರಳುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ. ಜೆಸಿಬಿ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬಸ್ ಮಗುಚಿ ಇಬ್ಬರ ದುರ್ಮರಣ

ಕೊಳ್ಳೇಗಾಲ (ಚಾಮರಾಜನಗರ): ಮಲೆ ಮಹದೇಶ್ವರ ಬೆಟ್ಟದಿಂದ ಮೈಸೂರಿಗೆ ತೆರಳುತ್ತಿದ್ದ ಕೆಎಸ್ಆರ್‌ಟಿಸಿ ಬಸ್ ಮಧುವನಹಳ್ಳಿ ಬಳಿ ಮಗುಚಿ ಇಬ್ಬರು ಮೃತಪಟ್ಟರು. 25 ಜನರು ಗಾಯಗೊಂಡಿದ್ದು, ಐವರ ಸ್ಥಿತಿ ಗಂಭೀರವಾಗಿದೆ. ಮೃತಪಟ್ಟವರನ್ನು ಕೊಳ್ಳೇಗಾಲದ ಪುಟ್ಟನಂಜಮ್ಮ (62), ಕುದೇರು ಗ್ರಾಮದ ಮಹೇಶ್ (51) ಎಂದು ಗುರುತಿಸಲಾಗಿದೆ.

ಪೀಠೋಪಕರಣ ಜಪ್ತಿ ಮಾಡಿದ ರೈತರು

ಹೇಮಾವತಿ ನಾಲೆ ನಿರ್ಮಾಣಕ್ಕಾಗಿ 15 ವರ್ಷದ ಹಿಂದೆ ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ನೀಡದ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಹೋಬಳಿ ರೈತರು ಕೋರ್ಟ್ ಆದೇಶದಂತೆ ಮಂಡ್ಯ ನಗರದ ಭೂಸ್ವಾಧೀನಾಧಿಕಾರಿ ಕಚೇರಿಯ ಕಂಪ್ಯೂಟರ್ ಮತ್ತು ಪೀಠೋಪಕರಣಗಳನ್ನು ಸೋಮವಾರ ಜಪ್ತಿ ಮಾಡಿ ಹೊತ್ತೊಯ್ದರು.

ಶ್ರೀನಿವಾಸ ವಿವಿ: ಆಧುನಿಕ ಶಿಕ್ಷಣ ಕ್ರಾಂತಿ

ಮುಂಬಯಿ: ನಗರದಲ್ಲಿ ಇತ್ತೀಚೆಗೆ ನಡೆದ ಮೇಕಿಂಗ್ ಇಂಡಿಯಾ ಎಂಪ್ಲಾಯಬಲ್ ಕಾನ್ಫರೆನ್ಸ್‌ನಲ್ಲಿ ಮಂಗಳೂರಿನ ಶ್ರೀನಿವಾಸ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಸಿ.ಎ.ರಾಘವೇಂದ್ರ ರಾವ್ ಅವರಿಗೆ 2025ನೇ ಸಾಲಿನ ಪ್ರತಿಷ್ಠಿತ 'ಭಾರತ್ ನಿರ್ಮಾಣ್' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಉದ್ಯಮ ಆಧಾರಿತ ಶಿಕ್ಷಣ, ಪ್ರಾಯೋಗಿಕ ಕಲಿಕೆ, ನವೀಕರಿಸಿದ ಪಠ್ಯಕ್ರಮಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಸಹಯೋಗದೊಂದಿಗೆ ವಿಶ್ವವಿದ್ಯಾಲಯವು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನು ನಿರ್ಮಿಸುತ್ತಿದೆ. ಈ ಸಾಧನೆಯನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕರ್ನಾಟಕದಲ್ಲೇ ಮೊದಲ ಬಾರಿಗೆ ಏರ್‌ಕ್ರಾಫ್ಟ್ ಮೆಂಟೇನೆನ್ಸ್ ಎಂಜಿನಿಯರಿಂಗ್‌ನಲ್ಲಿ 4 ವರ್ಷದ ಬಿ.ಟೆಕ್ ಕೋರ್ಸ್ ಆರಂಭಿಸಲಾಗಿದೆ. ಜೊತೆಗೆ ಮರೈನ್ ಎಂಜಿನಿಯರಿಂಗ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ರೊಬೊಟಿಕ್ಸ್, ಕ್ಲೌಡ್ ಕಂಪ್ಯೂಟಿಂಗ್, ಎಥಿಕಲ್ ಹ್ಯಾಕಿಂಗ್ ಹಾಗೂ ಸೈಬರ್ ಸೆಕ್ಯುರಿಟಿ ಮುಂತಾದ ಉದ್ಯೋಗಾಧಾರಿತ ಕೋರ್ಸ್‌ಗಳು ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲಗೊಳಿಸುತ್ತಿವೆ. ಎಐಸಿಟಿಇ, ಎಜುಸ್ಕಿಲ್ಸ್ ಮತ್ತು ಎನ್‌ಎಸ್‌ಡಿಸಿ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿರುವ 'ಸಿ.ಎ. ರಾಘವೇಂದ್ರ ರಾವ್ ಸೆಂಟರ್ ಫಾರ್ ಫ್ಯೂಚರ್ ಸ್ಕಿಲ್ ಲ್ಯಾಬ್' ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಕೌಶಲ ತರಬೇತಿಯನ್ನು ಒದಗಿಸುತ್ತಿದೆ. ವಿಶ್ವವಿದ್ಯಾಲಯವು ಟಿಸಿಎಸ್, ಮೈಕ್ರೊಸಾಫ್ಟ್, ಐಬಿಎಂ, ಗೂಗಲ್, ಇಂಟೆಲ್,

ಯುಐಪಾತ್‌ನಂತಹ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಶೈಕ್ಷಣಿಕ ಒಪ್ಪಂದಗಳನ್ನು ಮಾಡಿಕೊಂಡಿದೆ. ಸ್ಟಾರ್ಟಪ್ ಮತ್ತು ಇನ್‌ಕ್ಯುಬೇಶನ್ ಕೇಂದ್ರಗಳ ಮೂಲಕ ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಹಾಗೂ ನಾವೀನ್ಯತೆಯನ್ನು ಉತ್ತೇಜಿಸಲಾಗುತ್ತಿದೆ.

ಸಂಶೋಧನಾ ಕ್ಷೇತ್ರದಲ್ಲಿಯೂ ವಿಶ್ವವಿದ್ಯಾಲಯವು ಗಮನಾರ್ಹ ಸಾಧನೆ ಮಾಡಿದ್ದು, 593 ಕಾಪಿರೈಟ್, 28 ಪೇಟೆಂಟ್ ಹಾಗೂ 157ಕ್ಕೂ ಅಧಿಕ ಪೇಟೆಂಟ್ ಪ್ರಕಟಣೆಗಳನ್ನು ದಾಖಲಿಸಿದೆ. 15 ಕೋಟಿ ರೂ.ಗೂ ಅಧಿಕ ಸಂಶೋಧನಾ ಅನುದಾನ ದೊರೆತಿದೆ. 2000ಕ್ಕೂ ಹೆಚ್ಚು ಸಂಶೋಧನಾ ಲೇಖನಗಳು ಅಂತಾರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟಗೊಂಡಿದ್ದು, ಸಂಸ್ಥೆಯ ಜಾಗತಿಕ ಸಂಶೋಧನಾ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತವೆ. ಇತ್ತೀಚೆಗೆ ಬ್ಯಾಂಕಾಕ್‌ನಲ್ಲಿ ನಡೆದ ಗ್ಲೋಬಲ್ ಎಜುಕೇಷನ್ ಶೃಂಗದಲ್ಲಿ ಶ್ರೀನಿವಾಸ ಸಂಸ್ಥೆಗಳು ಮೂರು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿವೆ ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ರಾಜ್ಯದಲ್ಲಿ ಮುಂದಿನ ಐದು ದಿನ ಮಳೆ

■ **ವಿಕ ಸುದ್ದಿಲೋಕ** ಬೆಂಗಳೂರು

ಮುಂಗಾರು ಮಳೆ ಕಣ್ಣಾಮುಚ್ಚಾಲೆಯಿಂದ ಕಂಗೆಟ್ಟಿದ್ದ ರಾಜ್ಯದ ಜನರಿಗೆ ಹವಾಮಾನ ಇಲಾಖೆ ಸಿಹಿ ಸುದ್ದಿ ನೀಡಿದೆ.

ಜೂನ್ 30ರಿಂದ ಜುಲೈ 5ರವರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಳೆಯಾಗಲಿದ್ದು, ಜೂನ್ 30ರಂದು ಕರಾವಳಿ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ ಜಿಲ್ಲೆಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ. ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಕೆಲವೆಡೆ ಹಗುರದಿಂದ ಸಾಧಾರಣ ಮಳೆಯಾಗುವ ಸಂಭವವಿದೆ.

ಜುಲೈ 1ರಂದು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ 30-40 ಕಿ.ಮೀ. ವೇಗದ ಗಾಳಿಯೊಂದಿಗೆ ಭಾರಿ ಮಳೆಯಾಗುವ ನಿರೀಕ್ಷೆಯಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳ ಕೆಲವೆಡೆ ಸಾಧಾರಣ ಮಳೆಯಾಗಲಿದೆ. ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು, ವಿಜಯನಗರ ಸೇರಿ ಕೆಲವೆಡೆ ಮಳೆಯಾಗುವ ಸಾಧ್ಯತೆಯಿದೆ. ಮುಂದಿನ 48 ಗಂಟೆಗಳಲ್ಲಿ ಬೆಂಗಳೂರಿನ ಸುತ್ತಮುತ್ತ ಮೋಡ ಕವಿದ ವಾತಾವರಣವಿರಲಿದ್ದು, ಕೆಲ ಭಾಗಗಳಲ್ಲಿ ಸಾಧಾರಣ ಮಳೆಯಾಗುವ ಮುನ್ಸೂಚನೆಯಿದೆ. ಕೆಲ ಪ್ರದೇಶಗಳಲ್ಲಿ ಗಂಟೆಗೆ 30-40 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ, ಮಲೆನಾಡಿನಲ್ಲಿ ಮುಂಗಾರು ಚುರುಕು

ರಾಜ್ಯದ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಮುಂಗಾರು ಚುರುಕುಗೊಂಡಿದೆ. ಶಿವಮೊಗ್ಗ ಜಿಲ್ಲೆಯ ಶೃಂಗೇರಿ, ತೀರ್ಥಹಳ್ಳಿ, ಬ್ಯಾಕೋಡು, ರಿಪ್ಪನ್‌ಪೇಟೆ ಸೇರಿದಂತೆ ಹಲವೆಡೆ ಉತ್ತಮ ಮಳೆಯಾಗಿದೆ. ನಗರದಲ್ಲಿ ಸಂಜೆಯ ನಂತರ ಸೋನೆ ಮಳೆ ಸುರಿಯಲಾರಂಭಿಸಿತು. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಸೋಮವಾರ ಮಧ್ಯಾಹ್ನದ ನಂತರ ಮಳೆ ಬಿರುಸಾದ ಮಳೆ ರಾತ್ರಿ ತನಕವೂ ಸುರಿಯಿತು. ಚಾರ್ಮಾಡಿ ಘಾಟಿಯ 10ನೇ ತಿರುವಿನ ಸಮೀಪ ಸೋಮವಾರ ಸಂಜೆ ಮರವೊಂದು ರಸ್ತೆಗೆ ಉರುಳಿ ಸುಮಾರು ಒಂದು ತಾಸು ಸಂಚಾರ ವ್ಯತ್ಯಯವಾಯಿತು. ಉತ್ತರ ಕನ್ನಡ ಜಿಲ್ಲೆಯ ಕರಾವಳಿ ತಾಲೂಕುಗಳಲ್ಲಿ ತಗ್ಗು ಪ್ರದೇಶಗಳಲ್ಲಿ ನೀರು ತುಂಬಿ ಹರಿಯುವಷ್ಟು ಮಳೆಯಾಗುತ್ತಿದೆ.

ಹುಲಿ ದಾಳಿ: ಅರಣ್ಯ ಇಲಾಖೆ ಸಿಬ್ಬಂದಿಗೆ ಗಾಯ

ಸರಗೂರು (ಮೈಸೂರು): ತಾಲೂಕಿನ ಬೆಣ್ಣೆಗೆರೆ ಹುಲಿ ಸೆರೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಅರಣ್ಯ ರಕ್ಷಕನ ಮೇಲೆ ಹುಲಿ ದಾಳಿ ನಡೆಸಿ ಗಾಯಗೊಳಿಸಿದೆ. ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶ ವ್ಯಾಪ್ತಿಯ ನುಗು ವನ್ಯಜೀವಿ ವಲಯದ ಅರಣ್ಯ ರಕ್ಷಕ, ಮೂಲತಃ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಕುಮಾರ್ ಹುಲಿ ದಾಳಿಗೆ ಒಳಗಾದವರು. ಸೋಮವಾರ ಬೆಳಗ್ಗೆ ಬೆಣ್ಣೆಗೆರೆ ಗ್ರಾಮದ ಕೃಷಿ ಕಾರ್ಮಿಕ ಕಿರಣ್ ಮೇಲೆ ಹುಲಿ ದಾಳಿ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಹುಲಿ ಸೆರೆಗೆ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಈ ವೇಳೆ ಪೊದೆಯಿಂದ ಹೊರಬಂದ ಹುಲಿ, ಕುಮಾರ್ ಮೇಲೆ ಎರಗಿತು. ಗಾಬರಿಗೊಂಡ ಸಿಬ್ಬಂದಿ ಜೋರಾಗಿ ಕೂಗಿದ್ದರಿಂದ ಹುಲಿ ಮತ್ತೆ ಪೊದೆಯತ್ತ ಪರಾರಿಯಾಯಿತು.



ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಗ್ಗನಹಳ್ಳಿ ವಿಭಾಗ, 4ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, 3ನೇ ಬ್ಲಾಕ್, ಹೆಚ್‌ಎಂಟಿ ಲೇಔಟ್, ಬಿಡಬ್ಲ್ಯೂಎಸ್‌ಎಸ್‌ಬಿ ವಾಟರ್ ಟ್ಯಾಂಕ್ ಹತ್ತಿರ, ನಾಗಸಂದ್ರ ಅಂಚೆ, ಬೆಂಗಳೂರು-560073.

ಸಂಖ್ಯೆ: ಬೆಂಪನಪಾ/ಕಾಅ/ಹೆವಿ/ಟೆಂಡರ್/03/2026-27 ದಿನಾಂಕ: 29-06-2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) - (ಅಲ್ಪಾವಧಿ)
(ದ್ವಿ-ಟೆಂಡರ್ ದಾಸ್ತವೇಜು ಪದ್ಧತಿ) (ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ವಿಭಾಗ, ಬೆಂಪನಪಾ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್- ಕೆಡಬ್ಲ್ಯೂ-4)

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ದಾಸರಹಳ್ಳಿ ಮತಕ್ಷೇತ್ರ ಹೆಗ್ಗನಹಳ್ಳಿ ವಿಭಾಗದ ವಾರ್ಡ್ ಸಂಖ್ಯೆ. 01 - ನಾಗಸಂದ್ರ, ವಾರ್ಡ್ ಸಂಖ್ಯೆ. 02 - ಚೊಕ್ಕಸಂದ್ರ, ವಾರ್ಡ್ ಸಂಖ್ಯೆ. 03 - ನೆಲಗೆದರನಹಳ್ಳಿ, ವಾರ್ಡ್ ಸಂಖ್ಯೆ. 04 - ಪಾರ್ವತಿ ನಗರ, ವಾರ್ಡ್ ಸಂಖ್ಯೆ. 05 - ರಾಜೇಶ್ವರಿ ನಗರ, ವಾರ್ಡ್ ಸಂಖ್ಯೆ. 06, ಶಿವಪುರ, ವಾರ್ಡ್ ಸಂಖ್ಯೆ. 07 - ರಾಜಗೋಪಾಲ ನಗರ, ವಾರ್ಡ್ ಸಂಖ್ಯೆ. 08 - ಹೆಗ್ಗನಹಳ್ಳಿ, ವಾರ್ಡ್ ಸಂಖ್ಯೆ. 09 - ಶ್ರೀಗಂಧ ನಗರ ಮತ್ತು ವಾರ್ಡ್ ಸಂಖ್ಯೆ. 10 - ಸುಂಕದಕಟ್ಟೆ ಇಲ್ಲಿನ ರಸ್ತೆಗಳು, ಚರಂಡಿಗಳು ಹಾಗೂ ಸಂಬಂಧಿತ ಕೆಲಸಗಳು ಸುಧಾರಣೆಗಳ ಕಾಮಗಾರಿ. (2026-27-ಪ್ಯಾಕೇಜ್-01) - (ಇತರೆ) - ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 2512.50, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 25,13,000.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 01-07-2026 ರಂದು 4.00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 04-07-2026 ರಂದು ಮಧ್ಯಾಹ್ನ 3.30 ಗಂಟೆಗೆ. 3) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: 04-07-2026 ರಂದು ಸಂಜೆ 4.30 ಗಂಟೆಗೆ. 4) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 08-07-2026 ರಂದು ಸಂಜೆ 4.00 ಗಂಟೆವರೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 09-07-2026 ರಂದು ಸಂಜೆ 4.30 ಗಂಟೆಯ ನಂತರ. 6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 10-07-2026 ರಂದು ಸಂಜೆ 4.30 ಗಂಟೆಯ ನಂತರ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಹೆಗ್ಗನಹಳ್ಳಿ ವಿಭಾಗ, ಬೆಂಪನಪಾ.

PUBLIC NOTICE

This is to inform the general public that my client intends to purchase the immovable property mentioned and described the schedule below from its owners **(i) Smt. G. Shantha Bai, (ii) Smt. Prameela Bai, (iii) Sri. Devi Singh. G, (iv) Smt. Jayanthi Bai, (v) Sri. D. Sai Lalith, (vi) Sri. G. Manjunath Singh, (vii) Smt. Eshwar Bai, (viii) Sri. M. Dinesh Singh, (ix) Sri. Krishna Singh, (x) Smt. Shashikala, (xi) Smt. Dimple Singh. K., (xii) Miss Kumari Singh. K., (xiii) Smt. G. Latha Bai, (xiv) Sri. Dilip Singh. G., (xv) Smt. Meena Bai, (xvi) Smt. Harshitha Singh. D., (xvii) Master Vishnu Gopal Singh. D., (xviii) Sri. G. Pradeep Singh, (xix) Smt. Varalakshmi Bai. C., (xx) Master Sai Darshan Singh. P., (xxi) Miss Likhitha Singh. P., (xxii) Sri. Sandeep Singh. G., (xxiii) Smt. Prema Bai. C., (xxiv) Miss Pavana Bai. S., (xxv) Master Pavan Singh. S., (xxvi) Smt. Annapurna Bai, (xxvii) Smt. Kalavathi Bai, (xxviii) Smt. Mamtha. J. Singh, (xxix) Smt. Vani Singh, (xxx) Smt. Sapna Singh Koul,** (hereafter collectively referred to as "Owners"). The Owners represent that the Schedule Property is free from any encumbrance, mortgage, charge, lien or litigation and they have not entered any sort of Agreement/MOU/ Deeds etc., for transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this Notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All the piece and parcel of the immovable property bearing Survey No. 43/2, measuring 01 acre 28 guntas, situated at Kadugodi Village, Bidarahalli Hobli, Bengaluru East Taluk, Bengaluru Urban District and bounded on the:
East by : Land bearing Dakshini Pinakini river;
West by : Land bearing Survey No. 29/1;
North by : Land bearing Survey No. 42; and
South by : Land bearing Survey Nos.44/1 and 44/2.

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road, Bengaluru-560001 Ph.: 080 22863885 / 49763233
email:vinay@vinaykademane.in

Place : Bengaluru
Date : 30-06-2026

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029, ಕಛೇರಿ: 080-29753350 ಇ-ಮೇಲ್: karbuildworkerswelfare@gmail.com
ಸಂಖ್ಯೆ:KBOCWWB/E-Auction/FD-4/CR-06/2026-27 ದಿನಾಂಕ:29.06.2026

ಇ-ಆಕ್ಷನ್ ಪ್ರಕಟಣೆ

ವಿಷಯ: ಮಂಡಳಿಯ ಹೆಚ್ಚುವರಿ ಸುಂಕದ ಮೊತ್ತವನ್ನು 1 ವರ್ಷದ ಅವಧಿಗೆ ನಿಶ್ಚಿತ ಠೇವಣಿ/ Non- Callable ನಲ್ಲಿ ತೊಡಗಿಸಲು ಇ-ಟೆಂಡರ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.

ಮಂಡಳಿಯ ಉಳಿತಾಯ ಖಾತೆಯಲ್ಲಿ ಉಳಿದಿರುವ ಮೊತ್ತ **ರೂ.850.00 ಕೋಟಿ (ರೂಪಾಯಿ ಎಂಟು ನೂರಾ ಐವತ್ತು ಕೋಟಿ ಮಾತ್ರ)** ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿ/ Non-Callable ನಲ್ಲಿ ತೊಡಗಿಸಲು ಇ-ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ KPP ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ / ವಲಯ / ಮುಖ್ಯ ಕಛೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಆಹ್ವಾನಿಸಲಾಗಿದೆ.
ಸದರಿ ಇ-ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in/) ಸಲ್ಲಿಸುವುದು. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 08.07.2026 ಸಂಜೆ 4.00 ರೊಳಗಾಗಿ** ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ಉಪ ನಿಯಂತ್ರಕರು, ಫೋನ್:080-29753350/54/56, ಫೋನ್:9739441766ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಜಂಟಿ ಕಾರ್ಯದರ್ಶಿ,
ಕ.ಕ.ಇ.ನಿ.ಕಾ.ಕ.ಮಂಡಳಿ

ವಾಸಾಸಂಇ/ಉನಿ-ಸಿ.ಪಿ/1385/ಹೈಟೆಕ್ ಮೀಡಿಯಾ/2026-27

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಅಂಜನಾಪುರ ಮತ್ತು ಬೇಗೂರು ವಿಭಾಗ, ಬೆಂದನಪಾ, ಅಮೃತನಗರ- ಕೋಣನಕುಂಟೆ ಮುಖ್ಯರಸ್ತೆ, ಸೌಧಮಿನಿ ಲೇಔಟ್, ಬೆಂಗಳೂರು - 560062.

ಸಂಖ್ಯೆ: ಕಾಅ/ಅಂಬೇವಿ/ಟೆಂಡರ್/07/2026-27 ದಿನಾಂಕ: 29-06-2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ದ್ವಿ-ಲಕೋಟೆ ಟೆಂಡರ್) (ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಅಂಜನಾಪುರ ಮತ್ತು ಬೇಗೂರು ವಿಭಾಗ, ಬೆಂದನಪಾ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ಬಿಡಬ್ಲ್ಯೂಎಸ್‌ಎಸ್‌ಬಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್- ಕೆಡಬ್ಲ್ಯೂ-4)

ಕ್ರ. ಸಂ.	ಕಾಮಗಾರಿಯ ಹೆಸರು
1	ಬೆಂಗಳೂರು ದಕ್ಷಿಣ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ರಸ್ತೆಗಳು ಮತ್ತು ಚರಂಡಿಯ ಸುಧಾರಣೆಗಳ ಕಾಮಗಾರಿ. (ಜಿ.ಓ. ಆದೇಶ ಸಂಖ್ಯೆ. ಯುಡಿಡಿ 429 ಎಂಎನ್‌ವೈ 2026, ಬೆಂಗಳೂರು, ಅನುಬಂಧ-5 ರ ಕ್ರ.ಸಂ. 46 ರಿಂದ 80 ರವರೆಗೆ ಪಟ್ಟಿ ಮಾಡಲಾದ ಕಾಮಗಾರಿಗಳು). ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 4690.04, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 46,90,040/-
2	ಯಶವಂತಪುರ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ರಸ್ತೆಗಳು ಮತ್ತು ಚರಂಡಿಯ ಸುಧಾರಣೆಗಳ ಕಾಮಗಾರಿ. (ಜಿ.ಓ. ಆದೇಶ ಸಂಖ್ಯೆ. ಯುಡಿಡಿ 429 ಎಂಎನ್‌ವೈ 2026, ಬೆಂಗಳೂರು, ಅನುಬಂಧ-5 ರ ಕ್ರ.ಸಂ. 40 ರಿಂದ 45 ರವರೆಗೆ ಪಟ್ಟಿ ಮಾಡಲಾದ ಕಾಮಗಾರಿಗಳು). ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 1987.48, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 19,87,480/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 01-07-2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 04-07-2026 ರಂದು ಮಧ್ಯಾಹ್ನ 3.00 ಗಂಟೆಯೊಳಗೆ. 3) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: 04-07-2026 ರಂದು ಸಂಜೆ 4.00 ಗಂಟೆಗೆ. 4) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 08-07-2026 ರಂದು ಸಂಜೆ 4.00 ಗಂಟೆವರೆಗೆ. 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 09-07-2026 ರಂದು ಸಂಜೆ 4.30 ಗಂಟೆಗೆ. 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 10-07-2026 ರಂದು ಸಂಜೆ 4.00 ಗಂಟೆಯ ನಂತರ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಅಂಜನಾಪುರ ಮತ್ತು ಬೇಗೂರು ವಿಭಾಗ, ಬೆಂದನಪಾ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ಸಿ.ಎ. ನಿವೇಶನ ಖಾತೆ ನಂ.31-511-371, ವಾರ್ಡ್ ನಂ.20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಸಂ:ಬಿಐಎಎಪಿಎ/ಟಿಪಿ/ಭೂಉಬ/08/2026-27/953 ದಿನಾಂಕ: 23.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಸಿ.ಎಂ. ಮುನಿರಾಜ ಬಿನ್ ಲೇ॥ ಮುನಿಯಪ್ಪ	ದೇವನಹಳ್ಳಿ	ಚನ್ನರಾಯ-ಪಟ್ಟಣ	ತೆಲ್ಲೋಹಳ್ಳಿ ಅಗ್ರಹಾರ	15/12	0-06	ವ್ಯವಸಾಯ	ವಾಣಿಜ್ಯ

ಷರಾ:- ಪ್ರಸ್ತಾವನೆಯಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಹಾಗೂ ಪರಿಸರದಲ್ಲಿ ವಸತಿ/ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನಿನ ಪರಿಸರದಲ್ಲಿ 'ವಾಣಿಜ್ಯ' ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ 'ವಾಣಿಜ್ಯ' ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ 'ವಾಣಿಜ್ಯ' ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ. ಅಲ್ಲದೇ, ಪ್ರಸ್ತಾಪಿತ ಜಮೀನಿನಲ್ಲಿ 'ವಾಣಿಜ್ಯ' ಬೆಳವಣಿಗೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ವಲಯ'ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ಡಿಐಪಿಆರ್/ಸಿಪಿ/1382/ಸಿಸಿಎಲ್/2026-27

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಕೆಳಕಂಡ **'ಷೆಡ್ಯೂಲ್'** ನಲ್ಲಿ ಸವಿವರವಾಗಿ ವಿವರಿಸಿರುವ ಮತ್ತು ಇನ್ನುಮುಂದೆ ಇದನ್ನು **"ಷೆಡ್ಯೂಲ್ ಸ್ವತ್ತು"** ಎಂದು ಕರೆಯಲ್ಪಡುವ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ತಿರುವರಂಗ ಗ್ರಾಮದಲ್ಲಿರುವ ಕೃಷಿ ಜಮೀನಿನ ಸರ್ವೆ ಸಂಖ್ಯೆ 160/2 (ಹಳೆಯ ಸಂಖ್ಯೆ 33) ನಲ್ಲಿರುವ 6 ಎಕರೆ 16 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಇದರ ಮಾಲೀಕರಾದ **ಶ್ರೀ ಜೆ. ಶ್ರೀನಿವಾಸ್ ಬಿನ್ ಲೇಟ್ ಎಂ. ಜನಾರ್ದನ್** (ಪ್ಯಾನ್ ನಂ. ADYPJ1790M) ಮತ್ತು **ಶ್ರೀಮತಿ. ಲಲಿತಾ ಕೋಂ ಶ್ರೀನಿವಾಸ್** (ಪ್ಯಾನ್ ನಂ. ANAPS2506G), ಇಬ್ಬರ ವಾಸ:-656, 7ನೇ ಮುಖ್ಯ ರಸ್ತೆ, 11ನೇ ಕ್ರಾಸ್, 2ನೇ ಹಂತ, ಬಿಟಿಎಂ ಲೇಔಟ್, ಬೆಂಗಳೂರು - 560067, ಇವರಿಂದ ನಮ್ಮ ಕಕ್ಷಿದಾರರು ಖರೀದಿಸಲು/ಸ್ವಾಧೀನ ಪಡಿಸಿಕೊಳ್ಳಲು ಇಚ್ಛಿಸಿರುತ್ತಾರೆ.

ಯಾವುದೇ ವ್ಯಕ್ತಿ/ಗಳು, ಯಾವುದೇ ಒಪ್ಪಂದ, ಹಂಚಿಕೆ, ಆನುವಂಶಿಕತೆ, ಅಭಿವೃದ್ಧಿ ಹಕ್ಕುಗಳು, ಪಾಲು, ಮಾರಾಟ, ವರ್ಗಾವಣೆ, ವಿನಿಮಯ, ಅಡಮಾನ, ಗುತ್ತಿಗೆ, ಗುತ್ತಿಗೆ-ಅಂಡರ್-ಲೀಸ್, ನಿಯೋಜನೆ, ಕುಟುಂಬ ಇತ್ಯರ್ಥ, ಕುಟುಂಬ ವ್ಯವಸ್ಥೆ, ಬಾಕಿ ಇರುವ ತೆರಿಗೆಗಳು ಮತ್ತು/ಅಥವಾ ಸುಂಕಗಳು, ಹೊರಹೋಗುವಿಕೆಗಳು ಮತ್ತು ನಿರ್ವಹಣೆ, ಧಾರಣೆ, ಪರವಾನಗಿ, ಉಡುಗೊರೆ, ಸ್ವಾಧೀನ, ಬಾಡಿಗೆ, ಉಪ-ಬಾಡಿಗೆ, ಉಯಿಲು, ಟ್ರಸ್ಟ್, ಶುಲ್ಕ, ಪ್ರತಿಜ್ಞೆ, ಗ್ಯಾರಂಟಿ, ಸುಲಭಗೊಳಿಸುವಿಕೆ, ಸಾಲಗಳು, ಮುಂಗಡಗಳು, ಲಿಸ್-ಪೆಂಡೆನ್‌ಗಳು, ಮೊಕದ್ದಮೆ, ಮಧ್ಯಸ್ಥಿಕೆ, ತಡೆಯಾಜ್ಞೆ ಅಥವಾ ಯಾವುದೇ ಇತರ ಲಗತ್ತು, ಅಥವಾ ಯಾವುದೇ ನ್ಯಾಯಾಲಯ, ನ್ಯಾಯಮಂಡಳಿಯಿಂದ ಅಂಗೀಕರಿಸಲ್ಪಟ್ಟ ಯಾವುದೇ ತೀರ್ಪು, ಆದೇಶ ಅಥವಾ ಪ್ರಶಸ್ತಿಯ ಅಡಿಯಲ್ಲಿ, ಕಂದಾಯ ಅಥವಾ ಶಾಸನಬದ್ಧ ಪ್ರಾಧಿಕಾರ ಅಥವಾ ಮಧ್ಯಸ್ಥಿಕೆ, ಪ್ರಿಸ್ಕ್ರಿಪ್ಷನ್ ಹಕ್ಕು ಅಥವಾ ಪೂರ್ವಭಾವಿ ಅಥವಾ ಹೊರೆ ಯಾವುದೇ ಇರಲಿ ಅಥವಾ ಬೇರೆ ರೀತಿಯಲ್ಲಿ ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ **ಹದಿನಾಲ್ಕು (14) ದಿನಗಳ** ಒಳಗೆ, ಎಲ್ಲಾ ಪೋಷಕ ದಾಖಲೆಗಳೊಂದಿಗೆ ಕೆಳಗೆ ಸಹಿ ಮಾಡಿದವರಿಗೆ ಲಿಖಿತವಾಗಿ ತಿಳಿಸಬೇಕಾಗಿ ಸೂಚಸಲಾಗಿದೆ. ಇಲ್ಲದಿದ್ದರೆ ಅಂತಹ ಹಕ್ಕು/ಗಳನ್ನು ಉಲ್ಲೇಖಿಸದೆ ವಹಿವಾಟನ್ನು ಪೂರ್ಣಗೊಳಿಸಲಾಗುತ್ತದೆ ಮತ್ತು ಅಂತಹ ವ್ಯಕ್ತಿ (ಗಳ) ಹಕ್ಕುಗಳು ಯಾವುದಾದರೂ ಇದ್ದರೆ ಅವುಗಳನ್ನು ಮನ್ನಾ ಮಾಡಲಾಗಿದೆ ಮತ್ತು ನಮ್ಮ ಗ್ರಾಹಕರ ಮೇಲೆ ಬದ್ಧವಾಗಿಲ್ಲ ಎಂದು ಪರಿಗಣಿಸಲಾಗುತ್ತದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲೂಕು, ಅನುಗೊಂಡನಹಳ್ಳಿ ಹೋಬಳಿ, ತಿರುವರಂಗ ಗ್ರಾಮದಲ್ಲಿರುವ 6 ಎಕರೆ 16 ಗುಂಟೆಗಳ ಅಳತೆಯ ಸರ್ವೆ ನಂ. 160/2 (ಹಳೆಯ ನಂ. 33) ಹೊಂದಿರುವ ಕೃಷಿ ಜಮೀನಿಗೆ ಚಕ್ಕುಬಂದಿ ಈ ಕೆಳಕಂಡಂತಿರುವುದು.
ಪೂರ್ವಕ್ಕೆ : ಸರ್ವೆ ಸಂಖ್ಯೆ 33 ರ ಉಳಿದ ಭಾಗ;
ಪಶ್ಚಿಮಕ್ಕೆ : ಸರ್ವೆ ಸಂಖ್ಯೆ 39 ಮತ್ತು ಸರ್ವೆ ಸಂಖ್ಯೆ 33 ರ ಉಳಿದ ಭಾಗ;
ಉತ್ತರಕ್ಕೆ : ಸರ್ವೆ ಸಂಖ್ಯೆ 37 ಮತ್ತು ಸರ್ವೆ ಸಂಖ್ಯೆ 33 ರ ಉಳಿದ ಭಾಗ;
ದಕ್ಷಿಣಕ್ಕೆ : ಸರ್ವೆ ಸಂಖ್ಯೆ 51 ಮತ್ತು 52 ರ ಸ್ವತ್ತು.

ಎಸ್. ಟಿ. ಪ್ರಶಾಂತ ಕುಮಾರ್
ವಕೀಲರು ಮತ್ತು ಹಿರಿಯ ಪಾಲುದಾರರು,
ಫಾಕ್ಸ್ ಮಂಡಲ್ ಮತ್ತು ಅಸೋಸಿಯೇಟ್ಸ್
"ಎಫ್‌ಎಂ ಹೌಸ್" 6/12, ಪ್ರಿಮ್ರೋಸ್ ರಸ್ತೆ, ಬೆಂಗಳೂರು 560 025,
ದೂರವಾಣಿ: +91 80 2559 5911,
ಇ-ಮೇಲ್: bangalore@foxmandal.in

ಸ್ಥಳ: ಬೆಂಗಳೂರು
ದಿನಾಂಕ: 30.06.2026

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಜಿಲ್ಲಾಧಿಕಾರಿಗಳ ಕಚೇರಿ (ಜಾಹೀರಾತುಗಳು), 3ನೇ ಮಹಡಿ, ಜಯನಗರ 4ನೇ ಬ್ಲಾಕ್, ಶಾಪಿಂಗ್ ಕಾಂಪ್ಲೆಕ್ಸ್, ಬೆಂಗಳೂರು -560041
ಇಮೇಲ್: Demarketadvert@gmail.com

ಸಂ. ಡಿಸಿ ಅಡ್ವರ್ಟ್/ಬಿಎಸ್‌ಸಿ/ಟೆಂಡ/01/2026-27/3ನೇ ಕರೆ/ತಿದ್ದು-1 ದಿನಾಂಕ ; 29.06.2026

ತಿದ್ದುಪಡಿ-1

ವಿಷಯ : ಪರಿಷ್ಕೃತ ದಿನಾಂಕಗಳು - ಟೆಂಡರ್ ಅಧಿಸೂಚನೆ ಸಂಖ್ಯೆ : ಡಿ ಸಿ /ಜಾಹೀರಾತು /ಬಿ ಎಸ್ ಸಿ /ಟೆಂಡ್/01/2026-27/ಕರೆ -3, ದಿನಾಂಕ 23.06.2026
ಉಲ್ಲೇಖ : 1. ಟೆಂಡರ್ ಅಧಿಸೂಚನೆ ಸಂಖ್ಯೆ ಡಿ ಸಿ /ಜಾಹೀರಾತು /ಬಿ ಎಸ್ ಸಿ ಸಿ /ಟೆಂಡ್/01/2026-27/ಕರೆ -3, ದಿನಾಂಕ 23.06.2026
2. ದಿ ಹಿಂದೂ ಮತ್ತು ವಿಜಯ ಕರ್ನಾಟಕ ಪತ್ರಿಕೆಗಳಲ್ಲಿ ಪ್ರಕಟವಾದ ದಿನಾಂಕ : 24.06.2026.
ಈ ಮೂಲಕ ತಿಳಿಸುವುದೇನೆಂದರೆ ತಾಂತ್ರಿಕ ಕಾರಣಗಳಿಂದಾಗಿ ಈ ಮೇಲಿನ ಟೆಂಡರ್ ಅಧಿಸೂಚನೆ ಸಂಖ್ಯೆ ಡಿಸಿ/ಜಾಹೀರಾತು/ಬಿಎಸ್‌ಸಿ/ಟೆಂಡ್/01/2026-27/ಕರೆ -3, ದಿನಾಂಕ 23.06.2026 ರ ವೇಳಾಪಟ್ಟಿಯನ್ನು ಪರಿಷ್ಕೃತ ಮಾಡಲಾಗಿದೆ ಹಾಗೂ ಪರಿಷ್ಕೃತ ದಿನಾಂಕಗಳು ಈ ಕೆಳಗಿನಂತಿವೆ :
ದಾಖಲೆಯ ಪ್ರಕಾರ: 1. ಟೆಂಡರ್ ದಾಖಲೆಗಳು ಕೆಪಿಪಿ ಪೋರ್ಟಲ್‌ನಲ್ಲಿ ಲಭ್ಯವಿರುವ ದಿನಾಂಕ: 25.06.2026 ರಿಂದ, 2. ಪ್ರೀ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ: 07.07.2026 ರಂದು 15:00 ಗಂಟೆಗಳು. 3. ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: 07.07.2026 ರಂದು 16:00 ಗಂಟೆಗಳು. 4. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 04.08.2026 ರಂದು 16:00 ಗಂಟೆಗಳು. 5. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05.08.2026 ರಂದು 16:30 ಗಂಟೆಗಳು. 6. ಆರ್ಥಿಕ ಬಿಡ್ ತೆರೆಯುವ ದಿನಾಂಕ (ಸಾಧ್ಯವಾದರೆ): ತಾಂತ್ರಿಕ ಮೌಲ್ಯಮಾಪನದ ಅನುಮೋದನೆಯ ನಂತರ.
ಹೀಗೆ ಓದುವುದು: 1. ಟೆಂಡರ್ ದಾಖಲೆಗಳು ಕೆಪಿಪಿ ಪೋರ್ಟಲ್‌ನಲ್ಲಿ ಲಭ್ಯವಿರುವ ದಿನಾಂಕ: 30.06.2026 ರಿಂದ, 2. ಪ್ರೀ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ: 10.07.2026 ರಂದು 15:00 ಗಂಟೆಗಳು. 3. ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: 10.07.2026 ರಂದು 16:00 ಗಂಟೆಗಳು. 4. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 04.08.2026 ರಂದು 16:00 ಗಂಟೆಗಳು. 5. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05.08.2026 ರಂದು 16:30 ಗಂಟೆಗಳು. 6. ಆರ್ಥಿಕ ಬಿಡ್ ತೆರೆಯುವ ದಿನಾಂಕ (ಸಾಧ್ಯವಾದರೆ): ತಾಂತ್ರಿಕ ಮೌಲ್ಯಮಾಪನದ ಅನುಮೋದನೆಯ ನಂತರ.
ಟೆಂಡರ್‌ನ ಉಳಿದ ನಿಯಮಗಳು ಮತ್ತು ಷರತ್ತುಗಳು ಬದಲಾಗದೆ ಉಳಿದಿವೆ.

ಸಹಿ/-ಉಪ ಆಯುಕ್ತರು, ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕೋಚ್ ಹುದ್ದೆಯಿಂದ ಕೆಳಗಿಳಿದ ಹೆನ್ರಿಚ್

ಬೆಲ್‌ಫಾಸ್ಟ್: ವಿಶ್ವ ಚಾಂಪಿಯನ್ ಭಾರತ ತಂಡದ ವಿರುದ್ಧ ಐತಿಹಾಸಿಕ ಟಿ20 ಸರಣಿಯನ್ನು 2-0 ಅಂತರದಲ್ಲಿ ಐರ್ಲೆಂಡ್ ವಶಪಡಿಸಿಕೊಂಡ ಬೆನ್ನಲ್ಲೆ, ಐರ್ಲೆಂಡ್ ಪುರುಷರ ತಂಡದ ಮುಖ್ಯ ಕೋಚ್ ಹೆನ್ರಿಚ್ ಮಲಾನ್, ತಮ್ಮ ಹುದ್ದೆಯಿಂದ ಕೆಳಗಿಳಿದಿದ್ದಾರೆ. ಭಾನುವಾರ ನಡೆದ 2ನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ 1 ರನ್‌ನಿಂದ ಟೀಮ್ ಇಂಡಿಯಾವನ್ನು ಮಣಿಸಿದ ಐರ್ಲೆಂಡ್, 154 ರನ್‌ಗಳನ್ನು ರಕ್ಷಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ದಕ್ಷಿಣ ಆಫ್ರಿಕಾದ ಮಲಾನ್ ಸ್ಥಾನಕ್ಕೆ ಐರ್ಲೆಂಡ್‌ನ ಗ್ಯಾರಿ ವಿಲ್ಸನ್ ನೇಮಕಗೊಂಡಿದ್ದಾರೆ.

ಬೆನ್ ಸ್ಟೋಕ್ಸ್‌ಗೆ ಸೋಲಿನ ಬೀಳ್ಕೊಡುಗೆ

ನಾಟಿಂಗ್‌ಹ್ಯಾಮ್: ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಶ್ರೇಷ್ಠ ಪ್ರದರ್ಶನ ನೀಡಿದ ನ್ಯೂಜಿಲೆಂಡ್ ತಂಡ ಇಲ್ಲಿ ಮುಕ್ತಾಯಗೊಂಡ ಮೂರನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ 160 ರನ್‌ಗಳಿಂದ ಇಂಗ್ಲೆಂಡ್ ತಂಡವನ್ನು ಮಣಿಸಿತು. ಇದರೊಂದಿಗೆ 3 ಪಂದ್ಯಗಳ ಟೆಸ್ಟ್ ಸರಣಿಯನ್ನು 2-1ರಲ್ಲಿ ವಶಪಡಿಸಿಕೊಂಡ ಕಿವೀಸ್, ನಾಲ್ಕನೇ ಬಾರಿಗೆ ಆಂಗ್ಲರ ನಾಡಲ್ಲಿ ಟೆಸ್ಟ್ ಸರಣಿ ಗೆದ್ದ ಸಾಧನೆ ಮಾಡಿತು.

ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಕಾರಣ ಇಂಗ್ಲೆಂಡ್ ತಂಡವು ನಾಯಕ ಬೆನ್ ಸ್ಟೋಕ್ಸ್‌ಗೆ ಸೋಲಿನ ವಿದಾಯ ಹೇಳಬೇಕಾಯಿತು. ಪಂದ್ಯದ 4ನೇ ದಿನದ ಮಧ್ಯದಲ್ಲೇ ಸ್ಟೋಕ್ಸ್, ಟೆಸ್ಟ್ ಪಂದ್ಯ ಮುಗಿದ ನಂತರ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳುತ್ತಿರುವುದಾಗಿ ಘೋಷಿಸಿದ್ದರು. 373 ರನ್ ಗುರಿ ಬೆನ್ನಟ್ಟಿದ್ದ ಇಂಗ್ಲೆಂಡ್, ಪಂದ್ಯದ 5ನೇ ಹಾಗೂ ಅಂತಿಮ ದಿನ 4 ವಿಕೆಟ್‌ಗೆ 103 ರನ್‌ಗಳಿಂದ 2ನೇ ಇನಿಂಗ್ಸ್ ಮುಂದುವರಿಸಿತು. ಆದರೆ 212ಕ್ಕೆ ಸರ್ವಪತನಗೊಂಡಿತು. 1986, 1999 ಮತ್ತು 2021ರಲ್ಲಿ ಕಿವೀಸ್ ತಂಡವು ಇಂಗ್ಲೆಂಡ್‌ನಲ್ಲಿ ಟೆಸ್ಟ್ ಸರಣಿ ಗೆದ್ದಿತ್ತು.

ಭಾರತ ತಂಡಕ್ಕೆ ನಿರಾಸೆ

ಟೋಕಿಯೊ: ಕ್ವಾರ್ಟರ್‌ಫೈನಲ್ಸ್‌ನಲ್ಲಿ ಹಾಂಕಾಂಗ್ ವಿರುದ್ಧ 1-2ರಲ್ಲಿ ಭಾರತ ಪರಾಭವಗೊಂಡ ನಂತರ ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಮಿಶ್ರ ತಂಡ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಅಭಿಯಾನ ಸೋಮವಾರ ಕೊನೆಗೊಂಡಿದೆ. ಭಾರತ ಮೊದಲೆರಡು ಪಂದ್ಯಗಳ ನಂತರ 22-12ರಲ್ಲಿ ಮೇಲುಗೈ ಸಾಧಿಸಿತು. ಆದರೆ ನಂತರದ ಪಂದ್ಯಗಳಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಎಡವಿದ್ದು, ಭಾರತಕ್ಕೆ ಮುಳ್ಳಾಯಿತು.

32ನೇ ಸುತ್ತಿನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ರೋಚಕ ಗೆಲುವು | ಮೊದಲ ಬಾರಿ ಪ್ರಿಕ್ವಾರ್ಟರ್ ಫೈನಲ್ಸ್‌ಗೆ ಕಾಲಿಟ್ಟ ಕೆನಡಾ

ಸ್ಟೀಫನ್ ಕಿಕ್‌ಗೆ ದಕ್ಷಿಣ ಆಫ್ರಿಕಾ ಔಟ್

ಲಾಸ್ ಏಂಜಲೀಸ್: ಪಂದ್ಯದ ಅಂತಿಮ ಕ್ಷಣದ ಇಂಜುರಿ ಸಮಯದಲ್ಲಿ ಸ್ಟೀಫನ್ ಯುಸ್ಟಾಕ್ವಿಯೊ ಗಳಿಸಿದ ಗೋಲು ಕೆನಡಾ ತಂಡವನ್ನು ಫಿಫಾ ವಿಶ್ವಕಪ್ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಪ್ರಿ ಕ್ವಾರ್ಟರ್ ಫೈನಲ್ಸ್‌ಗೆ ಮುನ್ನಡೆಯುವಂತೆ ಮಾಡಿದರೆ, ದಕ್ಷಿಣ ಆಫ್ರಿಕಾ ತಂಡ ಆಘಾತಕಾರಿ ಸೋಲಿನೊಂದಿಗೆ ಅಭಿಯಾನ ಕೊನೆಗೊಳಿಸುವಂತೆ ಮಾಡಿತು.

ಲಾಸ್ ಏಂಜಲೀಸ್ ಕ್ರೀಡಾಂಗಣದಲ್ಲಿ ಭಾನುವಾರ ತಡರಾತ್ರಿ ನಡೆದ ಪ್ರಸಕ್ತ ವಿಶ್ವಕಪ್‌ನ ಮೊದಲ 32ನೇ ಸುತ್ತಿನ ಪಂದ್ಯದಲ್ಲಿ ಕೆನಡಾ 1-0 ಗೋಲಿನ ಅಂತರದಿಂದ ದಕ್ಷಿಣ ಆಫ್ರಿಕಾ ತಂಡವನ್ನು ಬಗ್ಗುಬಡಿಯಿತು. ಮೊದಲ ಬಾರಿಗೆ ನಾಕೌಟ್ ಪ್ರವೇಶಿಸಿದ್ದ ದಕ್ಷಿಣ ಆಫ್ರಿಕಾ, ಕೊನೆಯ ಕ್ಷಣದಲ್ಲಿನ ರಕ್ಷಣಾ ವೈಫಲ್ಯಕ್ಕೆ ದಂಡ ತೆತ್ತುವ ಮೂಲಕ ತನ್ನ ಅಭಿಯಾನವನ್ನು ಸೋಲಿನೊಂದಿಗೆ ಮುಕ್ತಾಯಗೊಳಿಸಿತು.

90 ನಿಮಿಷಗಳ ಪಂದ್ಯದಲ್ಲಿ ಉಭಯ ತಂಡಗಳು ಜಿದ್ದಾಜಿದ್ದಿನ ಹೋರಾಟ ನಡೆಸಿದವು. ಗೋಲಿಗಾಗಿ ಹರಸಾಹಸ ನಡೆಸಿದವು. ಎರಡೂ ತಂಡಗಳ ಡಿಫೆಂಡರ್‌ಗಳು ಚೆಂಡನ್ನು ಹಿಮ್ಮೆಟ್ಟುವ ಮೂಲಕ ತಮ್ಮ ಸಾಮರ್ಥ್ಯ ತೋರಿದರು. ಪಂದ್ಯದ 90 ನಿಮಿಷಗಳ ನಿಗದಿತ ಅವಧಿ ಮುಗಿದು ಕೊನೆಯ ಇಂಜುರಿ ಸಮಯ ಆರಂಭವಾದ ಎರಡೇ ನಿಮಿಷದಲ್ಲಿ ದಕ್ಷಿಣ ಆಫ್ರಿಕಾದ ಡಿಫೆಂಡರ್ಸ್ ಮತ್ತು ಗೋಲ್ ಕೀಪರ್‌ನನ್ನು ಕಣ್ತಪ್ಪಿಸಿದ ಸ್ಟೀಫನ್, ಮಿಂಚಿನ ವೇಗದಲ್ಲಿ ಕೆನಡಾ ಪರ ಗೋಲ್ ದಾಖಲಿಸಿದರು. ಬಳಿಕ ಇಡೀ ಮೈದಾನದಲ್ಲಿ ಕೆನಡಾ ಪ್ರಜೆಗಳ ಹರ್ಷೋದ್ಗಾರಕ್ಕೆ ಪಾರವೇ ಇಲ್ಲದಂತಾಯಿತು. ಆಟಗಾರರು ಮೈದಾನದಲ್ಲಿ ಕುಣಿದು ಕುಪ್ಪಳಿಸಿದರು. ಗೆಲುವಿನ ಗೋಲ್ ಗಳಿಸಿದ ಸ್ಟೀಫನ್ ಅವರನ್ನು ಇತರ ಆಟಗಾರರು ಹೆಗಲ ಮೇಲೆ ಹೊತ್ತು ಮೆರೆಸಿದರು.

ಮೂರು ದಿನಗಳ ವಿರಾಮದ ನಂತರ ಕೆನಡಾ ತಂಡ, ಜುಲೈ 4ರಂದು ಮೊರಾಕ್ಕೊ ಅಥವಾ ನೆದರ್ಲೆಂಡ್ಸ್ ತಂಡದ ಕಠಿಣ ಸವಾಲು ಎದುರಿಸಲಿದೆ. ಕೆನಡಾ ವಿಶ್ವಕಪ್‌ನಲ್ಲಿ ಈವರೆಗೂ ನೆದರ್ಲೆಂಡ್ಸ್ ವಿರುದ್ಧ ಆಡಿಲ್ಲ, ಆದರೆ 2022ರ ಟೂರ್ನಿಯಲ್ಲಿ ಮೊರಾಕ್ಕೊ ವಿರುದ್ಧ 1-2ರಲ್ಲಿ ಸೋತಿದೆ. ಒಂದು ವೇಳೆ ಮೊರಾಕ್ಕೊ ಎದುರಾದರೆ ಕೆನಡಾಗೆ ಸೇಡು ತೀರಿಸಿಕೊಳ್ಳುವ ಅವಕಾಶ ಲಭಿಸಲಿದೆ.



ಲಾಸ್ ಏಂಜಲೀಸ್‌ನಲ್ಲಿ ಭಾನುವಾರ ರಾತ್ರಿ ನಡೆದ ದಕ್ಷಿಣ ಆಫ್ರಿಕಾ ವಿರುದ್ಧದ ಫಿಫಾ ವಿಶ್ವಕಪ್‌ನ 32ನೇ ಸುತ್ತಿನ ಪಂದ್ಯದಲ್ಲಿ ಕೆನಡಾ ತಂಡದ ಸ್ಟೀಫನ್ ಯುಸ್ಟಾಕ್ವಿಯೊ ಹೊಡೆದ ಚೆಂಡು ಗೋಲ್ ಪೆಟ್ಟಿಗೆ ಸೇರಿದಾಗ ಕಂಡು ಬಂದ ದೃಶ್ಯ.

ನಾಕೌಟ್ ಪಂದ್ಯಗಳು

ಫ್ರಾನ್ಸ್ vs ಸ್ವೀಡನ್
ಪಂದ್ಯಆರಂಭ: ರಾತ್ರಿ 2:30 (ಮಂಗಳವಾರ)
ಸ್ಥಳ: ನ್ಯೂಜೆರ್ಸಿ

ಮೆಕ್ಸಿಕೊ vs ಈಕ್ವೆಡಾರ್
ಪಂದ್ಯ ಆರಂಭ: ಬೆಳಗ್ಗೆ 6:30 (ಬುಧವಾರ)
ಸ್ಥಳ: ಮೆಕ್ಸಿಕೊ ಸಿಟಿ

ಇಂಗ್ಲೆಂಡ್ vs ಕಾಂಗೊ ಡಿಆರ್
ಪಂದ್ಯ ಆರಂಭ: ರಾತ್ರಿ 9:30 (ಬುಧವಾರ)
ಸ್ಥಳ: ಅಟ್ಲಾಂಟಾ
ನೇರ ಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್

ಪ್ರಮುಖಾಂಶಗಳು

- 32ನೇ ಸುತ್ತಿನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಕೆನಡಾ ತಂಡಕ್ಕೆ 1-0 ಅಂತರದ ರೋಚಕ ಜಯ
- ಇಂಜುರಿ ಸಮಯದಲ್ಲಿ ಗೆಲುವಿನ ಗೋಲ್ ಗಳಿಸಿದ ಸ್ಟೀಪನ್ ಯುಸ್ಟಾಕ್ವಿಯೊ
- ಕೆನಡಾ ತಂಡದ ನಾಯಕ ಅಲ್ಫೋನ್ಸೊ ಡೇವಿಸ್ 75ನೇ ನಿಮಿಷದಲ್ಲಿ ಸಬ್‌ಸ್ಟಿಟ್ಯೂಟ್ ಆಟಗಾರನಾಗಿ ಕಣಕ್ಕೆ, ಇದು ಅವರ ವಿಶ್ವಕಪ್‌ನ ಮೊದಲ ಪಂದ್ಯ
- 16ರ ಘಟ್ಟದಲ್ಲಿ ಕೆನಡಾ ತಂಡಕ್ಕೆ ಮೊರಾಕ್ಕೊ ಅಥವಾ ನೆದರ್ಲೆಂಡ್ಸ್ ಸವಾಲು

ಪ್ರಸಕ್ತ ವಿಶ್ವಕಪ್‌ನಲ್ಲಿ ಆಡಿದ 1000ನೇ ಆಟಗಾರ ಅಲ್ಫೋನ್ಸೊ

ದಕ್ಷಿಣ ಆಫ್ರಿಕಾ ವಿರುದ್ಧದ 32ನೇ ಸುತ್ತಿನ ಪಂದ್ಯದಲ್ಲಿ ಕೆನಡಾ ಪರ ಕಣಕ್ಕಿಳಿದ ಅಲ್ಫೋನ್ಸೊ ಡೇವಿಸ್ 2026 ರ ಪಂದ್ಯಾವಳಿಯಲ್ಲಿ ಕಾಣಿಸಿಕೊಂಡ 1,000ನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಗಾಯದಿಂದಾಗಿ ಗುಂಪು ಹಂತದ ಪಂದ್ಯಗಳಿಗೆ ಅಲಭ್ಯರಾಗಿದ್ದ ಡೇವಿಸ್, ಪಂದ್ಯದ ದ್ವಿತೀಯಾರ್ಧದಲ್ಲಿ ಕಣಕ್ಕಿಳಿಯುವ ಮೂಲಕ ಫಿಫಾ ವಿಶ್ವಕಪ್ ಇತಿಹಾಸದಲ್ಲಿ ತಮ್ಮ ಹೆಸರನ್ನು ದಾಖಲಿಸಿದರು.



2028ರ ಒಲಿಂಪಿಕ್ಸ್‌ಗೆ ಭಾರತ ಮಹಿಳಾ ತಂಡ ಅರ್ಹತೆ

ಹೊಸದಿಲ್ಲಿ: ನೀರಸ ಪ್ರದರ್ಶನ ನೀಡಿದ ಭಾರತ ತಂಡ ಇಂಗ್ಲೆಂಡ್‌ನಲ್ಲಿ ನಡೆಯುತ್ತಿರುವ ಪ್ರಸಕ್ತ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನ ಗುಂಪು ಹಂತದಲ್ಲೇ ನಿರ್ಗಮಿಸಿ ಕೋಟ್ಯಂತರ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದೆ. ಆದಾಗ್ಯೂ, ಹರ್ಮನ್‌ಪ್ರೀತ್ ಕೌರ್ ಬಳಗ 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ಗೇಮ್ಸ್‌ಗೆ ಅರ್ಹತೆ ಪಡೆಯುವಲ್ಲಿ ಯಶಸ್ವಿಯಾಗಿದೆ.

128 ವರ್ಷಗಳ ನಂತರ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್‌ಗೆ ಅವಕಾಶ ಕಲ್ಪಿಸಲಾಗಿದ್ದು, ಐಸಿಸಿ ಸೋಮವಾರ ಅರ್ಹತಾ ಮಾನದಂಡವನ್ನು ಘೋಷಿಸಿದೆ. ಇದರನ್ವಯ ಅಗ್ರ ಆರು ತಂಡಗಳ ಪೈಕಿ ಒಂದಾಗಿರುವ ಭಾರತ ಮಹಿಳಾ ತಂಡ ಮುಂದಿನ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದೆ.

ಈ ಮಧ್ಯೆ, ಭಾರತ ಪುರುಷರ ತಂಡವೂ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಬಹುದಾದ ತಂಡಗಳಲ್ಲಿ ಒಂದಾಗಿದೆ. 2026ರ ಡಿಸೆಂಬರ್ ಅಂತ್ಯದವರೆಗೂ ಅರ್ಹತೆ ಪಡೆಯಲು ತಂಡಗಳಿಗೆ ಅವಕಾಶವಿದೆ.

ಕ್ಯಾಸ್ಪರ್, ರುಬ್ಲೆವ್‌ಗೆ ಆಘಾತ

ಕ್ಯಾಸ್ಪರ್ ರೂಡ್

ಲಂಡನ್: ವಿಶ್ವದ 11ನೇ ಶ್ರೇಯಾಂಕಿತ ಆಟಗಾರ ಕ್ಯಾಸ್ಪರ್ ರೂಡ್ ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಆರಂಭಿಕ ಸುತ್ತಿನಲ್ಲೇ ಮುಗ್ಗರಿಸಿ ಹೋರಾಟ ಮುಗಿಸಿದ್ದಾರೆ.

ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಶ್ರೇಯಾಂಕ ರಹಿತ ಹ್ಯುಬರ್ಟ್ ಹರ್ಕಾಜ್ 6-4, 6-2, 7-9(9-7) ನೇರ ಸೆಟ್‌ಗಳಿಂದ ರೂಡ್‌ಗೆ ಅನಿರೀಕ್ಷಿತ ಸೋಲುಣಿಸಿದರು. 15 ಏಸ್ ಸಿಡಿಸಿದ್ದು ಹ್ಯುಬರ್ಟ್ ಅವರ ಅಬ್ಬರಕ್ಕೆ ಸಾಕ್ಷಿಯಂತಿತ್ತು. ಮತ್ತೊಂದು ಆರಂಭಿಕ ಪಂದ್ಯದಲ್ಲಿ 12ನೇ ಶ್ರೇಯಾಂಕಿತ ಆ್ಯಂಡ್ರೆ ರುಬ್ಲೆವ್ ಕೂಡ 4-6, 7-6(8-6), 6-3, 3-6, 6-7(12/14) 5 ಸೆಟ್‌ಗಳ ಮ್ಯಾರಥಾನ್ ಹೋರಾಟದಲ್ಲಿ ಶ್ರೇಯಾಂಕ ರಹಿತ ರೋಮನ್ ಸಫಿಉಲ್ಲಿನ್ ಎದುರು ಮಂಡಿಯೂರಿದರು.

ಸೂರ್ಯವಂಶಿ ಕಣಕ್ಕಿಳಿಸಲು ಹೆಚ್ಚಿದ ಒತ್ತಡ

ಹೊಸದಿಲ್ಲಿ: ಐರ್ಲೆಂಡ್ ವಿರುದ್ಧದ ಎರಡು ಪಂದ್ಯಗಳ ಟಿ20 ಸರಣಿಯಲ್ಲಿ ವೈಟ್‌ವಾಷ್ ಮುಖಭಂಗ ಅನುಭವಿಸಿರುವ ಭಾರತ ಪುರುಷರ ತಂಡ, ಜುಲೈ 1ರಿಂದ ಇಂಗ್ಲೆಂಡ್ ವಿರುದ್ಧ ಆರಂಭವಾಗಲಿರುವ ಐದು ಪಂದ್ಯಗಳ ಟಿ20 ಸರಣಿಗೆ ಸಜ್ಜುಗೊಳ್ಳಬೇಕಿದೆ.

ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಿಟ್ಟಿಸಿರುವ 15 ವರ್ಷದ ವೈಭವ್ ಸೂರ್ಯವಂಶಿಗೆ ಐರ್ಲೆಂಡ್ ವಿರುದ್ಧ ಸರಣಿಯಲ್ಲಿ ಅವಕಾಶ ಕಲ್ಪಿಸಲಿಲ್ಲ, ಈ ಕುರಿತು ಮಾಜಿ ಆಟಗಾರರು, ಟೀಮ್ ಮ್ಯಾನೇಜ್‌ಮೆಂಟ್ ನಿರ್ಧಾರ ಕುರಿತು ಪರ ಹಾಗೂ ವಿರೋಧ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ, ಹನ್ನೊಂದರ ಬಳಗದಲ್ಲಿ ವೈಭವ್‌ಗೆ ಸ್ಥಾನ ಕಲ್ಪಿಸಬೇಕು ಎಂಬ ಕೂಗು ಮೊದಲಿಗಿಂತಲೂ ಈಗ ಹೆಚ್ಚಾಗಿದೆ.

ವಿಜೆಡಿ ನಿಯಮದನ್ವಯ ಟೈಗರ್ಸ್‌ಗೆ 10 ವಿಕೆಟ್ ಭರ್ಜರಿ ಗೆಲುವು

ಹುಬ್ಬಳ್ಳಿ ಟೈಗರ್ಸ್‌ಗೆ ಸವಾಲಾಗದ ಗುಲ್ಬರ್ಗ

■ ಕಲ್ಮೇಶ ಪಟ್ಟಣದವರ ಹುಬ್ಬಳ್ಳಿ
kalmesh2214@gmail.com

ಅಗ್ರ ಕ್ರಮಾಂಕದ ಬ್ಯಾಟರ್‌ಗಳ ಮಿಂಚಿನ ಆಟದ ಫಲವಾಗಿ ಹುಬ್ಬಳ್ಳಿ ಟೈಗರ್ಸ್ ತಂಡ ಮಹಾರಾಜ ಟ್ರೋಫಿ ಟಿ20 ಟೂರ್ನಿಯ ತನ್ನ 5ನೇ ಪಂದ್ಯದಲ್ಲಿ ವಿಜೆಡಿ ನಿಯಮದನ್ವಯ 10 ವಿಕೆಟ್‌ಗಳಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವನ್ನು ಮಣಿಸಿತು. ಇದರೊಂದಿಗೆ ಹಿಂದಿನ ಸೋಲಿಗೆ ಸೇಡು ತೀರಿಸಿಕೊಂಡಿತು.

ಅನುಭವಿ ಬ್ಯಾಟರ್‌ಗಳಾದ ನಾಯಕ ಮಯಂಕ್ ಅಗರ್ವಾಲ್ (81*; 38 ಎಸೆತ, 8 ಫೋರ್, 5 ಸಿಕ್ಸರ್), ಮೊಹಮ್ಮದ್ ತಹಾ (57*; 35 ಎಸೆತ, 4 ಫೋರ್, 4 ಸಿಕ್ಸರ್) ಅವರ ಸಿಡಿಲಬ್ಬರದ ಅರ್ಧ ಶತಕಗಳ ಜತೆಗೆ ವೈಭವ್ ಶರ್ಮಾ (9ಕ್ಕೆ3) ಹುಬ್ಬಳ್ಳಿ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರವಹಿಸಿದರು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ಸೋಮವಾರ ಮಳೆಯಿಂದಾಗಿ 15 ಓವರ್‌ಗಳಿಗೆ ಕಡಿತಗೊಂಡ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಗುಲ್ಬರ್ಗ 6 ವಿಕೆಟ್ ನಷ್ಟಕ್ಕೆ 139 ರನ್ ಕಲೆಹಾಕಿತು. ಇದಕ್ಕುತ್ತರವಾಗಿ ಹುಬ್ಬಳ್ಳಿ ತಂಡ 12.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 143 ರನ್ ಪೇರಿಸಿ ಟೂರ್ನಿಯಲ್ಲಿ 2ನೇ ಜಯ ದಾಖಲಿಸಿತು.

ಆರಂಭಿಕರಾಗಿ ಕಣಕ್ಕಿಳಿದ ಮಯಂಕ್ ಮತ್ತು ತಹಾ ಮುರಿಯದ ಮೊದಲ ವಿಕೆಟ್‌ಗೆ 143 ರನ್ ಪೇರಿಸಿ ತಂಡದ ಸುಲಭ ಗೆಲುವಿಗೆ ನೆರವಾದರು. ಇದಕ್ಕೂ ಮುನ್ನ ವೈಭವ್ ಅವರ ಶಿಸ್ತಿನ ದಾಳಿಗೆ ತತ್ತರಿಸಿದ ಹೊರತಾಗಿಯೂ ಗುಲ್ಬರ್ಗ ತಂಡ ಶಿಪ್ಪಾ ರೆಡ್ಡಿ (51; 34 ಎಸೆತ, 6 ಫೋರ್, 2 ಸಿಕ್ಸರ್) ಮತ್ತು ಮನೀಶ್ ಪಾಂಡೆ (35) ಅವರ ಬಿರುಸಿನ ಆಟದಿಂದ ಪೈಪೋಟಿ ಮೊತ್ತ ಕಲೆಹಾಕಿತು.

ಸಂಕ್ಷಿಪ್ತ ಸ್ಕೋರ್: ಗುಲ್ಬರ್ಗ ಮಿಸ್ಟಿಕ್ಸ್: 15 ಓವರ್‌ಗಳಲ್ಲಿ 6 ವಿಕೆಟ್‌ಗೆ 139., ಹುಬ್ಬಳ್ಳಿ ಟೈಗರ್ಸ್: 12.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 143.

ವೈಭವ್ ಶರ್ಮಾ

ಶ್ರೀಕಾಂತ್‌ಗೆ ರನ್ನರ್ ಅಪ್ ಸ್ಥಾನ

ಫುಲ್ಲೆರ್ಟನ್ (ಯುಎಸ್‌ಎ): ಕಿಡಂಬಿ ಶ್ರೀಕಾಂತ್ ಯುಎಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರನ್ನರ್ ಅಪ್ ಸ್ಥಾನದೊಂದಿಗೆ ಅಭಿಯಾನ ಕೊನೆಗೊಳಿಸಿದ್ದಾರೆ.

ಯುಎಸ್ ಓಪನ್ ಬ್ಯಾಡ್ಮಿಂಟನ್

ಭಾನುವಾರ ತಡರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಭಾರತೀಯ ಆಟಗಾರ ಶ್ರೀಕಾಂತ್, 15-21, 21-16, 9-21 ಗೇಮ್‌ಗಳಿಂದ ಚೈನೀಸ್ ತೈಪೆಯ ಸು ಲಿ ಯಾಂಗ್ ವಿರುದ್ಧ ವೀರೋಚಿತ ಸೋಲನುಭವಿಸಿದರು. 2021ರ ವಿಶ್ವ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತ 33 ವರ್ಷದ ಶ್ರೀಕಾಂತ್, ಆರಂಭಿಕ ಗೇಮ್‌ನಲ್ಲಿ ನಿರಾಸೆ ಕಂಡರು. ಆದರೆ ದ್ವಿತೀಯ ಗೇಮ್‌ನಲ್ಲಿ ಮೇಲುಗೈ ಸಾಧಿಸಿದರು. ನಿರ್ಣಾಯಕ ಗೇಮ್‌ನಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ವಿಫಲಗೊಂಡ ಅವರು ತಮಗಿಂತ 9 ವರ್ಷ ಕಿರಿಯ ಆಟಗಾರನ ಎದುರು ಮಂಡಿಯೂರಿದರು.



ಇಂದಿನಿಂದ ಕೆನಡಾ ಓಪನ್

ಮರ್ಖಾಮ್ (ಕೆನಡಾ): ಕಿಡಂಬಿ ಶ್ರೀಕಾಂತ್ ಮಂಗಳವಾರ ಇಲ್ಲಿ ಆರಂಭವಾಗಲಿರುವ ಕೆನಡಾ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ದೇಶದ ಸವಾಲನ್ನು ಮುನ್ನಡೆಸಲಿದ್ದು, ಸ್ಫೂರ್ತಿದಾಯಕ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ.

ಮಾನಸಿಕ ಚುರುಕುತನಕ್ಕೆ ಅಣಬೆ



ಮನೋದೈಹಿಕ ಆರೋಗ್ಯಕ್ಕೆ ವರದಾನವಾಗಿರುವ ಅಣಬೆ ಈಗ ವೆಲ್ನೆಸ್ ಕ್ಷೇತ್ರದಲ್ಲಿ ಗುರುತಿಸಿಕೊಂಡಿದೆ.

ಮಳೆಗಾಲ ಅಂದರೆ ಮಲೆನಾಡಲ್ಲಿ ಅಣಬೆಗಳ ಸಡಗರ. ವೈವಿಧ್ಯಮಯ ಅಣಬೆಗಳು ಹಾಗೂ ಅವುಗಳ ಖಾದ್ಯಗಳ ತಯಾರಿಯ ಸಡಗರ ಗರಿಗೆದರುತ್ತದೆ. ಆದರೆ ಅಣಬೆ ಈಗ ನಿಗದಿತ ಕಾಲ, ಪ್ರದೇಶಕ್ಕೆ ಸೀಮಿತವಾಗಿಲ್ಲ. ನಗರ ಪ್ರದೇಶದಲ್ಲಿ ಕೂಡ ಕೃಷಿಯಾಗಿ ಗುರುತಿಸಿಕೊಂಡಿರುವ ಅಣಬೆ ವೆಲ್ನೆಸ್ ಕ್ಷೇತ್ರದಲ್ಲಿ ಈಗ ಭರ್ಜರಿ ಸದ್ದು ಮಾಡುತ್ತಿದೆ. ಮನೋದೈಹಿಕ ಆರೋಗ್ಯ ವೃದ್ಧಿಸುವ ಸೂಪರ್ ಫುಡ್ ಆಗಿ ಇದು ಗುರುತಿಸಿಕೊಂಡಿದೆ.

ಸಾಮಾನ್ಯ ಆಹಾರ ಪದಾರ್ಥ ಎನಿಸಿಕೊಂಡಿದ್ದ ಅಣಬೆ, ಇಂದು ತನ್ನ ಅದ್ಭುತ ಔಷಧೀಯ ಗುಣ ಹಾಗೂ ವೈವಿಧ್ಯಮಯ ರುಚಿಯಿಂದಾಗಿ ಜಾಗತಿಕ ವೆಲ್‌ನೆಸ್ ಉದ್ಯಮದಲ್ಲಿ ಮುಂಚೂಣಿಯಲ್ಲಿದೆ.

ಮಾನಸಿಕ ಆರೋಗ್ಯಕ್ಕೆ ಪೂರಕ: ಮಾನಸಿಕ ಚುರುಕುತನವನ್ನು ಹೆಚ್ಚಿಸುವ ಆಹಾರವಾಗಿ ಇದನ್ನು ಪರಿಗಣಿಸಲಾಗಿದ್ದು, ಕೆಲವು ಬಗೆಯ ಅಣಬೆಗಳು ಮಾನಸಿಕ ಆರೋಗ್ಯ ವರ್ಧನೆಯಲ್ಲಿ ಪ್ರಮುಖ ಸ್ಥಾನದಲ್ಲಿವೆ. ನೆನಪಿನ ಶಕ್ತಿ, ಏಕಾಗ್ರತೆ ಮತ್ತು ಮಿದುಳಿನ ಆರೋಗ್ಯವನ್ನು ವೃದ್ಧಿಸಲು ಅಣಬೆ ರಾಮಬಾಣ. ಮಾನಸಿಕ ಶಾಂತಿ ಮತ್ತು ನಿಶ್ಚಿಂತ ನಿದ್ರೆಗೆ ಸಹಕಾರಿ. ಹೀಗಾಗಿ ಮಾನಸಿಕ ಆರೋಗ್ಯವನ್ನು ಕಾಪಾಡಲು ಇದು ಪ್ರಮುಖ ಪಾತ್ರ ವಹಿಸುತ್ತಿದೆ. ಈ ನಿಟ್ಟಿನಲ್ಲಿ ನಿತ್ಯದ ಬದುಕಿನ ಒತ್ತಡದಿಂದ ಹೊರಬರುವ ಮಾರ್ಗವಾಗಿಯೂ ಅಣಬೆ ಖಾದ್ಯಗಳತ್ತ ಜನ ಅಭಿರುಚಿ ಬೆಳೆಸಿಕೊಳ್ಳುತ್ತಿದ್ದಾರೆ.

ದೇಹಕ್ಕೆ ಹಿತ: ಹಲವು ಪೋಷಕಾಂಶಗಳನ್ನು ಒಳಗೊಂಡ ಅಣಬೆ ದೈಹಿಕ ಆರೋಗ್ಯಕ್ಕೆ ಟಾನಿಕ್ ಇದ್ದ ಹಾಗೆ. ಅಣಬೆಗಳಲ್ಲಿರುವ ಸಂಯುಕ್ತಗಳು ದೇಹದ ಆಕ್ಸಿಡೇಟಿವ್ ಒತ್ತಡವನ್ನು ಕಡಿಮೆ ಮಾಡಿ ರಕ್ತದಲ್ಲಿನ ಸಕ್ಕರೆ ಪ್ರಮಾಣ ಹಾಗೂ ಕೊಲೆಸ್ಟ್ರಾಲ್ ಮಟ್ಟವನ್ನು ಸಮತೋಲನದಲ್ಲಿಡಲು ಸಹಾಯ ಮಾಡುತ್ತವೆ. ಸಸ್ಯ ಆಧರಿತ ಪ್ರೊಟೀನ್‌ಗೆ ಅಣಬೆ ಅತ್ಯುತ್ತಮ ಆಯ್ಕೆ. ಬರ್ಗರ್, ಪಾಸ್ತಾ ಮತ್ತು ಪಿಜ್ಜಾಗಳಲ್ಲಿ ಮಾಂಸದ ಬದಲಿಗೆ ಅಣಬೆಯನ್ನು ಬಳಸುತ್ತಿದ್ದಾರೆ. ಇದು ಸ್ಯಾಚುರೇಟೆಡ್ ಫ್ಯಾಟ್ ಮತ್ತು ಸೋಡಿಯಂ ಪ್ರಮಾಣವನ್ನು ಕಡಿಮೆ ಮಾಡಲು ನೆರವಾಗುತ್ತದೆ.

ಪಾನೀಯಗಳ ಸೊಬಗು: ಅಣಬೆ ಮತ್ತು ಗಿಡಮೂಲಿಕೆಗಳ ವೆಲ್ನೆಸ್ ಟೀ ಗಮನ ಸೆಳೆಯುತ್ತಿದ್ದು, ಇದು ಇತ್ತೀಚಿನ ಅತ್ಯಂತ ಜನಪ್ರಿಯ ಟ್ರೆಂಡ್. ಅಣಬೆಯ ಒಣ ಪುಡಿಯನ್ನು ಬಿಸಿ ನೀರು, ಶುಂಠಿ, ಏಲಕ್ಕಿ ಮತ್ತು ಸ್ವಲ್ಪ ಜೇನುತುಪ್ಪದೊಂದಿಗೆ ಕುದಿಸಿ ತಯಾರಿಸುವ ಚಹಾ ಆಹ್ಲಾದಕರ. ದಿನದ ಒತ್ತಡವನ್ನು ಕ್ಷಣದಲ್ಲಿ ದೂರ ಮಾಡುತ್ತದೆ.

ಅದೇ ರೀತಿ ಕಾಫಿಗೆ ಪರ್ಯಾಯವಾಗಿ ಮಶ್ರೂಮ್ ಕಾಫಿ ಕೂಡ ಈಗ ಮಾರುಕಟ್ಟೆಯಲ್ಲಿ ಸದ್ದು ಮಾಡುತ್ತಿದೆ. ಇನ್ನೂ ವಿಭಿನ್ನ ಖಾದ್ಯ ಪ್ರಯೋಗಗಳಿಗೆ ತನ್ನನ್ನು ಒಡ್ಡಿಕೊಂಡಿರುವ ಅಣಬೆ ಈಗ ಸರ್ವಋತುವಿನಲ್ಲೂ ನೆಚ್ಚಿನ ಆರೋಗ್ಯಕರ ಆಹಾರ ಪದಾರ್ಥ ಎನಿಸಿಕೊಂಡಿದೆ. ■

100 ಗ್ರಾಂ ಬಿಳಿ ಅಣಬೆಗಳಲ್ಲಿರುವ ಪೋಷಕಾಂಶಗಳ ವಿವರ

ಪೋಷಕಾಂಶಗಳು	ಪ್ರಮಾಣ	ಪ್ರಯೋಜನ
ಕ್ಯಾಲೊರಿ	22	ತೂಕ ಇಳಿಸಲು ಸಹಕಾರಿ
ನೀರಿನಂಶ	ಶೇ. 92	ದೇಹವನ್ನು ಹೈಡ್ರೇಟ್ ಆಗಿಡುತ್ತದೆ
ಪ್ರೊಟೀನ್	3.1 ಗ್ರಾಂ	ಸ್ನಾಯುಗಳ ಬೆಳವಣಿಗೆಗೆ ಉತ್ತಮ
ಕಾರ್ಬೋಹೈಡ್ರೇಟ್ಸ್	3.3 ಗ್ರಾಂ	ದೇಹಕ್ಕೆ ಶಕ್ತಿ ನೀಡುತ್ತದೆ
ನಾರಿನಂಶ	1.0 ಗ್ರಾಂ	ಜೀರ್ಣಕ್ರಿಯೆಯನ್ನು ಉತ್ತಮಗೊಳಿಸುತ್ತದೆ
ಕೊಬ್ಬು	0.3 ಗ್ರಾಂ	ಡಯಟ್ ಮಾಡುವವರಿಗೆ ಅನುಕೂಲ

ಲವಲVK CELEBRITY ಸ್ಟೈಲ್

ನತಾಶಾ ಸೀರೆ ಜಾಕೆಟ್ ವಿಶೇಷ

ನಟಿ ನತಾಶಾ ಅವರ ಸೀರೆ ಜಾಕೆಟ್ ಲುಕ್ ಗಮನ ಸೆಳೆದಿದೆ. ಸಿಲ್ವರ್ ಜರಿ ಸೀರೆ ಮೇಲೆ ಅವರು ವರ್ಣರಂಜಿತ ಜಾಕೆಟ್ ಹಾಕಿದ್ದು, ಅದಕ್ಕೆ ಪೂರಕವಾಗಿ ಧರಿಸಿದ ಸಾಂಪ್ರದಾಯಿಕ ಆಭರಣಗಳು, ಕನ್ನಡಕ ಎಲ್ಲವೂ ವಿಭಿನ್ನ ಸಂಯೋಜನೆಯೊಂದಿಗೆ ಅವರ ಲುಕ್ ಮೋಡಿ ಮಾಡಿದೆ. ಈ ಉಡುಗೆಯ ಪ್ರಮುಖ ಆಕರ್ಷಣೆಯೆಂದರೆ ರೇಷ್ಮೆ ಸೀರೆಯ ಸಾಂಪ್ರದಾಯಿಕ ಚೌಕಟ್ಟನ್ನು ಸಂಪೂರ್ಣವಾಗಿ ಬದಲಾಯಿಸಿರುವುದು. ಸಾಮಾನ್ಯವಾಗಿ ಇಂತಹ ಜರಿ ಸೀರೆಗಳಿಗೆ ಸಾಂಪ್ರದಾಯಿಕ ಕಸೂತಿ ಕೆಲಸದ ರವಿಕೆಗಳನ್ನು ಬಳಸಲಾಗುತ್ತದೆ. ಆದರೆ ಇಲ್ಲಿ ಬಳಸಲಾದ ಎಂಬತ್ತರ ದಶಕದ ಜಾಕೆಟ್ ತನ್ನ ಕಲಾತ್ಮಕ ಆಕಾರದಿಂದಾಗಿ ಸೀರೆಗೆ ಹೊಸ ಗಾಂಭೀರ್ಯ ನೀಡಿದೆ. ಅವರು ಧರಿಸಿದ ನಿಯೋ ಹೆರಿಟೇಜ್ ಒಡವೆಗಳು ವಿಶೇಷ ಆಕರ್ಷಣೆ. ಇವು ರಾಜಮನೆತನದ ಆಭರಣಗಳ ವಿನ್ಯಾಸವನ್ನು ಹೋಲುತ್ತಿದ್ದರೂ ಆಧುನಿಕ ಉಡುಪುಗಳಿಗೂ ಒಪ್ಪುವಂತೆ ಹಗುರವಾಗಿ ಮತ್ತು ವಿಶಿಷ್ಟವಾಗಿ ರೂಪಿಸಲ್ಪಟ್ಟಿವೆ. ಸಾಂಪ್ರದಾಯಿಕ ಚಿನ್ನ ಮತ್ತು ವಜ್ರದ ಒಡವೆಗಳಿಗೆ ಸಮಕಾಲೀನ ಸ್ಪರ್ಶ ನೀಡುವುದೇ ಈ ಆಭರಣಗಳ ವಿಶೇಷತೆ. ■

ಘೀ ರೋಸ್ಟ್‌ಗೆ ರುಚಿ ಬರಿಸುವ ಟ್ರಿಕ್ಸ್

ಲವಲVK ಕಿಚನ್ TIPS

ಚಿಕನ್ ಘೀ ರೋಸ್ಟ್ ನೋಡಲು ಮಾತ್ರವಲ್ಲ, ತಿನ್ನಲೂ ರುಚಿಕರ. ಕರಾವಳಿ ಪ್ರದೇಶದ ಸಾಂಪ್ರದಾಯಿಕ ಖಾದ್ಯವಾದ ಇದನ್ನೀಗ ಎಲ್ಲಾ ಭಾಗದವರೂ ಮಾಡುತ್ತಾರಾದರೂ ಅಪ್ಪಟ ಸ್ಥಳೀಯ ರುಚಿಯ ಘೀ ರೋಸ್ಟ್ ಸವಿಯಬೇಕಿದ್ದರೆ ಕೆಲವು ಪ್ರಮುಖ ವಿಷಯಗಳನ್ನು ಗಮನದಲ್ಲಿಡಬೇಕು.

- ಚಿಕನ್ ಘೀ ರೋಸ್ಟ್‌ಗೆ ಮೂಳೆಯಿರುವ ಮಾಂಸವನ್ನೇ ಬಳಸಿ. ಇದು ಬೇಯುವಾಗ ತೇವಾಂಶ ಉಳಿಸಿಕೊಂಡು ಮಸಾಲೆ ಫ್ಲೇವರ್‌ಗಳನ್ನು ಚೆನ್ನಾಗಿ ಹೀರಿಕೊಳ್ಳುತ್ತದೆ.
- ಈ ಖಾದ್ಯಕ್ಕೆ ಬ್ಯಾಡಗಿ ಮೆಣಸಿನಕಾಯಿ ಬಳಸಿದರೆ ಮಾತ್ರ ಅದಕ್ಕೆ ಕೆಂಪು ಸಿಗ್ನೇಚರ್ ಬಣ್ಣ ಬರುತ್ತದೆ. ಬೇರೆ ತಳಿಯ ಮೆಣಸಿನಕಾಯಿ ಇದಕ್ಕೆ ಸೂಕ್ತವಾಗುವುದಿಲ್ಲ. ಬ್ಯಾಡಗಿ ಮೆಣಸಿನಕಾಯಿಗಳನ್ನು ತುಸು ಬೆಚ್ಚನೆಯ ನೀರಿನಲ್ಲಿ ಸ್ವಲ್ಪ ಹೊತ್ತು ನೆನೆಸಿಟ್ಟು ನಂತರ ಅದನ್ನು ನುಣ್ಣಗೆ ಅರೆದು ಪೇಸ್ಟ್ ಮಾಡಿ ಬಳಸಿ. ಈ ಮೆಣಸಿನಲ್ಲಿರುವ ತುಸು ಸಿಹಿ ರುಚಿ ಈ ಖಾದ್ಯಕ್ಕೆ ಸಮತೋಲಿತ ಸ್ವಾದ ನೀಡುತ್ತದೆ.
- ಘೀ ರೋಸ್ಟ್‌ಗೆ ಬಳಸುವ ಮಸಾಲೆ ಪದಾರ್ಥಗಳನ್ನು ಹದವಾಗಿ ಹುರಿಯುವುದು ಕೂಡ ಅತ್ಯಗತ್ಯ. ತುಪ್ಪಕ್ಕೆ ಹಾಕಿದ ಮಸಾಲೆ ಸಾಮಗ್ರಿಗಳನ್ನು ಸಣ್ಣ ಉರಿಯಲ್ಲಿ ಹುರಿಯಿರಿ. ಇದರಿಂದಾಗಿ ಅವುಗಳಲ್ಲಿರುವ ಸುಗಂಧ ತೈಲ ಮತ್ತು ಪರಿಮಳ ಹೊರಹೊಮ್ಮುತ್ತವೆ. ಈ ಪದಾರ್ಥಗಳನ್ನು ಆವಸರದಿಂದ ಬೇಗ ಬೇಗನೆ ಹುರಿದು ತೆಗೆದರೆ ಆದರ ಮಸಾಲೆ ಹಸಿ ವಾಸನೆ ಅಥವಾ ಸೀದಿರುವ ವಾಸನೆ ಬೀರುತ್ತದೆ. ಚೆನ್ನಾಗಿ ಹುರಿದ ಮಸಾಲೆಯೇ ಘೀ ರೋಸ್ಟ್‌ನ ಪ್ರಮುಖ ಗುಟ್ಟು.
- ಚಿಕನ್ ಘೀ ರೋಸ್ಟನ್ನು ಸ್ಲೋ ಕುಕ್ಕಿಂಗ್‌ನಲ್ಲೇ ಬೇಯಿಸಿ. ಇದು ಆವಸರದಿಂದ ಮಾಡುವ ಖಾದ್ಯವಲ್ಲ. ಮಸಾಲೆ ಪದಾರ್ಥಗಳನ್ನು ಹೀರಿಕೊಂಡು ಮಾಂಸ ನಿಧಾನವಾಗಿ ಬೆಂದರೇನೇ ಈ ಖಾದ್ಯಕ್ಕೆ ಅಸಲಿ ರುಚಿ ಬರುವುದು. ■



ವಿಜಯಬಂಧ - 7993



ಎಡದಿಂದ ಬಲಕ್ಕೆ

1 ಬಂಧದ ಸಂಬಂಧ ಕೊನೆಯದಾಗಿ ಪರಿಣಮಿಸಿದೆ 5
4 ದೇಶಕ್ಕೆ ಪ್ರಧಾನಮಂತ್ರಿ ನೀಡುವ ಮುಖ್ಯ ವಿಷಯು 3
5 ಯಾವುದೂ ಶಾಶ್ವತವಲ್ಲ 3
7 ಮಂಕರಿಯಲ್ಲಿ ಕುಳಿತು ಬಂದ ಮೊಸಳೆ 3
9 ಆತನು ಮದನನಲ್ಲಿ ಕಂಡ ದೇಹ ಹಾಗೂ ಭಾವ 4
11 ನಾಟಕದಲ್ಲಿ ಬರುವ ಹಾಸ್ಯಗಾರ ವಿಷ ಸೇವಿಸಿದ 4
13 ಅವನ ವಯಸ್ಸಿಗೆ ಇರಬೇಕಾದ ಅಂಗಾಂಗ 4
15 ಮೊಗದ ಮುಂದೆ ಸರ ತೋರಿಸಿ ಕಸಿದು ಹೋದ ವಂಚಕ 4
17 ನಿಜವಾಗಿಯೂ ಜನಿಸಿದಾಗ ಆವರಿಸಿದ ಕತ್ತಲೆ 3
19 ಭರತ ಜತನವಾಗಿರಿಸಿಕೊಂಡ ಬೆಳ್ಳಿ 3
21 ಬಾಲವನ್ನು ಸಿಕ್ಕಿಸಿಕೊಂಡ ಹುಡುಗ 3
22 ಕಾವ್ಯ ರಚಿಸುವಾತನ ಊಹೆ 5

ಮೇಲಿನಿಂದ ಕೆಳಕ್ಕೆ

1 ಅಂಶುಮತಿಯಲ್ಲಿ ಉಳಿದುಕೊಂಡ ಭಾಗ 2
2 ಮರುಗಳಿಗೆಯೇ ಮೂಡಿದ ಪಶ್ಚಾತ್ತಾಪ 3
3 ಬಂಧನದಲ್ಲಿರುವಾಗ ಸಂಪಾದನೆ ಮಾಡಿದ ಹಣ 2
4 ಸಂತ ಕೇಳಿದ ರಾಗಾಲಾಪ 3
6 ಕಾಪಾಡುವಾತ ಈ ಪೊಲೀಸ್ 3
7 ನಮಸ್ಕರಿಸಲು ಹಾತೊರೆಯುವ ಚಿತ್ತ 2
8 ಭಾರವಿಟ್ಟು ಕರೆದಾಗ ಉದಯಿಸಿದ ಸೂರ್ಯ 2
10 ಆಲಯದ ಬದಿ ಇರುವ ಸಪ್ತಕುಲ ಪರ್ವತದಲ್ಲಿ ಒಂದು 3
12 ದೂರದಿಂದ ವಾಸನೆಯಲ್ಲೇ ಗೊತ್ತಾದವನು ಈ ಋಷಿ 3
13 ಅಬ್ಬಬ್ಬ ಎನಿಸುವಂತಹ ಗಲಭೆ 3
14 ಭರವಸೆಯನ್ನು ನೀಡಿದ ಅನುಗ್ರಹ 2
15 ಮೌನ ವ್ರತವನ್ನು ಪಾಲಿಸುವ ತಪಸ್ವಿ 2
16 ರಜತ ಪಾತ್ರೆಯನ್ನು ಹೊಂದಿದ ಬಟ್ಟೆ ತೊಳೆಯುವವನು 3
18 ಜನರ ಕನಸುಗಳಿಂದ ತುಂಬಿದ ತಂದೆ 3
20 ತಕರಾರು ಮಾಡದೆ ಕುಣಿದ ಬಗೆ 2
21 ಲೋಹದಲ್ಲಿ ಮಾಡಿದ ಅಗಲವಾದ ಪಾತ್ರೆ 2

ವಿಜಯಬಂಧ | 7992

ಎಡದಿಂದ ಬಲಕ್ಕೆ: 2.ಗತವೈಭವ 6.ಮಹಿಮ 7.ಚತುರ 8.ನರ 10.ಗಾನ 11.ಸರ 13.ಮನೆ 14.ಸಾಮಂತ 15.ಸಮಾನ 16.ಆಲ 17.ನಗ 19.ಸರಿ 20.ರವ 22.ಮಯೂರ 24.ಜೀವನ 25.ದಿವಸಕರ.

ಮೇಲಿನಿಂದ ಕೆಳಕ್ಕೆ: 1.ಸಮರಸ 2.ಗಮನ 3.ವೈರಿ 4.ವಚನ 5.ಅರಮನೆ 9.ರಜತಗಿರಿ 10.ಗಾಳಿಸಮರ 12.ರಸಾಲ 13.ಮನನ 16.ಆಗಮನ 18.ಗಜಾನನ 19.ಸರದಿ 21.ವಜೀರ 23.ವ್ಯಾಸ.

ಅ.ನಾ. ಪ್ರಹ್ಲಾದರಾವ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ಕನ್ಯಾ, ಕುಂಭ ರಾಶಿಯವರಿಗೆ ದಶ ಸಂಧಿ ಯೋಗ

ಮೇಷ: ಹೋಟೆಲ್ ಉದ್ಯಮದವರಿಗೆ ಅಥವಾ ಬೇಕರಿಯವರಿಗೆ ಸ್ಪರ್ಧಾಳುಗಳು ಹುಟ್ಟಿಕೊಂಡು ವ್ಯಾಪಾರಕ್ಕೆ ಹಿನ್ನಡೆಯಾಗಬಹುದು. ನಿಮ್ಮ ಕೆಲಸದಲ್ಲಿ ಗುಣಮಟ್ಟ ಕಾಯ್ದುಕೊಂಡಲ್ಲಿ ಅಭಿವೃದ್ಧಿ ಖಚಿತ. **ಶುಭ ಸಂಖ್ಯೆ:** 1, **ಬಣ್ಣ:** ಕಂದು
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಎಲ್ಲ ವಿಷಯಗಳಲ್ಲೂ ಸಮಾಧಾನದಿಂದ ಇರುವುದು ಉತ್ತಮ. ಲೇವಾದೇವಿ ವ್ಯವಹಾರದಲ್ಲಿ ಅಡ್ಡಿ ಎದುರಾದರೆ ದುರ್ಗಾದೇವಿ ಆರಾಧನೆಯಿಂದ ಸಹಜವಾಗಿ ಮುಂದುವರಿಯುತ್ತದೆ. **ಶುಭ ಸಂಖ್ಯೆ:** 3, **ಬಣ್ಣ:** ಆಕಾಶ ನೀಲಿ
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಗುರು ವಾಕ್ಯ ಪರಿಪಾಲನೆ ಮಾಡುವುದನ್ನು ಮರೆಯದಿರಿ. ಯೋಜನೆಗಳಲ್ಲಿ ಮುಂದಾಳತ್ವ ವಹಿಸಿ. ನಿಮ್ಮ ತಂಡ ಎದುರಿಸುತ್ತಿರುವ ಪ್ರಮುಖ ತೊಂದರೆ ನಿವಾರಣೆ ಮಾಡುವ ಸಾಮರ್ಥ್ಯ ನಿಮಗೆ ಸಿಗಲಿದೆ. **ಶುಭ ಸಂಖ್ಯೆ:** 9, **ಬಣ್ಣ:** ಕೆಂಪು
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಆಹಾರ ಪದ್ಧತಿಯನ್ನು ನಿಯಂತ್ರಿಸಿಕೊಂಡು ರಕ್ತದೊತ್ತಡ ಸ್ಥಿತಿ ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳುವುದು ಉತ್ತಮ. ಧಾರ್ಮಿಕ ಕೆಲಸ-ಕಾರ್ಯಗಳಲ್ಲಿ ಅವಕಾಶ ಸಿಗುವುದು ಮತ್ತು ಆಸಕ್ತಿಯೂ ಹೆಚ್ಚಲಿದೆ. **ಶುಭ ಸಂಖ್ಯೆ:** 7, **ಬಣ್ಣ:** ಹಸಿರು
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಸಹೋದರರಲ್ಲಿನ ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದಾರೆ. ತಂದೆಯವರ ಮಾತಿನಂತೆ ನಡೆಯುವುದು ಉತ್ತಮ. ಹೆಂಡತಿಯ ಆರೋಗ್ಯದಲ್ಲಿ ಸಾಕಷ್ಟು ಬದಲಾವಣೆ ಆಗಬಹುದು. **ಶುಭ ಸಂಖ್ಯೆ:** 9, **ಬಣ್ಣ:** ಖಾಕಿ
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಮೇಲುಸ್ತುವಾರಿ ನೋಡುವ ಹುದ್ದೆಯವರಿಗೆ ಕೆಲಸಗಾರರ ಹೊಂದಾಣಿಕೆಯು ತಲೆನೋವು ತರಲಿದೆ. ಕೃಷಿ ಕ್ಷೇತ್ರದಲ್ಲಿನ ಚೇತರಿಕೆಯು ರೈತರಿಗೆ ನೆಮ್ಮದಿ ತರುವುದು. ತರಕಾರಿ ಮಾರಾಟಗಾರರಿಗೆ ಶುಭದಿನ. **ಶುಭ ಸಂಖ್ಯೆ:** 2, **ಬಣ್ಣ:** ಕಂಚು
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಬಹು ನಿರೀಕ್ಷಿತವಾದ ಫಲಿತಾಂಶ ಇಂದು ಬರಲಿದೆ. ಯಶಸ್ಸು ಮತ್ತು ಉತ್ತಮ ಹೆಸರು ಈ ದಿನ ಒಲಿದು ಬರಲಿದೆ. ಕೂದಲು ಉದುರುವಿಕೆ ಚಿಂತೆಯನ್ನು ಉಂಟು ಮಾಡಬಹುದು. **ಶುಭ ಸಂಖ್ಯೆ:** 4, **ಬಣ್ಣ:** ಸಿಂಧೂರ ಕೆಂಪು
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಸುಖ-ದುಃಖ, ಲಾಭ-ನಷ್ಟಗಳೆರಡು ಸಮಾನವಾಗಿದ್ದರೂ ಪ್ರತಿಷ್ಠಿತ ಜನರ ಸಹಕಾರದಿಂದ ಸುಧಾರಣೆ ಕಂಡುಬರಲಿದೆ. ಮಗಳ ಮದುವೆಯ ವಿಚಾರದಲ್ಲಿ ಈ ದಿನ ನೀವು ಇಡುವ ಹೆಜ್ಜೆ ಪ್ರಮುಖವಾಗಿರುತ್ತದೆ. **ಶುಭ ಸಂಖ್ಯೆ:** 6, **ಬಣ್ಣ:** ಬಿಳಿ.
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಈ ಹಿಂದೆ ಕೈಗೊಂಡ ನಿರ್ಧಾರಗಳಲ್ಲಿ ಕೆಲ ಮಾರ್ಪಾಡು ಮಾಡಿಕೊಂಡರೆ ಉತ್ತಮ ಧನ ಲಾಭವನ್ನು ಕಾಣಬಹುದು. ರಾತ್ರಿಯ ಸಮಯದಲ್ಲಿ ಪ್ರಯಾಣ ಮಾಡುವುದು ಒಳ್ಳೆಯದಲ್ಲ. **ಶುಭ ಸಂಖ್ಯೆ:** 8, **ಬಣ್ಣ:** ಕಪ್ಪು
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ಮನೆಯ ವಿಸ್ತರಣೆ ವಿಚಾರದಲ್ಲಿ ಆಲೋಚನೆಗಳು ಗರಿಗೆದರಲಿವೆ. ಎಲ್ಲವೂ ನಿಮ್ಮಿಚ್ಛೆಯಂತೆ ನಡೆಯಲಿವೆ. ಸರಿಯಾದ ಮಾರ್ಗವನ್ನು ರೂಪಿಸಿಕೊಳ್ಳಿ. ಆಭರಣ ವ್ಯಾಪಾರಿಗಳಿಗೆ ಧನ ಲಾಭ ಪ್ರಾಪ್ತಿ. **ಶುಭ ಸಂಖ್ಯೆ:** 9, **ಬಣ್ಣ:** ನೀಲಿ
(ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಸ್ವ ಉದ್ಯೋಗಿಗಳು ಕೈ ತಪ್ಪಿದ ಅವಕಾಶಗಳನ್ನು ಪರಿಶ್ರಮದಿಂದ ಮರಳಿ ಪಡೆಯುವ ಪ್ರಯತ್ನ ಮಾಡಿ. ಕಾಫಿ ಮತ್ತು ಕಾಳು ಮೆಣಸಿನ ರಫ್ತು ವಹಿವಾಟು ಹೆಚ್ಚಲಿದೆ. ವಿದ್ಯಾಭ್ಯಾಸ ಪ್ರಗತಿ ಪಥದಲ್ಲಿ ನಡೆಯುವುದು. **ಶುಭ ಸಂಖ್ಯೆ:** 4, **ಬಣ್ಣ:** ಖಾಕಿ
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಅಪರಿಚಿತ ವ್ಯಕ್ತಿಗಳೊಂದಿಗೆ ನಿಮಗೆ ಸಂಬಂಧವಿಲ್ಲದ ವಿಚಾರದಲ್ಲಿ ವಾದ ಮಾಡುವುದು ಸರಿಯಲ್ಲ. ತಮ್ಮವರಿಂದಲೇ ತೋರಿ ಬರುವ ವಿರೋಧಗಳನ್ನು ಜಾಣ್ಮೆಯಿಂದ ನಿವಾರಿಸಿಕೊಳ್ಳುವುದು ಒಳ್ಳೆಯದು. **ಶುಭ ಸಂಖ್ಯೆ:** 7, **ಬಣ್ಣ:** ಹಳದಿ
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಲವಲVK

ರಿಷಬ್ ಶೆಟ್ಟಿ ಕುಟುಂಬ ಆಯೋಜಿಸಿದ್ದ ಯಕ್ಷಗಾನ ಪ್ರಸಂಗದಲ್ಲಿ ಅವರ ಮಗ ರಣ್ವಿತ್ ಇದೇ ಮೊದಲ ಬಾರಿಗೆ ಯಕ್ಷಗಾನ ಪಾತ್ರ ನಿರ್ವಹಿಸಿರುವ ವಿಡಿಯೊ ವೈರಲ್ ಆಗಿದೆ.

ನಟ ಸೂರ್ಯ 12 ವರ್ಷಗಳ ನಂತರ 'ವಿಶ್ವನಾಥ ಆ್ಯಂಡ್ ಸನ್ಸ್' ಸಿನಿಮಾದಲ್ಲಿ ಕೆನ್ ಕರುಣಾಸ್ ಬರೆದಿರುವ ಹಾಡಿಗೆ ಧ್ವನಿಯಾಗಿದ್ದಾರೆ 2014ರಲ್ಲಿ ಅವರು 'ಅಂಜಾನ್' ಚಿತ್ರದಲ್ಲಿ ಹಾಡಿದ್ದರು.

ಧ್ರುವ ಇನ್ ಆ್ಯಕ್ಷನ್ 2.0

'ಕೆಡಿ' ಸಿನಿಮಾ ಬಳಿಕ ನಟ ಧ್ರುವ ಸರ್ಜಾ ಮೊದಲಿಗಿಂತ ವೇಗವಾಗಿ ಹೊಸ ಪ್ರಾಜೆಕ್ಟ್ ಮುಗಿಸುವ ಉತ್ಸಾಹದಲ್ಲಿದ್ದಾರೆ. ಬ್ಯಾಕ್ ಟು ಬ್ಯಾಕ್ ಚಿತ್ರಗಳನ್ನು ಶುರು ಮಾಡುವ ಜೋಶ್‌ನಲ್ಲಿರುವ ಅವರು ಈ ಕುರಿತು ಲವಲvkಯೊಂದಿಗೆ ಮಾತನಾಡಿದ್ದಾರೆ.

ಕಿರಣ್ ಚಂದ್ರ
kiran.b@timesofindia.com

ನಟ ಧ್ರುವ ಸರ್ಜಾ ಎಂದರೆ ದೊಡ್ಡ ಬಜೆಟ್, ತುಂಬಾ ಸಮಯ ತೆಗೆದುಕೊಳ್ಳುತ್ತಾರೆ ಎಂಬ ಅಭಿಪ್ರಾಯವನ್ನು ಬ್ರೇಕ್ ಮಾಡಿರುವ ಅವರೀಗ ವರ್ಷಕ್ಕೆ ಎರಡು ಸಿನಿಮಾ ಕೊಡಲೇಬೇಕೆಂದು ಪಣ ತೊಟ್ಟಿದ್ದಾರೆ. ಇದರ ಮೊದಲ ಹೆಜ್ಜೆಯಾಗಿ ಅವರು 'ಕ್ರಿಮಿನಲ್' ಶೂಟಿಂಗ್ ಮುಗಿಸುವ ಜತೆಯಲ್ಲೇ ಹೊಸ ಸಿನಿಮಾಗೆ ದೇಹ ತೂಕ ಇಳಿಸಿಕೊಂಡು ತಯಾರಿ ನಡೆಸಿದ್ದಾರೆ. ಈ ಬಗೆಗೆ ಅವರು ನೀಡಿರುವ ವಿವರ ಇಲ್ಲಿದೆ:

'ಕ್ರಿಮಿನಲ್' ಸಿನಿಮಾ ಶೂಟಿಂಗ್ ಬಗ್ಗೆ ತಿಳಿಸಿ.

ನಾನಿನ್ನು 35 ದಿನಗಳ ಶೂಟಿಂಗ್ ಮಾಡಿದರೆ 'ಕ್ರಿಮಿನಲ್' ಮುಗಿಯುತ್ತದೆ. ಈವರೆಗೆ ಇದರ ಶೇ. 70ರಷ್ಟು ಚಿತ್ರೀಕರಣವಾಗಿದೆ. ಪೂರ್ತಿ ಸಿನಿಮಾದ 40 ದಿನಗಳ ಶೂಟಿಂಗ್ ಬಾಕಿ ಇದೆ. ಶಿರಸಿಯಲ್ಲಿ ಕೆಲವು ದಿನ ಮತ್ತು ಶಿಕಾರಿಪುರದಲ್ಲಿ 25 ದಿನಗಳ ಚಿತ್ರೀಕರಣ ಮಾಡಿದ್ದೇವೆ. ಇವೆಲ್ಲವನ್ನೂ ಲೈವ್ ಲೊಕೇಶನ್‌ಗಳಲ್ಲಿ ಯಾವುದೇ ಸೆಟ್ ಹಾಕದೆ ತುಂಬಾ ಕ್ಯಾಂಡಿಡ್ ಆಗಿ ಶೂಟ್ ಮಾಡಲಾಗುತ್ತಿದೆ. ಕೆಲವು ದೃಶ್ಯಗಳಿಗೆ ಗೆರಿಲ್ಲಾ ಶಾಟ್ಸ್ ಪ್ಲ್ಯಾನ್ ಮಾಡಿ ಚಿತ್ರೀಕರಿಸಿದ್ದೇವೆ. ನೈಜ ಜನಸಂದಣಿಯಲ್ಲೇ ಶೂಟಿಂಗ್ ಮಾಡುವ ಯೋಜನೆ ಇದೆ.

ಲವಲVK INTERVIEW

ಈ ಥರದ ಚಿತ್ರೀಕರಣಕ್ಕೆ ತಯಾರಿ ಹೇಗಿತ್ತು?

ನಾನು ಮತ್ತು ನಟಿ ರಚಿತಾ ರಾಮ್ ಇಬ್ಬರೂ ಒಂದು ವರ್ಕ್‌ಶಾಪ್ ಮಾಡಿದ್ದೆವು. ಅದು ಎಷ್ಟರ ಮಟ್ಟಿಗೆ ಎಂದರೆ ಕಾರು ಇಳಿದ ತಕ್ಷಣ ನಮ್ಮ ಮೇಲೆ ಎರಡು ಕ್ಯಾಮೆರಾ ಫೋಕಸ್ ಆಗಿರುತ್ತವೆ, ನಾವು ಡೈಲಾಗ್ ಹೇಳಿಕೊಂಡು ಶಾಟ್ ಮುಗಿಸುತ್ತೇವೆ. ಅದು ಸಹಜವಾಗಿ ಕಾಣಿಸುತ್ತದೆ ಎನ್ನುವುದು ನಮ್ಮ ಐಡಿಯಾ. ನೋಡುಗನಿಗೆ ಇದು ತನ್ನ ಸುತ್ತಲೇ ನಡೆಯುತ್ತಿರುವ ಕಥೆ ಅನಿಸಬೇಕು. ಪ್ರೊಡಕ್ಷನ್ ದೃಷ್ಟಿಯಲ್ಲಿಯೂ ಇದರಿಂದ ಹಣ, ಸಮಯ ವ್ಯರ್ಥವಾಗಲ್ಲ.

ಲೊಕೇಶನ್ ಆಯ್ಕೆ ಹೇಗೆ ನಡೆಯಿತು?

ಧ್ರುವ ಎಂದರೆ ದೊಡ್ಡ ಬಜೆಟ್ ಎನ್ನುವ ಪ್ಯಾಟರ್ನ್ ಅನ್ನು ನಾನು ಬ್ರೇಕ್ ಮಾಡಬೇಕಿತ್ತು. ಹಾಗಾಗಿ 'ಕ್ರಿಮಿನಲ್' ತುಂಬಾ ಕಡಿಮೆ ವೆಚ್ಚದಲ್ಲಿ ನಿರ್ಮಾಣವಾಗುತ್ತಿದೆ. 2015ರಲ್ಲಿ ನಡೆದ ನೈಜ ಘಟನೆ ಆಧರಿತ ಸಿನಿಮಾವಿದು. ಆ ಕಥೆಯಲ್ಲಿದ್ದ ಜೋಡಿ ಎಲ್ಲೆಲ್ಲಿ ಟ್ರಾವೆಲ್ ಮಾಡಿದ್ದರೋ ಅದೇ ಜಾಗ, ರಸ್ತೆಗಳಲ್ಲಿ ಯಥಾವತ್ತಾಗಿ ಇದರ ಶೂಟಿಂಗ್ ಮಾಡಲಾಗಿದೆ.

ಸ್ಟಾರ್ ನಟರಾಗಿರುವ ನೀವು ಮತ್ತು ರಚಿತಾ ಜನರ ಮಧ್ಯ ಹೇಗೆ ಶೂಟಿಂಗ್ ಮಾಡಿದ್ರಿ?

ಇದಕ್ಕಾಗಿ ಮೂರು ಕ್ಯಾಮೆರಾ ಬಳಸಿಕೊಳ್ಳಲಾಗಿತ್ತು. ಒಂದು ಕ್ಲೋಸಪ್‌ನಲ್ಲಿ, ಇನ್ನೊಂದು ವೈಡ್‌ನಲ್ಲಿ, ಮತ್ತೊಂದು ಫಾಲೋಅಪ್‌ನಲ್ಲಿರುತ್ತಿದ್ದವು. ಇದರಲ್ಲಿ ಕ್ಯಾಮೆರಾಗೆ ನೇರವಾಗಿ ನಿಂತು ನಟಿಸಿದ್ದು ಕಡಿಮೆ. ನಾವು ನಟಿಸುತ್ತಾ ಇರುತ್ತೇವೆ, ಕ್ಯಾಮೆರಾದಲ್ಲಿ ಹೇಗೆ ಸೆರೆಯಾಗುತ್ತದೆಯೋ ಹಾಗೆಯೇ ಅದು ಪ್ರೇಕ್ಷಕರಿಗೆ ನೋಡಲು ಸಿಗುತ್ತದೆ. ಎಷ್ಟು ವೇಗವಾಗಿ ಶೂಟಿಂಗ್ ಮಾಡಿದ್ದೇವೆ ಅಂದರೆ ನಾಳೆ ಅಥವಾ ಮುಂದಿನ ವಾರವೇ ರಿಲೀಸ್ ಮಾಡಬೇಕೆನ್ನುವಷ್ಟು ಧಾವಂತ ನಮ್ಮಲ್ಲಿತ್ತು. ನಂತರ ಒಂದು ಬ್ರೇಕ್ ತೆಗೆದುಕೊಳ್ಳಲಾಗಿತ್ತು. ಎಲ್ಲರ ಡೇಟ್ಸ್ ಹೊಂದಿಸುವುದು ಸವಾಲಾದ ಕಾರಣ ಹಗಲಿರುಳು ಚಿತ್ರೀಕರಣ ಮಾಡಲಾಗಿದೆ.

ನೀವು ಮತ್ತೆ ತೂಕ ಇಳಿಸಿಕೊಳ್ಳುತ್ತಿರುವುದೇಕೆ?

ಇದು ನನ್ನ ಹೊಸ ಸಿನಿಮಾಗೆ ತಯಾರಿ. ಆಗಸ್ಟ್‌ನಲ್ಲಿ ಇದರ ಮುಹೂರ್ತ ನಡೆಯಲಿದೆ. ಅದರ ನಿರ್ದೇಶಕರು ನನ್ನ ನಟನೆಯ 'ಬಹದ್ದೂರ್', 'ಭರ್ಜರಿ' ಸಿನಿಮಾಗಳಲ್ಲಿ ಇದ್ದಂಥ ಲವರ್ ಬಾಯ್ ಲುಕ್ ಬೇಕೆಂದರು. ಹಾಗಾಗಿ ದೇಹ ತೂಕ ಇಳಿಸುತ್ತಿದ್ದೇನೆ. ಇಲ್ಲಿಯವರೆಗೂ ಸುಮಾರು 22 ಕೆ.ಜಿ ತೂಕ ಇಳಿಸಿಕೊಂಡಿದ್ದೇನೆ.

ಪದೇಪದೆ ತೂಕದಲ್ಲಾಗುವ ಏರಿಳಿತದಿಂದ ಆರೋಗ್ಯ ಸಮಸ್ಯೆ ಅಗುವುದಿಲ್ಲವೇ?

ಈ ಥರ ಮಾಡುವಾಗ ಫ್ಯಾಟಿ ಲಿವರ್ ಒಂದೇ ಹೆಚ್ಚು ಸಮಸ್ಯೆಯಾಗುತ್ತದೆ. ಅದು ಗ್ರೇಡ್-2, ಗ್ರೇಡ್-3ವರೆಗೂ ಹೋಗಿ ಮತ್ತೆ ರಿವರ್ಸ್ ಆಗುತ್ತದೆ ಅಷ್ಟೇ. ಆದರೆ ಸಪ್ಲಿಮೆಂಟ್ಸ್, ಪ್ರೊಟೀನ್ ಯಾವುದೂ ತೆಗೆದುಕೊಳ್ಳದ ಕಾರಣ ಬದಲಾವಣೆಗಳಿಗೆ ದೇಹ ಬೇಗ ಹೊಂದಿಕೊಳ್ಳುತ್ತದೆ.

ನಿಮ್ಮ ಪ್ರಸ್ತುತ ಪರ್ಸನಾಲಿಟಿಗೆ ತಕ್ಕಂಥ ಕಥೆ ಬರುವುದಿಲ್ಲವೇ?

ಯಾರೇ ಬಂದರೂ ನಾನು ದಪ್ಪ ಆಗಬೇಕು ಅಥವಾ ಸಣ್ಣ ಆಗಬೇಕು ಎನ್ನುತ್ತಾರೆ. ನಿರ್ದೇಶಕರ ಕಲ್ಪನೆಯ ಪಾತ್ರಕ್ಕೆ ಸೂಕ್ತವಾಗಲು ನಾನೊಂದು ಪ್ರಯತ್ನ ಮಾಡುತ್ತೇನೆ ಅಷ್ಟೇ. ನಾವು ಹಣ ಪಡೆದು ಸಿನಿಮಾ ಮಾಡುವುದೇ ಅವರ ಕಲ್ಪನೆಗೆ ಮ್ಯಾಚ್ ಆಗಲು ಅಲ್ಲವೇ? ■

ಡಿಸೆಂಬರ್‌ನಲ್ಲಿ ಹೊಸ ಸಿನಿಮಾ

ಕನ್ನಡ ಸಿನಿಮಾ ಪ್ರೇಮಿಗಳು ಬಹುದಿನಗಳಿಂದ ಕಾಯುತ್ತಿರುವ ನಿರ್ದೇಶಕ ದುನಿಯಾ ಸೂರಿ ಅವರು ಧ್ರುವ ಸರ್ಜಾರಿಗೆ ಆ್ಯಕ್ಷನ್ ಕಟ್ ಹೇಳಲಿರುವ ಸಿನಿಮಾ ಇದೇ ಆಗಸ್ಟ್‌ನಲ್ಲಿ ಸೆಟ್ಟೇರಲಿದೆ. ಈ ವರ್ಷ ಏಪ್ರಿಲ್‌ನಲ್ಲಿ ಅವರ ನಟನೆಯ 'ಕೆಡಿ' ಚಿತ್ರ ಬಿಡುಗಡೆಯಾಗಿತ್ತು. ಇದೇ ವರ್ಷ 'ಕ್ರಿಮಿನಲ್' ಕೂಡ ರಿಲೀಸ್ ಮಾಡುವ ಮೂಲಕ ಅವರು ವರ್ಷಕ್ಕೆ ಎರಡು ಸಿನಿಮಾ ಪಕ್ಕಾ ಎನ್ನುತ್ತಿದ್ದಾರೆ. ಈ ವರ್ಷ ಡಿಸೆಂಬರ್‌ನಲ್ಲಿ ಧ್ರುವ ಸರ್ಜಾರ ಮತ್ತೊಂದು ಸಿನಿಮಾ ಸೆಟ್ಟೇರುವುದು ಬಹುತೇಕ ಖಚಿತಗೊಂಡಿದೆ.

ನಿಮಿಕಾ ಸಿನಿಮೂನ್

ನಟಿಯರು ಮದುವೆಯಾದ ನಂತರ ನಟನೆ ನಿಲ್ಲಿಸುತ್ತಾರೆ ಎಂದು ಜನರು ಅಂದುಕೊಂಡಿದ್ದಾರೆ. ಇದೇ ಕಾರಣಕ್ಕೆ ನಾನು ಮದುವೆಯಾದ ತಕ್ಷಣ ಸಿನಿಮಾ ಕೆಲಸಗಳಿಗೆ ಮರಳಿದ್ದೇನೆ. ನಮಗಿಬ್ಬರಿಗೂ ಸಮಯ ಸಿಕ್ಕಿ ಫ್ರೀ ಆದ್ಮೇಲೆ ಹನಿಮೂನ್ ಪ್ಲ್ಯಾನ್ ಮಾಡುತ್ತೇವೆ. ಇದಕ್ಕೆ ಮನೆಯವರ ಸಮ್ಮತಿ ಇದೆ. ಈ ಮೂಲಕ ನಟನೆ ಮುಂದುವರಿಸುತ್ತಿದ್ದೇನೆ ಎಂಬ ಸಂದೇಶ ನೀಡಲು ಬಯಸುತ್ತೇನೆ.

-ನಿಮಿಕಾ ರತ್ನಾಕರ್ । ನಟಿ

ಕಳೆದ ಏಪ್ರಿಲ್‌ನಲ್ಲಿ ಮದುವೆಯಾಗಿರುವ ನಟಿ ನಿಮಿಕಾ ರತ್ನಾಕರ್ ಹನಿಮೂನ್‌ಗೆ ಕೂಡ ಹೋಗದೆ ಸಿನಿಮಾ ಕೆಲಸದಲ್ಲಿ ಬಿಝಿ ಆಗಿದ್ದಾರೆ. ಸದ್ಯಕ್ಕೆ ಅವರು ವೃತ್ತಿಗೆ ಪ್ರಾಮುಖ್ಯ ನೀಡುತ್ತಿದ್ದಾರೆ.

ಮಲ್ವೀರ
feedbacklvk@vijaykarnataka.com

ಮದುವೆಯಾಗಿ 15 ದಿನಗಳಿಗೇ ಕೆಲಸಕ್ಕೆ ಮರಳಿದ ನಟಿ ನಿಮಿಕಾ ರತ್ನಾಕರ್ ಹಾಗೂ ಅವರ ಪತಿ ಆಶಿಶ್ ತಂತಮ್ಮ ವೃತ್ತಿಗಳಲ್ಲಿ ಬಿಝಿ ಇದ್ದು, ಕರಿಯರ್‌ಗೆ ಮೊದಲ ಆದ್ಯತೆ ನೀಡಲು ನಿರ್ಧರಿಸಿದ್ದಾರೆ. ನಿಮಿಕಾ ತಮ್ಮ ಆ್ಯಡ್ ಮತ್ತು ಫೋಟೊ ಶೂಟಿಂಗ್‌ಗೆ ತೊಡಗಿದ್ದು, ತಮ್ಮ ನಟನೆಯ 'ವೈಲ್ಡ್ ಟೈಗರ್ ಸಫಾರಿ' ಸಿನಿಮಾದ ಡಬ್ಬಿಂಗ್ ಆರಂಭಿಸಿದ್ದಾರೆ. ಹೊಸ ಕಥೆಗಳನ್ನೂ ಕೇಳುತ್ತಿರುವ ಅವರ 'ಫೀನಿಕ್ಸ್' ಚಿತ್ರದ ಫೈಟ್ ಸೀಕ್ವೆನ್ಸ್ ಒಂದು ಬಾಕಿ ಇದ್ದು, ಅದಕ್ಕೆ ತಯಾರಿ ನಡೆಸಿದ್ದಾರೆ.

ಮಿಸ್ ಯು ಬೆಂಗಳೂರು

'ನನಗೆ ಮದುವೆಗೂ ಮೊದಲು, ನಂತರವೂ ಹೆಚ್ಚೇನು ವ್ಯತ್ಯಾಸವಿಲ್ಲ, ಅದೇ ನನ್ನ ಅದೃಷ್ಟ. ದೇವರ ದಯೆಯಿಂದ ನನ್ನ ನಟನಾ ವೃತ್ತಿಗೆ ಯಾವುದೇ ಟೆನ್ಷನ್ ಇಲ್ಲ. ಪತಿ ಆಶಿಶ್‌ರಿಂದ ಬಹಳ ಪ್ರೋತ್ಸಾಹ ಸಿಗುತ್ತಿದೆ. ಒಂದು ಬದಲಾವಣೆಯೆಂದರೆ ನಾನೀಗ ಮುಂಬಯಿನಲ್ಲಿ ವಾಸಿಸುತ್ತಿದ್ದೇನೆ. ಮೊದಲೆಲ್ಲಾ ಇಲ್ಲಿಗೆ ಬಂದು ಹೋಗುತ್ತಿದ್ದೆ. ಈಗ ಬೆಂಗಳೂರಿಗೆ ಕೆಲಸದ ಮೇಲೆ ಮಾತ್ರ ಬರುತ್ತೇನೆ. ಮುಂಬಯಿ ನಗರ ವಾಸಕ್ಕೆ ಒಗ್ಗಿಕೊಳ್ಳುತ್ತಿದ್ದೇನೆ, ಆದರೆ ಬೆಂಗಳೂರು ಹವಾಮಾನವನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ' ಎಂದು ನಿಮಿಕಾ ವಿವರಿಸಿದ್ದಾರೆ.

ಫಿಟ್ನೆಸ್ ಬಗ್ಗೆ ಗಮನ

ನಾನು ಮತ್ತು ಆಶಿಶ್ ಜಿಮ್‌ಗೆ ಜತೆಯಲ್ಲೇ ಹೋಗುತ್ತೇವೆ, ಅವರು ನನಗೆ ಫಿಟ್ನೆಸ್ ಬಗ್ಗೆ ಗಮನ ಕೊಡಲು ಹೇಳುತ್ತಾರೆ ಎಂದಿರುವ ನಿಮಿಕಾ ರತ್ನಾಕರ್, 'ನಮ್ಮದು ಅರೇಂಜ್ಡ್ ಮ್ಯಾರೇಜ್ ಆದ ಕಾರಣ ಒಂದು ವರ್ಷದಿಂದಷ್ಟೇ ನಮ್ಮಿಬ್ಬರ ಪರಿಚಯ. ಅವರು ನನ್ನ ಶೂಟಿಂಗ್ ಸೆಟ್‌ಗೆ ಬಂದಿಲ್ಲ. ನನ್ನ ಸ್ಟಂಟ್ ದೃಶ್ಯಗಳು ಹೇಗೆ ಚಿತ್ರೀಕರಣವಾಗುತ್ತವೆ, ಅವೆಷ್ಟು ಅಪಾಯಕಾರಿ ಎಂದು ಅವರಿಗೆ ಗೊತ್ತಿಲ್ಲ. ಗೊತ್ತಾದರೆ ಅವರಿಗೆ ಆತಂಕ ಹಾಗೂ ನನಗೂ ಪರ್ಫಾರ್ಮ್ ಮಾಡಲು ಅನ್‌ಕಂಫರ್ಟ್ ಆಗಬಹುದು' ಎಂದು ಹೇಳಿದ್ದಾರೆ.

ಪತಿಯ ಪ್ರೋತ್ಸಾಹ

'ಮದುವೆ ಮುಂಚೆ ನನ್ನ ಮತ್ತು ಆಶಿಶ್ ನಡುವಿನ ಒಂದು ವರ್ಷದ ಒಡನಾಟದ ವೇಳೆ ನನ್ನ ನಟನೆಯ 'ವೈಲ್ಡ್ ಟೈಗರ್ ಸಫಾರಿ' ಚಿತ್ರದ ಶೂಟಿಂಗ್ ಲಕ್ನೋದಲ್ಲಿ ಹಗಲಿರುಳು ನಡೆಯುತ್ತಿತ್ತು. ಆಗ ಅವರಿಗೆ ನನ್ನ ಕೆಲಸ ಕುರಿತು ಎಲ್ಲವೂ ಅರ್ಥವಾಗಿದೆ. ಹೀಗೆ ಅರೇಂಜ್ ಅಥವಾ ಲವ್ ಮ್ಯಾರೇಜ್ ಆಗಲಿ, ನಟಿಯಾಗಲಿ, ಇತರ ಯಾರೇ ಆಗಲಿ ಪತ್ನಿಗೆ ಪತಿಯ ಪ್ರೋತ್ಸಾಹ ತುಂಬಾ ಮುಖ್ಯ. ಅವರಿಬ್ಬರು ಕೆಲಸಗಳಲ್ಲಿ ಪರಸ್ಪರ ಬೆಂಬಲವಾಗಿ ನಿಲ್ಲುವುದು ಅತಿ ಅಗತ್ಯ. ಸಂಗಾತಿಯ ಬೆಂಬಲದ ಮೇಲೆ ನಮ್ಮ ಕರಿಯರ್‌ನ ಭವಿಷ್ಯ ನಿಂತಿರುತ್ತದೆ' ಎಂದು ತಿಳಿಸಿದ್ದಾರೆ ನಿಮಿಕಾ ರತ್ನಾಕರ್.

ಕನ್ನಡ ಪ್ರೀತಿ

ಉತ್ತರಾಖಂಡ್‌ನವರಾದ ಆಶಿಶ್‌ಗೆ ಪತ್ನಿ ನಿಮಿಕಾ ಹಿಂದಿ ಸಿನಿಮಾದಲ್ಲಿ ನಟಿಸಬೇಕೆಂಬ ಒಂದು ಆಸೆ ಇದೆಯಂತೆ. ಈ ಬಗ್ಗೆ ಹೇಳಿರುವ ಅವರು, 'ನಾನು ಕನ್ನಡ ಸಿನಿಮಾದಲ್ಲಿ ಹೆಚ್ಚು ನಟಿಸುತ್ತಿರುವ ಕಾರಣ ಉತ್ತರ ಭಾರತೀಯರಿಗೆ ಪರಿಚಿತಳಲ್ಲ ಎಂದು ಆಶಿಶ್ ನನ್ನನ್ನು ಹಿಂದಿ ಚಿತ್ರದಲ್ಲಿ ನೋಡಲು ಬಯಸುತ್ತಾರೆ. ಆದರೀಗ ಸಿನಿಮಾಗೆ ಭಾಷೆಯ ಗಡಿ ಇಲ್ಲದ ಕಾರಣ ಯಾವುದೇ ಚಿತ್ರವಾದರೂ ಸೈ, ನಟಿಸು ಎಂದು ಅವರು ಹೇಳುತ್ತಾರೆ. ನನಗೆ ಕನ್ನಡದಲ್ಲಿ ಸಿಗುವ ಪ್ರೀತಿ ಮತ್ತೆಲ್ಲೂ ಸಿಗುವುದಿಲ್ಲ, ಇಲ್ಲಿಂದಲೇ ನನ್ನ ಸಿನಿಮಾ ಎಲ್ಲಾ ಭಾಷೆಗಳಿಗೂ ಹೋಗಲಿ ಎನ್ನುವುದು ನನ್ನ ಬಯಕೆ' ಎಂದಿದ್ದಾರೆ. ■

ಗಾಸಿಪ್ ಒಳ್ಳೆಯದಂತೆ!

ಹೊಸ ಸಂಶೋಧನೆಯೊಂದು ಪ್ರೇಮ ಮತ್ತು ವೃತ್ತಿಪರ ಸಂಬಂಧಗಳನ್ನು ಗಟ್ಟಿಗೊಳಿಸಲು ಗಾಸಿಪ್ ಸಹಕಾರಿ ಎಂದಿದೆ.

ಲವಲvk ಸುದ್ದಿ ಲೋಕ
feedbacklvk@vijaykarnataka.com

ಸಾಮಾನ್ಯವಾಗಿ ಗಾಸಿಪ್ ಅಥವಾ ಪರರ ಬಗ್ಗೆ ಮಾತನಾಡುವುದನ್ನು ಕೆಟ್ಟ ಅಭ್ಯಾಸ ಎನ್ನಲಾಗುತ್ತದೆ. ಆ ಪದವನ್ನು ಕೇಳಿದ ತಕ್ಷಣ ನಕಾರಾತ್ಮಕ ಯೋಚನೆಗಳೇ ಬರುತ್ತವೆ. ಆದರೆ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ನಿಯತಕಾಲಿಕೆಯಲ್ಲಿ ಪ್ರಕಟವಾಗಿರುವ ವೈಜ್ಞಾನಿಕ ಸಂಶೋಧನೆಯೊಂದರ ವರದಿಯು ಗಾಸಿಪ್ ಕೇವಲ ನಕಾರಾತ್ಮಕವಲ್ಲ, ಬದಲಿಗೆ ಅದು ವ್ಯಕ್ತಿಯ ಪ್ರೇಮ ಜೀವನ, ವೃತ್ತಿಪರ ಸಂಬಂಧಗಳನ್ನು ಗಟ್ಟಿಗೊಳಿಸಲು ಸಹಕಾರಿಯಾಗಿದೆ ಎಂಬ ಆಸಕ್ತಿದಾಯಕ ಸತ್ಯವನ್ನು ಬಿಚ್ಚಿಟ್ಟಿದೆ. ಈ ವರದಿಯ ಪ್ರಕಾರ, 'ಶಿಕ್ಷಣ ತಜ್ಞರ ದೃಷ್ಟಿಯಲ್ಲಿ ಗಾಸಿಪ್ ಕೆಟ್ಟದ್ದಲ್ಲ, ಅದು ಕೇವಲ ನಮ್ಮೆದುರು ಇಲ್ಲದ ವ್ಯಕ್ತಿಯೊಬ್ಬರ ಬಗ್ಗೆ ಮಾತನಾಡುವುದು ಅಷ್ಟೇ. ಆ ಮಾತುಗಳು ಸಕಾರಾತ್ಮಕವಾಗಿರಬಹುದು, ತಟಸ್ಥವಾಗಿರಬಹುದು ಅಥವಾ ನಕಾರಾತ್ಮಕವಾಗಿರಬಹುದು'. ಗಾಸಿಪ್ ಎನ್ನುವುದು ಮಾನವ ಸಂವಹನ ಮತ್ತು ಸಾಮಾಜಿಕ ಒಡನಾಟದ ಒಂದು ಅನಿವಾರ್ಯ ಭಾಗ ಎಂದಿರುವ ಈ ಅಧ್ಯಯನದ ಪ್ರಮುಖ ಮುಖ್ಯಾಂಶಗಳು ಇಲ್ಲಿವೆ.

ಎಲ್ಲರೂ ಗಾಸಿಪ್ ಮಾಡ್ತಾರೆ

ಈ ಸಂಶೋಧನಾ ವರದಿ ಹೇಳಿರುವಂತೆ ಜಗತ್ತಿನಲ್ಲಿ ಬಹುತೇಕ ಎಲ್ಲರೂ ದಿನಕ್ಕೆ ಸರಾಸರಿ 52 ನಿಮಿಷಗಳನ್ನು ತಮ್ಮೆದುರು ಇಲ್ಲದ ವ್ಯಕ್ತಿಗಳ ಬಗ್ಗೆ ಮಾತನಾಡಲು ಕಳೆಯುತ್ತಾರೆ. ಇದು ಜನರ ಕೆಟ್ಟ ಗುಣವಲ್ಲ, ಬದಲಿಗೆ ಮನುಷ್ಯರು ಪರಸ್ಪರ ಮಾಹಿತಿ ಹಂಚಿಕೊಳ್ಳಲು, ಒಬ್ಬರಿಗೊಬ್ಬರು ಹತ್ತಿರವಾಗಲು ಮತ್ತು ಸಾಮಾಜಿಕ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳಲು ಬಳಸುವ ಒಂದು ಸ್ವಾಭಾವಿಕ ಪ್ರಕ್ರಿಯೆಯಾಗಿದೆ.

ಮಹಿಳೆಯರು ಗಾಸಿಪ್ ರಾಣಿಯರಲ್ಲ

ಗಾಸಿಪ್ ಮಾಡುವುದರಲ್ಲಿ ಮಹಿಳೆಯರೇ ಮುಂದು, ಅವರೇ ಗಾಸಿಪ್ ಕ್ವೀನ್ಸ್ ಎಂಬ ನಂಬಿಕೆಯನ್ನು ಈ ಸಂಶೋಧನೆ ಸುಳ್ಳಾಗಿಸಿದೆ. ಇದರ ಪ್ರಕಾರ, ಪುರುಷರಿಗಿಂತ ಮಹಿಳೆಯರು ಹೆಚ್ಚು ಮಾತನಾಡುತ್ತಾರಾದರೂ ಅವು ಕೇವಲ ಮಾಹಿತಿ ಹಂಚಿಕೊಳ್ಳುವ ತಟಸ್ಥ ಮಾತುಗಳಾಗಿರುತ್ತವೆಯೇ ಹೊರತು ಇತರರಿಗೆ ಹಾನಿ ಮಾಡುವ ಉದ್ದೇಶದ್ದಲ್ಲ. ಸಂಬಂಧಗಳನ್ನು ಗಟ್ಟಿಗೊಳಿಸಲು ಎಲ್ಲಾ ಲಿಂಗದವರೂ ಗಾಸಿಪ್ ಮಾಡುತ್ತಾರೆ.

ಮಾನವ ಸಂವಹನ

ಸಹಜ ಗುಣ

ವಯಸ್ಸಾದವರಿಗಿಂತ ಯುವ ಪೀಳಿಗೆಯವರು ಇತರರ ಬಗ್ಗೆ ಹೆಚ್ಚು ನಕಾರಾತ್ಮಕವಾಗಿ ಮಾತನಾಡುತ್ತಾರೆ. ಆದರೆ ವಯಸ್ಸು ಯಾವುದೇ ಇರಲಿ, ಜನರು ಮಾತನಾಡುವ ಸಮಯ ಮಾತ್ರ ಒಂದೇ ಆಗಿರುತ್ತದೆ. ವಯಸ್ಸಾಗುತ್ತಿದ್ದಂತೆ ಮಾತಿನ ಶೈಲಿ ಮತ್ತು ವಿಷಯಗಳು ಬದಲಾಗಬಹುದು, ಆದರೆ ಪರರ ಬಗ್ಗೆ ಮಾತನಾಡುವ ಮಾನವನ ಸಹಜ ಗುಣ ಬದಲಾಗುವುದಿಲ್ಲ ಎಂದು ಸಂಶೋಧನೆಯಲ್ಲಿ ತಿಳಿದುಬಂದಿದೆ.

ವ್ಯಕ್ತಿತ್ವ ಮತ್ತು ಆರ್ಥಿಕ ಸ್ಥಿತಿ

ಜನರೊಂದಿಗೆ ಅತಿ ಹೆಚ್ಚು ಬೆರೆಯುವ ಸ್ವಭಾವದವರಾದ ಬಹುಮುರ್ಖಿಗಳು ಅಂತರ್ಮುಖಿಗಳಿಗಿಂತ ಹೆಚ್ಚು ಗಾಸಿಪ್ ಮಾಡುತ್ತಾರೆ. ಆದರೆ, ಒಬ್ಬ ವ್ಯಕ್ತಿಯ ಆರ್ಥಿಕ ಪರಿಸ್ಥಿತಿ ಅಥವಾ ಅವರ ವಿದ್ಯಾಭ್ಯಾಸಕ್ಕೂ ಮತ್ತು ಅವರು ಮಾಡುವ ಗಾಸಿಪ್‌ಗೂ ಯಾವುದೇ ಸಂಬಂಧವಿಲ್ಲ, ಬಡವರು ಅಥವಾ ಕಡಿಮೆ ಓದಿದವರು ಹೆಚ್ಚು ಗಾಸಿಪ್ ಮಾಡುತ್ತಾರೆ ಎಂಬುದು ತಪ್ಪು ಕಲ್ಪನೆ ಎಂದು ಈ ಸಂಶೋಧನೆ ಸಾಬೀತುಪಡಿಸಿದೆ. ■

ಧನಾತ್ಮಕ ಪ್ರಯೋಜನ

ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೀಟೂ ಮತ್ತು ಸ್ಪೀಕ್ ಅಪ್ ಕಲ್ಚರ್‌ನಂಥ ಚಳವಳಿಗಳು ಸಮಾಜದಲ್ಲಿ ಆಗುತ್ತಿರುವ ತಪ್ಪುಗಳನ್ನು ಹೊರತರಲು ಮುಕ್ತವಾಗಿ ಮಾತನಾಡುವುದರ ಅಗತ್ಯವನ್ನು ನೆನಪಿಸಿವೆ. ಇವು ಗಾಸಿಪ್ ಅನ್ನು ಅರ್ಥ ಮಾಡಿಕೊಳ್ಳುವ ವಿಧಾನವನ್ನು ಬದಲಾಯಿಸಿವೆ. ಗಾಸಿಪನ್ನು ಕೇವಲ ಸಮಸ್ಯೆಯಾಗಿ ನೋಡುವ ಬದಲು ಅದನ್ನು ಸಮಸ್ಯೆಯ ಹಿಂದಿನ ಸಮಸ್ಯೆಯನ್ನು ಬಹಿರಂಗಪಡಿಸುವ ಅಗತ್ಯ ಸಾಧನವಾಗಿ ಈಗ ಅರ್ಥಮಾಡಿಕೊಳ್ಳಲಾಗಿದೆ. ಇದು ಮೂಲಭೂತ ರಚನಾತ್ಮಕ ಸಮಸ್ಯೆಗಳನ್ನು ಮತ್ತು ಸುಲಭವಾಗಿ ಹೊರಬರದ ಜನರ ಕೆಟ್ಟ ನಡವಳಿಕೆಗಳನ್ನು ಸಮಾಜದ ಮುಂದೆ ತರಲು ಸಹಾಯ ಮಾಡುತ್ತದೆ. ಇದೇ ರೀತಿ ಸಕಾರಾತ್ಮಕ ಗಾಸಿಪ್ ಅಂದರೆ ಸಹೋದ್ಯೋಗಿಗಳ ಬಗ್ಗೆ ಪ್ರಶಂಸೆ ಅಥವಾ ಸಕಾರಾತ್ಮಕ ಮಾಹಿತಿಯನ್ನು ಇತರರಿಗೆ ತಿಳಿಸುವುದು ಮನೋಬಲವನ್ನು ಹೆಚ್ಚಿಸುತ್ತದೆ, ನಂಬಿಕೆ ಮತ್ತು ಸಾಮಾಜಿಕ ಬಾಂಧವ್ಯಗಳನ್ನು ನಿರ್ಮಿಸುತ್ತದೆ ಎಂದು ಸಂಶೋಧನಾ ವರದಿ ಹೇಳಿದೆ.

ನೃತ್ಯ ಮಾಡುತ್ತಿದ್ದ ವೇದಿಕೆಯ ಹಿಂದೆಯೇ ಹೆರಿಗೆ!

ಕರುಳ ಬಳ್ಳಿ ಕತ್ತರಿಸಿ ಮತ್ತೆ ನರ್ತಿಸಿದ ಗಟ್ಟಿಗಿತ್ತಿ | ಲಾವಣಿ ಸಾಮ್ರಾಜ್ಞಿ ವಿಠಾಬಾಯಿಯ ಕಲಾಗಾಥೆ

ಶ್ರದ್ಧಾ ಕಪೂರ್

ಬಾಲಿವುಡ್‌ನಲ್ಲಿ ಶ್ರದ್ಧಾ ಕಪೂರ್ ನಟನೆಯ 'ಈಠ' ಚಿತ್ರವು ನೃತ್ಯ ಕಲಾವಿದರೊಬ್ಬರ ಅತೀವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂಬ ಕಾರಣಕ್ಕೆ ಸುದ್ದಿಯಲ್ಲಿದೆ.

ಬಬಿತಾ ಎಸ್.
babitha.salian@timesofindia.com

ನವಮಾಸ ತುಂಬಿದ ತುಂಬು ಗರ್ಭಿಣಿ ಆಕೆ. ನಾಳೆನೋ, ನಾಡಿದ್ದೋ ಹೆರಿಗೆ ಆಗುತ್ತದೆ ಎಂಬುದೂ ಆಕೆಗೆ ಖಚಿತವಾಗಿದೆ. ಆದರೆ ಆ ದಿನ ಲಾವಣಿ ನೃತ್ಯ ಮಾಡಲು ಆಕೆ ಒಪ್ಪಿಯಾಗಿದೆ. ಕೊಟ್ಟ ಮಾತಿನಂತೆ ತುಂಬಿದ ಒಡಲನ್ನು ಹೊತ್ತುಕೊಂಡು ನರ್ತಿಸಲೇಬೇಕು. ಲಾವಣಿ ಹಾಡಿನ ಅತಿ ವೇಗದ ರಾಗ, ಲಯ, ತಾಳ ಮತ್ತು ಗೆಜ್ಜೆ ಶಬ್ದಗಳ ಅಬ್ಬರದಲ್ಲಿ ಹೆಜ್ಜೆ ಹಾಕುವಾಗ ಒಡಲೊಳಗಿನ ಪುಟ್ಟ ಜೀವವೂ ಒಂದಿನಿತೂ ಮಿಸುಕಾಡಬಾರದು. ಒಂದೆಡೆ ತಾಯಿ, ಇನ್ನೊಂದೆಡೆ ಕಲಾವಿದೆ ಎಂಬ ಎರಡೂ ಪಾತ್ರಗಳನ್ನೂ ಆಕೆ ಆ ಕ್ಷಣಕ್ಕೆ ಸಮರ್ಥವಾಗಿ ನಿಭಾಯಿಸಬೇಕಿತ್ತು.

ವಿಠಾಬಾಯಿ

ಸಿನಿ ಸ್ಫೂರ್ತಿ

ಸೈ ಎಂದ ಆಕೆ ಒಂಬತ್ತು ಗಜದ ನವೌರಿ ಸೀರೆ ಉಟ್ಟರು, ಮೂಗಿಗೆ ನತ್ತು, ಕಾಲಿಗೆ ಗೆಜ್ಜೆ, ಸೊಂಟಪಟ್ಟಿ, ಕೊರಳ ಹಾರ, ಕೈತುಂಬಾ ಬಳೆ, ತಲೆಯಲ್ಲಿ ದೊಡ್ಡ ತುರುಬು, ಅದರ ಮೇಲೆ ಮಲ್ಲಿಗೆ ದಂಡೆಯ ಭಾರ, ತುಂಬು ಹೊಟ್ಟೆಯ ಭಾರ ಇವು ಯಾವುವೂ ಈ ಮೇರು ಕಲಾವಿದೆಯ ಬದ್ಧತೆಯನ್ನು ಕುಂದಿಸಲಿಲ್ಲ. ಅಪಾರ ಪ್ರೇಕ್ಷಕರು ತುಂಬಿದ್ದ, ಸಿಳ್ಳೆ, ಕೇಕೆ ನಗುವಿನ ಮಧ್ಯೆಯೇ ಅವರು ಲಯಬದ್ಧವಾಗಿ ಲಾವಣಿ ಮಾಡಿದರು. ಇದಕ್ಕಿದ್ದಂತೆ ಆಕೆಯ ಹೊಟ್ಟೆಯೊಳಗೆ ಏನೋ ಕದಲಿಕೆ, ಸ್ವಲ್ಪ ಹೊತ್ತಿನಲ್ಲೇ ಬೆನ್ನುಮೂಳೆಯೇ ಮುರಿದಂಥ ಅಪಾರ ನೋವು, ಇದೇನಾಗುತ್ತಿದೆ ತನಗೆ ಎಂದು ಯೋಚಿಸುತ್ತಿದ್ದಂತೆಯೇ ಇಡೀ ಗರ್ಭವೇ ಬಸಿದು ಹೋದಂಥ ವೇದನೆ. ಪ್ರೇಕ್ಷಕರಿಗೆ ನಿರಾಸೆ ಯಾಗಬಾರದೆಂದು ಆ ನೋವನ್ನೂ ಅದುಮಿಕೊಂಡು ಆಕೆ ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತಲೇ ಹೋದರು.

ಇನ್ನೀ ನೋವು ತಡೆಯಲಾಗದು ಎಂದು ತೆರೆಯ ಹಿಂದಕ್ಕೆ ನರ್ತಿಸುತ್ತಲೇ ಹೋದ ಅವರು ಅದರ ಮರೆಯಲ್ಲಿಯೇ ಹೆರಿಗೆ ನೋವಿನಿಂದ ಒದ್ದಾಡಿದರು. ಕೆಲವೇ ಹೊತ್ತಿನಲ್ಲಿ ಮಗು ಕೂಗಿದ ಶಬ್ದ. ವೇದಿಕೆಯ ಮುಂದಿದ್ದ ಪ್ರೇಕ್ಷಕರ ಕಣ್ಣುಗಳು ಆ ಲಾವಣಿ ಸಾಮ್ರಾಜ್ಞಿಯನ್ನು ಹುಡುಕಾಡುತ್ತಿದ್ದವು. ತೆರೆಯ ಹಿಂದೆಯಿದ್ದ ಆ ತಾಯಿ ಮತ್ತೆ ಆ ವೇದಿಕೆಗೆ ಹೋಗಬೇಕು, ಆದರೆ ಆಗಷ್ಟೇ ಜನಿಸಿದ ಮಗುವಿನ ಕರುಳು ಬಳ್ಳಿ ತಡೆಯುತ್ತಿದೆ. ಅತ್ತಿತ್ತ ನೋಡಿದ ಆಕೆ ಅಲ್ಲೇ ಇದ್ದ ಸಣ್ಣ ಕಲ್ಲನ್ನು ಎತ್ತಿ ತನ್ನನ್ನು ಮಗುವಿನೊಂದಿಗೆ ಜೋಡಿಸಿದ್ದ ಆ ಕರುಳುಬಳ್ಳಿಯನ್ನು ಕತ್ತರಿಸಿಯೇ ಬಿಟ್ಟರು. ತಕ್ಷಣ ಎದ್ದು ಮತ್ತೆ ತಯಾರಾಗಿ ಆ ವೇದಿಕೆಯೇರಿ ಲಾವಣಿ ನೃತ್ಯ ಮಾಡಿ ಪ್ರೇಕ್ಷಕರನ್ನು ರಂಜಿಸಿದರು.

ಪ್ರೇಕ್ಷಕರೋ ಕಕ್ಕಾಬಿಕ್ಕಿ. ಆರಂಭದಲ್ಲಿ ತುಂಬಿದ ಹೊಟ್ಟೆಯಲ್ಲಿ ನರ್ತಿಸುತ್ತಿದ್ದ ಅವರ ಹೊಟ್ಟೆಯೀಗ ಚಪ್ಪಟೆ. ಏನಾಗುತ್ತಿದೆ ಎಂದು ವಿಚಾರಿಸಿದಾಗ ತಿಳಿದುಬಂದ ವಿಷಯದಿಂದ ಆ ಪ್ರದರ್ಶನವನ್ನೇ ನಿಲ್ಲಿಸಲಾಯಿತು. ತಾನು ಒಪ್ಪಿದ ಪ್ರದರ್ಶನವನ್ನು ಪೂರ್ಣಗೊಳಿಸಲೇಬೇಕು ಎಂದು ಆ ಕಲಾವಿದೆಯ ಬದ್ಧತೆಯನ್ನು ಹೊಗಳಿದ ಪ್ರೇಕ್ಷಕರು ಆಕೆಗೆ ಗೌರವಪೂರ್ಣವಾಗಿ ವಿಶ್ರಾಂತಿ ಪಡೆಯುವಂತೆ ಕೇಳಿಕೊಂಡರು. ಈ ಅಮೋಘ ಕಲಾವಿದೆಯೇ ಮಹಾರಾಷ್ಟ್ರದ ನಾರಾಯಣ್‌ಗಾಂವ್ ಗ್ರಾಮದ ವಿಠಾಬಾಯಿ ನಾರಾಯಣಗಾಂವ್ಕರ್. ತಮಾಷಾ ನೃತ್ಯ ಪ್ರಕಾರ ಎಂದೂ ಕರೆಯಲಾಗುವ ಲಾವಣಿ ಕಲೆಗೆ ತಮ್ಮ ಬದುಕನ್ನೇ ಮುಡಿಪಾಗಿಟ್ಟ ಅವರೀಗ ಬದುಕಿಲ್ಲ, ಆದರೆ ಅವರು ಈ ಕಲೆಯ ಉಳಿವಿಗೆ ಮಾಡಿರುವ ಪ್ರಯತ್ನ ಈಗಲೂ ಲಾವಣಿ ನೃತ್ಯ ಪ್ರಕಾರವನ್ನು ಜೀವಂತವಾಗಿಟ್ಟಿದೆ.

ಸುಮಾರು 50 ಮತ್ತು 60ರ ದಶಕದಲ್ಲಿ ಸೋಲಾಪುರ, ಪುಣೆ, ನಾಸಿಕ್ ಮುಂತಾದೆಡೆ ತಮ್ಮದೇ ತಂಡ ಕಟ್ಟಿಕೊಂಡು ಲಾವಣಿ ನೃತ್ಯ ಪ್ರದರ್ಶನ ನೀಡುತ್ತಿದ್ದ ವಿಠಾಬಾಯಿಯ ಅಪಾರ ಕಲಾ ಸೇವೆಗಾಗಿ 1957 ಮತ್ತು 1990ರಲ್ಲಿ ಪ್ರತಿಷ್ಠಿತ ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ■

ಇದ್ದಂತೆ ಒಪ್ಪುವ ಒಲವು

ಮುನಿಸು, ಮೌನ, ನಗು, ಅಳು ಯಾವುದೇ ಅತಿಯಾದರೂ ಅಥವಾ ಕಡಿಮೆಯಾದರೂ ಇದ್ದಂತೇ ಇರುವ, ಅದನ್ನೇ ಒಪ್ಪುವ ಒಲವಿನ ಪಯಣದತ್ತ ಯುವಜನತೆಯ ಚಿತ್ತ ಹರಿದಿದೆ.



ಲವಲvk ಸುದ್ದಿ ಲೋಕ
feedbacklvk@vijaykarnataka.com

ನಕ್ಕಂತೆ ನಟಿಸಿ ಒಳಗೊಳಗೆ ಅಸೂಯೆ ಪಡುವ, ತಾಳ್ಮೆಯ ಮುಖವಾಡದ ಹಿಂದಿನ ಮುನಿಸು ಬೂದಿ ಮುಚ್ಚಿದ ಕೆಂಡದಂತೆ. ಎದೆಯೊಳಗೆ ಹೊಗೆಯಾಡುತ್ತ, ಆಗಾಗ ಉಸಿರುಗಟ್ಟಿದ ಅನುಭವದೊಂದಿಗೆ ಹೊರಬರಲು ಹವಣಿಸುತ್ತದೆ ನಿಜ ಭಾವ. ಕೊನೆಗೊಂದು ದಿನ ಅಸಲಿ ವ್ಯಕ್ತಿತ್ವ ಅನಾವರಣಗೊಳ್ಳುತ್ತದೆ. ಇರುವುದೇ ಹಾಗೆ ಅಂತಾದ ಮೇಲೆ ಯಾರನ್ನೂ ಮೆಚ್ಚಿಸುವ, ಇನ್ಯಾರನ್ನೋ ನಂಬಿಸುವ ಅಗತ್ಯವೇ ಇಲ್ಲ ಎನ್ನುವ ವಿಶ್ವಾಸದ ನಡೆನುಡಿಯೊಂದಿಗೆ ಹೊರ ಹೊಮ್ಮುವ ವ್ಯಕ್ತಿತ್ವದಲ್ಲೊಂದು ಹೊಸ ಆಕರ್ಷಣೆ ಶುರುವಾಗುತ್ತದೆ. ಮುಂದೊಂದು ದಿನ ಪ್ರೀತಿಯ ಮೊಗ್ಗು ಅರಳಲೂಬಹುದು.

ಕೊರತೆಯೇ ಹೊಸ ಕ್ರೇಜ್: ಪ್ರತಿಯೊಬ್ಬರೂ ತಮ್ಮ ಅತ್ಯುತ್ತಮ, ಆಕರ್ಷಕ ರೂಪವನ್ನಷ್ಟೇ ಜಗತ್ತಿನ ಮುಂದೆ ಪ್ರದರ್ಶಿಸಲು ಬಯಸುತ್ತಾರೆ. ಸಂಗಾತಿ ಹುಡುಕುವ ಮೊದಲ ಭೇಟಿಯಲ್ಲಂತೂ ಲೋಪದೋಷಗಳನ್ನು ಮುಚ್ಚಿಟ್ಟು ಮುಖವಾಡ ಧರಿಸಿಯೇ ಹೋಗುತ್ತೇವೆ. ಆದರೆ ನೈಜ ಸ್ವಭಾವ ಯಾವತ್ತಾದರೂ ಅನಾವರಣಗೊಳ್ಳಲೇಬೇಕು. ಅದರಿಂದ ಮುಂದೆ ಉಂಟಾಗುವ ಸಂಬಂಧದ ನಡುವಿನ ಬೇಸರ, ನಿರಾಕರಣೆಗಳಿಂದ ದೂರವಿರಲು ಆರಂಭದಲ್ಲೇ ನೈಜ ವ್ಯಕ್ತಿತ್ವದ ಮೂಲಕವೇ ಪ್ರೀತಿ ಅರಸಲು ಹೊರಟಿದೆ ಈಗಿನ ಯುವಜನತೆ. ಕೃತಕ ವ್ಯಕ್ತಿತ್ವಕ್ಕೆ ಬೇಸತ್ತು ಆಧುನಿಕ ಪ್ರೇಮ ಜಗತ್ತು ಈಗ ಹೊಸ ಬದಲಾವಣೆಗೆ ಸಾಕ್ಷಿಯಾಗಿದೆ. ಅದೇ ಈಗ ಗಾಬ್ಲಿಂಟಿಮಸಿ (Goblintimacy) ಎಂಬ ನೈಜ ಪ್ರೀತಿ ಹೆಸರಿನಲ್ಲಿ ಗಮನ ಸೆಳೆಯುತ್ತಿದೆ. ಸಂಬಂಧಗಳಲ್ಲಿ ಅಥವಾ ಡೇಟಿಂಗ್ ಮಾಡುವಾಗ ಆರಂಭದಿಂದಲೇ ಯಾವುದೇ ಕೃತಕತೆ ಇಲ್ಲದೆ, ನಮ್ಮ ನೈಜ ರೂಪ, ಸಣ್ಣಪುಟ್ಟ ಕೊರತೆಗಳನ್ನು ಮುಚ್ಚಿಡದೆ ಸಂಗಾತಿಯ ಮುಂದೆ ತೋರ್ಪಡಿಸಿಕೊಳ್ಳುವ ವಿಧಾನ ಇದಾಗಿದೆ.

ನೈಜತೆಯ ನೆಮ್ಮದಿ: ಸಂಬಂಧವೊಂದು ಆರಂಭವಾಗುವ ಮೊದಲೇ ತಮ್ಮ ಸ್ವಭಾವವನ್ನು ತೆರೆದಿಡುವುದೇ ಗಾಬ್ಲಿಂಟಿಮಸಿ ಡೇಟಿಂಗ್‌ನ ಉದ್ದೇಶ. 'ನಾನು ಇರುವುದೇ ಹೀಗೆ. ನನ್ನಲ್ಲಿರುವ ಲೋಪದೋಷಗಳು ಹೀಗಿವೆ' ಎಂದೆಲ್ಲ ಹೇಳಿ ನೈಜ ವ್ಯಕ್ತಿತ್ವವನ್ನು ಆರಂಭದಿಂದಲೇ ತೆರೆದಿಟ್ಟು ನಂತರ ಸಂಬಂಧದೊಳಗೆ ಕಾಲಿಡುವುದೇ ನಿರಾಳ ಎನ್ನುವತ್ತ ಯುವಜನತೆ ಗಮನ ಹರಿಸಿದೆ. ನೈಜ ಸ್ವಭಾವವು ಸಂಬಂಧದ ವ್ಯಾಲಿಡಿಟಿ ಹೆಚ್ಚಿಸುವ ಟಾನಿಕ್ ಎಂಬುದು ಇವರ ನಂಬಿಕೆ. ಸದಾ ಕಾಲ ಇನ್ನೊಬ್ಬರನ್ನು ಮೆಚ್ಚಿಸಲು ನಟಿಸಬೇಕಾಗಿಲ್ಲ ಎಂದಾಗ ಮನಸ್ಸಿನ ಅರ್ಧದಷ್ಟು ಒತ್ತಡ ಕಡಿಮೆಯಾಗುತ್ತದೆ. ನಾವು ಹೇಗಿದ್ದೇವೋ ಹಾಗೇ ನಮ್ಮನ್ನು ಒಪ್ಪಿಕೊಳ್ಳುವ ಸಂಗಾತಿ ಸಿಕ್ಕಾಗ ಆಗುವ ನಿರಾಳತೆಯಲ್ಲಿ ಸಂಬಂಧದ ತೃಪ್ತಿ ಇದೆ. ಕಲ್ಪನೆಗಳ ಲೋಕದಲ್ಲಿ ತೇಲುವ ಬದಲು ವಾಸ್ತವದ ನೆಲೆಗಟ್ಟಿನಲ್ಲಿ ಇಬ್ಬರ ಯೋಚನೆಗಳು ಹೊಂದುತ್ತವೆಯೇ ಎಂದು ಆರಂಭದಲ್ಲೇ ತಿಳಿದುಕೊಳ್ಳಲು ಇದು ಸಹಾಯ ಮಾಡುತ್ತದೆ. ಸುಳ್ಳಿನ ಅಡಿಪಾಯದ ಮೇಲೆ ಸಂಬಂಧಗಳು ಮುರಿದು ಬೀಳುವುದನ್ನು ಇದು ತಪ್ಪಿಸುತ್ತದೆ. ■

ಲವಲVK ಪಾಸಿಟಿವ್ ಬಂಧ

ಎಚ್ಚರ ವಹಿಸಿ

ಮೊದಲ ಭೇಟಿಯೇ ಎಲ್ಲದಕ್ಕೂ ಉತ್ತರವಲ್ಲ. ಕೆಲವರು ತಮ್ಮ ಆಸಕ್ತಿ, ನಿರಾಸಕ್ತಿ, ಕಹಿ ಘಟನೆಗಳನ್ನೆಲ್ಲ ಒಮ್ಮೆಲೇ ಹೇಳಿಬಿಡುತ್ತಾರೆ. ಆದರೆ ಎದುರಿಗಿನ ವ್ಯಕ್ತಿ ಅವುಗಳನ್ನೆಲ್ಲ ಹೇಗೆ ಸ್ವೀಕರಿಸುತ್ತಾನೆ, ತಮ್ಮ ಬಗ್ಗೆ ಅವರ ಅಭಿಪ್ರಾಯ ಹೇಗಿರಬಹುದು ಎಂದು ಯೋಚಿಸುವುದೇ ಇಲ್ಲ. ತಜ್ಞರ ಪ್ರಕಾರ, ಅತಿಯಾದ ಭಾವನಾತ್ಮಕ ಪಾರದರ್ಶಕತೆ ಕೆಲವೊಮ್ಮೆ ಸಂಬಂಧ ಬೆಳೆಯುವ ಮೊದಲೇ ಅದಕ್ಕೆ ತಣ್ಣೀರೆರಚಬಹುದು. ಹೀಗಾಗಿ ವ್ಯಕ್ತಿತ್ವ, ಇಷ್ಟಕಷ್ಟ ಮತ್ತು ಸಣ್ಣಪುಟ್ಟ ಕೊರತೆಗಳ ಬಗ್ಗೆ ಪ್ರಾಮಾಣಿಕವಾಗಿರಿ. ಆದರೆ ವೈಯಕ್ತಿಕ ರಹಸ್ಯಗಳನ್ನು ಹಂಚಿಕೊಳ್ಳಲು ಪರಸ್ಪರ ನಂಬಿಕೆ ಬೆಳೆಯುವವರೆಗೆ ಕಾಯಿರಿ. ಸಂಬಂಧ ಎನ್ನುವುದು ಒಂದೇ ದಿನಕ್ಕೆ ಎದ್ದು ನಿಲ್ಲುವ ಬಂಧವಲ್ಲ, ನಿಧಾನವಾಗಿ ಕಟ್ಟುವ ನಂಬಿಕೆಯ ಸೇತುವೆ.

RNI No. KARKAN/2016/71628
Vol. 11 Issue no. 180
This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. " © All Rights Reserved. Reproduction in whole or part without permission is prohibited.